ಮಕ್ಕಳ ಹಕ್ಕುಗಳು : ಸ್ಥಳೀಯ ಸರ್ಕಾರ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ಸಂಪ್ರಬಂಧ

ಸಂಶೋಧಕ

ಪಿ. ಹೊನ್ನೂರು ಸಾಬ್

ಮಾರ್ಗದರ್ಶಕರು

ಡಾ. ಹೊಗಳ್ಳಿ ಗಣೇಶ್

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೭-೨೦೦೮

298

"ಮಕ್ಕಳ ಹಕ್ಕುಗಳು : ಸ್ಥಳೀಯ ಸರ್ಕಾರ"

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ)

ಸಂಶೋಧಕ

ಪಿ.ಹೊನ್ನೂರ್ ಸಾಬ್

ಮಾರ್ಗದರ್ಶಕರು

ಡಾ. ಮೊಗಳ್ಳಿ ಗಣೇಶ್
ಹಿರಿಯ ಶ್ರೇಣಿ ಅಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೭-೦೮

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀ ಪಿ.ಹೊನ್ನೂರ್ ಸಾಬ್ ಇವರು **"ಮಕ್ಕಳ ಹಕ್ಕುಗಳು : ಸ್ಥಳೀಯ ಸರ್ಕಾರ"** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಈ ಸಂಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

(ಡಾ.ಮೊಗಳ್ಳಿ ಗಣೇಶ್)
ಮಾರ್ಗದರ್ಶಕರು
ಹಿರಿಯ ಶ್ರೇಣಿ ಉಪನ್ಯಾಸಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ : 15-10-08
ಸ್ಥಳ : ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

"ಮಕ್ಕಳ ಹಕ್ಕುಗಳು : ಸ್ಥಳೀಯ ಸರ್ಕಾರ" ಎಂಬ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು **ಡಾ.ಮೊಗಳ್ಳಿ ಗಣೇಶ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇತರೆ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ.

ಪಿ.ಹೊನ್ನೂರ್ ಸಾಬ್
ಸಂಶೋಧನಾ ವಿದ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ : 15-10-08
ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ-೧

ಅಧ್ಯಯನ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ-೧

ಅಧ್ಯಯನ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಪ್ರಸ್ತಾವನೆ

೨೦ನೇ ಶತಮಾನ ಮಾನವ ಮತ್ತು ಮಕ್ಕಳ ಕಲ್ಯಾಣ ದೃಷ್ಟಿಯಿಂದ ಆಶಾದಾಯಕ ದಿನಗಳೆಂದು ನನಗನಿಸುತ್ತದೆ. ಏಕೆಂದರೆ ಜಾಗತಿಕ ಮಟ್ಟದಲ್ಲಿ "ಮನುಕುಲದ ಎಲ್ಲಾ ಸದಸ್ಯರ ಅಂತರ್ಗತ ಘನತೆ ಸಮಾನ ಮತ್ತು ಪರಭಾರೆಗೊಳಿಸಲಾಗದ ಹಕ್ಕುಗಳನ್ನು ಮಾನ್ಯ ಮಾಡುವುದೇ ವಿಶ್ವದಲ್ಲಿನ ಸ್ವಾತಂತ್ರ, ನ್ಯಾಯ ಮತ್ತು ಶಾಂತಿಯ ಬುನಾದಿ,"[೧] ಎನ್ನುವ ಘೋಷಣೆಯೊಂದಿಗೆ ವಿಶ್ವಸಂಸ್ಥೆಯು ೧೯೪೮ರಲ್ಲಿ 'ಮಾನವ ಹಕ್ಕು'ಗಳನ್ನು ಜಾರಿಗೆ ತಂದಿತು. ಮುಂದುವರೆದು ಮಾನವಹಕ್ಕುಗಳ ಚಿಂತನೆಯ ಫಲವಾಗಿ 'ಮಕ್ಕಳ ಹಕ್ಕುಗಳ ಒಡಂಬಡಿಕೆ'ಯು ೧೯೮೯ರಲ್ಲಿ ಜಾರಿಗೆ ಬಂದಿತು.

ಇದೇ ಶತಮಾನದ ಪೂರ್ವಾರ್ಧದಲ್ಲಿ ಭಾರತೀಯರು ಬ್ರಿಟೀಶರ ದಬ್ಬಾಳಿಕೆ ಶೋಷಣೆಯ ವಿರುದ್ಧ ಸಿಡಿದೆದ್ದು ಬಿಡುಗಡೆಗಾಗಿ ಹೋರಾಟ ನಡೆಸಿದ್ದರು. ಈ ಹೋರಾಟದ ಫಲವಾಗಿ ೧೯೪೭ರಂದು ಭಾರತವು ಬ್ರಿಟೀಶರ ಸಂಕೋಲೆಗಳಿಂದ ಬಿಡುಗಡೆ ಹೊಂದಿ ಸ್ವಾತಂತ್ರವನ್ನು ಪಡೆಯಿತು. ಸ್ವಾತಂತ್ರೋತ್ಸವ ಸಂಭ್ರಮಾಚರಣೆಗಳ ಮಧ್ಯೆಯೇ ನಾವು ೬೦ ವರ್ಷಗಳನ್ನು ಪೂರೈಸಿದ್ದೇವೆ. ಇದರ ಮಧ್ಯೆ ನಾವು ಸಾಧಿಸಿದ್ದೇನು? ಸ್ವಾತಂತ್ರ ಪೂರ್ವದಲ್ಲಿ "೧೯೦೬ರಲ್ಲಿ ಕಲ್ಕತ್ತೆಯಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೇಸ್‌ನ ಮಹಾ ಅಧಿವೇಶನದಲ್ಲಿ ದಾದಾಭಾಯಿ ನವರೋಜಿಯವರು ಆಡಿದ ಅಧ್ಯಕ್ಷೀಯ ಮಾತುಗಳು ಗಮನಾರ್ಹವಾಗಿವೆ ಭಾರತದಲ್ಲಿ ಬಹು ವ್ಯಾಪಕವಾಗಿ ಮನೆ ಮಾಡಿಕೊಂಡಿರುವ ಸಾಮೂಹಿಕ ದಾರಿದ್ರದ ಸಮಸ್ಯೆಯು ವಿದೇಶಿ ಆಳ್ವಿಕೆಯ ಪರಿಣಾಮವಾಗಿದೆ ಅದನ್ನು ನಿರ್ಮೂಲನೆ

ಗೊಳಿಸಬೇಕಾದರೆ ಸ್ವರಾಜ್ಯವನ್ನು ಸಾಧಿಸುವುದು ಅತ್ಯಂತ ಅವಶ್ಯಕವಾಗಿದೆ. ಆ ಮೂಲಕ ಮಾತ್ರ ಬಡತನ, ಬರ, ಕ್ಷಾಮ, ಡಾಮರಗಳಿಂದ, ಪ್ಲೇಗಿನಿಂದ, ಮಹಾರೋಗ ರುಜಿನಗಳಿಂದ ನಾಶವಾಗುತ್ತಿರುವ ಕೋಟ್ಯಂತರ ಜನರನ್ನು ಉಳಿಸಬಹುದು. ಸ್ವರಾಜ್ಯದ ಮೂಲಕ ಮಾತ್ರ ಇಂದು ಅನ್ನಾನ್ನ ನಿರ್ಗತಿಕರಾಗಿ ಅರೆ ಹೊಟ್ಟೆಯಿಂದ ನಶಿಸುತ್ತಿರುವ ಕೋಟಿ ಕೋಟಿ ಜನರನ್ನು ಉಳಿಸಬಹುದು"[೨] ಎಂದು ಹೇಳಿದ ಮಾತುಗಳು ಪ್ರಸ್ತುತ ನೆನೆಪಿಸಿಕೊಂಡರೆ ನಮ್ಮ ಭಾರತದ ಪ್ರಗತಿಯನ್ನು ಅದರಲ್ಲೂ ಮಕ್ಕಳ ಸ್ಥಿತಿಯನ್ನು ನೋಡಿದಾಗ ಅತ್ಯಂತ ಖೇದವೆನಿಸುತ್ತದೆ. "ಸ್ವಾತಂತ್ರ ಬಂದಾಗಿನಿಂದ ಹತ್ತು ಕೋಟಿಗೂ ಮಿಕ್ಕಿ ಐದುವರ್ಷದೊಳಗಿನ ಮಕ್ಕಳು ಅಸುನೀಗುವುದಕ್ಕೆ ಮುಖ್ಯವಾದ ಕಾರಣಗೊತ್ತೇ? ನಮ್ಮ ಮಹಾನ್‌ದೇಶ ಈ ಕೋಟ್ಯಂತರ ನತದೃಷ್ಟ ಮಕ್ಕಳಿಗೆ ಸಾಕಷ್ಟು ಆಹಾರ, ಶುಚಿಯಾದ ಕುಡಿಯುವ ನೀರು, ಪ್ರಾಥಮಿಕ ಆರೋಗ್ಯದ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗಲಿಲ್ಲ. ತಮ್ಮ ಐದನೇ ಹುಟ್ಟು ಹಬ್ಬ ಸಹ ಕಾಣದೆ ಕಣ್ಮುಚ್ಚಿದ ಈ ಹತ್ತಾರುಕೋಟಿ ಅಮಾಯಕ ಮಕ್ಕಳ ಮಾರಣ ಹೋಮ ನಡೆಸಿದ ಪಾಪದ ಕೊಡ ನಮ್ಮ ಮಹಾನ್" ಮುತ್ಸದ್ದಿಗಳ 'ಪ್ರತಿಭಾಶೀಲ' ನೌಕರ ಶಾಹಿಗಳ 'ಅಪ್ರತಿಮ ಪ್ರತಿಭೆಯ' ವಿಜ್ಞಾನಿ, ಯೋಜನಾಕಾರರ ಹೆಗಲಮೇಲೇರಿದೆ. ಈ ಮುಗ್ಧ ಮಕ್ಕಳ ಕ್ರೂರ ನಿರ್ದಾಕ್ಷಿಣ್ಯದ ಕೊಲೆಗೆ ಇವರೆಲ್ಲ ಜವಾಬ್ದಾರರಾಗಿದ್ದಾರೆ."[೩] ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿರುವಾಗಲೇ ವಿಶ್ವಸಂಸ್ಥೆಯು ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ೧೯೮೯ರಲ್ಲಿ ಜಾರಿಗೆ ತಂದಿತು. ನಮ್ಮ ಭಾರತ ಸರ್ಕಾರವು ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಷರತ್ತು ಬದ್ಧ ಅಂಗೀಕಾರ ನೀಡಿತು. ಮಕ್ಕಳ ಹಕ್ಕುಗಳನ್ನು ಅನುಷ್ಠಾನಗೊಳಿಸಲು "ರಾಷ್ಟ್ರೀಯ ಮಕ್ಕಳ ಕ್ರಿಯಾ ಯೋಜನೆ"ಯನ್ನು ರಾಷ್ಟ್ರಮಟ್ಟದಲ್ಲಿಯೂ, "ಕರ್ನಾಟಕ ರಾಜ್ಯ ಮಕ್ಕಳ ಕ್ರಿಯಾ ಯೋಜನೆ"ಯನ್ನು ರಾಜ್ಯ ಮಟ್ಟದಲ್ಲಿಯೂ ಅನುಷ್ಠಾನಕ್ಕೆ ತಂದಿತು. ಈ ಮೂಲಕ ಮಕ್ಕಳ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಂಡಿತು. ಆದರೆ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಅಂಗೀಕಾರ ನೀಡಿ ೧೫ ವರ್ಷ ಕಳೆದಿವೆ. ಯುನಿಸೆಫ್ ಬಿಡುಗಡೆ ಮಾಡಿರುವ The state of the world Children -2004 ವರದಿಯಲ್ಲಿ ಭಾರತದ ಮಕ್ಕಳ ಸ್ಥಿತಿಯನ್ನು ನೋಡಿದಾಗ ಗಾಬರಿಯಾಗುತ್ತದೆ. ಪ್ರತಿ ಸಾವಿರ ಜನಸಂಖ್ಯೆಗೆ ಹುಟ್ಟಿದ ೬೭ ಮಕ್ಕಳು ಹುಟ್ಟಿದ ತಕ್ಷಣ ಸತ್ತು ಹೋಗುತ್ತವೆ. ಅದರಲ್ಲೂ ಹುಟ್ಟಿ ಬದುಕಿದ ಶೇ ೩೩ರಷ್ಟು ಮಕ್ಕಳು ಕಡಿಮೆ ತೂಕವನ್ನು ಹೊಂದಿದ್ದಾರೆ. ಶೇ ೨೪ರಷ್ಟು ಮಕ್ಕಳು ಪ್ರಾಥಮಿಕ ಶಾಲೆಗೆ ದಾಖಲಾಗುವುದೇ ಇಲ್ಲ.

ಇಂತಹ ಅವಕಾಶ ವಂಚಿತ ಮಕ್ಕಳು ನಮಗೆ ದಿನನಿತ್ಯ ಸಮಾಜದೊಳಗೆ ಕಾಣಿಸುತ್ತಾರೆ. ಬೆಳಗಾದರೆ ಮನೆ, ರಸ್ತೆ, ಸಾರ್ವಜನಿಕ ಸ್ಥಳಗಳಲ್ಲಿ ಭಿಕ್ಷೆ ಬೇಡುವ ಮಕ್ಕಳು ನಮ್ಮ ಕಣ್ಣಿಗೆ ಕಾಣಿಸುತ್ತಾರೆ. ಬೀದಿ ಬದಿಯಲ್ಲಿ ಕಸದತೊಟ್ಟಿಯ ನಡುವೆ ನಾಯಿಯಂತೆ

ಕೆದರಿ ಚಿಂದಿ ಆಯುವ ಮಕ್ಕಳನ್ನು ನೋಡುತ್ತೇವೆ. ಯಾರದೋ ಸ್ವಾರ್ಥಕ್ಕೆ ಬಲಿಪಶುವಾಗಿ ಗಾಣದೆತ್ತಿನಂತೆ ಗಣಿಗಳಲ್ಲಿ, ಹೊಲಗಳಲ್ಲಿ ದುಡಿಯುವ ಅಮಾಯಕ ಮಕ್ಕಳನ್ನು ಕಾಣುತ್ತೇವೆ. ಸಾಮಾನ್ಯ ಪರಿಸರದಲ್ಲಿ ಸುಖವಾಗಿ ಬದುಕನ್ನು ಸವೆಸುತ್ತಿರುವ ಮಕ್ಕಳ ನಡುವೆ ಲೆಕ್ಕವಿಲ್ಲದಷ್ಟು ಮಕ್ಕಳು ಹೀನಾಯವಾಗಿ ಬದುಕನ್ನು ಸವೆಸುತ್ತಾರೆ. ತಾಯಿಯ ಗರ್ಭದಲ್ಲಿರುವಾಗಲೇ ಸರಿಯಾದ ಆರೈಕೆ ಸಿಗದೆ, ಹುಟ್ಟಿದ ನಂತರವೂ ಸರಿಯಾದ ಪೋಷಣೆ ಮತ್ತು ರಕ್ಷಣೆ ಸಿಗದೆ ಜೀವಿಸುವ ಹಕ್ಕಿನಿಂದ ವಂಚಿತರಾಗುತ್ತಾರೆ. ರೋಗ ನಿರೋಧಕ ಲಸಿಕೆ ಪಡೆಯದ, ಕೌಟುಂಬಿಕ ಮತ್ತು ಸಮಾಜ ಪ್ರೀತಿಯಿಂದ ವಂಚಿತರಾದ ಅನಾಥ, ಅಂಗವಿಕಲ ಮಕ್ಕಳು, ಮಾನಸಿಕ ದೈಹಿಕ ಬೆಳವಣಿಗೆ ಕುಂಠಿತವಾದ ಮಕ್ಕಳು ದಿನನಿತ್ಯ ಕಾಣಿಸುತ್ತಾರೆ. ಈ ಮೇಲಿನ ಅಂಕಿಅಂಶಗಳು ಮತ್ತು ವಿವರಣೆಗಳನ್ನು ನೋಡಿದಾಗ ಮಕ್ಕಳ ಹಕ್ಕುಗಳು ಎಲ್ಲಾ ಹಂತಗಳಲ್ಲಿ ಉಲ್ಲಂಘನೆ ಆಗಿರುವುದು ಸ್ಪಷ್ಟ.

ನಮ್ಮ ದೇಶದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಮಕ್ಕಳ ಹಕ್ಕುಗಳು ಉಲ್ಲಂಘನೆಯಾಗುತ್ತಿದ್ದು. ಹಾಗಾದರೆ ನಾವು ಸೋತದ್ದೆಲ್ಲಿ. ನಮ್ಮ ಯೋಜನೆಗಳು ಸ್ಥಳೀಯ ಮಟ್ಟದವರೆಗೆ ತಲುಪಿವೆಯೇ ಎಂಬ ಅನುಮಾನಗಳು ಬರುತ್ತವೆ. ಮಕ್ಕಳ ಹಕ್ಕುಗಳ ಬಗ್ಗೆ ವ್ಯಾಪಕ ಪ್ರಚಾರ ಮಾಡಲಾಗಿದೆಯೇ? ಸ್ಥಳೀಯ ಸರಕಾರಗಳು ಮಕ್ಕಳ ಹಕ್ಕುಗಳು ಅನುಷ್ಠಾನಕ್ಕೆ ತಂದಿರುವವೇ ಎಂಬುದನ್ನು ಗಮನಿಸಬೇಕಾಗುತ್ತದೆ. ಪ್ರಸ್ತುತ ಅಧ್ಯಯನವು ಈ ಹಿನ್ನೆಲೆಯಲ್ಲಿ ಸಾಗುತ್ತದೆ.

ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನವು ಈ ಕೆಳಕಂಡ ಉದ್ದೇಶಗಳನ್ನು ಹೊಂದಿದೆ.

೧. ಮಕ್ಕಳ ಹಕ್ಕುಗಳ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಕ್ಕಳ ಸ್ಥಿತಿಗತಿ ಹೇಗಿದೆ ಎನ್ನುವುದರ ಕುರಿತು ಅಧ್ಯಯನ ಕೈಗೊಳ್ಳುವುದು.

೨. ಸ್ಥಳೀಯ ಸರ್ಕಾರವಾದ ಗ್ರಾಮ ಪಂಚಾಯ್ತಿಗಳು ಮಕ್ಕಳ ಹಕ್ಕುಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಅನುಸರಿಸುವ ಕಾರ್ಯಗಳು, ತಂತ್ರಗಳು ಮತ್ತು ಯೋಜನೆಗಳ ಬಗ್ಗೆ ತಿಳಿದುಕೊಳ್ಳುವುದು.

೩. ಮಕ್ಕಳ ಹಕ್ಕುಗಳ ರಕ್ಷಣೆಗಿರುವ ಕಾನೂನು ಸಂಬಂಧಿ ಮಾಹಿತಿಗಳನ್ನು ಅಧ್ಯಯನದಿಂದ ತಿಳಿದುಕೊಳ್ಳುವುದು.

೪. ಮಕ್ಕಳ ಹಕ್ಕುಗಳ ರಕ್ಷಣೆಗಿರುವ ವ್ಯವಸ್ಥೆಯಲ್ಲಿನ ಸಂದುಗೊಂದಲಗಳನ್ನು ಗುರುತಿಸಿಕೊಳ್ಳುವುದು.

೫. ಹಕ್ಕು ವಂಚಿತ ಮಕ್ಕಳ ಸಾಮಾಜಿಕ, ಆರ್ಥಿಕ, ಸ್ಥಿತಿಗತಿಗಳೇನು? ಮಕ್ಕಳ ಬದುಕು, ರಕ್ಷಣೆ ಮತ್ತು ಆರೋಗ್ಯದ ಜೊತೆಗೆ ಅವರ ಬೆಳವಣಿಗೆ ಕುಂಠಿತಗೊಳ್ಳಲು ಕಾರಣವಾದ ಅಂಶಗಳನ್ನು ಗುರುತಿಸಿಕೊಳ್ಳುವುದು.

೬. ಮಕ್ಕಳ ಹಕ್ಕುಗಳನ್ನು ಜಾರಿಗೆ ತರುವಲ್ಲಿ ಸಮುದಾಯ, ಸಂಘ, ಸಂಸ್ಥೆಗಳು ಮತ್ತು ಸ್ಥಳೀಯ ಸರ್ಕಾರದ ಪಾತ್ರವನ್ನು ತಿಳಿದುಕೊಳ್ಳುವುದು.

ಭಾರತವು ಹಳ್ಳಿಗಳಿಂದ ಕೂಡಿರುವ ರಾಷ್ಟ್ರ. ಒಂದು ದೇಶದ ಉದ್ಧಾರವಾಗಬೇಕಾದರೆ ಹಳ್ಳಿಗಳು ಉದ್ಧಾರವಾಗಬೇಕು. ಹಳ್ಳಿಗಳು ಉದ್ಧಾರವಾದರೆ ಅಲ್ಲಿನ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗಳು ಉತ್ತಮಗೊಳ್ಳುತ್ತವೆ. ಇವುಗಳ ಜೊತೆ ಜೊತೆಗೆ ಮೂಲ ಅವಶ್ಯಕತೆಗಳಾದ ಆರೋಗ್ಯ, ಶಿಕ್ಷಣ, ವಸತಿ, ಶುಚಿಯಾದ ನೀರು, ನೈರ್ಮಲ್ಯಗಳು ಸುಧಾರಣೆಯಾಗುತ್ತಾ ಹೋಗುತ್ತವೆ.

ಮಕ್ಕಳಿಗೆ ಅವರ ಮೂಲ ಅವಶ್ಯಕತೆಗಳನ್ನು ಒದಗಿಸಿ ಬೆಳೆಸಿದರೆ ಅವರು ರಾಷ್ಟ್ರದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡುತ್ತಾರೆ. ಒಟ್ಟಾರೆಯಾಗಿ ಒಂದು ದೇಶದ ಅಭಿವೃದ್ಧಿ ಎಂದರೆ ಆಯಾ ದೇಶಗಳ ಮಾನವ ಸಂಪನ್ಮೂಲದ ಅಭಿವೃದ್ಧಿಯಾಗಿದೆ. ಮಾನವ ಸಂಪನ್ಮೂಲದ ಅಭಿವೃದ್ಧಿಯೊಳಗೆ ಮಕ್ಕಳ ಅಭಿವೃದ್ಧಿಯೂ ಒಳಗೊಂಡಿದೆ. ಆದರೆ ಅದು ಕೇಂದ್ರ ಬಿಂದು ಆಗಬೇಕು ಎಂಬುದು ಈ ಅಧ್ಯಯನದ ಆಶಯವಾಗಿದೆ.

ಇತ್ತೀಚಿನವರೆಗೆ ದೇಶದ ಅಭಿವೃದ್ಧಿಯೆಂದರೆ ಆಯಾದೇಶಗಳಲ್ಲಿ ಎಷ್ಟು ಕೈಗಾರಿಕೆಗಳು ಸ್ಥಾಪನೆಯಾಗಿವೆ? ಎಷ್ಟು ಜನರು ತಂತ್ರಜ್ಞಾನವನ್ನು ಬಳಸುತ್ತಾರೆ ಅಂದರೆ ಟಿ.ವಿ, ಕಾರು, ರೆಫ್ರಿಜರೇಟರ್ ಮುಂತಾದವುಗಳನ್ನು ಎಷ್ಟು ಜನರು ಬಳಸುತ್ತಾರೆ ಎಂಬ ಅಂಶಗಳು ಮಾನದಂಡಗಳಾಗಿದ್ದವು. ಇವುಗಳನ್ನೇ ದೇಶದ ಅಭಿವೃದ್ಧಿಯೆಂದು ಪರಿಗಣಿಸಲಾಗಿತ್ತು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನವ ಹಕ್ಕುಗಳು ಜಾರಿಗೆ ಬಂದ ನಂತರ ರಾಷ್ಟ್ರದ ಅಭಿವೃದ್ಧಿಯನ್ನು ಮಾನವ ಮಕ್ಕಳ ಹಕ್ಕುಗಳ ಉಲ್ಲಂಘನೆಯ ಸ್ವರೂಪದಲ್ಲಿ ನೋಡಲಾಗುತ್ತಿದೆ. ರಾಷ್ಟ್ರದೊಳಗೆ ಜೀವಂತ ಹೆರಿಗೆಗಳಲ್ಲಿ ಸಾವಿನ ಪ್ರಮಾಣವೆಷ್ಟು? ಅಪೌಷ್ಟಿಕತೆ ಹೊಂದಿರುವ ಮಕ್ಕಳ ಪ್ರಮಾಣವೆಷ್ಟು? ಇದರ ನಿವಾರಣೆಗೆ ಕೈಗೊಂಡಿರುವ ಕ್ರಮಗಳೇನು? ಬಾಲ್ಯ ವಿವಾಹವಾಗುವ ಪ್ರಕರಣಗಳೆಷ್ಟು? ಮಕ್ಕಳ ಮಾರಾಟ ಮತ್ತು ಸಾಗಣೆ ಪ್ರಕರಣಗಳು ನಡೆಯುತ್ತಿವೆಯೇ ಎಂಬುದನ್ನು ನಿರ್ಧರಿಸಿ ರಾಷ್ಟ್ರದ ಅಭಿವೃದ್ಧಿಯನ್ನು ಸೂಚಿಸುವ ಮಾನದಂಡಗಳು ಜಾರಿಗೆ ಬಂದವು. ಅಭಿವೃದ್ಧಿ ಸೂಚಕ ಮಾಪನಗಳ ಆಶಯವೇನೆಂದರೆ ಮಾನವ, ಮಕ್ಕಳು ಆಯಾ ರಾಷ್ಟ್ರದ ಸಂಪತ್ತು ಅವರ ಸರ್ವಾಂಗೀಣ ಅಭಿವೃದ್ಧಿಯೇ ದೇಶದ ಅಭಿವೃದ್ಧಿ. ಹೀಗಾಗಿ ಮಕ್ಕಳನ್ನು ದೇಶದ ಸಂಪನ್ಮೂಲವೆಂದು ಭಾವಿಸಿ ಮಕ್ಕಳ ಬದುಕು, ರಕ್ಷಣೆ, ಶಿಕ್ಷಣದಂತಹ ವಿಚಾರಗಳನ್ನು ಅಭಿವೃದ್ಧಿ ಸೂಚಕ ಮಾಪನಗಳಲ್ಲಿ ಜಾರಿಗೆ ತಂದರು. ಹೀಗೆ ಗುರುತಿಸುವುದರ ಮೂಲಕ ವಿಶ್ವಸಂಸ್ಥೆಯ ಮಾನವ, ಮಕ್ಕಳ ಹಕ್ಕುಗಳಿಗೆ ಬದ್ಧತೆಯನ್ನು ವ್ಯಕ್ತಪಡಿಸಿದ್ದಾರೆ.

ಜಗತ್ತಿನ ಎಲ್ಲಾ ಪ್ರದೇಶಗಳಲ್ಲಿ ಮಾನವ ಸಂಪನ್ಮೂಲದ ಪ್ರಮಾಣ ಒಂದೇ ರೀತಿಯಾಗಿಲ್ಲ. ಇದು ದೇಶದಿಂದ ದೇಶಕ್ಕೆ ವ್ಯತ್ಯಾಸವಾಗುತ್ತದೆ. ಯುನಿಸೆಫ್ ನೀಡಿರುವ ವರದಿಯಂತೆ ತೀರ್ವವಾಗಿ ಮಾನವ ಸಂಪನ್ಮೂಲದ ಕೊರತೆಯನ್ನು ಎದುರಿಸುತ್ತಿರುವ ರಾಷ್ಟ್ರಗಳಾದ ಲಕ್ಸೆಂಬರ್ಗ್, ಐಸ್‌ಲ್ಯಾಂಡ್, ಫಿನ್‌ಲೆಂಡ್, ಕುವೈತ್, ಆಸ್ಟ್ರಿಯಾ, ಡೆನ್ಮಾರ್ಕ್ ಮುಂತಾದ ರಾಷ್ಟ್ರಗಳಲ್ಲಿ ಪ್ರತಿ ಸಾವಿರ ಜನಸಂಖ್ಯೆಗೆ ಹುಟ್ಟುವ ಮಕ್ಕಳ ಪ್ರಮಾಣ ಕ್ರಮವಾಗಿ ೫,೪,೫೬,೫೯,೭೦,೬೩ ಆಗಿದೆ. ಇಂತಹ ರಾಷ್ಟ್ರಗಳು ಮಾನವ ಸಂಪನ್ಮೂಲದ ಪ್ರಾಮುಖ್ಯತೆಯನ್ನು ಮನಗಂಡು ಹೆಚ್ಚು ಹೆಚ್ಚು ಮಕ್ಕಳನ್ನು ಪಡೆಯುವಂತೆ ಪ್ರೋತ್ಸಾಹಿಸುತ್ತಿವೆ. ಜೊತೆಗೆ ಹೆಚ್ಚು ಹೆಚ್ಚು ಮಕ್ಕಳು ಪಡೆದವರನ್ನು ಮಹಾಮಾತೆ ಎಂದು ಗೌರವಿಸುತ್ತವೆ.

ಮೇಲಿನ ರಾಷ್ಟ್ರಗಳಿಗೆ ತದ್ವಿರುದ್ಧವೆಂಬಂತೆ ಯಥೇಚ್ಛ ಮಾನವ ಸಂಪನ್ಮೂಲ ಹೊಂದಿರುವಂತಹ ಭಾರತ, ಪಾಕಿಸ್ಥಾನ, ಆಫಘಾನಿಸ್ಥಾನದಂತಹ ರಾಷ್ಟ್ರಗಳಲ್ಲಿ ಮಾನವ ಸಂಪನ್ಮೂಲದ ಅಪಾರ ನಷ್ಟವನ್ನು ಅನುಭವಿಸುವುದರೊಂದಿಗೆ ಮಕ್ಕಳ ಹಕ್ಕುಗಳ ಘೋರ ಉಲ್ಲಂಘನೆಯಾಗುತ್ತದೆ. ಪ್ರತಿ ಸಾವಿರ ಜೀವಂತ ಹೆರಿಗೆಗಳಲ್ಲಿ ಅಫಘಾನಿಸ್ಥಾನದಲ್ಲಿ –೧೬೫, ಇರಾಕ್– ೧೦೨, ಭಾರತದಲ್ಲಿ–೬೭ ಮಕ್ಕಳು ಅಸುನೀಗುತ್ತಿವೆ. ಭಾರತದಂತಹ ರಾಷ್ಟ್ರಗಳಲ್ಲಿ ಹೆಚ್ಚು ಮಕ್ಕಳನ್ನು ಪಡೆಯದಂತೆ ಆಸೆ ಆಮಿಷಗಳನ್ನು ಒಡ್ಡಿ ನಿಯಂತ್ರಿಸುತ್ತವೆ.

ಮಕ್ಕಳ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳನ್ನು ತಡೆಯಲು ಭಾರತ ಸರ್ಕಾರವು ಅನೇಕ ಕ್ರಿಯಾ ಯೋಜನೆಗಳನ್ನು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ರೂಪಿಸಿದೆ. ಜೊತೆಗೆ ಹಲವಾರು ಕಾಯ್ದೆ ಕಾನೂನುಗಳನ್ನು ಜಾರಿಗೆ ತಂದಿದೆ. ಉದಾ:–ಬಾಲ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ ಕಾಯಿದೆ) ೧೯೮೬, ಮಕ್ಕಳಿಗೆ ನ್ಯಾಯ ಅಧಿನಿಯಮ ಮುಂತಾದ ಕಾನೂನುಗಳಿಂದ ಮಕ್ಕಳ ರಕ್ಷಣೆಗೆ ಮುಂದಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಮಕ್ಕಳ ಹಕ್ಕುಗಳಾಗಲಿ, ಮಕ್ಕಳ ರಕ್ಷಣೆಗಿರುವ ಕಾಯ್ದೆ ಕಾನೂನುಗಳಾಗಲಿ ತಲುಪಿದಂತೆ ಕಾಣಿಸುತ್ತಿಲ್ಲ. ಏಕೆಂದರೆ ಈಗಲೂ ಹಳ್ಳಿಗಳಲ್ಲಿ ಮಕ್ಕಳು ಕೂಲಿನಾಲಿ ಮಾಡುತ್ತಾ ದನಕರುಗಳನ್ನು ಮೇಯಿಸುತ್ತ, ಯಾರದೋ ತುತ್ತಿನ ಚೀಲಗಳನ್ನು ತುಂಬಿಸುತ್ತ ಜೀವನ ನಡೆಸುತ್ತಾರೆ. ನಮ್ಮ ಸುತ್ತ ಮುತ್ತಲಿನಲ್ಲಿ ಅನೇಕ ಅಂಗವಿಕಲ ಮಕ್ಕಳು, ಅನಾಥ ಮಕ್ಕಳು ಬೀದಿ ಬೀದಿ ಸುತ್ತುತ್ತಿರುತ್ತವೆ. ಕುಟುಂಬ ಪೋಷಣೆಯಿಂದ ವಂಚಿತವಾಗಿ ಜೀತ, ದುಡಿಮೆಗಳಲ್ಲಿ ತೊಡಗಿರುತ್ತಾರೆ. ಇಂತಹ ಮಕ್ಕಳು ನಮ್ಮ ನಿಮ್ಮೆಲ್ಲರ ಮಧ್ಯೆ ಇದ್ದು ಕೂಡ ಯೋಗ್ಯವಾದುದನ್ನು ತಿಳಿಯುವ, ಕಲಿಯುವ ಅವಕಾಶವನ್ನು ಕಳೆದುಕೊಳ್ಳುತ್ತಾರೆ. ಮನರಂಜನೆ, ಬಿಡುವು ಭವಿಷ್ಯದಲ್ಲಿ ಭದ್ರತೆಗಳಿಲ್ಲದೆ ಸತ್ತಂತೆ ಬದುಕುತ್ತಾರೆ. ತಮ್ಮ ಮಾತಿಗೂ ಅರ್ಥವಿದೆ, ಬೆಲೆಯಿದೆ, ಸುತ್ತ ಮುತ್ತಲಿನ ವಿಚಾರಗಳನ್ನು ನಾವು ಸಹ ತಿಳಿದುಕೊಳ್ಳಬಹುದು, ಚಿಂತಿಸಬಹುದು, ಬುದ್ಧಿ ಬೆಳೆಸಿಕೊಳ್ಳಬಹುದು ಎಂಬುದನ್ನು ಮರೆತು ಎಲ್ಲರಂತೆ ತಾನೂ

ಆರೋಗ್ಯವಂತ ಪ್ರಜೆಯಾಗಿ ಬೆಳೆಯುವ ಅವಕಾಶವನ್ನೇ ಕಳೆದುಕೊಳ್ಳುತ್ತಾರೆ. ಈ ಮಕ್ಕಳ ಪರಿಸ್ಥಿತಿಯನ್ನು ಸುಧಾರಿಸಲು ಅನೇಕ ಕ್ರಿಯಾ ಯೋಜನೆಗಳನ್ನು ರೂಪಿಸಿದರೂ ಕೂಡ ಮಕ್ಕಳ ಪರಿಸ್ಥಿತಿಗಳಲ್ಲಿ ಗುಣಾತ್ಮಕ ಬದಲಾವಣೆಗಳಾಗಿಲ್ಲ. ಹಾಗಿದ್ದರೆ ನಾವು ಸೋತ್ತದ್ದೆಲ್ಲಿ ಎಂದು ಗಮನಿಸಬೇಕಾಗುತ್ತದೆ? ನಾವು ರೂಪಿಸಿದ ಯೋಜನೆಗಳು ತಳಮಟ್ಟದಲ್ಲಿ ಮುಟ್ಟಿ ಸಮರ್ಪಕವಾಗಿ ಜಾರಿಯಾಗಿವೆಯೇ ಎಂಬುದನ್ನು ನೋಡಬೇಕಾಗುತ್ತದೆ. ರಾಷ್ಟ್ರೀಯ ಮತ್ತು ರಾಜ್ಯ ಕ್ರಿಯಾಯೋಜನೆಗಳಿಗೆ ಸ್ಥಳೀಯ ಸರ್ಕಾರಗಳು ಹೇಗೆ ಪ್ರತಿಕ್ರಿಯಿಸುತ್ತಿವೆ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ.

ಭಾರತದಲ್ಲಿರುವ ಶೇ ೪೩ರಷ್ಟು ಮಕ್ಕಳಲ್ಲಿ ಬಹುತೇಕ ಮಕ್ಕಳು ಹಳ್ಳಿಗಳಲ್ಲಿ ವಾಸಮಾಡುತ್ತಾರೆ. ಇಂತಹ ಮಕ್ಕಳು ಬಾಲ್ಯವನ್ನು ಹೇಗೆ ಕಳೆಯುತ್ತಿದ್ದಾರೆ? ಅವರ ಸರ್ವಾಂಗಿಣ ಅಭಿವೃದ್ಧಿಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು? ಮಕ್ಕಳ ರಕ್ಷಣೆ ಮತ್ತು ಅಭಿವೃದ್ಧಿಗಾಗಿ ಇರುವ ಸ್ಥಳೀಯ ಯೋಜನೆಗಳು ಯಾವುವು? ಎಂಬ ಪ್ರಶ್ನೆಗಳು ಎದುರಾಗುತ್ತವೆ. ಪ್ರಸ್ತುತ ಅಧ್ಯಯನದಲ್ಲಿ ಮೇಲಿನ ಎಲ್ಲಾ ಆಶಯಗಳೊಂದಿಗೆ ನೋಡಿದಾಗ ನಮ್ಮ ಹಳ್ಳಿಗಳಲ್ಲಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಯಾರು ಲೆಕ್ಕ ಹಾಕುತ್ತಾರೆ? ನಮ್ಮ ಹಳ್ಳಿಗಳಲ್ಲಿ ನಡೆಯುವ ಬಾಲ್ಯ ವಿವಾಹಗಳಿಗೆ ವರದಿ ನೀಡುವವರ್ಯಾರು? ಪಂಚಾಯ್ತಿಯಲ್ಲಿ ಮಕ್ಕಳಿಗಿರುವ ಸೌಲಭ್ಯಗಳೇನು? ಭಾರತ ಸರ್ಕಾರವು ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಸಹಿ ಹಾಕಿ ಬದ್ಧತೆಯನ್ನು ವ್ಯಕ್ತಪಡಿಸಿದ ಮೇಲೆ ಸಂವಿಧಾನ ಬದ್ಧ ಅಧಿಕಾರ ಪಡೆದ ಗ್ರಾಮ ಪಂಚಾಯ್ತಿಗಳ ಪಾತ್ರವೇನು? ಶಾಸನಬದ್ಧ ಅನುದಾನ ಪಡೆದ ಸ್ಥಳೀಯ ಸರ್ಕಾರ ಮಕ್ಕಳಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ಸಂಗ್ರಹಿಸುವುದಿಲ್ಲವೆ? ಯೋಜನೆಗಳನ್ನು ರೂಪಿಸುವುದಿಲ್ಲವೇ? ಕೇಂದ್ರ ಮತ್ತು ರಾಜ್ಯ ಸರ್ಕಾರದ ಸ್ಥಳೀಯ ಯೋಜನೆಗಳಾದ ಶಾಲೆ, ಅಂಗನವಾಡಿ ಆರೋಗ್ಯಕೇಂದ್ರ, ಪಡಿತರ ಚೀಟಿ ವಿತರಣೆ ಸಂಸ್ಥೆ ಮುಂತಾದ ಮಕ್ಕಳ ಕೇಂದ್ರಿತ ಯೋಜನೆಗಳಲ್ಲಿ ಗ್ರಾಮ ಪಂಚಾಯಿತಿಗಳ ಪಾತ್ರವೇನು?

ಈ ಮೇಲಿನ ಪ್ರಶ್ನೆಗಳಿಗೆ ಪೂರಕವಾಗಿ ಉತ್ತರವನ್ನು ಕಂಡುಕೊಳ್ಳುವ ದೃಷ್ಠಿಯಿಂದ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಧ್ಯಯನಕ್ಕೆ ತೊಡಗಿಸಿಕೊಂಡು ಗ್ರಾಮ, ದೇಶದ ಆಸ್ತಿಯಾದ ಮಕ್ಕಳಿಗೆ ಸ್ಥಳೀಯ ಮಟ್ಟದಲ್ಲಿ ಅವರ ಹಕ್ಕುಗಳನ್ನು ಒದಗಿಸಿಕೊಡಬೇಕು. ಮಕ್ಕಳ ಸ್ಥಿತಿಗತಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ಗ್ರಾಮ ಪಂಚಾಯಿತಿಗಳು ಸಂಗ್ರಹಿಸಬೇಕು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಬೇಕು ಪಂಚಾಯ್ತಿ ಜನ ಸಂಖ್ಯೆಯಲ್ಲಿ ಮಕ್ಕಳೂ ಒಂದು ಭಾಗವೆಂದು ಪರಿಗಣಿಸಬೇಕು ಮಕ್ಕಳ ಕಲ್ಯಾಣಕ್ಕಾಗಿ ಇರುವ ಶಿಕ್ಷಣ, ಆರೋಗ್ಯ ಸೇವೆಗಳನ್ನು ಸಮರ್ಥವಾಗಿ ಮೇಲುಸ್ತುವಾರಿ ಮಾಡಬೇಕು ಎಂಬ ಅಂಶಗಳನ್ನು ಮುಂದಿನ ಅಧ್ಯಾಯಗಳಲ್ಲಿ ಪ್ರಸ್ತಾಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಮಕ್ಕಳ ಹಕ್ಕುಗಳು ಮತ್ತು ಸ್ಥಳೀಯ ಸರ್ಕಾರ ಎಂಬ ಅಂಶವನ್ನಿಟ್ಟುಕೊಂಡು ಸ್ಥಳೀಯವಾಗಿ ದೊರೆಯುವ ಯೋಜನೆಗಳಾದ ಅಂಗನವಾಡಿ, ಶಾಲೆ ಮತ್ತು ಆರೋಗ್ಯಕೇಂದ್ರ ಮುಂತಾದವುಗಳ ಮೇಲೆ ಗ್ರಾಮ ಪಂಚಾಯಿತಿಗಿರುವ ಅಧಿಕಾರವೇನು? ಎಂಬಿತ್ಯಾದಿ ಅಂಶಗಳನ್ನು ಅಧ್ಯಯನದಲ್ಲಿ ಮೂಡಿಸಲಾಗಿದೆ.

ಅಧ್ಯಯನ ವ್ಯಾಪ್ತಿ

ಮಕ್ಕಳ ಹಕ್ಕುಗಳು ಮತ್ತು ಸ್ಥಳೀಯ ಸರ್ಕಾರ ಎಂಬ ಅಂಶವನ್ನು ತೆಗೆದುಕೊಂಡು ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕಿನ ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿಯನ್ನು ಮಾದರಿಗಾಗಿ ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ. ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗುಡಾರನಗರ, ಜಾಲಿಬೆಂಚೆ, ಮತ್ತು ಲಕ್ಷ್ಮಿನಗರ ಎಂಬ ನಾಲ್ಕು ಹಳ್ಳಿಗಳು ಬರುತ್ತವೆ. ಈ ಹಳ್ಳಿಗಳಲ್ಲಿರುವ ಸೊನ್ನೆಯಿಂದ ಹದಿನೆಂಟು ವರ್ಷದೊಳಗಿನ ಮಕ್ಕಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಈ ಹಳ್ಳಿಯಲ್ಲಿನ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ಮಕ್ಕಳ ಬದುಕು, ರಕ್ಷಣೆ ಮತ್ತು ಆರೋಗ್ಯ ಮತ್ತು ಭಾಗವಹಿಸುವಿಕೆಗೆ ಸಂಬಂಧಿಸಿದ ವಿಚಾರಗಳನ್ನು ಗಮನಿಸಲಾಗಿದೆ. ಮಕ್ಕಳ ಹಕ್ಕುಗಳನ್ನು ಒದಗಿಸುವ ನಿಟ್ಟಿನಲ್ಲಿ ಅಂಗನವಾಡಿ, ಶಾಲೆ, ಆರೋಗ್ಯಕೇಂದ್ರ ಮತ್ತು ಪಡಿತರ ವಿತರಣೆ ಘಟಕ, ಮುಂತಾದವುಗಳು ಹಳ್ಳಿಯಲ್ಲಿ ಹೇಗೆ ಕಾರ್ಯ ನಿರ್ವಹಿಸುತ್ತವೆ. ಅವುಗಳ ಸಮರ್ಪಕವಾಗಿ ಮಕ್ಕಳಿಗೆ ದೊರೆಯುತ್ತವೆಯೇ? ಎಂಬುದನ್ನು ವಿವರಿಸಲಾಗಿದೆ. ಸ್ಥಳೀಯ ಸರ್ಕಾರವಾದ ಗ್ರಾಮ ಪಂಚಾಯಿತಿಗಳು ಮಕ್ಕಳ ಹಕ್ಕುಗಳ ದೃಷ್ಟಿಕೋನದೊಂದಿಗೆ ಬದ್ಧತೆ ಇಂದ ಕೆಲಸ ಮಾಡುತ್ತವೆಯೇ ಎಂಬುದನ್ನು ಅಧ್ಯಯನದಲ್ಲಿ ಪರಿಶೀಲಿಸಲಾಗಿದೆ. ಗ್ರಾಮ ಪಂಚಾಯಿತಿ ಕ್ರಿಯಾ ಯೋಜನೆಗಳಲ್ಲಿ ಮಕ್ಕಳ ಅಂಶಗಳು ಸೇರ್ಪಡೆಯಾಗಿವೆಯೇ? ಎಂಬುದನ್ನು ನೋಡಲಾಗಿದೆ. ಸಮುದಾಯ ಸಂಘಸಂಸ್ಥೆಗಳು ಮಕ್ಕಳ ಹಕ್ಕುಗಳನ್ನು ಅನುಷ್ಠಾನಗೊಳಿಸಲು ಮಾಡಬೇಕಾದ ಕೆಲಸಗಳ ಬಗ್ಗೆ ತಿಳಿಸಲಾಗಿದೆ. ಮಕ್ಕಳ ಸಾಮಾಜಿಕ ಸಮಸ್ಯೆಗಳಾದ ಬಾಲಕಾರ್ಮಿಕತೆ, ಬಾಲ್ಯ ವಿವಾಹ, ಜೀತಪದ್ಧತಿ, ಮುಂತಾದ ಅಂಶಗಳನ್ನು ಅಧ್ಯಯನ ಮಾಡಲಾಗಿದೆ. ಮಕ್ಕಳ ಆರೋಗ್ಯಕ್ಕೆ ಸಂಬಂಧಿಸಿದಂತೆ ರೋಗ ನಿರೋಧಕ ಲಸಿಕೆ, ಮಕ್ಕಳ ಮರಣ ಪ್ರಮಾಣ, ತಾಯಂದಿರ ಹೆರಿಗೆ ಮತ್ತು ಮರಣ, ಅಪೌಷ್ಟಿಕತೆ ಇತ್ಯಾದಿ ಅಂಶಗಳು ಈ ಅಧ್ಯಯನ ವ್ಯಾಪ್ತಿಗೆ ಒಳಪಡುತ್ತವೆ.

ಅಧ್ಯಯನ ವಿಧಾನ

ಮಕ್ಕಳ ಹಕ್ಕುಗಳು ಮತ್ತು ಸ್ಥಳೀಯ ಸರ್ಕಾರ ಎಂಬ ವಿಷಯದ ಅಧ್ಯಯನವು ಕ್ಷೇತ್ರಕಾರ್ಯಾಧಾರಿತ ಅಧ್ಯಯನವಾಗಿದೆ. ಕೇತ್ರ ಕಾರ್ಯದ ಅಧ್ಯಯನದಲ್ಲಿ ತೊಡಗುವಾಗ ಮಕ್ಕಳ ಹಕ್ಕುಗಳನ್ನು ಪಾಶ್ಚಾತ್ಯ ನೆಲೆಯಲ್ಲಿ ನೋಡದೆ ದೇಶಿ ನೆಲೆಯಲ್ಲಿ ನೋಡುವ ಪ್ರಯತ್ನ ಮಾಡಲಾಗಿದೆ. ಡಾ.ಮೊಗಳ್ಳಿ ಗಣೇಶ್ ಅವರು ಮೌಖಿಕ ಕಥನದಲ್ಲಿ ದೇಶಿ ಸಂಶೋಧನಾ ವಿಧಾನದ ಬಗ್ಗೆ ಪ್ರಸ್ತಾಪಿಸುತ್ತಾ "ತನ್ನ ಸ್ಥಳೀಯ ಅಸ್ತಿತ್ವವನ್ನು ಆಧುನಿಕ ಜಗತ್ತಿನ ಜೊತೆ

ಪುನರ್ ಅನುಸಂಧಾನಿಸಿ ವರ್ತಮಾನವನ್ನು ಸುಭದ್ರಗೊಳಿಸಿಕೊಳ್ಳುವುದು ದೇಶಿ ಸಂಶೋಧನೆಯ ಪ್ರಮುಖ ಆಶಯ"[೪] ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಕ್ಷೇತ್ರಕಾರ್ಯದಲ್ಲಿ ಮಕ್ಕಳ ಹಕ್ಕುಗಳ ದೃಷ್ಟಿಕೋನದೊಂದಿಗೆ ಹಳ್ಳಿ ಮಕ್ಕಳ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲಾಗಿದೆ. ಮಕ್ಕಳ ಹಕ್ಕುಗಳ ಜಾರಿ ಕುರಿತು ಗ್ರಾಮಪಂಚಾಯಿತಿಗಳಿಗಿರುವ ಅಧಿಕಾರವೇನು? ಕಾರ್ಯಗಳೇನು? ಎಂಬುದನ್ನು ವಿವರಿಸಲಾಗಿದೆ. ಗ್ರಾಮಪಂಚಾಯಿತಿಗಳು ಮಕ್ಕಳ ಹಕ್ಕುಗಳನ್ನು ಒದಗಿಸುವ ನಿಟ್ಟಿನಲ್ಲಿ ಬದ್ಧತೆಯನ್ನು ಒದಗಿಸುತ್ತವೆಯೇ ಇಲ್ಲವೇ ಎಂಬುದನ್ನು ನೋಡಲಾಗಿದೆ.

ಮಾಹಿತಿಯನ್ನು ಅಂಗನವಾಡಿ, ಶಾಲೆ, ಆರೋಗ್ಯಕೇಂದ್ರ ಮತ್ತು ಗ್ರಾಮ ಪಂಚಾಯಿತಿಗಳಿಂದ ಸಂಗ್ರಹಿಸಲಾಗಿದೆ. ಕ್ಷೇತ್ರ ಕಾರ್ಯವನ್ನು ಕೈಗೊಂಡಾಗ ಅಲ್ಲಿರುವಂತಹ ಸೇವಾಸೌಲಭ್ಯಗಳನ್ನು ಗಮನಿಸಿ ಮಕ್ಕಳ ದೃಷ್ಟಿಯಿಂದ ಹಿತಕರವೇ ಎಂಬುದನ್ನು ಅಧ್ಯಯನದಲ್ಲಿ ವಿವರಿಸಲಾಗಿದೆ. ಹೀಗೆ ಭೇಟಿ ಮಾಡಿದಾಗ ಪಂಚಾಯಿತಿ ಸದಸ್ಯರು ಅಧ್ಯಕ್ಷರು ಅಂಗನವಾಡಿ ಕಾರ್ಯಕರ್ತರು ಸಮುದಾಯ ಸಂಘಟಕರಿಂದ ಮಕ್ಕಳ ಸ್ಥಿತಿಗತಿ ಕುರಿತು ಅವರ ಅನುಭವವನ್ನು ಸಂಗ್ರಹಿಸಲಾಗಿದೆ. ಮಕ್ಕಳ ಹಕ್ಕುಗಳ ಹಿನ್ನೆಲೆಯಲ್ಲಿ ಪ್ರಶ್ನಾವಳಿಗಳನ್ನು ತಯಾರಿಸಿಕೊಂಡು ಸಂದರ್ಶನದ ಮೂಲಕ ಸ್ಥಳೀಯ ಸೇವಾ ಕೇಂದ್ರಗಳ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಹೀಗೆ ಸಂಗ್ರಹಿಸುವಾಗ ಪ್ರಮುಖದೇಶಿ ವಿಧಾನಗಳಾದ "ಸಂಸ್ಕೃತಿ ಬದ್ಧತೆ, ವ್ಯಕ್ತಿ ವಿಶಿಷ್ಟತೆ, ಸೊಪಜ್ಞತೆ, ಜ್ಞಾನದ ಸಮಷ್ಠಿ, ವೈಚಾರಿಕ ಪ್ರಜ್ಞೆ, ಸಮಕಾಲೀನ ಸಂಯೋಗ ಸಂವೇದನೆ ಮತ್ತು ಆತ್ಮಕಥನ"[೫] ಎಂಬಂತಹ ಅಂಶಗಳನ್ನು ಹಿನ್ನಲೆಯಾಗಿಟ್ಟುಕೊಂಡು ಸ್ಥಳೀಯವಾಗಿ ಮಕ್ಕಳ ಹಕ್ಕುಗಳನ್ನು ನೋಡಲಾಗಿದೆ.

ಗ್ರಾಮಪಂಚಾಯಿತಿ ಜನ ಸಂಖ್ಯೆ ವರದಿ, ಲಭ್ಯವಿರುವ ಪುಸ್ತಕಗಳು, ಯೋಜನೆಗಳ ವರದಿ ಹಾಗೂ ಪರಾಮರ್ಶನ ಗ್ರಂಥಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಯುನಿಸೆಫ್ ಬಿಡುಗಡೆ ಮಾಡಿರುವ ವರದಿಯನ್ನು ಅಧ್ಯಯನದ ನಿಖರತೆಗಾಗಿ ಬಳಸಿಕೊಳ್ಳಲಾಗಿದೆ.

ಇಲ್ಲಿ ಬರುವ ಅಧ್ಯಾಯಗಳನ್ನು ಈ ಕೆಳಕಂಡಂತೆ ಜೋಡಿಸಲಾಗಿದೆ. ಮೊದಲನೇ ಅಧ್ಯಾಯದಲ್ಲಿ ಮಕ್ಕಳ ಹಕ್ಕುಗಳ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನವನ್ನು ವಿವರಿಸಲಾಗಿದೆ. ಎರಡನೇ ಅಧ್ಯಾಯದಲ್ಲಿ ಮಕ್ಕಳೆಂದರೆ ಯಾರು? ಯಾವುದನ್ನು ನಾವು ಮಕ್ಕಳ ಹಕ್ಕುಗಳೆಂದು ಕರೆಯುತ್ತೇವೆ? ಮಕ್ಕಳ ಹಕ್ಕುಗಳು ಬೆಳೆದು ಬಂದ ಬಗೆಯನ್ನು ವಿವರಿಸಲಾಗಿದೆ. ಪ್ರಸ್ತುತದಲ್ಲಿರುವ ಮಕ್ಕಳ ಹಕ್ಕುಗಳನ್ನು ಸ್ಥಳೀಯ ದೃಷ್ಠಿಕೋನದೊಂದಿಗೆ ಅನ್ವಯಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಪ್ರಸ್ತುತ ಮಕ್ಕಳ ಸ್ಥಿತಿಗತಿ, ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಕಾರಣಗಳು ಮತ್ತು ಅವುಗಳ ಪರಿಣಾಮಗಳನ್ನು ವಿವರಿಸುವುದರ ಜೊತೆಗೆ ಮಕ್ಕಳಿಗಿರುವ ಕಾನೂನುಗಳ ಕುರಿತು ಪ್ರಸ್ತಾಪ ಮಾಡಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ

ಮಕ್ಕಳಿಗೆ ಸಂಬಂಧಿಸಿದ ಸೇವಾ ಸೌಲಭ್ಯಗಳ ಪ್ರಸ್ತುತ ಸ್ಥಿತಿಗತಿ, ಕರ್ನಾಟಕ ರಾಜ್ಯ ಮಕ್ಕಳ ಕ್ರಿಯಾಯೋಜನೆ ಮತ್ತು ಗ್ರಾಮಪಂಚಾಯಿತಿಗಿರುವ ಅಧಿಕಾರ, ಕಾರ್ಯಗಳು ಮತ್ತು ಮಕ್ಕಳ ಕುರಿತು ವಿವರಣೆ ನೀಡಲಾಗಿದೆ. ಐದನೆಯ ಅಧ್ಯಾಯದಲ್ಲಿ ಮಕ್ಕಳು ಮತ್ತು ಸ್ಥಳೀಯ ಸರ್ಕಾರ ಮಕ್ಕಳ ಹಕ್ಕುಗಳ ಜಾರಿಗಾಗಿ ಗ್ರಾಮ ಪಂಚಾಯಿತಿಯ ಪಾತ್ರ ಹಾಗು ಸ್ಥಾಯಿಸಮಿತಿಗಳು ಮತ್ತು ಉಪಸಮಿತಿಗಳ ಪಾತ್ರವನ್ನು ವಿವರಿಸಲಾಗಿದೆ. ಸಮುದಾಯ ಸಂಘ ಸಂಸ್ಥೆಗಳು ಮಕ್ಕಳ ಹಕ್ಕುಗಳ ರಕ್ಷಣೆಗೆ ಹೇಗೆ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂಬುದರ ಬಗ್ಗೆ ವಿವರಣೆಯಿದೆ. ಆರನೆಯ ಅಧ್ಯಾಯದಲ್ಲಿ ಅಧ್ಯಯನ ಫಲಿತಗಳು, ವಿವರಿಸುವುದರೊಂದಿಗೆ ಆಕರ ಗ್ರಂಥ, ಅನುಬಂಧಗಳನ್ನು ಕೊಡಲಾಗಿದೆ.

ಅಡಿ ಟಿಪ್ಪಣಿಗಳು

೧. ಲಿಯಾಲೆವಿನ್: ಶ್ರೀನಿವಾಸ ಕೆ.ಎಚ್:(ಅನು), ೨೦೦೦; ಮಾನವ ಹಕ್ಕುಗಳು ಪ್ರಶ್ನೆ ಉತ್ತರ, ಪು.೧

೨. ಜಸ್ಟೀರ್ ಸಿಂಗ್: ರಾಹು:(ಅನು), ೨೦೦೦; ನಮ್ಮ ಬಡತನ ಸಂವಿಧಾನಕ್ಕೊಂದು ಕಳಂಕ, ಪು.೧

೩. ಜಸ್ವೀರ್ ಸಿಂಗ್: ರಾಹು: (ಅನು), ೨೦೦೦; ನಮ್ಮ ಬಡತನ ಸಂವಿಧಾನಕ್ಕೊಂದು ಕಳಂಕ, ಪು.೮

೪. ಮೊಗಳ್ಳಿ ಗಣೇಶ್: ೨೦೦೬; ಮೌಖಿಕ ಕಥನ, ಪು.೧೦೫

೫. ಮೊಗಳ್ಳಿ ಗಣೇಶ್: ೨೦೦೫; ಆದಿಮ, ಪು.೪

ಅಧ್ಯಾಯ–೨

ಮಕ್ಕಳು ಮತ್ತು ಹಕ್ಕುಗಳು

೨.೧ ಮಕ್ಕಳೆಂದರೆ

೨.೨ ಮಕ್ಕಳ ಹಕ್ಕುಗಳು ಬೆಳೆದು ಬಂದ ಬಗೆ

೨.೩ ಮಕ್ಕಳ ಹಕ್ಕುಗಳು ಹಾಗು ಅನ್ವಯತೆ

ಅಧ್ಯಾಯ-೨

ಮಕ್ಕಳು ಮತ್ತು ಹಕ್ಕುಗಳು

ಮಕ್ಕಳ ಹಕ್ಕುಗಳು ಕುರಿತು ಚರ್ಚೆ ನಡೆಯುತ್ತಿರುವುದು ಇತ್ತೀಚೆಗೆ. ನಮ್ಮ ಹಿಂದಿನವರಿಗೆ ಮಕ್ಕಳ ಹಕ್ಕುಗಳ ಕಲ್ಪನೆಗಳು ಇದ್ದಿಲ್ಲ. ಆದಿಮಾನವನ ಕಾಲದಲ್ಲಿ ಕೇವಲ ಬೇಟೆಯಾಡಿ ಆಹಾರ ಬೇಯಿಸಿಕೊಂಡು ಜೀವನ ಸಾಗಿಸುತ್ತಿದ್ದ. ಅವನಿಗೆ ಅವನದೇ ಆದ ವಾಸಕ್ಕೆ ಮನೆಯಾಗಲಿ ಜಮೀನಾಗಲಿ ಇರಲಿಲ್ಲ. ಯಾರಿಗೆ ಎಷ್ಟುಬೇಕೋ ಅಷ್ಟನ್ನೆ ಮಾತ್ರ ಪಡೆಯುತ್ತಿದ್ದರು.ಬರುಬರುತ್ತಾ ಒಂದು ಕಡೆ ನೆಲೆ ನಿಂತು ಬೇಸಾಯ ಪ್ರಾರಂಭಿಸಿದ ಮೇಲೆ ಮಾನವ ತನಗಾಗಿ ತನ್ನ ವಂಶಕ್ಕಾಗಿ ಸಂಪತ್ತನ್ನು ಸಂಗ್ರಹಿಸಿಲು ಪ್ರಾರಂಭಿಸಿದ, ದುರಾಸೆಯಿಂದ ಭೂಮಿಯನ್ನು ಅತಿಕ್ರಮಣ ಮಾಡಿದಾಗ ಹೊಡೆದಾಟ ಬಡಿದಾಟಗಳು ಶುರುವಾದವು. ಆಯಾ ಕಾಲಘಟ್ಟದಲ್ಲಿ ಅಲ್ಲಿನ ಮುಖ್ಯಸ್ಥನು ಅಕ್ರಮ ಅನ್ಯಾಯಗಳನ್ನು ನಿಯಂತ್ರಿಸಿ ಎಲ್ಲರಿಗೂ ನ್ಯಾಯ ಒದಗಿಸುತ್ತಿದ್ದನು. ಹೀಗಾಗಿ ಎಲ್ಲರೂ ಸುಖಜೀವನ ನಡೆಸಿದರು. ಜೆಎಸ್.ಮಿಲ್ ಹೇಳುವಂತೆ "ಬಹುಮತದ ದುರಾಡಳಿತದ ಸಮಾಜವನ್ನು ಕ್ಷೋಭೆಗೊಳಿಸಿ ವ್ಯಕ್ತಿಯ ಅಸ್ತಿತ್ವವನ್ನು ಅಳಿಸಿಹಾಕಿ ಮಾನವ ಜೀವವಿದ್ದ ಒಂದು ಜೀವಿ ಅನ್ನುವುದನ್ನು ಮರೆತು ಇತರ ಪ್ರಾಣಿಗಳಂತೆ ಆ ಮಾನವ, ಜೀವಕ್ಕೂ ಬೆಲೆ ಕೊಡುವುದು ನಿಂತು ಹೋಯಿತು."[೧] ಇದನ್ನು ಗಮನಿಸಿದ ಸಮಾಜ ಚಿಂತಕರು, ಧಾರ್ಮಿಕ ಸುಧಾರಕರು ಹಲವಾರು ನೀತಿ ನಿಯಮಗಳನ್ನು ರೂಪಿಸಿದರು. ಬರುಬರುತ್ತಾ ಅವು ಕಾಯ್ದೆ ಕಾನೂನುಗಳಾಗಿ ಮಾರ್ಪಾಟಾದವು ಮಾನವ ಅಸ್ತಿತ್ವದ ಹಕ್ಕಿಗೆ ಧಕ್ಕೆ ಉಂಟಾದಾಗ ಕಾನೂನುಗಳನ್ನು ಬಳಸಿಕೊಳ್ಳಲಾಯಿತು. ಹೀಗೆ ಮನುಕುಲದ ರಕ್ಷಣೆಗೋಸ್ಕರ ಮಾನವ ಹಕ್ಕುಗಳು ಜಾರಿಗೆ ಬಂದವು.

ಮಾನವ ಹಕ್ಕುಗಳ ಪರಿಚ್ಛೇದ-೧ರಲ್ಲಿ ಪ್ರಸ್ತಾಪಿಸಿದಂತೆ "ಎಲ್ಲಾ ಮಾನವರು ಹುಟ್ಟಿನಿಂದಲೇ ಸ್ವತಂತ್ರರು ಮತ್ತು ಅವರಿಗೆ ಸಮಾನ ಹಕ್ಕುಗಳಿವೆ"[೨] ಎಂದು ಹೇಳಿತು.

ಹೀಗೆ ಹೇಳುವ ಮೂಲಕ ಮಾನವ ಜೀವಿಯೊಳಗೆ ಮಗು ಎಂದು ವಿಸ್ತ್ರತವಾಗಿ ನೋಡಲಾಯಿತು.

ಮಾನವ ಹಕ್ಕುಗಳು ವಿಶ್ವಸಂಸ್ಥೆ ಅಂಗೀಕರಿಸಿ ಎಲ್ಲಾ ದೇಶಗಳಿಗೆ ಜಾರಿಗೆ ತರಬೇಕೆಂದು ಹೇಳಿರುವ ಕಟ್ಟುಪಾಡುಗಳು "ಯಾರಿಗೂ ಯಾರಿಂದಲೂ ಯಾವುದೇ ರೀತಿಯ ಅನ್ಯಾಯ ಎಂತಹ ಸಂದರ್ಭದಲ್ಲೂ ಆಗಬಾರದು, ಎಂದು ಖಡಾ ಖಂಡಿತವಾಗಿ ಹೇಳಿರುವುದು. ಇದರ ಆಶಯ. ಜಗತ್ತಿನ ಎಲ್ಲರಿಗೂ ಇದು ಅನ್ವಯಿಸುತ್ತದೆ. ಎಲ್ಲರಿಗೂ ಎಲ್ಲಾ ಹಕ್ಕುಗಳ ಬಗ್ಗೆ ಅರಿವಿರಬೇಕು. ಎಂಬುದು ಇಲ್ಲಿನ ಪ್ರಮುಖ ವಿಚಾರ."[೩]

ಭಾರತದೇಶದಲ್ಲಿ ಎಲ್ಲರಿಗೂ ಒಪ್ಪಿಗೆಯಾಗುವಂತಹ ಸಂವಿಧಾನವನ್ನು ರಚನೆ ಮಾಡಲಾಗಿದೆ. ಅದರಲ್ಲಿ ನಮಗೆ ಮೂಲಭೂತ ಹಕ್ಕುಗಳನ್ನು ಕೊಟ್ಟಿದೆ. ಸ್ವಾತಂತ್ರದ ಹಕ್ಕು, ಸಮಾನತೆಯ ಹಕ್ಕು, ಶೋಷಣೆಯ ವಿರುದ್ಧ ಹಕ್ಕು, ಧಾರ್ಮಿಕ ಸ್ವಾತಂತ್ರದ ಹಕ್ಕು ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು ಇತ್ಯಾದಿ ಇದರ ಮೂಲಕ ನಾವು ಸಮಾಜದಲ್ಲಿ ಘನತೆ ಗೌರವಗಳಿಂದ ಬದುಕಲು ಸಾಧ್ಯವಾಗಿದೆ.

ಹಕ್ಕು ಎಂದರೇನು?

"ತೀರ ಅಗತ್ಯವಾದ ಮೂಲ ಅವಶ್ಯಕತೆಗಳು..... ಯಾವುದು ನ್ಯಾಯ ಸಮ್ಮತವಾಗಿ ದೊರಕಲೇ ಬೇಕಾಗಿರುವುದೋ..... ಯಾವುದನ್ನು ಯಾರು ಯಾರಿಗೂ ಸ್ವಾಭಾವಿಕವಾಗಿ ನಿರಾಕರಿಸಬಾರದೋ, ಸಕಾರಣವಿಲ್ಲದೆ ತಡೆಹಿಡಿಯಬಾರದೋ, ಉಲ್ಲಂಘಿಸಬಾರದೋ..... ಇವು ಹಕ್ಕು ಎಂಬ ಅರ್ಥ ಪಡೆಯುವವು"[೪]

ಅಂದರೆ ಯಾವುದೇ ಮನುಷ್ಯನಿಗೆ ಬದುಕನ್ನು ಘನತೆ ಗೌರವಗಳಿಂದ ನಡೆಸಲು ಅವಕಾಶವಾಗಬೇಕು. ಕನಿಷ್ಟ ಪಕ್ಷ ಮನುಷ್ಯನಿಗೆ ಬದುಕಲು ಬೇಕಾಗುವಂತಹ ಆಹಾರ, ನೀರು, ವಸತಿ ದೊರಕಬೇಕಾಗುತ್ತದೆ. ಉತ್ತಮ ಆರೋಗ್ಯದಿಂದ ಜೀವನ ನಡೆಸಲು ಆರೋಗ್ಯ ಸೌಲಭ್ಯಗಳು ಬೇಕು. ಅದೇ ರೀತಿಯಾಗಿ ತೊಡಲು ಬಟ್ಟೆ ಬೇಕು. ಈ ಎಲ್ಲ ಅಂಶಗಳ ಕಡೆಗೆ ಹಕ್ಕು ಎಂಬ ವಿಚಾರ ಗಮನ ಕೊಡುತ್ತದೆ.

"ಇನ್ನಾವುದೇ ಜನತೆಯ ವಿಷಯದಲ್ಲೆಂತೋ ಅಂತೆಯೇ ಭಾರತೀಯ ಜನತೆಯೂ ಕೂಡ ಸಂಪೂರ್ಣ ಸ್ವಾತಂತ್ರವನ್ನು ಪಡೆದು, ತಮ್ಮ ಶ್ರಮದ ಫಲವನ್ನು ತಾವೇ ಅಸ್ವಾದಿಸುತ್ತಾ ಬದುಕಿನ ಎಲ್ಲಾ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಾ, ಪೂರ್ಣ ಪುರೋಭಿವೃದ್ಧಿಯ, ಸಾಧ್ಯತೆಗಳನ್ನು ನೈಜಗೊಳಿಸುವ ಹಕ್ಕು, ಅವರ ಬದುಕಿನ ಅವಿಭಾಜ್ಯ ಅಂಗವೆಂಬುದು ನಮ್ಮ ನಂಬುಗೆಯಾಗಿದೆ. ಯಾವುದೇ ಸರ್ಕಾರ ಜನತೆಯ ಹಕ್ಕನ್ನೂ ನಿರಾಕರಿಸಿದರೆ, ಅವರನ್ನು ಅಭಿವೃದ್ಧಿಯ ಸಾಧ್ಯತೆಗಳಿಂದ ವಂಚನೆಗೊಳಿಸಿ ದಮನಕಾರಿ ಕ್ರಮ ಕೈಗೊಂಡರೆ ಅಂತಹ ಸರ್ಕಾರವನ್ನು ಬದಲಿಸುವ ಅಥವಾ ಬಗ್ಗು ಬಡಿಯುವ ಹಕ್ಕು ಜನತೆಗಿರುತ್ತದೆ."[೫] ಈ ಮಾತನ್ನು ನಾಗರಿಕ ಅಸಹಕಾರ ಆಂದೋಲನದ ಮೊದಲಘಟ್ಟದಲ್ಲಿ ಜನವರಿ ೨೬.

೧೯೩೦ರಂದು ತೆಗೆದುಕೊಂಡ ಸ್ವರಾಜ್ಯ ಪ್ರಮಾಣದಲ್ಲಿ ಹೇಳಲಾಗಿದೆ. ಇಲ್ಲಿ ಮುಖ್ಯ ಪ್ರಶ್ನೆಯೆಂದರೆ ಸ್ವಾತಂತ್ರ ಪಡೆದು ೬೦ ವರ್ಷಗಳ ನಂತರವೂ ಕೂಡ ನಾವು ಸ್ವರಾಜ್ಯ ಪಡೆಯುವಾಗ ಮಾಡಿದ ಪ್ರಮಾಣವನ್ನು ಈಡೇರಿಸಿಕೊಂಡಿದ್ದೇವೆಯೇ ಎಂಬುದು. ಈ ವಿಷಯದ ಚರ್ಚೆಯೇ ಬೇರೆ.

೧೯೪೮ರಲ್ಲಿ ಮಾನವ ಹಕ್ಕುಗಳು ಜಾರಿಯಾದ ನಂತರ ಭಾರತದಲ್ಲಿರುವಂಥ ಪ್ರತಿಯೊಬ್ಬ ಪ್ರಜೆಗೆ ಮಾನವ ಹಕ್ಕುಗಳ ಬಗ್ಗೆ ಪರಿಚಯವಿದೆಯೇ ಎನ್ನುವುದು ಒಂದು ಪ್ರಶ್ನೆಯಾದರೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮಕ್ಕಳಿಗೂ ಹಕ್ಕುಗಳು ಜಾರಿಯಾಗಿವೆ ಎಂಬುದನ್ನು ನೋಡುವುದು.

೨.೧ ಮಕ್ಕಳೆಂದರೆ

ಮಕ್ಕಳು ಎಂದರೆ ಯಾರು? ಯಾರನ್ನು ನಾವು ಮಕ್ಕಳೆಂದು ಕರೆಯುತ್ತೇವೆ? ಮಕ್ಕಳೆಂದು ಗುರುತಿಸಲು ಏನಾದರೂ ಮಾನದಂಡಗಳಿವೆಯೇ? ಯಾವ ವಯೋ ಮಾನದವರನ್ನು ನಾವು ಮಕ್ಕಳೆಂದು ಕರೆಯುತ್ತೇವೆ ಎನ್ನುವ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಸಾಮಾನ್ಯವಾಗಿ ಮಕ್ಕಳೆಂದರೆ ಏನು ತಿಳಿಯದ ಮುಗ್ಧರ, ಆಟವಾಡಿ ನಲಿಯುವವರು, ಸೂಕ್ಷ್ಮಮನಸ್ಸುಳವರು, ದೇವರ ಸಮಾನರು, ದೊಡ್ಡವರ ರಕ್ಷಣೆಯಲ್ಲಿ ಬೆಳೆಯಬೇಕಾದವರು, ಎಳೆವಯಸ್ಸಿನವರು, ತಂದೆ ತಾಯಿ ಪೋಷಕರಿಂದ ರಕ್ಷಿಸಲ್ಪಡುವವರು, ಹೊಸದನ್ನು ಕಲಿಯಬೇಕಾದವರು, ಸ್ವತಂತ್ರವಾಗಿ ವಿಚಾರಮಾಡದವರು, ೧೪ವರ್ಷದೊಳಗಿನವರು, ಹೀಗೆ ಹೇಳುತ್ತಾ ಹೋಗಬಹುದು. ಆದರೆ ವಿಶ್ವಸಂಸ್ಥೆ ಮಕ್ಕಳ ಹಕ್ಕುಗಳ ಒಡಂಬಡಿಕೆ, ಭಾರತ ಸಂವಿಧಾನ, ಮಕ್ಕಳ ನ್ಯಾಯ ಕಾನೂನು ಮತ್ತು ಇತರೆ ಕಾನೂನುಗಳು ಮಕ್ಕಳೆಂದರೆ ಯಾರು ಎಂಬುದಕ್ಕೆ ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸುತ್ತವೆ.

೧. ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ ಪರಿಚ್ಛೇದ –೧ರ ಪ್ರಕಾರ ಮಕ್ಕಳೆಂದರೆ

"ಮಗು ೧೮ವರ್ಷ ಆಗವ ಮೊದಲೇ ವಯಸ್ಕ ಆಗುತ್ತದೆ ಎಂದು ಒಂದು ದೇಶದ ಕಾನೂನು ಪರಿಗಣಿಸದೇ ಇದ್ದರೆ ೧೮ವರ್ಷದೊಳಗಿನವರನ್ನು ಮಗು ಎಂದು ಒಡಂಬಡಿಕೆ ನಿರ್ಧರಿಸುತ್ತದೆ."[೬]

ಒಂದು ಮಗು ಬೆಳೆದು ಸ್ವತಂತ್ರವಾಗಿ ಯಾರ ರಕ್ಷಣೆ ಇಲ್ಲದೆ ತಾರತಮ್ಯವಿಲ್ಲದೆ ಜೀವಿಸಬೇಕೆಂದರೆ ಕನಿಷ್ಠ ೧೮ವರ್ಷಗಳಾದರೂ ಬೇಕು ಎಂಬುದು ಈ ಪರಿಚ್ಛೇದದ ಆಶಯವಾಗಿದೆ.

೨. ಮಕ್ಕಳ ನ್ಯಾಯ ಅಧಿನಿಯಮ

೨೦೦೧ರ ತಿದ್ದು ಪಡಿಯಂತೆ "೧೮ವರ್ಷದೊಳಗಿನ ಮಕ್ಕಳನ್ನು ಮಗು ಎಂದು ಹೇಳುತ್ತದೆ."[೭]

೩. ಭಾರತ ಸಂವಿಧಾನ

"೧೪ವರ್ಷದೊಳಗಿನವರೆಲ್ಲರೂ ಮಕ್ಕಳು"[೮]

ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಭಾರತ ಸರ್ಕಾರವು ೧೯೯೨ರಲ್ಲಿ ಒಪ್ಪಿಗೆ ನೀಡಿದ ಮೇಲೆ ಭಾರತ ಸಂವಿಧಾನವೂ ಕೂಡ ೧೮ವರ್ಷದೊಳಗಿನವರನ್ನು ಮಕ್ಕಳು ಎಂದು ಒಪ್ಪಿಕೊಂಡಂತಾಗಿದೆ.

೪. ಕಾರ್ಖಾನೆಯ ಅಧಿನಿಯಮ

"೧೫ವರ್ಷದೊಳಗಿನವರು ಮಕ್ಕಳು"[೯]

ಈ ಅದಿನಿಯವು ೧೫ವರ್ಷ ಮೀರಿದವರನ್ನು ಮಕ್ಕಳು ಎಂದು ಪರಿಗಣಿಸುವುದಿಲ್ಲವಾದ್ದರಿಂದ ಇಂತಹ ಕಾನೂನುಗಳಿಗೆ ತಿದ್ದುಪಡಿ ತರಬೇಕಾಗಿದೆ.

೫. ಬಾಲಕಾರ್ಮಿಕ ಪದ್ದತಿ (ನಿಷೇದ ಮತ್ತು ನಿಯಂತ್ರಣ) ಅಧಿನಿಯಮ

"೧೪ವರ್ಷದೊಳಗಿನವರು ಮಗು"[೧೦] ಎಂದು ಹೇಳುತ್ತದೆ.

ಈ ಕಾನೂನಿಗೆ ತಿದ್ದುಪಡಿ ತರುವಂತಹ ಪ್ರಯತ್ನಗಳು ಈಗಾಗಲೇ ಪ್ರಾರಂಭವಾಗಿದೆ.

೬. ಅನೈತಿಕ ವ್ಯವಹಾರ (ತಡೆ) ಅದಿನಿಯಮ

"೧೬ವರ್ಷದೊಳಗಿನವರನ್ನು ಮಗು"[೧೧] ಎಂದು ಹೇಳುತ್ತದೆ.

೭. ಭಾರತೀಯ ದಂಡ ಸಂಹಿತೆ

"೧೮೬೦ (ಸೆಕ್ಷನ್ ೮೨) ೭ವರ್ಷದೊಳಗಿನ ಮಗುವಿನ ಕೃತ್ಯಗಳನ್ನು ಅಪರಾಧ ಎಂದು ಗುರುತಿಸುವುದಿಲ್ಲ. (ಸೆಕ್ಷನ್ ೮೩) ತನ್ನಿಂದ ಏನಾಗುತ್ತಿದೆ ಎಂದು ವಿವೇಚಿಸುವ ಸಾಮರ್ಥ್ಯ ಇಲ್ಲದ ೭ರಿಂದ ೧೨ವರ್ಷದೊಳಗಿನ ಮಗುವಿನ ಕೃತ್ಯ ಅಪರಾಧವಾಗುವುದಿಲ್ಲ."[೧೨]

ಹೀಗೆ ಭಾರತದಲ್ಲಿ ಮಕ್ಕಳು ಎಂದರೆ ಯಾರು ಎಂಬುದರ ಕುರಿತು ಒಂದು ನಿಖರವಾದ ತೀರ್ಮಾನಕ್ಕೆ ಬಂದಿಲ್ಲ. ಮಕ್ಕಳ ಪರವಾದ ಬೇರೆಬೇರೆ ಕಾಯ್ದೆ ಕಾನೂನುಗಳು ಮಕ್ಕಳ ವಯೋಮಾನವನ್ನು ಒಂದೊಂದು ರೀತಿಯಾಗಿ ಗುರುತಿಸುತ್ತವೆ. ಈ ಕಾರಣದಿಂದ ೧೮ವರ್ಷದೊಳಗಿನ ಮಕ್ಕಳಿಗೆ ಕೆಲವು ಕಾನೂನಿನ ವ್ಯಾಪ್ತಿಯಲ್ಲಿ ರಕ್ಷಣೆ ಇಲ್ಲದಂತಾಗುತ್ತದೆ. ಇಂತಹ ಕಾನೂನುಗಳಿಗೆ ತಿದ್ದುಪಡಿ ತರುವ ಅವಶ್ಯಕತೆ ಇದೆ.

ಯಾವುದೇ ಒಂದು ಮಗು ಬೆಳೆದು ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳಬೇಕಾದರೆ ಕನಿಷ್ಟ ೧೮ವರ್ಷಗಳಾದರೂ ಬೇಕು, ಆಗ ಮಾತ್ರ ತನ್ನನ್ನು ತಾನು ರಕ್ಷಣೆ ಪಡೆದುಕೊಳ್ಳಬಹುದು. ಈ ಎಲ್ಲಾ ಅಂಶಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ ೧೮ವರ್ಷದೊಳಗಿನವರೆಲ್ಲರೂ ಮಕ್ಕಳು ಎಂದು ಗುರುತಿಸಿದೆ.

೨.೨ ಮಕ್ಕಳ ಹಕ್ಕುಗಳು ಬೆಳೆದು ಬಂದ ಬಗೆ

ಸಮಾಜದೊಳಗಿರುವ ಯಾವುದೇ ಮಗುವಿಗೆ ಹುಟ್ಟಿನಿಂದ ಹಿಡಿದು ದೊಡ್ಡವನಾಗುವವರೆಗೂ ಉತ್ತಮವಾದ ಬಾಲ್ಯ ಒದಗಿಸಿಕೊಡಬೇಕಾದದ್ದು ಆಯಾ ರಾಷ್ಟ್ರಗಳ ಕರ್ತವ್ಯ. ಆದರೆ ಬೇರೆ ಬೇರೆ ಕಾರಣಗಳಿಂದ ಅವಕಾಶ ವಂಚಿತರಾದಂತಹ ಮಕ್ಕಳು ಸಹಜ ಬಾಲ್ಯವನ್ನು ಕಳೆದುಕೊಳ್ಳುತ್ತಾರೆ. ಇಂತಹ ಮಕ್ಕಳು ರಾಷ್ಟ್ರದ ಸತ್ಪ್ರಜೆಯಾಗಿ ಬೆಳೆಯುವ ಅವಕಾಶಗಳು ಕಡಿಮೆಯಾಗುತ್ತವೆ. ಸಮಾಜದಲ್ಲಿನ ಸ್ವಾರ್ಥ, ದುರಹಂಕಾರ, ಹಿಂಸೆಗಳಿಗೆ ಈ ಅಮಾಯಕ ಮಕ್ಕಳು ಬಲಿಪಶುವಾಗುತ್ತಾರೆ ಇಂತಹ ಮಕ್ಕಳನ್ನು ರಕ್ಷಿಸಲು ಹಕ್ಕುಗಳು ಅಗತ್ಯವಾಗುತ್ತವೆ. ಈ ಹಿನ್ನೆಲೆಯಲ್ಲಿ "ಮಾನವ ಜೀವಿಗಳ ಘನತೆ ಗೌರವ ತರುವ ಪ್ರಯತ್ನಗಳನ್ನು ಮನುಕುಲದ ಇತಿಹಾಸದುದ್ದಕ್ಕೂ ಕಾಣಬಹುದು. ಮಾನವ ಹಕ್ಕುಗಳ ಕಲ್ಪನೆ ವಿಭಿನ್ನ ಸಾಂಸ್ಕೃತಿಕ ಹಾಗೂ ಧಾರ್ಮಿಕ ಸಂಪ್ರದಾಯಗಳಿಗೆ ಸೇರಿದ ಚಿಂತಕರಿಂದ ಆರಂಭಿಸಲ್ಪಟ್ಟು ವಿಸ್ತಾರಗೊಂಡಿತು. ಮುತ್ಸದ್ದಿಗಳು, ನ್ಯಾಯವಾದಿಗಳು, ಈ ವಿಚಾರದ ಉತ್ತೇಜನಕ್ಕೆ ಮುಖ್ಯವಾದ ಕೊಡುಗೆಯನ್ನು ನೀಡಿದರು. ಮತ್ತು ವ್ಯಕ್ತಿಗಳ ಹಕ್ಕುಗಳ ಸಂರಕ್ಷಣೆಯನ್ನು ಸ್ಥಿರಗೊಳಿಸುವುದಕ್ಕಾಗಿ ಬರೆದಿಟ್ಟ ಮಾದರಿಗಳು ನಿಧಾನವಾಗಿ ದೇಶಿಯ ಶಾಸನಗಳಲ್ಲಿ ಸೇರ್ಪಡೆಗೊಂಡವು."[೨] ಹೀಗೆ ಹಂತ ಹಂತವಾಗಿ ಬೆಳೆದು ಕಾಲದಿಂದ ಕಾಲಕ್ಕೆ ಹೊಸವಿಚಾರಗಳು ಸೇರುತ್ತಾ ಗಟ್ಟಿಗೊಳ್ಳುತ್ತಾ ಹೋಗಿ ಒಂದು ನಿರ್ದಿಷ್ಟ ರೂಪ ಪಡೆದವು.

ಮಾನವ, ಮಕ್ಕಳ ಹಕ್ಕುಗಳ ಸ್ಪಷ್ಟವಾದ ಚಿಂತನೆ ಆರಂಭವಾದದ್ದು ೧೭೮೯ರ ಫ್ರಾನ್ಸ್ ಕ್ರಾಂತಿಯಲ್ಲಿ. ೧೭೮೯ರಲ್ಲಿ ಫ್ರಾನ್ಸಿನ ಜನತೆ ಮಾನವ ಹಕ್ಕುಗಳ ಘೋಷಣೆ ಸ್ವೀಕರಿಸುವುದರೊಂದಿಗೆ ರಾಜನ ದೈವದತ್ತ ಹಕ್ಕುಗಳ ವಿರುದ್ಧ ಮಹಾ ಪ್ರತಿಭಟನೆ ನಡೆಸಿದರು. ಇಲ್ಲಿಯೂ ಕೂಡ ಮಕ್ಕಳು ಅವರ ಪೋಷಕರ ಅಸ್ತಿಯೆಂದು ಪರಿಗಣಿಸಲ್ಪಟ್ಟಿತ್ತು. ಈ ಕಾರಣಕ್ಕಾಗಿ ಮಕ್ಕಳಿಗೆ ಪೋಷಕರೇ ರಕ್ಷಣೆ ಕೊಡಬೇಕು, ಮಕ್ಕಳ ಬೆಳವಣಿಗೆಗೆ ತಂದೆ ತಾಯಿಗಳೇ ಜವಾಬ್ದಾರರು ಎಂಬ ಭಾವನೆ ೨೦ನೇ ಶತಮಾನದ ಆರಂಭದವರೆಗೂ ಮುಂದುವರೆಯಿತು.

ಮಕ್ಕಳ ಹಕ್ಕುಗಳ ಒಡಂಬಡಿಕೆ ರಚನೆಯಾಗಲೇಬೇಕೆಂದು ಗಟ್ಟಿನಿಲುವಿಗೆ ಬಂದದ್ದು ೨೦ನೇ ಶತಮಾನದ ಆರಂಭದಿಂದಲೇ ಎನ್ನಬಹುದು. ೧೯೧೪ರಿಂದ ೧೯೧೮ರ ವರೆಗೆ ನಡೆದ ಮೊದಲನೇ ಮಹಾಯುದ್ಧದಲ್ಲಿ ಅನೇಕ ಅಮಾಯಕ ಮಕ್ಕಳು ತಮ್ಮ ಪ್ರಾಣವನ್ನೇ ಕಳೆದುಕೊಂಡರು. ಯುದ್ಧದಲ್ಲಿ ತಾಗಿದ ಶಸ್ತ್ರಾಸ್ತ್ರಗಳಿಂದ ಅನೇಕರು ಅಂಗವಿಕಲರಾದರು, ತಂದೆ ತಾಯಿಗಳನ್ನು ಕಳೆದುಕೊಂಡರು, ಅನಾಥರಾದರು, ವಾಸಿಸಲು ಯೋಗ್ಯವಾದ ಮನೆಯಿಲ್ಲದೆ ನಿರ್ಗತಿಕರಾಗಿ ಬೀದಿಗೆ ಬಂದರು. ಹೊಟ್ಟೆಪಾಡಿಗಾಗಿ ಭಿಕ್ಷೆ ಬೇಡಲು

ಪ್ರಾರಂಭಿಸಿದರು. ಇಂತಹ ಸನ್ನಿವೇಶಗಳು ಯುದ್ಧದಿಂದ ಹೊರತಾದ ಬೇರೆ ಬೇರೆ ರಾಷ್ಟ್ರಗಳಲ್ಲಿಯೂ ಕಾಣಿಸಿಕೊಳ್ಳುತ್ತವೆ. ಈ ಎಲ್ಲಾ ಅಂಶಗಳು ಮಕ್ಕಳ ಹಕ್ಕುಗಳ ಒಡಂಬಡಿಕೆ ರಚನೆಗೆ ಬಲವಾದ ಪ್ರೇರಣೆಗಳಾದವು.

೧೯೧೯ರಲ್ಲಿ ಮಕ್ಕಳ ಹಿತರಕ್ಷಣೆಗಾಗಿಯೇ ಬ್ರಿಟನ್ ಮತ್ತು ಸ್ವೀಡನ್ ರಾಷ್ಟ್ರಗಳು Save the children ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದವು. ಈ ಎರಡೂ ರಾಷ್ಟ್ರಗಳು ಮಕ್ಕಳ ಪರವಾದ ಅನೇಕ ಕೆಲಸಗಳನ್ನು ಮಾಡಿದವು. ಮಕ್ಕಳ ಹಿತಕ್ಕಾಗಿ ಮಕ್ಕಳ ಹಕ್ಕುಗಳ ಸನ್ನದು ರೂಪಿಸಿದವು. "ಮಕ್ಕಳ ಹಕ್ಕುಗಳ ಸನ್ನದನ್ನು ೧೯೨೪ರಲ್ಲಿ ಸೆಪ್ಟಂಬರ್ ೨೬ರಂದು Leage of Nation ನಲ್ಲಿ ಮಂಡಿಸಲಾಯಿತು."[೧೪] ಇಲ್ಲಿ ಆ ರಾಷ್ಟ್ರಗಳ ಒಕ್ಕೂಟವು ಒಪ್ಪಿಕೊಂಡು ಅದನ್ನು ಜಾರಿಗೆ ತಂದವು.

ಮಕ್ಕಳ ಹಕ್ಕುಗಳ ಸನ್ನದುನಲ್ಲಿ ಪ್ರಮುಖವಾಗಿ ಐದು ವಿಚಾರಗಳನ್ನು ಪ್ರಸ್ತಾಪ ಮಾಡಲಾಗಿದೆ.

"೧. ಪ್ರತಿ ಮಗುವಿಗೆ ದೈಹಿಕ ಹಾಗು ಆಧ್ಯಾತ್ಮಿಕ ಬೆಳವಣಿಗೆಗೆ ಅವಕಾಶವಿರಬೇಕು.

೨. ಹಸಿವಿನಿಂದ ಬಳಲುವ ಮಗುವಿಗೆ ಆಹಾರ, ಅನಾರೋಗ್ಯಗೊಂಡ ಮಗುವಿಗೆ ಚಿಕಿತ್ಸೆ, ಹಿಂದುಳಿದ ಮಗುವಿಗೆ ಸಹಾಯ ನೀಡಬೇಕು, ಬಾಲಾಪರಾಧಿಗಳನ್ನು ಸನ್ಮಾರ್ಗಕ್ಕೆ ತರಬೇಕು. ತಿರಸ್ಕೃತ ಅಥವಾ ಅನಾಥ ಮಕ್ಕಳಿಗೆ ರಕ್ಷಣೆ ನೀಡಬೇಕು.

೩. ನೈಸರ್ಗಿಕ ದುರಂತಗಳು ಅಥವಾ ಯುದ್ಧ ಸಂಭವಿಸಿದಾಗ ಎಲ್ಲಕ್ಕಿಂತ ಮೊದಲು ಮಕ್ಕಳಿಗೆ ರಕ್ಷಣೆ ನೀಡಬೇಕು.

೪. ಮಕ್ಕಳನ್ನು ಎಲ್ಲಾ ರೀತಿಯ ಶೋಷಣೆಗಳಿಂದ ರಕ್ಷಿಸಬೇಕು, ಎಲ್ಲಾ ಮಕ್ಕಳಿಗೂ ರಕ್ಷಣೆ ದೊರಕಬೇಕು. ಎಲ್ಲಾ ಮಕ್ಕಳಿಗೂ ಶಿಕ್ಷಣ ದೊರಕಬೇಕು.

೫. ಪ್ರತಿಯೊಂದು ಮಗುವೂ ತನ್ನ ಬುದ್ಧಿಶಕ್ತಿ, ಕೌಶಲ್ಯಗಳನ್ನು ತನ್ನ ಸಹವರ್ತಿಗಳ ಶ್ರೇಯೋಭಿವೃದ್ಧಿಗಾಗಿ ಬಳಸಬೇಕೆಂಬ ಪ್ರಜ್ಞೆಯೊಡನೆ ಬೆಳೆಯಬೇಕು."[೧೫]

ಇವೆಲ್ಲವುಗಳನ್ನು ಮನಗಂಡು ಕೆಲವು ರಾಷ್ಟ್ರಗಳು ಎಲ್ಲಾ ದೇಶಗಳಿಗೂ ಅನ್ವಯವಾಗುವಂತಹ ಮಕ್ಕಳ ಹಕ್ಕುಗಳನ್ನು ರೂಪಿಸಬೇಕೆಂದು ವಿಶ್ವಸಂಸ್ಥೆಯನ್ನು ಕೇಳಿಕೊಂಡವು. ಇದಾದ ನಂತರ ೧೯೪೮ರಲ್ಲಿ ವಿಶ್ವಸಂಸ್ಥೆಯು ಮಾನವ ಹಕ್ಕುಗಳನ್ನು ಜಾರಿಗೆ ತಂದಿತು ಈ ಮಾನವ ಹಕ್ಕುಗಳಲ್ಲಿ ಮಕ್ಕಳ ವಿಚಾರಗಳು ಸೇರಿವೆ, ಮಾನವ ಜೀವಿಯೊಳಗೆ ಮಗು ಎಂದು ವಿಸ್ತೃತವಾಗಿ ನೋಡಲಾಯಿತು. ಆದರೆ ಮಾನವ ಹಕ್ಕುಗಳಲ್ಲಿ ಮಕ್ಕಳ ವಿಚಾರಗಳು ಸೇರಿದರೂ ಕೂಡ ಅವುಗಳನ್ನು ಪ್ರತ್ಯೇಕವಾಗಿ ನೋಡಲು ಸಾಧ್ಯವಾಗಿಲ್ಲ. ಆದಾಗ್ಯೂ ಮಾನವ ಹಕ್ಕುಗಳು ಮಕ್ಕಳ ಹಕ್ಕುಗಳ ಚಿಂತನೆಗೆ ದಾರಿ ಮಾಡಿದವು ಎಂಬುದರಲ್ಲಿ ಎರಡು ಮಾತಿಲ್ಲ.

೧೯೫೯ ನವೆಂಬರ್ ೨೦ರಂದು ವಿಶ್ವಸಂಸ್ಥೆಯು ಮಕ್ಕಳ ಹಕ್ಕುಗಳ ಘೋಷಣೆಗಳನ್ನು ಅಳವಡಿಸಿಕೊಂಡಿತು. ನಂತರ ಪ್ರತಿಯೊಂದು ಮಗುವಿಗೂ ಅತ್ಯುತ್ತಮವಾದುದನ್ನು ಕೊಡಲೇಬೇಕಾದುದು ಮನುಕುಲದ ಕರ್ತವ್ಯ ಎಂಬ ಅಂಶವನ್ನು ಎತ್ತಿ ಹಿಡಿಯಿತು. ೧೯೨೪ರ ಜಿನೆವಾ ಘೋಷಣೆಗಳನ್ನು ಇಲ್ಲಿ ವಿಸ್ತಾರವಾಗಿ ನೋಡಲಾಯಿತು.

"೧. ಯಾವುದೇ ಮಗು ತಾರತಮ್ಯಕ್ಕೆ ಈಡಾಗಬಾರದು.

೨. ಗೌರವಯುತ ಬಾಳು ಮಕ್ಕಳಿಗೆ ಸಿಗಬೇಕು.

೩. ಸ್ವತಂತ್ರವಾಗಿ ವಿಕಾಸಹೊಂದುವ ಅವಕಾಶ ಮಕ್ಕಳಿಗಿರಬೇಕು.

೪. ಒಂದು ಹೆಸರು ಮತ್ತು ರಾಷ್ಟ್ರೀಯತೆ ಮಕ್ಕಳಿಗಿರಬೇಕು.

೫. ಮಕ್ಕಳಿಗೆ ಸಾಮಾಜಿಕ ಭದ್ರತೆ ದೊರಕಬೇಕು.

೬. ಪ್ರೀತಿ ತೋರಿಸುವ ಮತ್ತು ಅರ್ಥ ಮಾಡಿಕೊಳ್ಳುವ ಹತ್ತಿರದವರು ಮಕ್ಕಳಿಗೆ ಇರಬೇಕು.

೭. ಶಿಕ್ಷಣ, ಮನೋರಂಜನೆಗಳು ಮಕ್ಕಳಿಗೆ ಸಿಗಬೇಕು

೮. ದುರಂತ ಸಂಭವಿಸಿದಲ್ಲಿ ಆದ್ಯತೆಯ ಮೇಲೆ ರಕ್ಷಣೆ ಮತ್ತು ಪುನರ್ವಸತಿ ಮಕ್ಕಳಿಗೆ ಸಿಗಬೇಕು.

೯. ನಿರ್ಲಕ್ಷ, ಹಿಂಸೆ ಅಥವಾ ಶೋಷಣೆಯ ವಿರುದ್ಧ ಮಕ್ಕಳಿಗೆ ರಕ್ಷಣೆ ಸಿಗಬೇಕು."[೧೬]

ಈ ಮೇಲಿನ ಎಲ್ಲಾ ವಿಷಯಗಳನ್ನು ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಜಾರಿಗೆ ತರಬೇಕೆಂದು ಬಯಸಿತ್ತೇ ವಿನಃ ತರಲೇಬೇಕೆಂಬ ಒತ್ತಡ ಸದಸ್ಯ ರಾಷ್ಟ್ರಗಳ ಮೇಲೆ ಇರಲಿಲ್ಲ.

೧೯೨೪ ಮತ್ತು ೧೯೫೯ರಲ್ಲೂ ವ್ಯಕ್ತಗೊಂಡ ಮಕ್ಕಳ ಹಕ್ಕುಗಳ ಸ್ವರೂಪದಲ್ಲಿ ಅಂತಹ ಅರ್ಥಪೂರ್ಣ ಬಿಗಿ ಇರಲಿಲ್ಲ. ಇದನ್ನು ಮನಗಂಡು ಕೆಲವರು ಅಂತರಾಷ್ಟ್ರೀಯ ಮಟ್ಟದಲ್ಲಿ ಸರ್ವರಿಗೂ ಅನ್ವಯವಾಗುವಂತಹ ಚೌಕಟ್ಟುಗಳನ್ನು ನಿರ್ಮಿಸಬೇಕೆಂದು ಹೇಳುತ್ತಾ ಬಂದಿದ್ದರು. ಮಕ್ಕಳನ್ನು ಕುರಿತಾದ ಮತ್ತು ಮಕ್ಕಳ ವಿಚಾರಣೆಗೆ ಮೀಸಲಾದ ಹಿಂದಿನ ಈಗಿನ ಹಾಗೂ ಮುಂದೆ ಬರಬಹುದಾದ ಪರಿಸ್ಥಿತಿಗಳನ್ನು ಊಹಿಸಿಕೊಂಡು ಸರ್ವರಾಷ್ಟ್ರಗಳ ಕಾನೂನುಗಳಿಗೆ ಅನುಗುಣವಾಗಿ ಒತ್ತಾಸೆಯಾಗಿ ನಿಲ್ಲುವಂತಹ ಮಕ್ಕಳ ಹಕ್ಕುಗಳ ಒಡಂಬಡಿಕೆ ಆಗಬೇಕೆಂದು ಪೋಲೆಂಡ್ ಸರ್ಕಾರ ೧೯೭೮ರಲ್ಲಿ ವಿಶ್ವಸಂಸ್ಥೆಗೆ ಕೋರಿತು. ಈ ಹಿನ್ನೆಲೆಯಲ್ಲಿ ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಬರೆಯಲು ಆರಂಭಿಸಿದರು.

ಈ ಬಡಂಬಡಿಕೆಯನ್ನು ರಚನೆಮಾಡುವಾಗ ಈಗಾಗಲೇ ಪ್ರಸ್ತಾಪವಾಗಿರುವ ೧೯೨೪ ಜಿನೆವಾ ಘೋಷಣೆಗಳು, ೧೯೪೮ರ ಮಾನವ ಹಕ್ಕುಗಳು, ೧೯೫೯ರ ಮಕ್ಕಳ ಹಕ್ಕುಗಳ ಘೋಷಣೆಗಳು ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ರಚನೆಯಾದ ಆರ್ಥಿಕ,

ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳು ಒಳಗೊಂಡಂತೆ ರಾಜಕೀಯ ಹಕ್ಕುಗಳು ಮತ್ತು ನಾಗರೀಕ ಹಕ್ಕುಗಳು ಅಂತರಾಷ್ಟ್ರೀಯ ಒಡಂಬಡಿಕೆಯನ್ನು ಬಳಸಿಕೊಂಡು ರಚನೆ ಮಾಡಲಾಯಿತು. ಈ ಮೇಲಿನ ಹಕ್ಕುಗಳಲ್ಲಿ, ಮಕ್ಕಳಿಗೆ ಅನುಕೂಲವಾಗುವಂತಹ ಅಂಶಗಳು ಇದರಲ್ಲಿ ಪರೋಕ್ಷವಾಗಿ ಸೇರ್ಪಡೆಗೊಂಡಿದ್ದವು. ಇದರಲ್ಲಿ ಮಕ್ಕಳಿಗೆ ಎಂತಹ ಅವಕಾಶಗಳಿರಬೇಕು, ಯಾವ ಹಕ್ಕುಗಳನ್ನು ಕೊಟ್ಟರೆ ಮಕ್ಕಳು ಉತ್ತಮವಾಗಿ ಬೆಳೆಯುತ್ತಾರೆ ಎಂಬಂತಹ ಅಂಶಗಳು ಪ್ರಸ್ತಾಪವಾಗಿವೆ.

ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ರಚಿಸಿ ಸಿದ್ದಪಡಿಸುವ ಜವಾಬ್ದಾರಿಯನ್ನು ಹೊತ್ತ ಸಮಿತಿಯಲ್ಲಿ ಈ ಮುಂದಿನವರು ಭಾಗವಹಿಸಿದ್ದರು. ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಕುರಿತಾದ ಆಯೋಗದ ೪೩ ಸದಸ್ಯ ರಾಷ್ಟ್ರದ ಪ್ರತಿನಿಧಿಗಳು, ಯುನೆಸೆಫ್, ಐ.ಎಲ್.ಒ, ನಿರಾಶ್ರಿತರನ್ನು ಕುರಿತು ಇರುವ ವಿಶ್ವಸಂಸ್ಥೆಯ ಉನ್ನತ ಸಮಿತಿ ಮತ್ತು ಸುಮಾರು ೫೦ ಸ್ವಯಂಸೇವಾ ಸಂಸ್ಥೆಯ ಪ್ರತಿನಿಧಿಗಳು ಇದ್ದರು. ಇದರಲ್ಲಿ ಪ್ರಮುಖ ಪಾತ್ರವಹಿಸಿದವರೆಂದರೆ ಡಿಫೆನ್ಸ್ ಫಾರ್ ಚಿಲ್ಡ್ರನ್ ಇಂಟರ್ ನ್ಯಾಷನಲ್ (DIC), ರೆಡ್ಡಾಬಾರ್ನ್ನ, ಅಮ್ನೆಸ್ಟಿ ಇಂಟರ್‌ನ್ಯಾಷನಲ್, ಮತ್ತು ಇಂಟರ್ ನ್ಯಾಷನಲ್ ಸೇವ್‌ದಿ ಚಿಲ್ಡ್ರನ್ ಅಲಯನ್ಸ್ ಈ ಎಲ್ಲಾ ಸಂಘಟನೆಗಳ ಸದಸ್ಯರು ಸೇರಿ ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ರಚನೆ ಮಾಡಲು ಶ್ರಮಿಸಿದರು.

ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ರಚನೆ ಮಾಡಲು ನಿಯೋಜಿಸಿದ ಸಮಿತಿಯು, ಬರೆದಿರುವ ಒಡಂಬಡಿಕೆಯನ್ನು ಓದಿ, ಅದನ್ನು ತಿದ್ದಿ, ಪುನಃ ವಿಮರ್ಶೆಯನ್ನು ಮಾಡಿತು. ಹೀಗೆ ಅದರಲ್ಲಿರುವ ಸರಿತಪ್ಪುಗಳನ್ನು ತಿದ್ದಿದ ಮೇಲೆ ಅಂತಿಮ ರೂಪಕ್ಕೆ ತಂದರು. ಇದಕ್ಕಾಗಿ ಸುಮಾರು ಹತ್ತು ವರ್ಷಗಳ ಕಾಲ ಶ್ರಮಿಸಿದರು. ಕೊನೆಗೆ ಅದನ್ನು ವಿಶ್ವಸಂಸ್ಥೆಯ ಅಂಗೀಕಾರಕ್ಕೆ ಕಳಸಿಕೊಡಲಾಯಿತು. ೧೯೮೯ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಅಂಗೀಕರಿಸಿತು. ಈ ರೀತಿಯಾಗಿ ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ವಿಶ್ವಸಂಸ್ಥೆಯು ಜಾರಿ ಮಾಡಿತು. ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ವಿಶ್ವಸಂಸ್ಥೆಯು ಒಪ್ಪಿ ಅದನ್ನು ಅಂಗೀಕರಿಸಿದ ಮೇಲೆ ಸದಸ್ಯ ರಾಷ್ಟ್ರಗಳು ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಜಾರಿಗೊಳಿಸಲು ೧೯೯೦ ಜನವರಿ ೨೦ರಂದು ಜಗತ್ತಿನ ಎಲ್ಲ ರಾಷ್ಟ್ರಗಳಿಗೆ ಕರೆ ನೀಡಿತು.

ಈ ಮಕ್ಕಳ ಹಕ್ಕುಗಳನ್ನು ಒಡಂಬಡಿಕೆಯನ್ನು ಒಪ್ಪಿ ಜಾರಿಗೊಳಿಸಲು ಆರಂಭದಲ್ಲಿ ಕೇವಲ ೬೧ ರಷ್ಟ್ರಗಳು ಮಾತ್ರ ಮುಂದೆ ಬಂದವು. ಆದರೆ ಅಮೇರಿಕ ಸಂಯುಕ್ತ ಸಂಸ್ಥಾನ ತಾತ್ವಿಕವಾಗಿ ಒಡಂಬಡಿಕೆಯನ್ನು ಒಪ್ಪಿದರೂ ಕೆಲವು ತಾಂತ್ರಿಕ ಕಾರಣಗಳಿಂದಾಗಿ ಅದು ಸಹಿ ಮಾಡಲಿಲ್ಲ. ಸೋಮಾಲಿಯ ದೇಶದಲ್ಲಿ ಅಧಿಕೃತ ಸರಕಾರ ಇಲ್ಲದ ಕಾರಣ ಆ ದೇಶವು ಒಡಂಬಡಿಕೆಯನ್ನು ಒಪ್ಪಿಲ್ಲ. ಮೇಲಿನ ಎರಡು ರಾಷ್ಟ್ರಗಳು ಬಿಟ್ಟು ಜಗತ್ತಿನ ಬಹುತೇಕ ರಾಷ್ಟ್ರಗಳು ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಒಪ್ಪಿಕೊಂಡವು.

ಅಂತರಾಷ್ಟ್ರೀಯ ಕಾನೂನು ಪಟ್ಟಿಗೆ ಸೇರ್ಪಡೆ

ಹೀಗೆ ವಿಶ್ವಮನ್ನಣೆ ಪಡೆದ ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ೧೯೯೦ರಲ್ಲಿ ಅಂತರರಾಷ್ಟ್ರೀಯ ಕಾನೂನುಗಳ ಪಟ್ಟಿಗೆ ಸೇರ್ಪಡೆ ಮಾಡಲಾಯಿತು.

ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಭಾರತದ ಒಪ್ಪಿಗೆ

ವಿಶ್ವಸಂಸ್ಥೆಯು ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಜಾರಿಗೆ ತಂದ ನಂತರ ಅದನ್ನು ಅನುಷ್ಠಾನಗೊಳಿಸಲು ಸದಸ್ಯರಾಷ್ಟ್ರಗಳಿಗೆ ಕರೆ ನೀಡಿತು. ಭಾರತವು ಮಕ್ಕಳ ಹಕ್ಕುಗಳನ್ನು ಒದಗಿಸಿಕೊಡಲು ಸಮಯಾವಕಾಶ ಬೇಕೆಂದು ಶರತ್ತು ವಿಧಿಸಿ ೧೯೯೨ ಡಿಸೆಂಬರ್ ೧೧ರಂದು ಒಡಂಬಡಿಕೆ ಸಹಿಮಾಡಿತು.

ಒಡಂಬಡಿಕೆ ವಿವರ

"ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ಮೂರು ಭಾಗಗಳಿವೆ ಮೊದಲನೆ ಭಾಗದಲ್ಲಿ ೪೧ ಪರಿಚ್ಛೇದಗಳದ್ದು, ಮಕ್ಕಳ ಹಕ್ಕುಗಳು ಎಂದರೇನು ಎಂದು ವಿಶದೀಕರಿಸುತ್ತಾ ಒಡಂಬಡಿಕೆಯನ್ನು ಒಪ್ಪಿದ ದೇಶಗಳು ಒಡಂಬಡಿಕೆ ಜಾರಿಗಾಗಿ ಏನೇನು ಮಾಡಬೇಕೆಂದು ಸೂಚಿಸುತ್ತವೆ. ಎರಡು ಮತ್ತು ಮೂರನೆಯ ಭಾಗಗಳಲ್ಲಿ ಹಕ್ಕುಗಳ ಒಡಂಬಡಿಕೆಗೆ ಒಪ್ಪಿಗೆ ಸೂಚಿಸುವ ರೀತಿ ನೀತಿಗಳು ಜಾರಿ ಮಾಡಿದ ಕುರಿತು ವರದಿ ಇತ್ಯಾದಿ ವಿವರಗಳಿವೆ."[೧೭]

ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ಪ್ರಸ್ತಾಪವಾಗುವ ಪ್ರಮುಖ ವಿಚಾರಗಳೆಂದರೆ ಜಗತ್ತಿನ ಪ್ರತಿ ಮಗುವಿಗೂ ರಕ್ಷಣೆ ಸಿಗಬೇಕು. ಮಕ್ಕಳ ರಕ್ಷಣೆ ಮಾಡುವಾಗ ಯಾವುದೇ ರೀತಿಯಲ್ಲಿ ತಾರತಮ್ಯ ಮಾಡಬಾರದು. ಮಕ್ಕಳು ದೇಶ, ಭಾಷೆ, ಲಿಂಗ, ಜಾತಿ, ವರ್ಣ, ಬಡವ, ಶ್ರೀಮಂತ ಎಂಬ ವ್ಯಾತ್ಯಾಸಗಳು ತೋರದೆ ಎಲ್ಲರಿಗೂ ಸಮಾನವಾಗಿ ಕಾಣಬೇಕು.

ಮಕ್ಕಳ ಪರವಾದ ಯೋಜನೆಗಳನ್ನು ರೂಪಿಸುವಾಗ ಮಕ್ಕಳಿಗೆ ಅವು ಎಷ್ಟರ ಮಟ್ಟಿಗೆ ಸಹಕಾರಿ ಎಂಬುದನ್ನು ಯೋಚಿಸಬೇಕು. ಇಂತಹ ವಿಷಯಗಳ ಕುರಿತು ಮಕ್ಕಳ ಸಲಹೆ ಸಹಕಾರ ಪಡೆಯಬೇಕು. ಮಕ್ಕಳಿಗೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಭಾಗವಹಿಸುವ ಸಂದರ್ಭ ಬಂದಾಗ ಅವರ ಮಾತಿಗೂ ಬೆಲೆ ಸಿಗಬೇಕು.

ಈಗಾಗಲೇ ಇರುವಂತಹ ಮಕ್ಕಳ ಪರವಾದ ಕಾನೂನುಗಳು, ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ಪ್ರಸ್ತಾಪವಾಗಿರುವ ವಿಚಾರಗಳಿಗಿಂತ ಉತ್ತಮವಾಗಿದ್ದರೆ ಅವುಗಳನ್ನು ಆಯಾ ದೇಶಗಳು ಉಳಿಸಿಕೊಳ್ಳಬೇಕು. ಇಲ್ಲವಾದರೆ ಅಂತಹ ಕಾನೂನುಗಳನ್ನು ತೆಗೆದು ಹಾಕಬೇಕು.

೨.೩ ಮಕ್ಕಳ ಹಕ್ಕುಗಳು ಹಾಗೂ ಅನ್ವಯತೆ

"ಯಾವುದೇ ಒಂದು ಸುಸಂಘಟಿತ ಸಮಾಜದಲ್ಲಿ ಮಾನವನ ಪ್ರಾಣಿ ಸಹಜವಾದ ಅವಶ್ಯಕತೆಗಳನ್ನು ಪೂರೈಸುವ ಮೂಲಕ ಮಾತ್ರ ಅವನ ಮಾನವ ಬದುಕಿನ ಹಕ್ಕನ್ನು ರಕ್ಷಿಸಲು ಸಾಧ್ಯವಿಲ್ಲ. ಅದರ ಹಿತ ಕಾಯಬೇಕಾದರೆ ಅವನಿಗೆ ಬದುಕಿನ ಎಲ್ಲಾ ಸಾಧ್ಯತೆಗಳ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. ಅವನ ಬೆಳವಣಿಗೆಯನ್ನು ಮೊಟುಕುಗೊಳಿಸುವ ಎಲ್ಲಾ

ಬಂಧನಗಳಿಂದ ಮುಕ್ತಗೊಳಿಸಿ ಅಭಿವೃದ್ಧಿಯ ಅಮಿತ ಅವಕಾಶಗಳನ್ನು ಒದಗಿಸುವ ಮೂಲಕ ಅವನ ಬದುಕಿನ ಹಕ್ಕನು ನಾವು ಸುಭದ್ರಗೊಳಿಸಬಹುದು."[೧೮] ಈ ಮೇಲಿನ ಉದ್ದೇಶ ಈಡೇರಿಸುವುದಕ್ಕಾಗಿಯೇ ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಜಾರಿಗೊಳಿಸಲಾಯಿತು. ಮಕ್ಕಳ ಹಕ್ಕುಗಳ ರಕ್ಷಣೆಗಾಗಿಯೇ ಪ್ರತ್ಯೇಕವಾಗಿ ೧ರಿಂದ ೪೧ ಪರಿಚ್ಛೇದಗಳನ್ನು ರಚಿಸಲಾಗಿದೆ. ಪ್ರತಿಯೊಂದು ಪರಿಚ್ಛೇದವು ಮಕ್ಕಳ ಬದುಕು, ರಕ್ಷಣೆ ಮತ್ತು ಆರೋಗ್ಯದ ಬಗ್ಗೆ ವಿಷರಿಸುತ್ತಾ ಹೋಗುತ್ತವೆ. ಅವುಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಪರಿಚ್ಛೇದ–೧ ಮಕ್ಕಳು

"ಮಗು ೧೮ವರ್ಷ ಆಗುವ ಮೊದಲೇ ವಯಸ್ಕ ಆಗುತ್ತದೆ ಎಂದು ಒಂದು ದೇಶದ ಕಾನೂನು ಪರಿಗಣಿಸದೇ ಇದ್ದರೆ, ೧೮ವರ್ಷದೊಳಗಿನವರನ್ನು ಮಗು ಎಂದು ಒಡಂಬಡಿಕೆ ನಿರ್ಣಯಿಸುತ್ತದೆ."[೧೯]

ಈ ಪರಿಚ್ಛೇದದಲ್ಲಿ ಮಗು ಎಂದರೆ ಯಾರು ಎಂಬುದನ್ನು ನಿರ್ಣಯಿಸಲಾಗಿದೆ. ಈ ಪರಿಚ್ಛೇದವನ್ನು ಸ್ಥಳೀಯವಾಗಿ ನೋಡುವುದಾದರೆ ಒಡಂಬಡಿಕೆಯನ್ನು ಒಪ್ಪಿರುವ ಭಾರತವು ಸಂವಿಧಾನದ ಆದಿಯಾಗಿ ದೇಶದೊಳಗಿರುವ ಮಕ್ಕಳಿಗೆ ಸಂಬಂಧಿಸಿದ ಕಾಯ್ದೆ ಕಾನೂನುಗಳನ್ನು ತಿದ್ದಿ ೧೮ವರ್ಷದೊಳಗಿರುವ ಎಲ್ಲರನ್ನು ಮಕ್ಕಳು ಎಂದು ಪರಿಗಣಿಸಬೇಕು.

ಪರಿಚ್ಛೇದ–೨ ಮಕ್ಕಳ ತಾರತಮ್ಯ

"ಒಡಂಬಡಿಕೆ ದಾಖಲಿಸಿದ ಎಲ್ಲಾ ಹಕ್ಕುಗಳನ್ನು ಮಕ್ಕಳ ಕುಲ, ಬಣ್ಣ, ಲಿಂಗ, ಭಾಷೆ, ಧರ್ಮ, ರಾಜಕೀಯ ಅಥವಾ ಇತರ ಅಭಿಪ್ರಾಯ, ರಾಷ್ಟ್ರೀಯ, ಜನಾಂಗೀಯ, ಅಥವಾ ಸಾಮಾಜಿಕ ಮೂಲ, ಸಂಪತ್ತು, ನ್ಯೂನ್ಯತೆ, ಹುಟ್ಟು ಅಥವಾ ಇತರ ಅಂತಸ್ತುಗಳ ಭೇದವಿಲ್ಲದೆ ಅನುಭವಿಸಬೇಕು."[೨೦]

ಎಲ್ಲಾ ಮಕ್ಕಳು ಒಂದೇ ಈ ಕಾರಣಕ್ಕಾಗಿ ತಾರತಮ್ಯ ಮಾಡಬಾರದು ಎಂಬುದನ್ನು ಈ ಪರಿಚ್ಛೇದವು ಹೇಳುತ್ತದೆ.

ಮಕ್ಕಳ ತಾರತಮ್ಯವನ್ನು ಸ್ಥಳೀಯ ದೃಷ್ಟಿಕೋನದಿಂದ ನೋಡಿದಾಗ ನಮ್ಮ ಹಳ್ಳಿಗಳಲ್ಲಿ ಜಾತಿ ಇತರೆ ಕಾರಣದಿಂದ ತಾರತಮ್ಯವನ್ನು ಮಾಡಲಾಗುತ್ತದೆಯೇ? ಹೆಣ್ಣು ಗಂಡುಗಳೆಂಬ ತಾರತ್ಮಮ್ಯದಿಂದ ಮಕ್ಕಳನ್ನು ಪೋಷಣೆ ಮಾಡುತ್ತಾರೆಯೇ ಎಂಬುದನ್ನು ಗಮನಿಸಬೇಕು.

ಪರಿಚ್ಛೇದ–೩ ಮಗುವಿನ ಹಿತದೃಷ್ಟಿ

"ಮಗುವಿಗೆ ಸಂಬಂಧಿಸಿದ ಎಲ್ಲಾ ವಿಷಯಗಳು ಆತನ/ಅವಳ ಅತಿಹೆಚ್ಚಿನ ಹಿತಾಸಕ್ತಿ ಕಾಪಾಡಲು ಇರುವಂತದ್ದು."[೨೧]

ಶಾಸನಗಳನ್ನು ರೂಪಿಸುವಾಗ ಅವುಗಳು ಮಕ್ಕಳ ಪರವಾಗಿರಬೇಕು ಎಂಬುದನ್ನು ಈ ಪರಿಚ್ಛೇದವು ಹೇಳುತ್ತದೆ.

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಗುವಿನ ಹಿತದೃಷ್ಟಿಯನ್ನು ನೋಡುವಾಗ ಅಂಗನವಾಡಿ, ಶಾಲೆ, ಆರೋಗ್ಯ ಕೇಂದ್ರಗಳು ಮಕ್ಕಳಿಗೆ ಅನುಕೂಲವಾಗುವಂತೆ ನಿರ್ಮಾಣ ಮಾಡಲಾಗಿದೆಯೇ ಎಂಬುದನ್ನು ಗಮನಿಸಬೇಕಾಗುತ್ತದೆ.

ಪರಿಚ್ಛೇದ-೪ ಮಕ್ಕಳ ಹಕ್ಕುಗಳ ಜಾರಿಗೆ ಕ್ರಮ

"ಸಮಾವೇಶದ ಹಕ್ಕುಗಳನ್ನು ಜಾರಿಗೊಳಿಸುವುದು ಸರ್ಕಾರ ಅವಶ್ಯ ಹೊಣೆಗಾರಿಕೆಯಾಗಿದೆ."[೨೨]

ಮಕ್ಕಳ ಹಕ್ಕುಗಳನ್ನು ಅಂಗೀಕರಿಸಿದ ದೇಶಗಳು ಆಯಾ ರಾಷ್ಟ್ರಗಳಲ್ಲಿ ಸೂಕ್ತವಾದ ಶಾಸನಗಳನ್ನು ರೂಪಿಸಬೇಕು. ಅಗತ್ಯವಿದ್ದಲ್ಲಿ ಕಾಯ್ದೆಗಳನ್ನು ತಿದ್ದುಪಡಿ ತರಬೇಕು ಎಂಬುದು ಈ ಪರಿಚ್ಛೇದ ಆಶಯ.

ಪರಿಚ್ಛೇದವನ್ನು ಸ್ಥಳೀಯದೃಷ್ಟಿಕೋನದಿಂದ ನೋಡಿದಾಗ ನಮ್ಮ ಹಳ್ಳಿಗಳಲ್ಲಿ ಎಲ್ಲಾ ಮಕ್ಕಳಿಗೂ ರೋಗನಿರೋಧಕ ಲಸಿಕೆ, ಪೌಷ್ಠಿಕ ಆಹಾರ, ಸೂಕ್ತವಾದ ಸೇವಾ ಸೌಲಭ್ಯಗಳು ದೊರೆಯುವಂತೆ ಮಾಡಬೇಕು ಮಕ್ಕಳ ಹಕ್ಕುಗಳ ಸಭೆ ಸಮಾರಂಭಗಳನ್ನು ನಡೆಸಿ ಪ್ರಚಾರ ಮಾಡಬೇಕು.

ಪರಿಚ್ಛೇದ-೫ ಪೋಷಕರ ರಕ್ಷಣೆ ಪಡೆವ ಹಕ್ಕು

"ಮಗುವಿನ ಸಾಮರ್ಥ್ಯಕ್ಕೆ ತಕ್ಕಂತೆ ಸೂಕ್ತ ಮಾರ್ಗದರ್ಶನ ನೀಡಲು ಪಾಲಕರಿಗೆ ಇರುವ ಜವಾಬ್ದಾರಿ ಮತ್ತು ಹಕ್ಕುಗಳನ್ನು ಸರ್ಕಾರ ಗೌರವಿಸಬೇಕು."[೨೩]

ಮಗುವಿನ ಸರ್ವತೋಮುಖ ಬೆಳವಣಿಗೆಯು ಪೋಷಕರ ಮಧ್ಯದಲ್ಲಿಯೇ ಆಗಬೇಕು ಆದರೆ ಎಲ್ಲಾ ಮಕ್ಕಳಿಗೂ ಇಂತಹ ಅವಕಾಶ ಸಿಗುವುದಿಲ್ಲ. ಬಡತನ ಇತ್ಯಾದಿ ಕಾರಣಗಳಿಂದ ಬೀದಿ ಪಾಲಾಗುವಂಥ ಮಕ್ಕಳಿಗೆ ಕೂಡಲೇ ಸರ್ಕಾರದಿಂದ ರಕ್ಷಣೆ ಸಿಗಬೇಕು ಎಂಬುದು ಇದರ ಆಶಯ.

ಈ ಪರಿಚ್ಛೇದವನ್ನು ಸ್ಥಳೀಯ ದೃಷ್ಟಿಕೋನದಿಂದ ನೋಡಿದಾಗ ಗ್ರಾಮಗಳಲ್ಲಿ ಬಡತನದಿಂದ ದುರ್ಬಲವಾಗಿರುವ ಕುಟುಂಬಗಳು ಯಾವವು? ಕುಡಿತ ಜೂಜಿಗೆ ಬಲಿಯಾಗಿರುವ ಪೋಷಕರು ಯಾರು? ಅವರ ಮಕ್ಕಳ ಸ್ಥಿತಿಗತಿ ಏನು? ಎಂಬುದನ್ನು ಗಮನಿಸಿ ಅಂತಹ ಕುಟುಂಬದ ಮಕ್ಕಳಿಗೆ ರಕ್ಷಣೆ ನೀಡಬೇಕು.

ಪರಿಚ್ಛೇದ-೬ ಜೀವಿಸುವ ಹಕ್ಕು

"ಬದುಕುವ ಹಕ್ಕನ್ನು ಪಡೆದಿದೆ"[೨೪]

ಮಕ್ಕಳಿಗೆ ಹಕ್ಕುಗಳನ್ನು ಕೊಡಲಾಗಿದೆ ಅವುಗಳನ್ನು ಅನುಭವಿಸಬೇಕೆಂದರೆ ಮಗುವು ಮೊದಲು ಬದುಕಬೇಕು. ತಾಯಿಯ ಗರ್ಭದಿಂಲೇ ಮಗುವಿನ ಆರೈಕೆ ನಡೆಯಬೇಕು. ರೋಗ ನಿರೋಧಕ ಲಸಿಕೆಗಳು ಸಿಗಬೇಕು. ಪೌಷ್ಟಿಕ ಆಹಾರ ಪಡೆಯಬೇಕು ಈ ಎಲ್ಲಾ ಅಂಶಗಳು ಪ್ರತಿ ಮಗುವಿಗೂ ದೊರೆತಾಗ ಮಗು ಬದುಕಿ ಬಾಳಲು ಸಾಧ್ಯವಾಗುತ್ತದೆ.

ಈ ಪರಿಚ್ಛೇದವನ್ನು ಸ್ಥಳೀಯ ದೃಷ್ಟಿಕೋನದಿಂದ ನೋಡಿದಾಗ ಹಳ್ಳಿಗಳಲ್ಲಿ ಗರ್ಭಿಣಿಯರಿಗೆ ಆರೈಕೆ ಪೋಷಣೆ ಸಿಗಬೇಕು ಮತ್ತು ಹುಟ್ಟಿದ ತಕ್ಷಣ ಸಾಯುವಂಥ ಮಕ್ಕಳು ಸಂಖ್ಯೆ ಎಷ್ಟು ಇದಕ್ಕೆ ಕಾರಣಗಳೇನು ಪರಿಹಾರಗಳೇನು? ಎಂಬುದರ ಕಡೆಗೆ ಪಂಚಾಯ್ತಿಗಳು ಗಮನಕೊಡಬೇಕು.

ಪರಿಚ್ಛೇದ–೭ ಹೆಸರು ಮತ್ತು ರಾಷ್ಟ್ರೀಯತೆಹೊಂದುವ ಹಕ್ಕು

"ಒಂದು ಹೆಸರು ಮತ್ತು ರಾಷ್ಟ್ರೀಯತೆಯ ಹಕ್ಕನ್ನು ಪಡೆದಿದೆ. ಸಾಧ್ಯವಾದಷ್ಟು ಮಟ್ಟಿಗೆ ತಿಳಿಯುವ ಹಕ್ಕನ್ನು ಮತ್ತು ಅವನ/ ಅವಳ ಹೆತ್ತವರಿಂದ ಪೋಷಣೆ ಪಡೆಯುವ ಹಕ್ಕನ್ನು ಪಡೆದಿದೆ."[೨೫]

ಒಂದು ದೇಶದ ಪೌರತ್ವ ಮತ್ತು ಕಾನೂನುಗಳನ್ನು ಪಡೆಯಬೇಕಾದರೆ, ಆಯಾ ದೇಶದಲ್ಲಿ ಹುಟ್ಟಿದ ಬಗ್ಗೆ ದಾಖಲೆಗಳಿರಬೇಕು. ಏಕೆಂದರೆ ಸರ್ಕಾರವು ಆಯಾ ರಾಷ್ಟ್ರದವರಿಗೆ ಕೆಲವೊಂದು ಸೌಲಭ್ಯಗಳನ್ನು ಪ್ರಜೆಗಳಿಗೆ ಕೊಡುತ್ತಾರೆ. ಈ ಹಿನ್ನೆಲೆಯಲ್ಲಿ ಹೆಸರು ಮತ್ತು ರಾಷ್ಟ್ರೀಯತೆ ಅವಶ್ಯವಾಗುತ್ತದೆ.

ಈ ಪರಿಚ್ಛೇದವನ್ನು ಸ್ಥಳೀಯವಾಗಿ ನೋಡುವುದಾದರೆ ಹಳ್ಳಿಗಳಲ್ಲಿ ಎಲ್ಲ ಮಕ್ಕಳಿಗೆ ಜನನ ನೋಂದಣಿ ಮಾಡಿಸಲಾಗಿದೆಯೇ? ಹಾಗೆಯೇ ಪಂಚಾಯಿತಿಗಳಲ್ಲಿ ಮಕ್ಕಳ ಅಂಕಿಸಂಖ್ಯೆಗಳು, ಯೋಜನೆಗಳು ಹೊಂದಿವೆಯೇ ಎಂಬುದನ್ನು ಗಮನಿಸಬೇಕಾಗುತ್ತದೆ.

ಪರಿಚ್ಛೇದ–೮ ಅನನ್ಯತೆ ವ್ಯಕ್ತಿತ್ವದ ಹಕ್ಕು

"ಸರ್ಕಾರದಿಂದ ಅವನ/ಅವಳ ಗುರುತನ್ನು ಕಾಯ್ದುಕೊಳ್ಳುವ ಹಕ್ಕು"[೨೬]

ಸರ್ಕಾರಗಳು ಯಾವುದೇ ಮಗುವು ಜನನವಾದರೆ ಅಂತಹ ಮಕ್ಕಳ ಹೆಸರು, ಕುಟುಂಬದ ಸಂಬಂಧಗಳನ್ನು ದಾಖಲಿಸಿಕೊಳ್ಳಬೇಕು. ಮಗುವಿನ ವ್ಯಕ್ತಿತ್ವಕ್ಕೆ ಧಕ್ಕೆ ಬಂದಾಗ ಅಂತಹ ಮಕ್ಕಳ ರಕ್ಷಣೆಗೆ ಸರ್ಕಾರ ಮುಂದಾಗಬೇಕು ಎಂಬುದು ಈ ಪರಿಚ್ಛೇದದ ಆಶಯ.

ಪರಿಚ್ಛೇದ ೮ನ್ನು ಸ್ಥಳೀಯ ದೃಷ್ಟಿಕೋನದಿಂದ ನೋಡಿದಾಗ ಹಳ್ಳಿಗಳಲ್ಲಿನ ಮಕ್ಕಳಿಗೆ ಜಾತಿ ಮತ್ತಿತರ ಕಾರಣಗಳಿಂದ ಮಗುವಿನ ಅನನ್ಯತೆಗೆ ಧಕ್ಕೆ ಬರುತ್ತಿದೆಯೇ ಎಂಬುದನ್ನು ಸ್ಥಳೀಯ ಸರ್ಕಾರಗಳು ಗಮನಿಸಬೇಕಾಗುತ್ತದೆ.

ಪರಿಚ್ಛೇದ–೯ ಪೋಷಕರ ರಕ್ಷಣೆ ಪಡೆವ ಹಕ್ಕು

"ಅವನ/ಅವಳ ಹಿತಾಸಕ್ತಿಗಳಿಗೆ ಹೊಂದಿಕೆಯಾಗುವವರೆಗೆ ಅವನ/ಅವಳ ಹೆತ್ತವರ ಜೊತೆ ಇರುವ ಹಕ್ಕು. ತಂದೆ ತಾಯಿ ಬೇರೆ ಬೇರೆ ಆಗಿದ್ದಾಗ ಆ ಮಗು ಬಯಸಿದರೆ ಹೆತ್ತವರ ಜೊತೆ ಖಾಸಗಿ ಸಂಬಂಧಗಳನ್ನು ಹಾಗು ನೇರವಾದ ಸಂಪರ್ಕವನ್ನು ಹೊಂದುವ ಹಕ್ಕು ಪಡೆದಿದೆ."[೨೭]

ಹುಟ್ಟಿದ ಪ್ರತಿಮಗು ತಂದೆ ತಾಯಿಗಳ ಜೊತೆಗೆ ಇರುವುದು ಸ್ವಾಭಾವಿಕವಾಗಿದ್ದು ಯಾವುದೇ ಕಾರಣಕ್ಕೂ ಮಕ್ಕಳನ್ನು ಬಲವಂತವಾಗಿ ಬೇರ್ಪಡಿಸುವಂತಿಲ್ಲ. ಆದರೆ ತಂದೆ

ತಾಯಿಗಳ ಸಂಬಂಧ ಉತ್ತಮವಾಗಿಲ್ಲದಿದ್ದಲ್ಲಿ ಮತ್ತು ವಿಚ್ಛೇದನ ಸಂದರ್ಭಗಳಲ್ಲಿ, ತಂದೆ ತಾಯಿಗಳು ಮೃತಪಟ್ಟಿದ್ದಲ್ಲಿ ಅಂತಹ ಮಕ್ಕಳು ಮಾತ್ರ ಪೋಷಕರಿಂದ ದೂರವಾಗಬಹುದು. ಇದು ಕೂಡ ಮಗುವಿನ ಹಿತದೃಷ್ಟಿಯಿಂದಲೇ ಆಗಬೇಕು ಎಂದು ಈ ಪರಿಚ್ಛೇದ ಸ್ಪಷ್ಟಪಡಿಸುತ್ತದೆ.

ಈ ಪರಿಚ್ಛೇದವನ್ನು ಸ್ಥಳೀಯ ದೃಷ್ಟಿಕೋನದಿಂದ ನೋಡಿದಾಗ ಸ್ಥಳೀಯ ಸರಕಾರಗಳು ಹಳ್ಳಿಗಳಲ್ಲಿರುವ ಮಕ್ಕಳು ಕುಟುಂಬದ ಬಡತನ, ಅನಾರೋಗ್ಯ, ಮುಂತಾದ ಸಮಸ್ಯೆಗಳಲ್ಲಿ ಸಿಲುಕಿ ಪೋಷಕರಿಂದ ವಂಚಿತವಾಗಿರುವ ಮಕ್ಕಳು ಯಾರು ಎಂಬುದನ್ನು ಗನಿಸಬೇಕು.

ಪರಿಚ್ಛೇದ–೧೦ ಪೋಷಕರೊಂದಿಗಿರುವ ಹಕ್ಕು

"ಹೆತ್ತವರನ್ನು ಸೇರುವುದಕ್ಕಾಗಿ ಮತ್ತು ಮಗು–ತಂದೆ ತಾಯಿ ಸಂಬಂಧ ಕಾಪಾಡುವುದಕ್ಕಾಗಿ ಅವನ/ಅವಳ ದೇಶ ಮತ್ತು ಇತರ ದೇಶಗಳನ್ನು ಬಿಡುವ ಹಾಗು ಪ್ರವೇಶಿಸುವ ಹಕ್ಕು."[೨೮]

ಹಲವಾರು ಕಾರಣಗಳಿಂದ ತಂದೆ ತಾಯಿಗಳು ಬೇರೆ ಬೇರೆ ದೇಶಗಳಲ್ಲಿ ಕೆಲಸ ಮಾಡುತ್ತಿದ್ದರೆ ಅಂತಹ ಮಕ್ಕಳನ್ನು ತಂದೆ ತಾಯಿಗಳ ಜೊತೆಗೆ ಹೋಗಲು, ಬರಲು ಸರ್ಕಾರವು ವ್ಯವಸ್ಥೆ ಮಾಡಬೇಕು. ಇಂತಹ ಪ್ರಕರಣಗಳಲಿದ್ದಲ್ಲಿ ಸರ್ಕಾರವು ವಿಶೇಷ ಕಾಳಜಿ ವಹಿಸಬೇಕಾಗುತ್ತದೆ. ಒಂದು ವೇಳೆ ಬರೀ ಸಂಪರ್ಕದಲ್ಲಿರಬಯಸಿದ್ದರೆ, ಅಂತಹ ಮಗುವಿಗೆ ಸಂಪರ್ಕ ಹೊಂದುವ ವ್ಯವಸ್ಥೆ ಮಾಡಿ ಕೊಡಬೇಕು ಎಂದು ಈ ಪರಿಚ್ಛೇದ ಹೇಳುತ್ತದೆ.

ಪರಿಚ್ಛೇದ–೧೧ ಕಾನೂನಿಗೆ ವಿರುದ್ಧವಾಗಿ ಸ್ಥಳಾಂತರವಾಗದಿರುವ ಹಕ್ಕು

"ತಂದೆ ಅಥವಾ ತಾಯಿ, ಮಗುವನ್ನು ಕಾನೂನುಬಾಹಿರವಾಗಿ ಹೊರದೇಶಕ್ಕೆ ತೆಗೆದುಕೊಂಡು ಹೋಗಿದ್ದರೆ ಅಥವಾ ಹೊರದೇಶದಲ್ಲಿ ಇಟ್ಟಿದ್ದರೆ ರಕ್ಷಣೆಗಾಗಿ ಸರ್ಕಾರವನ್ನು ಕೇಳುವ ಹಕ್ಕು."[೨೯]

ಯಾವುದೇ ಮಗು ಒಂದು ಪ್ರದೇಶದಲ್ಲಿ ವಾಸವಾಗಿದ್ದರೆ ಅಂತಹ ಮಗುವನ್ನು ಸರ್ಕಾರಿ, ಕಾನೂನು, ನ್ಯಾಯಾಲಯಗಳ ಒಪ್ಪಿಗೆ ಇಲ್ಲದೆ ಸ್ಥಳಾಂತರಿಸುವಂತಿಲ್ಲ. ಒಂದು ವೇಳೆ ಮಗುವನ್ನು ಯಾರಾದರೂ ಬಲತ್ಕಾರವಾಗಿ ಇಲ್ಲವೆ ಆಸೆ ಆಮಿಷಗಳನ್ನು ಒಡ್ಡಿ ಸ್ಥಳಾಂತರ ಮಾಡಿದರೆ ಅಂತಹವರನ್ನು ಶಿಕ್ಷೆಗೆ ಗುರಿಪಡಿಸಬಹುದು ಅಲ್ಲದೆ ಪೋಷಕರೂ ಕೂಡ ಪ್ರಚೋದನೆ ನೀಡಿ ವರ್ಗಾಯಿಸುವಂತಿಲ್ಲವೆಂದು ಈ ಪರಿಚ್ಛೇದವು ಹೇಳುತ್ತದೆ.

ಪರಿಚ್ಛೇದ–೧೨ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು

"ಅವನಿಗೆ/ಅವಳಿಗೆ ಬಾಧಿಸುವಂಥ ಯಾವುದೇ ವಿಷಯದ ಬಗ್ಗೆ ಮುಕ್ತವಾಗಿ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು. ಈ ಅಭಿಪ್ರಾಯವನ್ನು ಪರಿಗಣಿಸುವ ಹಕ್ಕು."[೩೦]

ಮಕ್ಕಳು ತಮಗೆ ಅನಿಸಿದಂತಹ ವಿಚಾರಗಳನ್ನು ಹೇಳುವಾಗ ಯಾರು ಅಡ್ಡಿ ಆತಂಕಗಳನ್ನುಂಟುಪಡಿಸಬಾರದು. ಮಗುವಿಗೆ ಬೇಕಾಗುವಂತಹ ಮಾಹಿತಿ, ಪರಿಸರ ಮತ್ತು

ಅವಕಾಶಗಳನ್ನು ಒದಗಿಸಿಕೊಡಬೇಕು. ಮಕ್ಕಳ ಕುರಿತು ಆಡಳಿತಾತ್ಮಕ ತೀರ್ಮಾನಗಳು ಮತ್ತು ಶಾಸನಗಳನ್ನು ರೂಪಿಸುವಾಗ ಮಕ್ಕಳ ಅಭಿಪ್ರಾಯಗಳನ್ನು ಸಂಗ್ರಹಿಸಬೇಕು ಎಂದು ಈ ಪರಿಚ್ಛೇದವು ಹೇಳುತ್ತದೆ.

ಈ ಪರಿಚ್ಛೇದವನ್ನು ಸ್ಥಳೀಯ ಮಟ್ಟದಲ್ಲಿ ನೋಡಿದಾಗ ಕುಟುಂಬ, ಸಮಾಜ ಮತ್ತು ಶಾಲೆಗಳಲ್ಲಿ ಮಕ್ಕಳಿಗೆ ಅಭಿವ್ಯಕ್ತಿ ಸ್ವಾತಂತ್ರವನ್ನು ಕೊಟ್ಟಿರುತ್ತದೆಯೇ ಎಂಬುದನ್ನು ನೋಡಬೇಕು. ಗ್ರಾಮ ಪಂಚಾಯಿತಿಗಳು ಸ್ಥಳೀಯ ಯೋಜನೆಗಳನ್ನು ರೂಪಿಸುವಾಗ ಮಕ್ಕಳ ಅಭಿಪ್ರಾಯಗಳನ್ನು ಸಂಗ್ರಹಿಸಲಾಗುತ್ತಿದೆಯೇ ಎಂಬುದನ್ನು ಗಮನಿಸಬೇಕು.

ಪರಿಚ್ಛೇದ –೧೩ ಮಾಹಿತಿ ಸ್ವಾತಂತ್ರ್ಯದ ಹಕ್ಕು

"ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕು. ದೇಶಗಳ ಎಲ್ಲೆಗಳನ್ನು ಪರಿಗಣಿಸದೆ ವಿಚಾರಗಳು ಮತ್ತು ಮಾಹಿತಿಗಳನ್ನು ಪಡೆಯುವ ಮತ್ತು ತಿಳಿಸುವ ಹಕ್ಕು".[೩೧]

ಯಾವುದೇ ಮಗುವಿಗೆ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕುಗಳನ್ನು ನೀಡಿದರೆ ಸಾಲದು. ಬದಲಿಗೆ ಮಗುವು ತಾನು ಇರುವ ಪರಿಸರದ ಸುತ್ತಮುತ್ತಲಿನ ವಿಚಾರಗಳನ್ನು ತಿಳಿದುಕೊಳ್ಳುವ, ಮಾಹಿತಿಯನ್ನು ಸಂಗ್ರಹಿಸುವ ವಾತವರಣವನ್ನು ಒದಗಿಸಿಕೊಡಬೇಕು. ಇದಕ್ಕಾಗಿ ಪುಸ್ತಕ, ರೇಡಿಯೊ, ಟಿ.ವಿ, ಗ್ರಂಥಾಲಯಗಳ ಬಳಕೆಗೆ ಅವಕಾಶ ಮಾಡಿಕೊಡಬೇಕು ಎಂದು ಈ ಪರಿಚ್ಛೇದವು ಹೇಳುತ್ತದೆ.

ಪರಿಚ್ಛೇದ–೧೪ ಆತ್ಮ ಸಾಕ್ಷಿ ಮತ್ತು ಧರ್ಮ ಪಾಲನೆಯ ಹಕ್ಕು

"ವಿಚಾರ, ಆತ್ಮಸಾಕ್ಷಿ ಮತ್ತು ಧಾರ್ಮಿಕ ಸ್ವಾತಂತ್ರದ ಹಕ್ಕು. ಇದು ತಾಯಿ ತಂದೆಗಳ ಸೂಕ್ತ ಮಾರ್ಗದರ್ಶನದ ಮೇಲೆ ಅವಲಂಬಿತವಾಗಿರುತ್ತದೆ."[೩೨]

ನಾವು ಬೆಳೆದಂತಹ ಪರಿಸರದಲ್ಲಿ ನೀತಿ ನಿಯಮ ಸಂಪ್ರದಾಯಗಳನ್ನು ತಂದೆ ತಾಯಿಗಳಿಂದ, ಸಮಾಜದಿಂದ ಪಡೆದಿರುತ್ತೇವೆ. ಆದ್ದರಿಂದ ನಮ್ಮವೇ ಆದ ಧಾರ್ಮಿಕ ನಂಬಿಕೆಗಳು ಮತ್ತು ಮೌಲ್ಯಗಳಿರುತ್ತವೆ. ಅವುಗಳನ್ನು ಅನುಸರಿಸಿಕೊಂಡು ಕಾಪಾಡಿಕೊಂಡು ಹೋಗುವ ಸ್ವಾತಂತ್ರವಿರಬೇಕು. ಆದರೆ ಇವುಗಳು ಇತರರಿಗೆ ತೊಂದರೆಯುಂಟು ಮಾಡಬಾರದು ಎಂದು ಈ ಪರಿಚ್ಛೇದ ಹೇಳುತ್ತದೆ.

ಪರಿಚ್ಛೇದ–೧೫ ಮಕ್ಕಳಿಗೂ ಸಂಘಟಿತರಾಗುವ ಹಕ್ಕು

"ಇತರ ಮಕ್ಕಳ ಜೊತೆ ಸೇರುವ ಹಕ್ಕು. ಸಂಘಟನೆಗಳನ್ನು ಸೇರುವ ಮತ್ತು ಕಟ್ಟುವ ಹಕ್ಕು."[೩೩]

ಪ್ರತಿಯೊಂದು ಮಗುವು ಇತರ ಮಕ್ಕಳ ಜೊತೆಗೆ ಬೆರೆಯುವ, ಶಾಲೆ, ಆಟದ ಮೈದಾನದಲ್ಲಿ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವ ಹಕ್ಕು ಇದೆ. ಮಕ್ಕಳಲ್ಲಿರುವ ವಿಚಾರಗಳನ್ನು ಸಭೆ ಸೇರಿ ಒಟ್ಟೊಟ್ಟಿಗೆ ಹೇಳಿದಾಗ ಅವುಗಳಿಗೆ ಹೆಚ್ಚು ಪ್ರಾಮುಖ್ಯತೆ ಬರುತ್ತದೆ.

ಆದ್ದರಿಂದ ಇಂತಹ ಸಂಘಟನೆಗಳು ಕಾನೂನಿಗೆ ವಿರುದ್ಧವಾಗಿರದಂತೆ, ರಾಷ್ಟ್ರದ ಹಿತಾಸಕ್ತಿಗೆ ಧಕ್ಕೆ ಬರದಂತೆ ಸಂಘಟಿಸಿಕೊಳ್ಳಬೇಕೆಂಬುದು ಈ ಪರಿಚ್ಛೇದದ ಆಶಯವಾಗಿದೆ. ಆದರೆ ನಮ್ಮ ಭಾರತ ಸಂವಿಧಾನವು ೧೮ವರ್ಷ ವಯಸ್ಸಾಗುವವರೆಗೂ ಯಾವುದೇ ರೀತಿಯಲ್ಲಿ ಸಂಘಟನೆ ಮಾಡಿಕೊಂಡು ನೊಂದಾಯಿಸಿಕೊಳ್ಳುವಂತಿಲ್ಲವೆಂದು ಸ್ಪಷ್ಟವಾಗಿ ಹೇಳಿದೆ.

ಈ ಪರಿಚ್ಛೇದವನ್ನು ಸ್ಥಳೀಯ ಮಟ್ಟದಲ್ಲಿ ನೋಡಿದಾಗ ಮಕ್ಕಳಿಗೆ ಶಾಲೆಗಳಲ್ಲಿ ಸಂಘಟನೆ ಮಾಡಿಕೊಂಡು ಪರಸ್ಪರ ವಿಚಾರ ವಿನಿಯಮ, ಚರ್ಚೆ, ಸಣ್ಣ ಪುಟ್ಟ ಸಮಸ್ಯೆಗಳನ್ನು ಹೇಳಿಕೊಳ್ಳುವಂತೆ ವಾತಾವರಣವನ್ನು ಶಾಲೆ ಪಂಚಾಯಿತಿಗಳು ಮಾಡಿಕೊಡಬೇಕು.

ಪರಿಚ್ಛೇದ-೧೬ ಸ್ವಕೀಯತೆ ರಕ್ಷಣೆಯ ಹಕ್ಕು

"ಏಕಾಂತ, ಕುಟುಂಬ, ಮನೆ ಮತ್ತು ಪತ್ರ ವ್ಯವಹಾರಗಳಲ್ಲಿ, ತಮ್ಮಿಚ್ಛೆಯಂತೆ ಸುಳ್ಳು ಆಪಾದನೆ ಮತ್ತು ಮಾನಹಾನಿ ಎಸಗುವ, ಅಕ್ರಮವಾಗಿ ತಲೆಹಾಕುವುದರ ವಿರುದ್ಧ ರಕ್ಷಣೆ ಪಡೆಯುವ ಹಕ್ಕು."[೩೪]

ಪ್ರತಿಯೊಬ್ಬರಿಗೂ ಖಾಸಗಿ ಬದುಕಿರುವಂತೆ ಮಕ್ಕಳಿಗೂ ಕೂಡ ಖಾಸಗಿಯಾಗಿ ಬದುಕುವ ಹಕ್ಕಿದೆ. ನಮ್ಮ ಪ್ರತಿಯೊಂದು ವ್ಯವಹಾರ, ವಿಚಾರ, ಕೌಟುಂಬಿಕ ಗೌರವ ಇವುಗಳಿಗೆ ಯಾರಿಂದಲೂ ಧಕ್ಕೆ ಉಂಟಾಗಬಾರದು. ನಮಗೆ, ನಮ್ಮ ಖಾಸಗೀತನಕ್ಕೆ ಧಕ್ಕೆ ಬಂದರೆ ಕಾನೂನಿನ ನೆರವನ್ನು ಪಡೆದುಕೊಳ್ಳಬಹುದು.

ಪರಿಚ್ಛೇದ-೧೭ ಮಾಧ್ಯಮಗಳ ಪಾತ್ರ ಮತ್ತು ಮಾಹಿತಿ ಹಕ್ಕು

"ವಿವಿಧ ಮೂಲಗಳಿಂದ ಮಾಹಿತಿ ಮತ್ತು ವಸ್ತುಗಳನ್ನು ಪಡೆಯುವ ಹಕ್ಕು. ಹಾನಿಕಾರಕ ವಸ್ತುಗಳಿಂದ ರಕ್ಷಣೆ ಪಡೆಯುವ ಹಕ್ಕು."[೩೫]

ಮಾಹಿತಿಯು ಎಲ್ಲರಿಗೂ ಬೇಕು. ಆದರೆ ಎಂತಹ ಮಾಹಿತಿ ನಮಗೆ ಬೇಕು ಎಂಬುದು ಮುಖ್ಯವಾಗುತ್ತದೆ. ಮಕ್ಕಳಿಗೆ ಮಾನಸಿಕ ಬೌದ್ಧಿಕ ಬೆಳವಣಿಗೆಗೆ ಪೂರಕವಾಗಿರುವಂಹ ಮಾಹಿತಿಯು ಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಮಕ್ಕಳಿಗೆ ವ್ಯಕ್ತಿತ್ವ ವಿಕಸನವಾಗುವಂತಹ ಮಾಹಿತಿಯು ಅವಶ್ಯಕವಾಗುತ್ತದೆ. ಕೆಲವೊಮ್ಮೆ ಮಾಧ್ಯಮಗಳು ಹಾನಿಕಾರಕ ಮಾಹಿತಿ ನೀಡುತ್ತವೆ. ಇವುಗಳಿಂದ ರಕ್ಷಣೆ ಪಡೆಯುವ ಹಕ್ಕು ಮಕ್ಕಳಿಗಿದೆ.

ಇವುಗಳನ್ನು ಸ್ಥಳೀಯವಾಗಿ ನೋಡಿದಾಗ ಶಾಲೆಗಳಲ್ಲಿ ಮಕ್ಕಳಿಗೋಸ್ಕರ ಮಾಹಿತಿ ಪಡೆಯಲು ಗ್ರಂಥಾಲಯಗಳಿವೆಯೇ ಎಂಬುದನ್ನು ನೋಡಬೇಕಾಗುತ್ತದೆ. ಹಾಗೆಯೇ ನಮ್ಮ ಪಂಚಾಯ್ತಿ ಗ್ರಂಥಾಲಯಗಳಲ್ಲಿ ಮಕ್ಕಳಿಗೆ ಸಂಬಂಧಿಸಿದ ಪುಸ್ತಕಗಳಿವೆಯೇ ಎನ್ನುವ ಅಂಶಗಳ ಕಡೆಗೆ ಗಮನವನ್ನು ಕೊಡಬೇಕಾಗುತ್ತದೆ.

ಪರಿಚ್ಛೇದ-೧೮ ಪೋಷಕರ ಜವಾಬ್ದಾರಿಯ ಹಕ್ಕು

"ಸರ್ಕಾರದಿಂದ ತಂದೆ ತಾಯಿ ಪಾಲಕರಿಗೆ ಒದಗಿಸಲಾದ ಮಕ್ಕಳ ಪಾಲನಾ ನೆರವು ಮತ್ತು ಮಕ್ಕಳ ಪೋಷಣಾ ಸೇವೆಗಳು ಹಾಗೂ ಸೌಲಭ್ಯಗಳನ್ನು ಪಡೆಯುವ ಹಕ್ಕು."[೩೬]

ಈ ಪರಿಚ್ಛೇದವು ಮಕ್ಕಳನ್ನು ನೋಡಿಕೊಳ್ಳುವುದು ಪೋಷಕರ ಮೊದಲ ಜವಾಬ್ದಾರಿ ಎಂದು ಹೇಳುತ್ತದೆ. ಹಾಗೆ ಹೇಳುವಾಗ ಪೋಷಕರು ಕರ್ತವ್ಯವನ್ನು ನಿರ್ವಹಿಸಬೇಕಾದರೆ ಅವರಿಗೆ ಬೇಕಾಗಿರುವಂತಹ ಪೂರಕವಾದ ವಾತಾವರಣವನ್ನು ನಿರ್ಮಿಸಿಕೊಡುವುದು ಅಂದರೆ ಸೂಕ್ತವಾದ ಉದ್ಯೋಗ, ಬಡವರಿಗೆ ಪಡಿತರ ಚೀಟಿ ವಿತರಣೆ, ಅಂಗನವಾಡಿಕೇಂದ್ರ ಮುಂತಾದ ಸೌಲಭ್ಯಗಳನ್ನು ಸರ್ಕಾರವು ಒದಗಿಸಿಕೊಡಬೇಕಾಗುತ್ತದೆ.

ಈ ಪರಿಚ್ಛೇದವನ್ನು ಗ್ರಾಮಪಂಚಾಯಿತಿ ಮಟ್ಟದಲ್ಲಿ ನೋಡುವುದಾದರೆ ಹಳ್ಳಿಗಳಲ್ಲಿ ಎಲ್ಲಾ ಮಕ್ಕಳಿಗೆ ವ್ಯವಸ್ಥೆಯಾಗುವಂತೆ ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗಿದೆಯೇ? ತಾಯಿ ಮತ್ತು ಮಕ್ಕಳಿಗೆ ಸೂಕ್ತ ಚಿಕಿತ್ಸೆ ಕೊಡಿಸಲು ಆರೋಗ್ಯಕೇಂದ್ರಗಳನ್ನು ಸ್ಥಾಪಿಸಲಾಗಿದೆಯೇ? ಬಡಕುಟುಂಬಗಳಿಗೆ ಪಡಿತರ ಚೀಟಿಗಳನ್ನು ಒದಗಿಸಲಾಗಿದೆಯೇ ಎಂಬುದನ್ನು ಗಮನಿಸಬೇಕಾಗುತ್ತದೆ.

ಪರಿಚ್ಛೇದ–೧೯ ದುರುಪಯೋಗ ತಡೆಯುವ ಹಕ್ಕು

"ಅವನ/ಅವಳ ಪೋಷಣೆಯ ಹೊಣೆ ಹೊತ್ತ ತಂದೆ ತಾಯಿ ಅಥವಾ ಇತರರಿಂದ ಆಗುವ ಕಿರುಕುಳದಿಂದ ರಕ್ಷಣೆ ಪಡೆಯುವ ಹಕ್ಕು."[೩೭]

ಯಾವುದೇ ಮಗು ತಂದೆ, ತಾಯಿ ಅಥವಾ ಪೋಷಕರ ರಕ್ಷಣೆಯಲ್ಲಿದ್ದಾಗ ಮತ್ತು ಶಾಲೆ, ಅನಾಥಾಶ್ರಮ ಮುಂತಾದ ಸಂಸ್ಥೆಗಳಲ್ಲಿದ್ದಾಗ ಮಕ್ಕಳಿಗೆ ಯಾವುದೇ ರೀತಿಯ ಲೈಂಗಿಕ ಕಿರುಕುಳ ಅಥವಾ ಇನ್ನಾವುದೋ ತೊಂದರೆಗೊಳಗಾದಾಗ ರಕ್ಷಣೆ ಪಡೆಯುವ ಹಕ್ಕು ಮಕ್ಕಳಿಗಿದೆ. ಇಂತಹ ದೂರುಗಳು ಬಂದಾಗ ಸೂಕ್ತವಾದ ತನಿಖೆ ನಡೆಸಿ ಸಂಬಂಧಿಸಿದವರ ಮೇಲೆ ಕ್ರಮ ಕೈಗೊಳ್ಳುವುದು ಸರ್ಕಾರದ ಕರ್ತವ್ಯ.

ಈ ಪರಿಚ್ಛೇದವನ್ನು ಸ್ಥಳೀಯ ಮಟ್ಟದಲ್ಲಿ ನೋಡುವುದಾದರೆ ಶಾಲೆಗಳಲ್ಲಿ ಮಕ್ಕಳನ್ನು ಶಿಕ್ಷಕರು ಹೇಗೆ ನಡೆಸಿಕೊಳ್ಳುತ್ತಾರೆ? ನಮ್ಮ ಹಳ್ಳಿಗಳಲ್ಲಿ ಯಾವ ಯಾವ ಕೆಲಸಗಳಲ್ಲಿ ಮಕ್ಕಳನ್ನು ಬಳಸಿಕೊಳ್ಳುತ್ತಾರೆ? ಎಂಬುದನ್ನು ನೋಡಬೇಕಾಗುತ್ತದೆ. ಕುಡಿತದ ಚಟವಿರುವ ತಂದೆ ಮಕ್ಕಳನ್ನು ಹೇಗೆ ನಡೆಸಿಕೊಳ್ಳುತ್ತಾನೆ ಎಂಬುದನ್ನು ಪಂಚಾಯಿತಿಗಳು ಗಮನಿಸಬೇಕು.

ಪರಿಚ್ಛೇದ–೨೦ ಕೌಟುಂಬಿಕ ರಕ್ಷಣೆಯಿಲ್ಲದ ಮಕ್ಕಳು

"ಅವನು/ಅವಳು ತಾತ್ಕಾಲಿಕವಾಗಿ ಅಥವಾ ಖಾಯಂ ಆಗಿ ಅವನ/ಅವಳ ಕೌಟುಂಬಿಕ ವಾತಾವರಣದಿಂದ ವಂಚಿತರಾಗಿದ್ದರೆ ವಿಶೇಷ ರಕ್ಷಣೆ ಪಡೆಯುವ ಹಕ್ಕಿದೆ. ಅವನ/ಅವಳ ಸಾಂಸ್ಕೃತಿಕ ಹಿನ್ನೆಲೆಯನ್ನು ಗೌರವಿಸತಕ್ಕದ್ದು."[೩೮]

ಈ ಪರಿಚ್ಛೇದವು ಕುಟುಂಬದೊಳಗಡೆ ತಂದೆ ತಾಯಿಯನ್ನು ಕಳೆದುಕೊಂಡು ಅನಾಥವಾಗಿರುವ ಅಥವಾ ಬಡತನದಿಂದ ಬೀದಿಗೆ ಬಂದಿರುವ ಮಕ್ಕಳನ್ನು ಗುರುತಿಸಿ ಸರ್ಕಾರವು ಅವರ ಹಿತವನ್ನು ಕಾಪಾಡಬೇಕು. ಅಗತ್ಯಬಿದ್ದರೆ ಇಂತಹ ಮಕ್ಕಳನ್ನು ದತ್ತು ಪಡೆಯುವ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು.

ಈ ಪರಿಚ್ಛೇದವನ್ನು ಸ್ಥಳೀಯ ಮಟ್ಟದಲ್ಲಿ ನೋಡಿದಾಗ. ಹಳ್ಳಿಯಲ್ಲಿರುವ ಅನಾಥ, ನಿರ್ಗತಿಕ ಮಕ್ಕಳು ಎಷ್ಟು? ಬಡತನದಿಂದ ಕೂಡಿರುವ ಮಕ್ಕಳ ಸಂಖ್ಯೆ ಏಷ್ಟು? ಎಂಬುದನ್ನು ಗ್ರಾಮಪಂಚಾಯಿತಿಗಳು ನೋಡಬೇಕಾಗುತ್ತದೆ.

ಪರಿಚ್ಛೇದ-೨೧ ದತ್ತು ವ್ಯವಸ್ಥೆಯ ಹಕ್ಕು

"ದತ್ತು ಸ್ವೀಕಾರಕ್ಕೆ ಅನುಮತಿ ಇರುವ ದೇಶಗಳಲ್ಲಿ ದತ್ತು ಹೋಗುವುದು ಅವನ/ಅವಳ ಹಿತಾಸಕ್ತಿಗೆ ಪೂರಕವಾಗಿರುವುದನ್ನು ಮುಂದಾಗಿ, ಖಾತರಿ ಪಡಿಸಬೇಕೆನ್ನುವ ಹಕ್ಕು."[೩೯]

ಕೆಲವೊಂದು ಸಲ ತಂದೆ ತಾಯಿ ಕಳೆದುಕೊಂಡು ನಿರ್ಗತಿಕರಾಗಿರುವ ಮಕ್ಕಳಿಗೆ ಶಾಶ್ವತವಾಗಿ ಪೋಷಕರನ್ನು ದೊರಕಿಸಿಕೊಡುವ ಕೆಲಸವನ್ನು ಸರ್ಕಾರವು ಮಾಡಬೇಕಾಗುತ್ತದೆ. ಹೀಗೆ ಮಾಡುವಾಗ ದತ್ತು ಸ್ವೀಕರಿಸುವವರ ಆರ್ಥಿಕ, ಸಾಮಾಜಿಕ ಪರಿಸ್ಥಿತಿಗಳನ್ನು ಗಮನದಲ್ಲಿ ತೆಗೆದುಕೊಳ್ಳಬೇಕೆನ್ನುವುದನ್ನು ಈ ಪರಿಚ್ಛೇದವು ತಿಳಿಸುತ್ತದೆ.

ಈ ಪರಿಚ್ಛೇದವನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅನ್ವಯಿಸಿ ನೋಡುವುದಾದರೆ ನಮ್ಮ ಹಳ್ಳಿಯಲ್ಲಿ ಕಳೆದುಹೋದ ಮಕ್ಕಳು ಯಾರು? ಮಕ್ಕಳನ್ನು ಮಾರಾಟ ಮಾಡಿದ ಪ್ರಕರಣಗಳು ಇವೆಯೇ ಎಂಬುದನ್ನು ನೋಡಬೇಕಾಗುತ್ತದೆ..

ಪರಿಚ್ಛೇದ-೨೨ ನಿರಾಶ್ರಿತರ ಹಕ್ಕು

"ನಿರಾಶ್ರಿತರಾಗಿದ್ದರೆ ವಿಶೇಷ ರಕ್ಷಣೆಯ ಹಕ್ಕು"[೪೦]

ಯಾವುದೇ ಒಂದು ಕುಟುಂಬ ಭೀಕರ ಚಂಡಮಾರುತ, ಪ್ರವಾಹ, ಬರಗಾಲಗಳಿಗೆ ತುತ್ತಾಗಿ ನಿರಾಶ್ರಿತರಾಗಿದ್ದರೆ ಅಂತಹ ಕುಟುಂಬಕ್ಕೆ ವಸತಿ ಸೌಕರ್ಯ ಒದಗಿಸಿ ಕೊಡಬೇಕು, ಅದರ ಮೂಲಕ ಮಕ್ಕಳಿಗೆ ರಕ್ಷಣೆ ನೀಡಬೇಕೆಂದು ಈ ಪರಿಚ್ಛೇದವು ಹೇಳುತ್ತದೆ.

ಈ ಪರಿಚ್ಛೇದವನ್ನು ಗ್ರಾಮಪಂಚಾಯಿತಿ ಮಟ್ಟದಲ್ಲಿ ನೋಡಿದಾಗ, ನಮ್ಮ ಹಳ್ಳಿಯಲ್ಲಿ ಬಾಡಿಗೆಗೆ ವಾಸವಾಗಿರುವ ಕುಟುಂಬಗಳೆಷ್ಟು? ತಂದೆ,ತಾಯಿ, ಪೋಷಕರನ್ನು ಕಳೆದುಕೊಂಡ ಮಕ್ಕಳ ಸಂಖ್ಯೆ ಎಷ್ಟು ಎಂದು ಈ ಪಂಚಾಯಿತಿಯು ಲೆಕ್ಕಹಾಕಬೇಕಾಗುತ್ತದೆ.

ಪರಿಚ್ಛೇದ-೨೩ ಅಂಗವಿಕಲ ಮಕ್ಕಳಿಗೆ ರಕ್ಷಣೆಯ ಹಕ್ಕು

"ನ್ಯೂನ್ಯತೆಯುಳ್ಳವರಾಗಿದ್ದರೆ ವಿಶೇಷ ಕಾಳಜಿ, ಅವನು/ಅವಳು ಘನತೆಯಿಂದ ಕೂಡಿದ ಪರಿಪೂರ್ಣ ಬದುಕನ್ನು ಆನಂದಿಸಲು, ಸ್ವಾವಲಂಬಿಯಾಗಲು ಮತ್ತು ಸಮಾಜದಲ್ಲಿ ಪೂರ್ಣ ಹಾಗೂ ಕ್ರಿಯಾಶೀಲ ಜೀವನ ನಡೆಸಲು ಸಹಾಯ ಮಾಡುವಂಥ ಶಿಕ್ಷಣ ಮತ್ತು ತರಬೇತಿ ಪಡೆಯುವ ಹಕ್ಕು."[೪೧]

ಈ ಪರಿಚ್ಛೇದವು ಅಂಗವಿಕಲತೆ ಹೊಂದಿರುವಂಥ ಮಕ್ಕಳೂ ಕೂಡ ಸಮಾಜದೊಳಗೆ ಎಲ್ಲ ಮಕ್ಕಳಂತೆ ಬದುಕಿ ಬಾಳಬೇಕು ಎಂಬುದನ್ನು ಒತ್ತಿ ಹೇಳುತ್ತದೆ. ಇಂತಹ ಮಕ್ಕಳಿಗೆ

ವಿಶೇಷವಾದ ಶಿಕ್ಷಣ, ಆರೋಗ್ಯ ವ್ಯವಸ್ಥೆ ಮಾಡಿಕೊಡಬೇಕು. ಜೊತೆಗೆ ಸುಲಭವಾಗಿ ನಡೆದಾಡಲು ಬೇಕಾಗುವ ಸಾಧನ ಸಲಕರಣೆಗಳು ಒದಗಿಸಿಕೊಡಬೇಕು.

ಈ ಪರಿಚ್ಛೇದವನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅನ್ವಯಿಸಿ ನೋಡುವುದಾದರೆ ಹಳ್ಳಿಯಲ್ಲಿರುವ ಅಂಗವಿಕಲ ಮಕ್ಕಳ ಸಂಖ್ಯೆ ಎಷ್ಟು? ಅಂಗವಿಕಲ ಮಕ್ಕಳು ಸಾಧನ ಸಲಕರಣೆ ಪಡೆದಿದ್ದಾರೆಯೇ? ಮಾನಸಿಕ ಮತ್ತು ಇತರ ದೈಹಿಕ ನ್ಯೂನ್ಯತೆ ಹೊಂದಿರುವ ಮಕ್ಕಳ ಸಂಖ್ಯೆ ಎಷ್ಟು? ಎಂದು ನೋಡಬೇಕು.

ಪರಿಚ್ಛೇದ–೨೪ ಆರೋಗ್ಯ ರಕ್ಷಣೆಯ ಹಕ್ಕು

"ಉನ್ನತ ಆರೋಗ್ಯವನ್ನು ಪಡೆಯುವ ಮತ್ತು ವೈದ್ಯಕೀಯ ನೆರವು ಪಡೆಯುವ ಹಕ್ಕು"[೪೨]

ಯಾವುದೇ ಮಗುವು ಉತ್ತಮವಾಗಿ ಬೆಳೆಯಬೇಕೆಂದರೆ ಆ ಮಗುವಿನ ಆರೋಗ್ಯ ಚೆನ್ನಾಗಿರಬೇಕು ಅಂತಹ ಮಗು ಮಾತ್ರ ಸದೃಢವಾಗಿ ಬೆಳೆಯಲಿಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಗರ್ಭದಿಂದಲೇ ಮಗುವಿಗೆ ರೋಗ ನಿರೋಧಕ ಲಸಿಕೆಗಳನ್ನು ಕೊಡಿಸಬೇಕು ಯಾವುದೇ ಕಾರಣಕ್ಕೂ ಮಕ್ಕಳನ್ನು ಸಾಯದಂತೆ ಕಾಪಾಡುವುದು ಸರ್ಕಾರದ ಕರ್ತವ್ಯ ಎಂಬುದನ್ನು ಈ ಪರಿಚ್ಛೇದವು ತಿಳಿಸುತ್ತದೆ.

ಈ ಮೇಲಿನ ಪರಿಚ್ಛೇದವನ್ನು ಸ್ಥಳೀಯ ದೃಷ್ಟಿಕೋನದೊಂದಿಗೆ ನೋಡಿದಾಗ ನಮ್ಮ ಹಳ್ಳಿಯಲ್ಲಿ ಆರೋಗ್ಯ ಕೇಂದ್ರಗಳಿವೆಯೇ? ಕೇಂದ್ರಗಳಲ್ಲಿ ಹೆರಿಗೆ ಸೌಲಭ್ಯಗಳನ್ನು ಒದಗಿಸಲಾಗಿದೆಯೇ? ಅದರಂತೆ ಆರೋಗ್ಯ ಕೇಂದ್ರಗಳು ಯಾವಾಗಲು ತೆಗೆದಿರುತ್ತವೆಯೇ? ಎಂಬುದನ್ನು ಗಮನಿಸಬೇಕು.

ಪರಿಚ್ಛೇದ–೨೫ ನಿಯಮಿತ ಅವಧಿಯ ಪುನರ್‌ವಿಮರ್ಶೆ

"ಒಂದು ವೇಳೆ ಮಗುವಿನ ಪಾಲನೆ, ಸಂರಕ್ಷಣೆ ಶುಶ್ರೂಷೆ, ಮೊದಲಾದ ಉದ್ದೇಶಕ್ಕಾಗಿ ಆ ಹಕ್ಕು ಸರಕಾರದಿಂದ ನಿರೂಪಿಸಲ್ಪಟ್ಟಿದ್ದ, ನಿರೂಪಣೆಯ ಎಲ್ಲಾ ಅಂಶಗಳನ್ನು ನಿರಂತರವಾಗಿ ಮೌಲ್ಯಮಾಪನ ಮಾಡಬೇಕೆಂಬ ಹಕ್ಕು."[೪೩]

ಯಾವುದೇ ಮಗವುನ್ನು ಸರ್ಕಾರದ ವ್ಯವಸ್ಥೆಗಳಲ್ಲಿ ಸೇರಿಸಿದಾಗ ಉದಾ:– ಬಾಲಮಂದಿರ, ಅನಾಥಾಶ್ರಮ, ಖಾಸಗಿ ಸಂಸ್ಥೆಗಳಲ್ಲಿ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದಾರೆಯೇ? ಎಂಬುದನ್ನು ಪರಾಮರ್ಶೆ ಮಾಡಬೇಕೆಂದು ಈ ಪರಿಚ್ಛೇದ ಹೇಳುತ್ತದೆ.

ಈ ಪರಿಚ್ಛೇದವನ್ನು ಸ್ಥಳೀಯವಾಗಿ ನೋಡುವುದಾದರೆ ನಮ್ಮ ತಾಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಮಕ್ಕಳನ್ನು ರಕ್ಷಿಸಲು ಇರುವ ಸಂಸ್ಥೆಗಳು ಯಾವುವು? ಅವುಗಳ ನಿರ್ವಹಣೆ ಹೇಗಿದೆ ಎಂಬುದನ್ನು ನೊಡಬೇಕಾಗುತ್ತದೆ.

ಪರಿಚ್ಛೇದ–೨೬ ಸಾಮಾಜಿಕ ಭದ್ರತೆ ಹಕ್ಕು

"ಸಾಮಾಜಿಕ ಭದ್ರತೆ ಪ್ರಯೋಜನ ಪಡೆಯುವ ಹಕ್ಕು"[೪೪]

ಸರಕಾರಗಳು ಹೊಂದಿರುವ ಸಾಮಾಜಿಕ ಭದ್ರತೆಯ ಹಣವನ್ನು ಮಕ್ಕಳ ಪರವಾದ ಯೋಜನೆಗಳಿಗೆ ಖರ್ಚು ಮಾಡಬೇಕು. ಎಂಬುದನ್ನು ಈ ಪರಿಚ್ಛೇದ ತಿಳಿಸುತ್ತದೆ.

ಇದನ್ನು ಸ್ಥಳೀಯ ಮಟ್ಟದಲ್ಲಿ ಅನ್ವಯಿಸಿ ನೋಡಿದಾಗ ನಮ್ಮ ಹಳ್ಳಿಗಳಲ್ಲಿರುವ ಅಂಗನವಾಡಿ ಕೇಂದ್ರಗಳು, ಆರೋಗ್ಯ ಕೇಂದ್ರಗಳು ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಹಳ್ಳಿಗಳಲ್ಲಿರುವ ಎಲ್ಲ ಮಕ್ಕಳಿಗೆ ಪೌಷ್ಠಿಕ ಆಹಾರ ದೊರೆಯುತ್ತದೆಯೇ ಎಂಬುದನ್ನು ಗ್ರಾಮಪಂಚಾಯಿತಿಗಳು ನೋಡಬೇಕು.

ಪರಿಚ್ಛೇದ–೨೭ ಸೂಕ್ತ ಜೀವನ ಮಟ್ಟ ಪಡೆಯುವ ಹಕ್ಕು

"ಆಕೆಯ/ಆತನ ದೈಹಿಕ, ಮಾನಸಿಕ, ಆಧ್ಯಾತ್ಮಿಕ, ನೈತಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಸಾಕಾಗುವಂತಹ ಜೀವನ ಮಟ್ಟವನ್ನು ಕಾಯ್ದುಕೊಳ್ಳುವ ಹಕ್ಕು."[೪೫]

ಈ ಪರಿಚ್ಛೇದದ ಪ್ರಕಾರ ಯಾವುದೇ ಮಗುವು ದೈಹಿಕ ಮಾನಸಿಕ ಬೆಳವಣಿಗೆ ಪಡೆಯುವ ಹಕ್ಕನ್ನು ಹೊಂದಿದೆ. ಇದನ್ನು ಪೋಷಕರೇ ನಿರ್ವಹಿಸಬೇಕು. ಆದರೆ ಸರ್ಕಾರವು ಕುಟುಂಬ ಮತ್ತು ಮಗುವಿನ ಬೆಳವಣಿಗೆಗೆ ಬೇಕಾಗುವಂತ ಸೂಕ್ತ ವ್ಯವಸ್ಥೆಗಳನ್ನು ಮಾಡಿಕೊಡಬೇಕು.

ಈ ಹಕ್ಕುಗಳನ್ನು ಸ್ಥಳೀಯ ಸರ್ಕಾರಕ್ಕೆ ಅನ್ವಯಿಸಿ ನೋಡುವುದಾದರೆ ಗ್ರಾಮಪಂಚಾಯಿತಿಗಳು ಮಕ್ಕಳ ಬೆಳವಣಿಗೆಗೆ ಬೇಕಾಗುವಂತೆ ವ್ಯವಸ್ಥೆಯನ್ನು ಮಾಡಿಕೊಡಬೇಕು. ಉದ:–ಅಂಗನವಾಡಿ ಶಾಲೆ, ಮತ್ತು ಆರೋಗ್ಯ ಸೌಲಭ್ಯಗಳ ಮೇಲುಸ್ತುವಾರಿ ಮಾಡಬೇಕು.

ಪರಿಚ್ಛೇದ–೨೮ ಶಿಕ್ಷಣದ ಹಕ್ಕು

"ಉಚಿತ ಪ್ರಾಥಮಿಕ ಶಿಕ್ಷಣ ಸೇರಿದಂತೆ ಶಿಕ್ಷಣದ ಹಕ್ಕು. ಮಗುವಿನ ಮಾನವೀಯ ಘನತೆಗೆ ಅನುಗುಣವಾದ ಶಿಸ್ತು ಇರಬೇಕು."[೪೬]

ಈ ಪರಿಚ್ಛೇದವು ಯಾವುದೇ ಮಗುವು ಘನತೆ ಗೌರವಗಳಿಂದ ಬಾಳಬೇಕಾದರೆ ಶಿಕ್ಷಣ ಮುಖ್ಯ ಇದರಿಂದ ಮಗುವಿನ ಮಾನಸಿಕ, ಬೌದ್ಧಿಕ ಬೆಳವಣಿಗೆಯಾಗುತ್ತದೆ. ಈ ಕಾರಣದಿಂದ ಎಲ್ಲಾ ಮಕ್ಕಳು ಸಮಾನವಾಗಿ ಶಿಕ್ಷಣ ಪಡೆಯುವ ಹಕ್ಕನ್ನು ಹೊಂದಿರುತ್ತವೆ.

ಈ ಪರಿಚ್ಛೇದವನ್ನು ಸ್ಥಳೀಯ ದೃಷ್ಟಿಕೋನದಿಂದ ನೋಡುವುದಾದರೆ ನಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಬರುವ ಶಾಲಾ ಕಟ್ಟಡಗಳನ್ನು ಉತ್ತಮ ಸೌಲಭ್ಯಗಳೊಂದಿಗೆ ಒದಗಿಸಬೇಕು, ಮತ್ತು ಎಲ್ಲಾ ಮಕ್ಕಳು ಹಾಜರಾಗುವಂತೆ ನೋಡಿಕೊಳ್ಳಬೇಕು.

ಪರಿಚ್ಛೇದ–೨೯ ಶಿಕ್ಷಣದ ಉದ್ದೇಶ/ ಅಗತ್ಯತೆ

"ಪರಿಸರ ಮತ್ತು ಇತರರನ್ನು ಗೌರವಿಸುವಂತಹ ಮುಕ್ತ ಸಮಾಜವೊಂದರಲ್ಲಿ ಕ್ರಿಯಾಶೀಲ, ಜವಾಬ್ದಾರಿಯುತ ಜೀವನ ಸಾಗಿಸಬಲ್ಲ ಪ್ರಬುದ್ಧರನ್ನಾಗಿ ಆತ/ಆಕೆಯನ್ನು ರೂಪಿಸುವ ಶಿಕ್ಷಣದ ಹಕ್ಕು."[೪೭]

ಈ ಪರಿಚ್ಛೇದ ಶಿಕ್ಷಣವು ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ಅವಕಾಶವಾಗುವಂತೆ ರೂಪಿಸಬೇಕೆಂದು ಹೇಳುತ್ತದೆ. ಶಿಕ್ಷಣ ಪಡೆದು ಹೊರಬಂದ ಮಗು ತನ್ನ ಕುಟುಂಬ, ಸಮಾಜ, ಭಾಷೆ ಮತ್ತು ಸಂಸ್ಕೃತಿಯನ್ನು ರಕ್ಷಿಸುವಂತವನಾಗಬೇಕು ಎಂದು ಪ್ರಸ್ತಾಪಿಸುತ್ತದೆ.

ಈ ಪರಿಚ್ಛೇದವನ್ನು ಸ್ಥಳೀಯವಾಗಿ ಅನ್ವಯಿಸಿ ನೋಡುವುದಾದರೆ ಗ್ರಾಮಪಂಚಾಯಿತಿಗಳು ಆಗಾಗ ಶಾಲೆಗೆ ಭೇಟಿ ನೀಡಿ ಗುಣಮಟ್ಟವನ್ನು ಪರೀಕ್ಷಿಸಬೇಕು. ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿಕೊಡಬೇಕು.

ಪರಿಚ್ಛೇದ–೩೦ ಅಲ್ಪ ಸಂಖ್ಯಾತ ಮಕ್ಕಳಿಗೆ ರಕ್ಷಣೆಯ ಹಕ್ಕು

"ಒಂದು ವೇಳೆ ಮೂಲ ನಿವಾಸಿ ಜನ, ಅಥವಾ ಅಲ್ಪ ಸಂಖ್ಯಾತ ಸಮುದಾಯದ ಸದಸ್ಯರಾಗಿದ್ದಲ್ಲಿ, ಆಕೆಯ/ಆತನ ಸ್ವಂತ ಸಂಸ್ಕೃತಿಯನ್ನು ಆನಂದಿಸಲು ಆಕೆಯ/ಆತನ ಸ್ವಂತ ಧರ್ಮವನ್ನು ಆಚರಿಸಲು ಮತ್ತು ಆಕೆಯ/ಆತನ ಸ್ವಂತ ಭಾಷೆಯನ್ನು ಬಳಸುವ ಹಕ್ಕು"[೪೭]

ಪ್ರತಿಯೊಂದು ಮಗುವಿಗೂ ಅವರವರ ಭಾಷೆಯಲ್ಲಿ ಕಲಿಯುವ, ಅವರ ಸಂಸ್ಕೃತಿಯನ್ನು ಬೆಳೆಸುವ, ಸಮುದಾಯದೊಡನೆ ಬೆರೆಯುವ ಹಕ್ಕು ಹೊಂದಿದೆ.

ಈ ಪರಿಚ್ಛೇದವನ್ನು ಸ್ಥಳೀಯವಾಗಿ ಅನ್ವಯಿಸಿ ನೋಡುವುದಾದರೆ ಗಿರಿಜನ ಮತ್ತು ಅಲ್ಪ ಸಂಖ್ಯಾತ ಮಕ್ಕಳಿಗೆ ಪಂಚಾಯಿತಿಯೊಳಗೆ ಯೋಜನೆಗಳನ್ನು ತಯಾರಿಸಲಾಗಿದೆಯೇ? ಅವರಿಗೆ ಮೂಲ ಸೌಲಭ್ಯ ಒದಗಿಸಲಾಗಿದೆಯೇ? ಎಂಬುದನ್ನು ಗಮನಿಸಬೇಕು.

ಪರಿಚ್ಛೇದ–೩೧ ವಿಶ್ರಾಂತಿ ಮತ್ತು ಮನೋರಂಜನೆ ಪಡೆಯುವ ಹಕ್ಕು

"ಬಿಡುವಿನ ಸಮಯದಲ್ಲಿ ವಿಶ್ರಾಂತಿ ಪಡೆಯುವ, ಆಟದಲ್ಲಿ ತೊಡಗುವ ಮತ್ತು ಸಾಂಸ್ಕೃತಿಕ, ಮನೋರಂಜನಾತ್ಮಕ ಮತ್ತು ಕಲಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸುವ ಹಕ್ಕು."[೪೮]

ಈ ಪರಿಚ್ಛೇದವು ಮಕ್ಕಳಿಗೆ ಬರೀ ಶಿಕ್ಷಣ ನೀಡಿದರೆ ಸಾಲದು ಮಕ್ಕಳಿಗೆ ಬೇಕಾಗುವಂತಹ ಮನೋರಂಜನೆಯ ಕಡೆಗೆ ಗಮನವನ್ನು ಕೊಡಬೇಕು ಎಂದು ಪ್ರಸ್ತಾಪಿಸುತ್ತದೆ. ಈ ಕಾರಣಕ್ಕಾಗಿ, ಕ್ರೀಡೆ, ನಾಟಕ, ಗಾಯನ ಸ್ಪರ್ಧೆಗಳನ್ನು ಏರ್ಪಡಿಸಬೇಕು ಎಂದು ತಿಳಿಸುತ್ತದೆ.

ಇಂತಹ ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯಿತಿಗಳು ಆಯಾ ಹಳ್ಳಿಗಳಲ್ಲಿ ಹಮ್ಮಿಕೊಂಡು ಅವರ ಹಕ್ಕುಗಳಿಗೆ ರಕ್ಷಣೆಯನ್ನು ನೀಡಬೇಕು. ಗ್ರಾಮ ಪಂಚಾಯ್ತಿ ಕಡೆಯಿಂದ ಕಬಡ್ಡಿ, ಕ್ರಿಕೇಟ್, ಹಾಡುಗಳ ಸ್ಪರ್ಧೆಗಳನ್ನು ಹಮ್ಮಿಕೊಂಡು ಅವರ ಬೆಳವಣಿಗೆ ಅವಕಾಶ ಮಾಡಿಕೊಡಬೇಕು.

ಪರಿಚ್ಛೇದ–೩೨ ಬಾಲಕಾರ್ಮಿಕತೆ, ಶೋಷಣೆಯಿಂದ ರಕ್ಷಣೆ ಪಡೆಯುವ ಹಕ್ಕು.

"ಆರ್ಥಿಕ ಶೋಷಣೆ ಮತ್ತು ಅಪಾಯಕಾರಿ ಕೆಲಸ ಮತ್ತು ಆಕೆಯ/ಆತನ ಶಿಕ್ಷಣಕ್ಕೆ ಅಡ್ಡಿ ಪಡಿಸುವಂತಹ ಆಕೆಯ/ಆತನ ಆರೋಗ್ಯ ಶಾರೀರಿಕ, ಮಾನಸಿಕ, ಆಧ್ಯಾತ್ಮಿಕ, ನೈತಿಕ

ಮತ್ತು ಸಾಮಾಜಿಕ ಬೆಳವಣಿಗೆಗೆ ತೊಂದರೆಯಾಗುವಂತಹದ್ದರಿಂದ ರಕ್ಷಣೆ ಪಡೆಯುವ ಹಕ್ಕು."[೫೦]

ಯಾವುದೇ ಮಗುವು ೧೮ ವರ್ಷ ತುಂಬುವುದಕ್ಕಿಂತ ಮುಂಚೆ ಕೆಲಸ ಮಾಡುವುದು ಅಪರಾಧವೆಂದು ಈ ಪರಿಚ್ಛೇದವು ಪ್ರಸ್ತಾಪಿಸುತ್ತದೆ. ಬಾಲ್ಯದಲ್ಲಿ ಮಕ್ಕಳು ಶಿಕ್ಷಣ, ಮನೋರಂಜನೆ ಪಡೆದು ಬೆಳೆಯಬೇಕು.

ಇದನ್ನು ಸ್ಥಳೀಯ ಸರ್ಕಾರಗಳ ದೃಷ್ಟಿಯಿಂದ ನೋಡುವುದಾದರೆ ಹಳ್ಳಿಗಳಲ್ಲಿ ಕೂಲಿ, ಜೀತಕ್ಕಿರುವ ಮಕ್ಕಳನ್ನು ಗುರುತಿಸಿ ಅವರನ್ನು ಮುಖ್ಯವಾಹಿನಿಗೆ ತರಬೇಕು. ದನಕರು ಮೇಯಿಸುವುದು ಮತ್ತು ಮಗುವನ್ನು ಆಟವಾಡಿಸುತ್ತ ಮನೆಯಲ್ಲಿರುವುದನ್ನು ತಪ್ಪಿಸಬೇಕು.

ಪರಿಚ್ಛೇದ–೩೩ ಮಾದಕ ದ್ರವ್ಯಗಳಿಂದ ರಕ್ಷಣೆ ಪಡೆಯುವ ಹಕ್ಕು

"ಮಾದಕ ವಸ್ತುಗಳು ಮತ್ತು ಅವುಗಳ ಉತ್ಪಾದನೆ ಮತ್ತು ಹಂಚಿಕೆಯು ಭಾಗವಹಿಸದಂತೆ ರಕ್ಷಣೆ ಪಡೆಯುವ ಹಕ್ಕು."[೫೧]

ಈ ಪರಿಚ್ಛೇದವು ಮಕ್ಕಳಿಗೆ ಮಾದಕ ವಸ್ತುಗಳಾದ, ಬೀಡಿ, ಸಿಗರೇಟ್, ತಂಬಾಕು, ಮುಂತಾದವುಗಳ ತಯಾರಿಕೆಯಲ್ಲಿ ಮಕ್ಕಳನ್ನು ಬಳಸುವುದು ನಿಷೇಧಿಸುತ್ತದೆ. ಇಂತಹ ವಸ್ತುಗಳು ಮಕ್ಕಳಿಗೆ ಸಿಗದಂತೆ ನೋಡಿಕೊಳ್ಳಬೇಕೆಂದು ಈ ಪರಿಚ್ಛೇದವು ಪ್ರಸ್ತಾಪಿಸುತ್ತದೆ. ಮಾದಕ ದ್ರವ್ಯ ಸೇವನೆಯ ಚಟಗಳಿಗೆ ಸಿಲುಕಿರುವ ಮಕ್ಕಳಿಗೆ ಸೂಕ್ತ ಚಿಕಿತ್ಸೆ ಕೊಡಿಸಬೇಕು ಎಂಬುದಾಗಿ ಪ್ರಸ್ತಾಪಿಸುತ್ತದೆ.

ಸ್ಥಳೀಯ ಸರ್ಕಾರಗಳು ಶಾಲೆ ಸುತ್ತ ಮುತ್ತ ಮಾದಕ ವಸ್ತುಗಳನ್ನು ಮಾರದಂತೆ ನಿಷೇಧ ಹೇರಲಾಗಿದೆಯೇ? ಮತ್ತು ಕೆಟ್ಟ ಚಟಗಳಿಗೆ ಬಲಿಯಾದ ಮಕ್ಕಳು ಯಾರು ಎಂಬುದನ್ನು ಗುರುತಿಸಲಾಗಿದೆಯೇ ಎಂಬುದನ್ನು ಗಮನಿಸಬೇಕು.

ಪರಿಚ್ಛೇದ–೩೪ ಲೈಂಗಿಕ ಶೋಷಣೆಯಿಂದ ರಕ್ಷಣೆ ಪಡೆವ ಹಕ್ಕು

"ಲೈಂಗಿಕ ದೌರ್ಜನ್ಯ ಮತ್ತು ಶೋಷಣೆಯಿಂದ ರಕ್ಷಣೆ ಪಡೆಯುವ ಹಕ್ಕು."[೫೨]

ಯಾವುದೇ ಎಳೆಯವಯಸ್ಸಿನ ಮಕ್ಕಳನ್ನು ಬಲವಂತವಾಗಿ ಅಥವಾ ಪ್ರೀತಿಯಿಂದ ವಂಚಿಸಿ ಆಸೆ ಆಮಿಷಗಳನ್ನು ತೋರಿಸಿ ಅತ್ಯಾಚಾರ ಮಾಡುವುದನ್ನು ಈ ಪರಿಚ್ಛೇದವು ನಿಷೇಧಿಸುತ್ತದೆ. ಇವುಗಳಿಂದ ಮಕ್ಕಳು ರಕ್ಷಣೆ ಪಡೆಯಬಹುದು.

ಇದನ್ನು ಸ್ಥಳೀಯವಾಗಿ ಅನ್ವಯಿಸಿ ನೋಡಿದರೆ ನಮ್ಮ ಪಂಚಾಯ್ತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಯಾವುದಾದರೂ ಮಕ್ಕಳು ದುಡಿಮೆಗೆ ಅಥವಾ ವಿದ್ಯಾಭ್ಯಾಸಕ್ಕೆಂದು ಹೊಗಿರುವ ಮಕ್ಕಳು ಅಪಾಯದಲ್ಲಿ ಸಿಲುಕಿದ್ದಾರೆಯೇ ಎಂಬುದನ್ನು ಗಮನಿಸಬೇಕಾಗುತ್ತದೆ.

ಪರಿಚ್ಛೇದ–೩೫ ಮಕ್ಕಳ ಮಾರಾಟ ಮತ್ತು ಬಂಧನದ ವಿರುದ್ದ ರಕ್ಷಣೆ

"ಅಪಹರಣ ಮಾರಾಟ ಮತ್ತು ಸಾಗಾಣಿಕೆಯಿಂದ ರಕ್ಷಣೆ ಪಡೆಯುವ ಹಕ್ಕು."[೫೩]

ಯಾವುದೇ ಕಾರಣಕ್ಕೂ ಮಕ್ಕಳನ್ನು ಅಪಹರಿಸುವುದು ಮಾರಾಟ ಮಾಡುವುದು ಅಂತಹವರ ವಿರುದ್ದ ರಕ್ಷಣೆ ಪಡೆಯುವ ಹಕ್ಕನ್ನು ಈ ಪರಿಚ್ಛೇದವು ಪ್ರಸ್ತಾಪಿಸುತ್ತದೆ.

ಈ ಪರಿಚ್ಛೇದವನ್ನು ಸ್ಥಳೀಯವಾಗಿ ಅನ್ವಯಿಸಿ ನೋಡುವುದಾದರೆ ಗ್ರಾಮೀಣ ಪ್ರದೇಶಗಳಿಂದ ವಲಸೆ ಹೋಗಿರುವ ಮಕ್ಕಳು ಕೆಲಸಮಾಡುತ್ತಿದ್ದರೆ ಮತ್ತು ಅವರು ಪುನಃ ವಾಪಸ್ ಬಂದಿದ್ದಾರೆಯೇ ಎಂಬುದನ್ನು ತಿಳಿದುಕೊಳ್ಳಬೇಕು. ವಲಸೆ ಹೋಗುವುದನ್ನು ತಪ್ಪಿಸಲು ಎಂತಹ ಕ್ರಮಗಳನ್ನು ಕೈಗೊಳ್ಳಲಾಗಿದೆ? ಇದಕ್ಕಾಗಿ ಗ್ರಾಮೀಣ ಭಾಗದಲ್ಲಿ ಪಂಚಾಯಿತಿಯಿಂದ ಉದ್ಯೋಗ ವ್ಯವಸ್ಥೆಯನ್ನು ಕಲ್ಪಿಸಿಕೊಡಲಾಗಿದೆಯೇ? ಎಂಬುದನ್ನು ಗಮನಿಸಬೇಕು.

ಪರಿಚ್ಛೇದ–೩೬ ಶೋಷಣೆಯ ವಿರುದ್ದ ಹಕ್ಕು

"ಶೋಷಣೆ ಇತರ ವಿಧಗಳಿಂದ ರಕ್ಷಣೆ ಪಡೆಯುವ ಹಕ್ಕು."[೫೪]

ಈ ಪರಿಚ್ಛೇದವು ಚಿಕ್ಕಮಕ್ಕಳನ್ನು ಶಾಲೆ ಬಿಡಿಸಿ ಕೂಲಿಗೆ ಕಳಿಸುವುದು ಬಾಲ್ಯ ವಿವಾಹ ಮಾಡುವುದು, ಮಕ್ಕಳನ್ನು ದೇವದಾಸಿ ಪದ್ದತಿಗೆ ಬಿಡುವುದು, ಭಿಕ್ಷೆ ಬೇಡಿಸುವುದು ಮತ್ತು ಮಕ್ಕಳನ್ನು ಅಶ್ಲೀಲ ಚಿತ್ರಗಳಲ್ಲಿ ಬಳಸಿಕೊಳ್ಳುವುದರ ವಿರುದ್ದ ರಕ್ಷಣೆ ಪಡೆದುಕೊಳ್ಳುವ ಬಗ್ಗೆ ಪ್ರಸ್ತಾಪಿಸುತ್ತದೆ.

ಈ ಪರಿಚ್ಛೇದವನ್ನು ಸ್ಥಳೀಯವಾಗಿ ಅನ್ವಯಿಸಿ ನೋಡಿದಾಗ ಹಳ್ಳಿಗಳಲ್ಲಿ ನಡೆಯುವ ಬಾಲ್ಯವಿವಾಹಗಳನ್ನು ತಡೆಯುವ ನಿಟ್ಟಿನಲ್ಲಿ ಪಂಚಾಯ್ತಿಯು ಯಾವ ಕ್ರಮವನ್ನು ಕೈಗೊಂಡಿದೆ. ಅದರಂತೆ ಕೂಲಿ ಕೆಲಸಕ್ಕೆ ಹೋಗುವ ಮಗುವನ್ನು ಆಡಿಸುತ್ತಾ ಮನೆಯಲ್ಲಿ ಇರುವ ಮಕ್ಕಳನ್ನು ಶಾಲೆಗೆ ಕಳುಹಿಸಲು ಎಂತಹ ವ್ಯವಸ್ಥೆ ಮಾಡಲಾಗಿದೆ ಎಂಬುದನ್ನು ಗಮನಿಸಬೇಕಾಗುತ್ತದೆ.

ಪರಿಚ್ಛೇದ–೩೭ ಚಿತ್ರಹಿಂಸೆ ಮತ್ತು ಮರಣದಂಡನೆಯಿಂದ ರಕ್ಷಣೆ

"ಚಿತ್ರಹಿಂಸೆ ಮತ್ತು ಅವಮಾನಕರ ನಡುವಳಿಕೆಯಿಂದ ರಕ್ಷಣೆ ಪಡೆಯುವ ಹಕ್ಕು. ಒಂದು ವೇಳೆ ಬಂಧನಕ್ಕೊಳಗಾದರೆ ದೊಡ್ಡವರೊಂದಿಗೆ ಸೆರೆಯಲ್ಲಿರಿಸಬಾರದು, ಬಿಡುಗಡೆಗೊಳ್ಳಲಾಗದ ರೀತಿಯಲ್ಲಿ ಸೆರೆಯಲ್ಲಿರಿಸಬಾರದು, ಇಲ್ಲವೇ ಮರಣ ದಂಡನೆ ವಿಧಿಸಬಾರದು, ಕಾನೂನು ಸಹಾಯ ಪಡೆಯುವ ಮತ್ತು ತನ್ನ ಕುಟುಂಬದೊಂದಿಗೆ ಸಂಬಂಧವಿರಿಸಿಕೊಳ್ಳುವ ಹಕ್ಕುಗಳಿವೆ."[೫೫]

ಎಳೆಯ ಮಕ್ಕಳು ತಿಳಿಯದೆ ತಪ್ಪು ಮಾಡಿದಾಗ ಅಂತಹ ಮಕ್ಕಳಿಗೆ ಬುದ್ದಿಕಲಿಸಬೇಕು. ಆಕಸ್ಮಿಕವಾಗಿ ದೊಡ್ಡ ತಪ್ಪುಗಳು ಮಕ್ಕಳಿಂದ ಆಗಿದ್ದರೆ ಅಂತಹ ಮಕ್ಕಳಿಗೆ ಚಿತ್ರಹಿಂಸೆ ಕೊಡದಂತೆ ಈ ಪರಿಚ್ಛೇದ ರಕ್ಷಿಸುತ್ತದೆ.

ಈ ಪರಿಚ್ಛೇದವನ್ನು ಸ್ಥಳೀಯ ಸಕಾರದ ದೃಷ್ಟಿಯಿಂದ ನೋಡಿದಾಗ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಮಕ್ಕಳು ಕುಟುಂಬ ಮತ್ತು ಶಿಕ್ಷಕರಿಂದ ಹಿಂಸೆಯನ್ನು ಅನುಭವಿಸುತ್ತಿದ್ದಾರೆಯೇ

ಎಂಬುದನ್ನು ಗಮನಿಸಬೇಕು. ಒಂದು ವೇಳೆ ಅಂತಹ ತಪ್ಪುಗಳು ಆಗಿದ್ದರೆ ಪಂಚಾಯ್ತಿಯು ಎಂತಹ ಕ್ರಮ ಕೈಗೊಂಡಿದೆ ಎಂಬುದನ್ನು ಗಮನಿಸಬೇಕು.

ಪರಿಚ್ಛೇದ–೩೮ ಯುದ್ಧ ಸಶಸ್ತ್ರ ಸಂಘರ್ಷಗಳಿಂದ ರಕ್ಷಣೆ ಪಡೆಯುವ ಹಕ್ಕು

"ಒಂದು ವೇಳೆ ೧೫ ವರ್ಷದೊಳಗಿನ ಪ್ರಾಯದವರಾಗಿದ್ದರೆ, ಸಶಸ್ತ್ರ ಪಡೆಗೆ ಆಯ್ಕೆಯಾಗದಂತೆ ಇಲ್ಲವೇ ಯಾವುದೇ ನೇರ ಕಾದಾಟಗಳಲ್ಲಿ ತೊಡಗಿಸದಂತೆ ರಕ್ಷಣೆ ಪಡೆಯುವ ಹಕ್ಕುಗಳಿವೆ."[೫೬]

ಈ ಪರಿಚ್ಛೇದವು ಯಾವುದೇ ಕಾರಣಕ್ಕೂ ಮಕ್ಕಳನ್ನು ಯುದ್ಧಗಳಲ್ಲಿ ತೊಡಗಿಸುವಂತಿಲ್ಲ ಎಂದು ಹೇಳುತ್ತದೆ. ಒಂದು ವೇಳೆ ಯಾವುದೇ ದೇಶಗಳ ನಡುವಿನ ಯುದ್ಧಗಳಲ್ಲಿ ಮಕ್ಕಳು ಸಿಕ್ಕಿ ಬಿದ್ದಿದ್ದರೆ ಅಂತಹ ಮಕ್ಕಳ ಗೌರವದಿಂದ ಕಾಣಬೇಕೆಂದು ಪ್ರಸ್ತಾಪಿಸುತ್ತದೆ.

ಈ ಪರಿಚ್ಛೇದವನ್ನು ಸ್ಥಳೀಯ ದೃಷ್ಟಿಯಿಂದ ನೋಡಿದಾಗ ನಮ್ಮ ಹಳ್ಳಿಗಳಲ್ಲಿ ನಡೆದ ಗಲಾಟೆ ಗಲಭೆಗಳಲ್ಲಿ ಮಕ್ಕಳಿಗೆ ಏನಾದರೂ ತೊಂದರೆಗಳಾಗಿದೆಯೇ ಎಂಬುದನ್ನು ಗಮನಿಸಬೇಕಾಗುತ್ತದೆ.

ಪರಿಚ್ಛೇದ–೩೯ ಪುನರ್ ವ್ಯವಸ್ಥೆಯ ಹಕ್ಕು

"ಒಂದು ವೇಳೆ ಸಶಸ್ತ್ರ ಕಲಹ, ಚಿತ್ರಹಿಂಸೆ, ಆಲಕ್ಷ್ಯ, ದುರ್ವರ್ತನೆ, ಶೋಷಣೆಗಳ ಬಲಿಪಶುವಾಗಿದ್ದಲ್ಲಿ, ದೈಹಿಕ ಮತ್ತು ಮಾನಸಿಕ ಪುನರ್‌ಶ್ಚೇತನಕ್ಕೆ ಸೂಕ್ತ ಚಿಕಿತ್ಸೆ ಪಡೆಯುವ ಮತ್ತು ಸಮಾಜಕ್ಕೆ ಸೇರ್ಪಡೆಗೊಳ್ಳುವ ಹಕ್ಕುಗಳಿವೆ."[೫೭]

ಯಾವುದೇ ಮಗು ಅಮಾಯಕರ, ದುಷ್ಕರ್ಮಿಗಳ ವರ್ತನೆಗೆ ಬಲಿಯಾಗಿರುವ, ಕಷ್ಟಕರ ದುಡಿಮೆಗಳಲ್ಲಿ ಸಿಲುಕಿರುವಂತಹ ಮಕ್ಕಳಿಗೆ ಸರ್ಕಾರವು ಪುನರ್ ವ್ಯವಸ್ಥೆ ಕಲ್ಪಿಸಿ ಸಮಾಜದಲ್ಲಿ ಗೌರವದಿಂದ ಬಾಳುವಂತೆ ಮಾಡಬೇಕು ಎಂದು ಈ ಪರಿಚ್ಛೇದವು ಪ್ರಸ್ತಾಪಿಸುತ್ತದೆ.

ಸ್ಥಳೀಯ ಸರ್ಕಾರದ ಮಟ್ಟದಲ್ಲಿ ಈ ಪರಿಚ್ಛೇದವನ್ನು ಅನ್ವಯಿಸಿ ನೋಡುವುದಾದರೆ ನಮ್ಮ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಮಕ್ಕಳು ದುಡಿತಕ್ಕೆ, ಜೀತಕ್ಕೆ ಮತ್ತು ಅತ್ಯಾಚಾರಕ್ಕೆ ಬಲಿಯಾದ ಮಕ್ಕಳಿದ್ದಾರೆಯೇ? ಎಂಬುದನ್ನು ಗಮನಿಸಬೇಕು.

ಪರಿಚ್ಛೇದ–೪೦ ಮಕ್ಕಳಿಗೆ ನ್ಯಾಯದ ಹಕ್ಕು

"ಒಂದು ವೇಳೆ ಆಪಾದನೆ ಒಳಪಟ್ಟಿರುವ ಅಥವಾ ಅಪರಾಧ ಎಸಗಿರುವುದರಿಂದ ತಪ್ಪಿತಸ್ಥರೆಂದು ತೀರ್ಮಾನಿಸಲಾಗಿದ್ದಲ್ಲಿ ಆತ/ಆಕೆಯನ್ನು ಸಮಾಜದ ಒಬ್ಬ ರಚನಾತ್ಮಕ ಸದಸ್ಯರನ್ನಾಗಿ ಮರುಸೇರ್ಪಡೆಗೊಳ್ಳುವುದಕ್ಕಾಗಿ, ಆಕೆ/ಆತನ ಘನತೆ–ಗೌರವದ ಪ್ರಜ್ಞೆಯನ್ನು ಹೆಚ್ಚುವಂತೆ ಮಾಡಲು ಅವರ ವಯೋಮಾನಕ್ಕೆ ಸೂಕ್ತವಾದ ನಡವಳಿಕೆಗೆ ಅರ್ಹರಾಗಿರುವ ಹಕ್ಕು."[೫೮]

ಯಾವುದೇ ಮಗು ತಪ್ಪಿತಸ್ಥನಾದಾಗ ಅಂತಹ ಮಕ್ಕಳು ಬಂಧನದಲ್ಲಿದ್ದಾಗ ಅವರಿಗೆ ಶಿಕ್ಷೆಯನ್ನು ನೀಡಬಾರದು ಅಂತಹ ಮಕ್ಕಳಿಗೆ ಪೋಷಕರೊಂದಿಗೆ ಸಂಕರ್ಪ ಹೊಂದಲು ನೆರವು ಪಡೆಯುವ ಹಕ್ಕು ಇದೆ.

ಪರಿಚ್ಛೇದ-೪೧ ಮೇಲ್ಮಟ್ಟದ ಸಾರ್ವಭೌಮತೆಯ ಹಕ್ಕು

"ಮಕ್ಕಳಿಗೆ ಅವರ ಹಕ್ಕುಗಳನ್ನು ಜಾರಿಗೊಳಿಸಲು, ದೊರಕಿಸಿಕೊಡಲು ಯಾವುದೇ ಕಾನೂನು, ನಿಯಮಗಳಿಗೆ ಒಡಂಬಡಿಕೆಯಲ್ಲಿನ ಯಾವುದೇ ಷರತ್ತುಗಳು ಅಡ್ಡಿ ಆಗಬಾರದು, ಯಾವುದೇ ದೇಶದ ಕಾನೂನುಗಳು ಅಥವಾ ಅಂತರರಾಷ್ಟ್ರೀಯ ಕಾನೂನುಗಳಾಗಲಿ ಇವುಗಳಿಗೆ ಅಡ್ಡಿಯಾಗಬಾರದು."[೫೯]

ಈ ಪರಿಚ್ಛೇದದಲ್ಲಿ ಈಗಾಗಲೇ ರೂಪಿತವಾಗಿರುವಂತಹ ಕಾನೂನುಗಳು ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ವಿರುದ್ಧವಾಗಿದ್ದರೆ ಅಂತಹ ಕಾನೂನು ತಿರಸ್ಕರಿಸಲಾಗುತ್ತದೆ. ಇದೇ ರೀತಿಯಲ್ಲಿ ಸ್ಥಳೀಯ ಮಟ್ಟದಲ್ಲಿ ಮಕ್ಕಳಿಗೆ ಹಕ್ಕುಗಳನ್ನು ಒದಗಿಸಿಕೊಡಲು ಯಾವುದೇ ಅಡ್ಡಿ ಆತಂಕ ಬರದಂತೆ ನೋಡಿಕೊಳ್ಳಬೇಕು ಎಂದು ಹೇಳುತ್ತದೆ. ಭಾರತದಲ್ಲಿರುವ ಮಕ್ಕಳ ಪರವಾದ ಕಾನೂನುಗಳಿಗೆ ತಿದ್ದಪಡಿಯಾಗಬೇಕೆಂದು ಈ ಮೇಲಿನಿಂದ ತಿಳಿದುಬರುತ್ತದೆ.

ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ಪ್ರಸ್ತಾಪವಾಗಿರುವ ಎಲ್ಲಾ ಪರಿಚ್ಛೇದಗಳ ಆಶಯಗಳನ್ನು ಗಮನಿಸಿದ ಯುನಿಸೆಫ್ ಇವೆಲ್ಲವುಗಳನ್ನು ಕ್ರೋಢಿಕರಿಸಿ ಪ್ರಮುಖವಾಗಿ ನಾಲ್ಕು ಹಕ್ಕುಗಳಾಗಿ ವಿಭಾಗಿಸಿದೆ.

೧. ಬದುಕುವ ಹಕ್ಕು

"ಪ್ರತಿಯೊಂದು ಮಗುವಿಗೂ ಜನ್ಮ ಹೊಂದುವ, ಜೀವಿಸುವ, ಉತ್ತಮ ಆರೋಗ್ಯ ಸೇವೆ ಪೌಷ್ಟಿಕ ಆಹಾರ ಪಡೆಯುವ, ಒಂದು ಹೆಸರು ಹೊಂದಿರುವ ತಾನು ಒಂದು ದೇಶದ ಪ್ರಜೆ ಎಂದು ಗುರುತಿಸಿಕೊಳ್ಳುವ ಹಕ್ಕು."[೬೦]

ಮಕ್ಕಳಿಗೆ ಅನೇಕ ಹಕ್ಕುಗಳನ್ನು ನೀಡಲಾಗಿದೆ ಅವನ್ನು ಆದರೆ ಅನುಭವಿಸುವ ಮೊದಲೇ ಸತ್ತು ಹೋದರೆ ಪ್ರಯೋಜನವಿಲ್ಲ. ಆದ್ದರಿಂದ ಮಗುವಿನ ಆರೈಕೆಯು ತಾಯಿ ಗರ್ಭಾವಸ್ಥೆಯಿಂದಲ್ಲೇ ಆರಂಭವಾಗಬೇಕು ಎಂಬುದು ಇದರ ಆಶಯ.

೨. ರಕ್ಷಣೆಯ ಹಕ್ಕು

"ದಬ್ಬಾಳಿಕೆ ತೊಂದರೆ, ಕಿರುಕುಳ, ಹಿಂಸೆಗಳ ವಿರುದ್ಧ, ತುರ್ತು ಸಂದರ್ಭಗಳಲ್ಲಿ ಮತ್ತು ಸಶಸ್ತ್ರ ಘರ್ಷಣೆಗಳಾದಾಗ ರಕ್ಷಣೆ."[೬೧]

ಪ್ರತಿಯೊಂದು ಮಗುವು ಕುಟುಂಬ, ಸಮಾಜದಿಂದ ಕಿರುಕುಳಕ್ಕೊಳಗಾದಾಗ ಅವುಗಳ ವಿರುದ್ಧ ರಕ್ಷಣೆ ಪಡೆಯುವ ಹಕ್ಕನ್ನು ಹೊಂದಿದೆ. ಯುದ್ಧ, ಬರಗಾಲ, ಪ್ರವಾಹಗಳಂತಹ ಸಂದರ್ಭಗಳಲ್ಲಿ ರಕ್ಷಣೆ ಪಡೆಯುವ ಹಕ್ಕು ಇದೆ ಎಂಬುದನ್ನು ಪ್ರಸ್ತಾಪಿಸುತ್ತದೆ.

೩. ವಿಕಾಸ ಹೊಂದುವ ಹಕ್ಕು

"ಶಿಕ್ಷಣ, ಶೈಶವದಲ್ಲಿ ಬೆಳೆಯಲು ಅವಕಾಶ, ಆರೋಗ್ಯರಕ್ಷಣೆ, ಸಾಮಾಜಿಕ ಭದ್ರತೆ, ಬಿಡುವು, ಮನೋರಂಜನೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ."[೬೨]

ಮಕ್ಕಳಿಗೆ ದೈಹಿಕ ವಿಕಾಸದ ಜೊತೆಗೆ ಮಾನಸಿಕ, ಬೌದ್ಧಿಕ ವಿಕಾಸವಾಗಬೇಕು. ಇದಕ್ಕಾಗಿ ಮಕ್ಕಳಿಗೆ ಶಿಕ್ಷಣ ಸಿಗಬೇಕು, ಶಿಕ್ಷಣದಿಂದ ಮಕ್ಕಳು ಆಟಪಾಟಗಳಲ್ಲಿ ಪಾಲ್ಗೊಂಡು ಅವರ ಸರ್ವತೋಮುಖ ಬೆಳವಣಿಗೆಯಾಗುತ್ತದೆ.

೪. ಭಾಗವಹಿಸುವ ಹಕ್ಕು

"ಮಕ್ಕಳ ಅಭಿಪ್ರಾಯಗಳಿಗೆ ಮನ್ನಣೆ, ಸ್ವಾತಂತ್ರ್ಯ, ಮಾಹಿತಿಯ ಲಭ್ಯತೆ, ಚಿಂತನೆಗೆ, ಬುದ್ಧಿ ಬೆಳವಣಿಗೆಗೆ ಅವಕಾಶ, ಸಂಘಟಿತರಾಗುವ ಮತ್ತು ಧಾರ್ಮಿಕ ನಂಬುಗೆಯ ಹಕ್ಕುಗಳು."[೬೩]

ಮಕ್ಕಳಿಗೂ ಕೂಡ ಕನಸುಗಳಿವೆ, ಹಿರಿದನ್ನು ಕಾಣುವ ಆಸೆ ಆಕಾಂಕ್ಷೆಗಳಿವೆ ಆದರೆ ಅವುಗಳನ್ನು ವ್ಯಕ್ತಪಡಿಸುವಂತಹ ವಾತಾವರಣ ಕುಟುಂಬ, ಶಾಲೆ, ಸಮುದಾಯದೊಳಗಡೆ ಸಿಗಬೇಕು. ಮಕ್ಕಳ ಪರವಾದ ಯೋಜನೆಗಳನ್ನು ತಯಾರಿಸುವಾಗ ಮಕ್ಕಳು ಭಾಗವಹಿಸುವಿಕೆಗೆ ಅವಕಾಶ ಮಾಡಿಕೊಡಬೇಕು.

ಮಕ್ಕಳ ಹಕ್ಕುಗಳು ಸಾರ್ವತ್ರಿಕವಾದವು ಎನ್ನವುದನ್ನು ಒಪ್ಪಿಕೊಂಡರೂ ಸಹ ಭಾರತದಂತಹ ವಿಶಾಲವಾದ ಭೂಪ್ರದೇಶದಲ್ಲಿ ವೈವಿಧ್ಯತೆಯಿಂದ ಕೂಡಿರುವ ಸಂಸ್ಕೃತಿಯೊಳಗೆ ಸಂಪ್ರದಾಯ ಆಚರಣೆಗಳು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುತ್ತಾ ಹೋಗುತ್ತವೆ. ಈ ವ್ಯತ್ಯಾಸವು ಬರೀ ಒಂದು ಸಂಸ್ಕೃತಿಗೆ ಮಾತ್ರ ಸೀಮಿತವಾಗಿರದೆ ಹಲವಾರು ಜಾತಿ ಜನಾಂಗ ಮತ್ತು ವರ್ಗಗಳಲ್ಲಿ ಸಹ ಕಂಡುಬರುತ್ತವೆ. ಈ ಸಾಮಾಜಿಕ ಅಸಮಾನತೆ, ವರ್ಗ ತಾರತಮ್ಯಗಳು ಸಮಾಜದೊಳಗಿರುವ ಮಕ್ಕಳ ಮೇಲೆ ನೇರ ಪರಿಣಾಮವನ್ನು ಬೀರುತ್ತವೆ.

ಭಾರತದಲ್ಲಿ ಬೇರೂರಿರುವ ಮೂಢ ನಂಬಿಕೆ ಕಂದಾಚಾರಗಳಾದ, ಬಾಲ್ಯ ವಿವಾಹ ಮತ್ತು ದೇವದಾಸಿ ಪದ್ಧತಿಗಳಂಥ ಅನಿಷ್ಟ ಆಚರಣೆಗಳು ಇಂದಿಗೂ ಜಾರಿಯಲ್ಲಿವೆ. ಮಕ್ಕಳನ್ನು ಜೀತಕ್ಕಿಡುವುದು, ಹೋಟೇಲ್, ಗ್ಯಾರೇಜ್, ಮಂಡಕ್ಕಿ ಭಟ್ಟಿ, ಮತ್ತು ಮಾದಕ ವಸ್ತುಗಳ ತಯಾರಿಕೆಯಲ್ಲಿ ಅಮಾಯಕ ಮಕ್ಕಳನ್ನು ಬಳಸಿಕೊಳ್ಳುವುದು ಚಾಲ್ತಿಯಲ್ಲಿದೆ.

ಈ ಎಲ್ಲಾ ಅಂಶಗಳನ್ನು ನೋಡಿದಾಗ ಸಾರ್ವತ್ರಿಕವಾಗಿರುವ ಮಕ್ಕಳ ಹಕ್ಕುಗಳನ್ನು ದೇಶಿಯ ನೆಲದೊಳಗೆ ನೋಡುವ ಅನಿವಾರ್ಯತೆ ಇದೆ. ಕನ್ನಡದ ಮಕ್ಕಳಿಗೆ ಈ ನಿಯಮಗಳು ಹೇಗೆ ಹೊಂದಿಕೆಯಾಗುತ್ತವೆ ಎಂಬುದನ್ನು ನೋಡಬೇಕಾಗಿದೆ. ಅದರಲ್ಲೂ ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕಿನಲ್ಲಿ ಅನ್ವಯಿಸುವ ಕ್ರಮವನ್ನು ವಿಶೇಷವಾಗಿ ಚರ್ಚೆ ಮಾಡಬೇಕಿದೆ. ಕೆಲವೊಮ್ಮೆ ಈ ಸಾರ್ವತ್ರಿಕವಾಗಿರುವ ಮಕ್ಕಳ ಹಕ್ಕುಗಳು ಮತ್ತು

ಕಾನೂನುಗಳು ಸ್ಥಳೀಯವಾದ ನೆಲೆಯಲ್ಲಿ ಜಾತಿ, ಧರ್ಮ, ಬಡತನ ಮುಂತಾದ ಶಾಪಗಳ ಬಲೆಯಲ್ಲಿ ಸಿಲಿಕಿರುವ ಮಕ್ಕಳಿಗೆ ಅನ್ವಯಿಸಲು ಕಷ್ಟವಾಗುತ್ತದೆ.

ಮಕ್ಕಳ ಹಕ್ಕುಗಳನ್ನು ಜಾರಿಗೊಳಿಸಲು ಸ್ಥಳೀಯ ಸಮಾಜದೊಳಗಿರುವ ಸರ್ಕಾರಗಳು ಆಯಾ ಸಂದರ್ಭ, ಸನ್ನಿವೇಶವನ್ನು ಗಮನಿಸಿ ಅಲ್ಲಿನ ಸ್ಥಿತಿಗತಿಗಳಿಗನುಗುಣವಾಗಿ ಸಾರ್ವತ್ರಿಕವಾಗಿರುವ ಮಕ್ಕಳ ಹಕ್ಕುಗಳನ್ನು ಅನ್ವಯಿಸಿ ನೋಡಬೇಕು. ಹೀಗೆ ನೋಡುವಾಗ ಪೋಷಕರು, ಸಂಘಸಂಸ್ಥೆಗಳು ಸರ್ಕಾರಗಳು ಜೊತೆಗೂಡಿ ಒಟ್ಟಾಗಿ ಕೆಲಸ ಮಾಡಬೇಕು. ಈ ರೀತಿ ಮಾಡುವುದರ ಮೂಲಕ ಮಕ್ಕಳ ಹಕ್ಕುಗಳ ನಿಜವಾದ ಫಲ ತಳಮಟ್ಟದಲ್ಲಿರುವ ಮಕ್ಕಳಿಗೆ ದೊರೆಯುವಂತಾಗಬೇ. ಇದರಿಂದ ಮಕ್ಕಳು ಆರೋಗ್ಯವಂತರಾಗಿ ಬೆಳೆದು ಸಮಾಜದ ಉತ್ತಮ ಪ್ರಜೆಯಾಗಲು ಸಾಧ್ಯವಾಗುತ್ತದೆ. ಮಕ್ಕಳ ಹಕ್ಕುಗಳು ಜಾರಿಗೆ ತರುವಂತಹ, ಅರ್ಥಮಾಡಿಕೊಳ್ಳುವಂತ ಅವಶ್ಯಕತೆ ಸ್ಥಳೀಯ ಸರ್ಕಾರಕ್ಕಿದೆ ಎಂಬುದು ನನ್ನ ನಂಬುಗೆಯಾಗಿದೆ.

ಅಡಿ ಟಿಪ್ಪಣಿಗಳು

೧. ಸಂಗೊಳ್ಳಿ ಎಸ್.ಎಸ್: ೨೦೦೬; ಮಾನವ ಹಕ್ಕುಗಳು, ಪು.೧

೨. ಜಾನ್‌ವಿಲ್ಸರ್: ೧೯೯೮; ಹಿಮಕರ ಎ.ಕೆ(ಅನು): ೨೦೦೧; ಏಳಿ ಎದ್ದೇಳಿ ನಿಮ್ಮ ಹಕ್ಕುಗಳಿಗಾಗಿ ಏಳಿ, ಪು.೧೬

೩. ವಾಸುದೇವ ಶರ್ಮಾ: ೨೦೦೨; ಮಕ್ಕಳ ಹಕ್ಕುಗಳು, ಪು.೩

೪. ವಾಸುದೇವ ಶರ್ಮಾ: ೨೦೦೨; ಮಕ್ಕಳ ಹಕ್ಕುಗಳು, ಪು.೫

೫. ಜಸ್ವೀರ್ ಸಿಂಗ್: ರಾಹು(ಅನು): ೨೦೦೦; ನಮ್ಮ ಬಡತನ ಸಂವಿಧಾನಕ್ಕೊಂದು ಕಳಂಕ, ಪು.೭

೬. ಜಾನ್ ವಿಲ್ಸರ್: ೧೯೯೮; ಹಿಮಕರ ಎ.ಕೆ.(ಅನು): ೨೦೦೧; ಏಳಿಏದ್ದೇಳಿ ನಿಮ್ಮ ಹಕ್ಕುಗಳಿಗಾಗಿ ಏಳಿ, ಪು.೧೦೦

೭. ವಾಸುದೇವ ಶರ್ಮಾ: ೨೦೦೨; ಮಕ್ಕಳ ಹಕ್ಕುಗಳು, ಪು.೨೬

೮. ಅದೇ, ಪು.೨೭

೯. ಅದೇ, ಪು.೨೭

೧೦. ಅದೇ, ಪು.೨೭

೧೧. ಅದೇ, ಪು.೨೭

೧೨. ಅದೇ, ಪು.೨೭

೧೩. ಲಿಯಾ ಲೆವಿನ್: ೧೯೯೮; ಶ್ರೀನಿವಾಸ ಕೆ.ಎಚ್(ಅನು): ೨೦೦೦; ಮಾನವ ಹಕ್ಕುಗಳು ಪು.೧

೧೪. ವಾಸುದೇವ ಶರ್ಮಾ: ೨೦೦೨; ಮಕ್ಕಳ ಹಕ್ಕುಗಳು, ಪು.೧೪

೧೫. ಅದೇ, ಪು.೧೪

೧೬. ಅದೇ, ಪು.೧೪.೧೫

೧೭. ಅದೇ, ಪು.೧೮

೧೮. ಜಸ್ವೀರ್ ಸಿಂಗ್: ರಾಹು(ಅನು): ೨೦೦೦; ನಮ್ಮ ಬಡತನ ಸಂವಿಧಾನಕ್ಕೊಂದು ಕಳಂಕ, ಪು.೨೩

೧೯. ಜಾನ್ ವಿಲ್ಸರ್: ೧೯೯೮; ಹಿಮಕರ ಎ.ಕೆ: ೨೦೦೧; ಏಳಿ ಎದ್ದೇಳಿ ನಿಮ್ಮ ಹಕ್ಕುಗಳಿಗಾಗಿ ಏಳಿ, ಪು.೧೦೦

೨೦. ಅದೇ, ಪು.೧೦೦

೨೧. ಅದೇ, ಪು.೧೦೦

೨೨. ಅದೇ, ಪು.೧೦೦

೨೩. ಅದೇ, ಪು.೧೦೦

೨೪. ಅದೇ, ಪು.೧೦೦

೨೫. ಅದೇ, ಪು.೧೦೦

೨೬. ಅದೇ, ಪು.೧೦೦

೨೭. ಅದೇ, ಪು.೧೦೦

೨೮. ಅದೇ, ಪು.೧೦೦

೨೯. ಅದೇ, ಪು.೧೦೦

೩೦. ಅದೇ, ಪು.೧೦೦

೩೧. ಅದೇ, ಪು.೧೦೦

೩೨. ಅದೇ, ಪು.೧೦೦

೩೩. ಅದೇ, ಪು.೧೦೦

೩೪. ಅದೇ, ಪು.೧೦೦

೩೫. ಅದೇ, ಪು.೧೦೦

೩೬. ಅದೇ, ಪು.೧೦೦

೩೭. ಅದೇ, ಪು.೧೦೦

೩೮. ಅದೇ, ಪು.೧೦೦

೩೯. ಅದೇ, ಪು.೧೦೦

೪೦. ಅದೇ, ಪು.೧೦೧

೪೧. ಅದೇ, ಪು.೧೦೧

೪೨. ಅದೇ, ಪು.೧೦೧

೪೩. ಅದೇ, ಪು.೧೦೧

೪೪. ಅದೇ, ಪು.೧೦೧

೪೫. ಅದೇ, ಪು.೧೦೧

೪೬. ಅದೇ, ಪು.೧೦೧

೪೭. ಅದೇ, ಪು.೧೦೧

೪೮. ಅದೇ, ಪು.೧೦೧

೪೯. ಅದೇ, ಪು.೧೦೧

೫೦. ಅದೇ, ಪು.೧೦೧

೫೧. ಅದೇ, ಪು.೧೦೧

೫೨. ಅದೇ, ಪು.೧೦೧

೫೩. ಅದೇ, ಪು.೧೦೧

೫೪. ಅದೇ, ಪು.೧೦೧

೫೫. ಅದೇ, ಪು.೧೦೧

೫೬. ಅದೇ, ಪು.೧೦೧

೫೭. ಅದೇ, ಪು.೧೦೧

೫೮. ಅದೇ, ಪು.೧೦೧

೫೯. ವಾಸುದೇವ ಶರ್ಮಾ: ೨೦೦೨; ಮಕ್ಕಳ ಹಕ್ಕುಗಳು, ಪು.೩೯

೬೦. ಅದೇ, ಪು.೧೬

೬೧. ಅದೇ, ಪು.೧೬

೬೨. ಅದೇ, ಪು.೧೬

೬೩. ಅದೇ, ಪು.೧೬

ಅಧ್ಯಾಯ–೩

ಪ್ರಸ್ತುತ ಮಕ್ಕಳ ಸ್ಥಿತಿಗತಿ ಮತ್ತು ಕಾನೂನು

೩.೧. ಮಕ್ಕಳ ಹಕ್ಕುಗಳ ರಕ್ಷಣೆಗೆ ಕಾನೂನು

೩.೨. ಪ್ರಸ್ತುತ ಮಕ್ಕಳ ಸ್ಥಿತಿಗತಿ

೩.೩. ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಕಾರಣಗಳು

೩.೪. ಪರಿಣಾಮಗಳು

ಅಧ್ಯಾಯ-೩

ಪ್ರಸ್ತುತ ಮಕ್ಕಳ ಸ್ಥಿತಿಗತಿ ಮತ್ತು ಕಾನೂನು

ಸಂಜೆಯಾಗುತ್ತಲೇ ಎಲ್ಲಿಂದಲೋ ಬಂದು ಪ್ರಾಣಿ ಪಕ್ಷಿಗಳು ಮರದ ಮೇಲೆ, ಪೊಟರೆಯೊಳಗೆ ಒಂದುಕಡೆ ಸೇರಿ ತಮ್ಮ ಜಗತ್ತನ್ನು ಸೃಷ್ಟಿಸಿಕೊಳ್ಳುತ್ತವೆ. ಅದರಂತೆ ಮನುಷ್ಯಲೋಕದೊಳಗೂ ಒಂದು ಜಗತ್ತಿದೆ. ಮಾನವ ತನ್ನ ಬೇಕು ಬೇಡಗಳನ್ನು ಹೆಂಡತಿ, ಮಕ್ಕಳು, ಕುಟುಂಬ ಮತ್ತು ಸಮಾಜದೊಳಗೆ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಾ ತನ್ನದೇ ಆದ ಜಗತ್ತನ್ನು ನಿರ್ಮಿಸಿಕೊಳ್ಳುತ್ತಾನೆ. ಕೆ.ಜಿ.ಗುರುಮೂರ್ತಿಯವರು ಹೇಳುವಂತೆ "ಮಕ್ಕಳದೂ ಒಂದು ಜಗತ್ತಿದೆ ಆಯಾ ಗುಂಪಿಗೆ ಆಯಾ ವಯಸ್ಕರೇ ಪ್ರಮುಖರಿದ್ದಂತೆ ಮಕ್ಕಳ ಜಗತ್ತಿನಲ್ಲಿ ಮಕ್ಕಳೇ ಪ್ರಧಾನ. ಅಲ್ಲಿ ಅವರದೇ ಅಭಿಪ್ರಾಯ, ಮಾತು, ಆದ್ಯತೆ ನಡೆಯಬೇಕು. ಅವರು ತಮ್ಮ ಆಟ, ಪಾಠ, ಮಾತು, ಭಾವನೆ, ಆಸೆ, ಆದ್ಯತೆ, ಅವಶ್ಯಕತೆ ಮುಂತಾದವುಗಳಿಂದಾಗಿ ಹಿರಿಯರಿಂದ ಭಿನ್ನವಾಗಿರುತ್ತಾರೆ. ಆದರೆ ಜಗತ್ತಿನಾದ್ಯಂತ ಮಕ್ಕಳು ಪ್ರೌಢರ ಅಧಿನದಲ್ಲಿದ್ದಾರೆ. ಇವರು ಕಿರಿಯರು, ಮರುಳರು, ಅನಾನುಭವಿಗಳು ಮುಂತಾದ ಅನೇಕ ಬಗೆಯ ಅನಾದರಗಳಿಗೆ ಗುರಿಯಾಗಿ ಪ್ರೌಢರಿಂದ ಶೋಷಣೆಗೊಳಗಾಗಿದ್ದಾರೆ. ಅಲ್ಲದೆ ತಮ್ಮ ಚಿಕ್ಕವಯಸ್ಸು, ಅಶಕ್ತತೆ, ಆರ್ಥಿಕ ಮತ್ತಿತರ ಅವಲಂಬನೆಯಿಂದಾಗಿ ಅವರು ಪ್ರೌಢರ ಹಂಗಿನಲ್ಲಿರಬೇಕಾಗಿದೆ. ಅಲ್ಲದೆ ಪ್ರೌಢರ ಅನೇಕ ತಪ್ಪುಗಳಿಗೆ ತಾವು ನೇರವಾಗಿ ಸಂಬಂಧಿಸಿಲ್ಲದಿದ್ದರೂ ತೊಂದರೆ ಪಡಬೇಕಾಗಿದೆ."[೧] ಎಂದು ಹೇಳುವ ಮೂಲಕ ಮಕ್ಕಳು ಕುಟುಂಬದಿಂದ, ಸಮಾಜದಿಂದ ಶೋಷಣೆಗೆ ಒಳಗಾಗುವುದನ್ನು ಎತ್ತಿ ತೋರಿಸಿದ್ದಾರೆ.

ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಕಾನೂನುಗಳು ಅವಶ್ಯಕವೇ ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಚಿಂತನೆಗೆ ತೊಡಗಿದಾಗ ಭಾರತದ ಸರ್ವೋಚ್ಚ ನ್ಯಾಯಾಲಯ ಹೇಳಿರುವ ತೀರ್ಪು ಈಗ ಉಲ್ಲೇಖಿಸುವುದು ಪ್ರಸ್ತುತ ಸಮಂಜಸವೆನಿಸುತ್ತದೆ. "ಉಸಿರಾಟದ ಕಾಯಿಲೆ

ಮಕ್ಕಳಲ್ಲಿ ಹೆಚ್ಚುತ್ತಿದ್ದು ಇದು ಅತ್ಯಂತ ಕಳವಳಕಾರಿ ಹಾಗೂ ಅವರ ದೈಹಿಕ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದ್ದು ಜವಾಬ್ದಾರಿಯುತ ಸರ್ಕಾರ ಹೊಣೆಗಾರಿಕೆವಹಿಸಿ ಕ್ರಿಯಾತ್ಮಕವಾಗಿ ಪ್ರತಿಕ್ರಿಯಿಸಬೇಕು. ಸಂಬಂಧಿಸಿದ ಸರಕಾರಗಳು ವಾಯುಮಾಲಿನ್ಯವನ್ನು ತಡೆಗಟ್ಟಿ ಮಾನವರಾಶಿ ಬದುಕಿ ಉಳಿಯುವ ವ್ಯವಸ್ಥೆಗೆ ಅನುಕೂಲ ಮಾಡಿಕೊಡಬೇಕು."[೨] ಎಂದು ಹೇಳುವ ಮೂಲಕ ಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡು ಮಕ್ಕಳಿಗೆ ಬೇಕಾಗಿರುವ ರಕ್ಷಣೆ ಪೋಷಣೆಯ ಅಗತ್ಯವನ್ನು ಸರ್ಕಾರಕ್ಕೆ ಒತ್ತಿ ಹೇಳಿದೆ.

ಒಂದು ದೇಶ ಸದೃಢವಾಗಬೇಕಾದರೆ ಅಲ್ಲಿನ ಮಕ್ಕಳು ಸದೃಢವಾಗಿ, ಆರೋಗ್ಯವಂತರಾಗಿ ಬೆಳೆಯಬೇಕು. ಇದಕ್ಕಾಗಿ ಮಕ್ಕಳಿಗೆ ಬೇಕಾಗುವ ಎಲ್ಲಾ ಅವಕಾಶಗಳನ್ನು ಒದಗಿಸಿ ಕೊಟ್ಟು ಸುಸಂಸ್ಕೃತ ನಾಗರೀಕರಾಗಿ ಬೆಳೆಯಲು ಅವಕಾಶ ಮಾಡಿಕೊಡಬೇಕಾದದ್ದು ಎಲ್ಲಾ ತಂದೆತಾಯಿಗಳ, ಸಮಾಜದ ಮತ್ತು ಸರ್ಕಾರದ ಕರ್ತವ್ಯ. ಒಂದು ವೇಳೆ ಮಗು ಕುಟುಂಬದಿಂದ, ಸಮಾಜದಿಂದ ಹಕ್ಕು ವಂಚಿತನಾಗಿ ಬೆಳೆದರೆ ಅಂಥಹವರು ಸಮಾಜಕ್ಕೆ ಕಂಟಕರಾಗುತ್ತಾರೆ. ಅಂತಹ ಸಂದರ್ಭಗಳನ್ನು ತಪ್ಪಿಸಿ ಮಕ್ಕಳ ರಕ್ಷಣೆಗೆ ಬೇಕಾಗುವಂತಹ ಕಾನೂನುಗಳನ್ನು ರೂಪಿಸುವುದು ಅವಶ್ಯಕವಾಗುತ್ತದೆ.

ಒಂದು ಕುಟುಂಬದೊಳಗೆ ಮಗು ತಂದೆ ತಾಯಿಗಳಿಂದ ನಿರ್ಲಕ್ಷಕ್ಕೆ ಒಳಗಾಗಿರುವಂತಹ ಅನೇಕ ಪ್ರಸಂಗಳು ನಮ್ಮ ಕಣ್ಣಿಗೆ ಗೋಚರಿಸುತ್ತವೆ. ಕುಡಿತ, ಜೂಜಾಟ ಮತ್ತು ಬಡತನಕ್ಕೆ ಸಿಲುಕಿರುವಂತಹ ಕುಟುಂಬದ ಮಕ್ಕಳನ್ನು ರಕ್ಷಿಸಲು ಕಾನೂನುಗಳು ಬೇಕು. ತಂದೆತಾಯಿ ಪರಸ್ಪರ ಬೇರೆ ಬೇರೆಯಾಗುವಂತಹ ಸಂದರ್ಭಗಳು ಬಂದಾಗ ಮಕ್ಕಳ ರಕ್ಷಣೆಗೆ ಕಾನೂನುಗಳು ಬೇಕಾಗುತ್ತವೆ.

ಒಂದು ಸಮುದಾಯದೊಳಗೆ ಅಥವಾ ಸಮಾಜದಲ್ಲಿ, ಮಕ್ಕಳನ್ನು ಹೇಗೆ ನಡೆಸಿಕೊಳ್ಳಲಾಗುತ್ತದೆ ಎಂಬುದನ್ನು ಗಮನಿಸಿದಾಗ ಮೂಢನಂಬಿಕೆ, ಕಂದಾಚಾರಗಳಿಂದ ದೇವದಾಸಿ ಪದ್ದತಿಗೆ ಹೆಣ್ಣು ಮಕ್ಕಳನ್ನು ತಳ್ಳುವುದು, ಎಳೆಯ ಮಕ್ಕಳನ್ನು ದುಡಿಮೆಗೆ ತೊಡಗಿಸಿಕೊಳ್ಳುವುದು ಮತ್ತು ಲಿಂಗತಾರತಮ್ಯವನ್ನು ಮಾಡುವುದು ಕಂಡುಬರುತ್ತದೆ. ಹಾಗೆಯೇ ಬಾಲ್ಯವಿವಾಹಗಳು ಹಳ್ಳಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತವೆ. ಇಂತಹ ಅನಿಷ್ಟಗಳನ್ನು ತಡೆಯಲು ಮಕ್ಕಳ ಕಾನೂನುಗಳು ಸಮಾಜಕ್ಕೆ ಅವಶ್ಯವಾಗಿ ಬೇಕಾಗುತ್ತವೆ. ಇಂತಹ ಅಂಶಗಳನ್ನು ಗಮನಿಸಿದ ವಿಶ್ವಸಂಸ್ಥೆಯು, ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಒಪ್ಪಿ ಜಾರಿಗೆ ತಂದನಂತರ ೧೯೯೦ ಸೆಪ್ಟಂಬರ್ ೨ ರಂದು ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಅಂತರಾಷ್ಟ್ರೀಯ ಕಾನೂನುಗಳ ಪಟ್ಟಿಗೆ ಸೇರ್ಪಡೆ ಮಾಡಲಾಯಿತು.

೩.೧. ಮಕ್ಕಳ ಹಕ್ಕುಗಳ ರಕ್ಷಣೆಗೆ ಕಾನೂನು

ಮಕ್ಕಳ ರಕ್ಷಣೆ ಮಾನವ ಸಮಾಜದ ಪ್ರಾಥಮಿಕ ಸ್ಥಿತಿ. ಮಕ್ಕಳು ಉತ್ತಮ ನಾಗರಿಕ ಪ್ರಜೆಗಳಾಗಿ ಬೆಳೆಯಬೇಕಾದರೆ ಅವರಿಗೆ ದೇಶ, ಭಾಷೆ, ಜಾತಿ, ಗಡಿ ಮೀರಿ ಮಕ್ಕಳ

ರಕ್ಷಣೆಯಗಬೇಕು. ಲೇಖಿಕರಾದ ಭಾರತೀ ಜೀವಿ ಹೇಳುವಂತೆ "ಮಕ್ಕಳ ಕಾಯಿದೆ, ಆ ಕಾನೂನಿನ ಪ್ರಕಾರ ಹುಟ್ಟಿದ ಮಗುವಿನಿಂದ ೧೮ವರ್ಷದವರೆಗೆ ಆ ಮಗುವನ್ನು ತಿದ್ದಿ ಶಿಕ್ಷಣಕೊಟ್ಟು ಶ್ರೇಷ್ಠ ಸಂಸಾರಿ ಮಾನವತೆಯಲ್ಲಿ ಬಾಳುವಂತೆ ಮಾಡುವ ಸಮಾಜಸೇವೆ ಮಕ್ಕಳ ಕಲ್ಯಾಣಕ್ಕೆ ಒಳ್ಳೇ ಬಲಯುತ ಕಾನೂನು. ಈ ಕಾನೂನಿನನುಸಾರ ಕಡ್ಡಾಯ ಶಿಕ್ಷಣ, ಕಾನೂನನ್ನು ಉಲ್ಲಂಘಿಸುವ, ಚಿಕ್ಕ ವಯಸ್ಸಿನಲ್ಲಿ ಮದುವೆಯಾಗುವ, ದೇವದಾಸಿಯಾಗುವ, ಅಸ್ಪೃಶ್ಯರ ಮಕ್ಕಳ, ಭಿಕ್ಷುಕರ, ವ್ಯಭಿಚಾರಿಗಳಾದ ಮಕ್ಕಳ ಮತ್ತು ಅಪರಾಧಿ ಚಟವಿದ್ದವರ ಮಕ್ಕಳ ಪರಿವರ್ತನೆ, ಸುಧಾರಣೆ ನೆಲೆಗೊಳಿಸುವುದು. ವ್ಯಭಿಚಾರದಿಂದ ಮುಕ್ತಗೊಳಿಸುವುದು. ಬಿಕ್ಷುಕರ ಮಕ್ಕಳನ್ನು ಬಿಕ್ಷೆಬೇಡುವುದರಿಂದ ಮುಕ್ತ ಮಾಡುವುದು, ತುಂಟ, ಉಡಾಳ ಮಕ್ಕಳನ್ನು ಸುಮಾರ್ಗಕ್ಕೆ ಹಚ್ಚುವುದು. ಇತ್ಯಾದಿಯಾಗಿ ಮಕ್ಕಳ ಕಲ್ಯಾಣವನ್ನು ಮಕ್ಕಳ ಕಾನೂನಿನ ಕಾಲಂ ೨೬(೦)(IV) ಪ್ರಕಾರ ಅನಾಥ ಮಗು ಅಡ್ಡದಾರಿ, ದುರ್ಮಾರ್ಗ, ದುಸ್ಸಂಗ, ವ್ಯಭಿಚಾರಿಯಾಗುವ ಸಂಭವವಿದ್ದಾಗ, ಅಂಥ ಮಕ್ಕಳನ್ನು ಮಕ್ಕಳ ನ್ಯಾಯಾಲಯದ ಮುಂದೆ ತಂದು, ಆ ನ್ಯಾಯಾಲಯದ ತೀರ್ಪಿನಂತೆ ಆ ಮಗುವನ್ನು ಮನ ಪರಿವರ್ತನೆಗೊಳಿಸಿ ಶಿಕ್ಷಣವಿತ್ತು ಉತ್ತಮ ಸಂಸಾರಿ ಜೀವನದಲ್ಲಿ ನೆಲೆಗೊಳಿಸಲು ಅನುಕೂಲವಿರುವುದು."[೩] ಎಂಬುದಾಗಿ ಹೇಳಿದ್ದಾರೆ. ಈ ಮಕ್ಕಳ ಹಕ್ಕುಗಳ ರಕ್ಷಣೆ ಕುರಿತು ಭಾರತದ ಸಂವಿಧಾನ ಮತ್ತು ಕಾನೂನುಗಳಲ್ಲಿ ವ್ಯಾಪಕವಾಗಿ ಪ್ರಸ್ತಾಪಿಸಿದೆ.

ಎ. ಭಾರತ ಸಂವಿಧಾನ ಮತ್ತು ಮಕ್ಕಳು

ಭಾರತ ಸಂವಿಧಾನ ರಚನೆ ಮಾಡುವಾಗಲೂ ನಮ್ಮ ಸಂವಿಧಾನ ರಚನಾಕಾರರು ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ಸಂವಿಧಾನ ರಚನೆ ಮಾಡಿದರು. "ಭಾರತ ಗಣರಾಜ್ಯದ ಅತ್ಯಂತ ಮಹತ್ವದ ಧ್ಯೇಯ ಧೋರಣೆಗಳನ್ನು ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿ ಪ್ರಸ್ಥಾಪಿಸಿದ್ದೇವೆ. ಅದು 'ಭಾರತ ಒಂದು ಸಾರ್ವಭೌಮ, ಸಮಾಜವಾದಿ, ಜನತಾಂತ್ರಿಕ" ಗಣರಾಜ್ಯವೆಂದು ಘೋಷಿಸಿದೆ. ಭಾರತದ ಎಲ್ಲಾ ನಾಗರಿಕರಿಗೆ 'ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ ಸ್ಥಾನ-ಮಾನ ಮತ್ತು ಸದಾವಕಾಶಗಳ ಸಮಾನತೆ; ಬಂಧುರ ಭ್ರಾತೃತ್ವದ ಪ್ರವರ್ಧನೆ, ವ್ಯಕ್ತಿಯ ಘನತೆ-ಗೌರವದ ಭದ್ರತೆ... ಇತ್ಯಾದಿಗಳನ್ನು ಒದಗಿಸಿಕೊಡುವ ಪ್ರತಿಜ್ಞೆಯನ್ನು ಅದರಲ್ಲಳವಡಿಸಲಾಗಿದೆ. ಅರೆಮಾನವ ಸ್ಥಿತಿಯಲ್ಲಿ ಬದುಕುತ್ತಿರುವ ಭಾರತೀಯ ನಾಗರೀಕರ ದೃಷ್ಟಿಯಿಂದ ತುಂಬಾ ಮಹತ್ವದ್ದೆನಿಸುವ ಕೆಲವು ಸಂವಿಧಾನಿಕ ಪ್ರಸ್ತಾವಗಳನ್ನು 'ಮೂಲಭೂತಹಕ್ಕುಗಳು' ಮತ್ತು ರಾಜ್ಯಧೋರಣೆಯ ನಿರ್ದೇಶಕ ತತ್ವಗಳಲ್ಲಿ ಶೃತಪಡಿಸಲಾಗಿವೆ."[೪] ಮೂಲಭೂತ ಹಕ್ಕುಗಳಾದ ಸಮಾನತೆಯ ಹಕ್ಕು, ಸ್ವಾತಂತ್ರದ ಹಕ್ಕು, ಶೋಷಣೆಯ ವಿರುದ್ಧ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕುಗಳು ಮಾನ ಜೀವಿಯ ಎಲ್ಲರಿಗೂ ಅನ್ವಯಿಸುತ್ತವೆ. ಸಂವಿಧಾನದಲ್ಲಿ ಪ್ರಸ್ತಾಪವಾಗಿರುವ ಕೆಲವು ವಿಧಿಗಳು ಮಕ್ಕಳ ರಕ್ಷಣೆ ಬಗ್ಗೆ ಪ್ರಸ್ತಾಪಿಸಿರುವುದು ಈ ಕೆಳಗಿನಿಂದ ತಿಳಿಯಬಹುದು.

ಪರಿಚ್ಛೇದ–೨೧ವಯಕ್ತಿಕ ಸ್ವಾತಂತ್ರ ಮತ್ತು ಜೀವಿಸುವ ಹಕ್ಕು

"ನಮ್ಮ ಸಂವಿಧಾನದ ೨೧ನೇ ಕಾಲಮು ಕಾನೂನು ಮೂಲಕ ಸ್ಥಾಪಿತವಾಗಿರುವ ಪ್ರಕ್ರಿಯೆಗೆ ಅನುಸಾರವಾಗಿದೆಯಲ್ಲದೆ ಯಾವುದೇ ವ್ಯಕ್ತಿಯ ಜೀವ ಅಥವಾ ವ್ಯಕ್ತಿ ಸ್ವಾತಂತ್ರ್ಯವನ್ನು ಹರಣ ಮಾಡತಕ್ಕುದಲ್ಲ ಎಂದು ಹೇಳಿ ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಸಂರಕ್ಷಣೆಯನ್ನು ನಾಗರಿಕನ ಮೂಲಭೂತ ಹಕ್ಕು ಎಂದು ಹೇಳಿದೆ."[೫]

ಈ ಮೇಲಿನ ಪರಿಚ್ಛೇದದ ಪ್ರಕಾರ ಭಾರತದಲ್ಲಿ ಹುಟ್ಟಿದ ಪ್ರತಿಯೊಬ್ಬ ಮಗುವು ಬದುಕಿ ಆರೋಗ್ಯವಂತನಾಗಿ ಬಾಳುವುದಕ್ಕೆ ಸಂವಿಧಾನವು ಮೂಲಭೂತ ಹಕ್ಕನ್ನು ನೀಡಿ ಅವಕಾಶ ಮಾಡಿಕೊಟ್ಟಿದೆ. ಈ ಕಾರಣಕ್ಕಾಗಿ ಮಕ್ಕಳಿಗೆ ಬದುಕಲು ಬೇಕಾಗುವಂತಹ ಪರಿಸರವನ್ನು ಒದಗಿಸುವುದು ಸಂವಿಧಾನದತ್ತ ಸರ್ಕಾರಗಳ ಜವಾಬ್ದಾರಿಯಾಗಿದೆ.

ಪರಿಚ್ಛೇದ–೨೧.ಎ

"೬ರಿಂದ ೧೪ವರ್ಷದ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು"[೬]

ಭಾರತದಲ್ಲಿರುವ ಪ್ರತಿ ೬ರಿಂದ ೧೪ ವಯೋಮಾನದ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ನೀಡುವುದು ಸರ್ಕಾರದ ಕರ್ತವ್ಯವೆಂದು ಸ್ಪಷ್ಟಪಡಿಸಿದೆ. ಇದನ್ನು ಪಡೆಯುವುದು ಪ್ರತಿ ಮಗುವಿನ ಹಕ್ಕು ಎಂದು ತಿಳಿಸಿದೆ.

ಪರಿಚ್ಛೇದ–೨೩

"ಬಲವಂತವಾಗಿ ದುಡಿಸಿಕೊಳ್ಳುವುದು ಹಾಗೂ ಮನುಷ್ಯರ ಮಾರಾಟದ ವಿರುದ್ಧ ಹಕ್ಕು"[೭]

ಈ ಪರಿಚ್ಛೇದದ ಪ್ರಕಾರ ಯಾವುದೇ ವ್ಯಕ್ತಿ ಮಕ್ಕಳನ್ನು ಬಲವಂತ ದುಡಿಮೆ ಅಥವಾ ಜೀತಕ್ಕಿಟ್ಟುಕೊಳ್ಳುವುದನ್ನು ನಿಷೇದಿಸುತ್ತದೆ. ಜೊತೆಗೆ ವೇಶ್ಯಾವಾಟಿಕೆ ಇತ್ಯಾದಿಗಳಿಗೆ ಮಾರಾಟ ಮಾಡುವುದನ್ನು ನಿಷೇಧಿಸುತ್ತದೆ.

ಪರಿಚ್ಛೇದ–೨೪

"ಮಕ್ಕಳ ದುಡಿಮೆ ನಿಷೇಧ"[೮]

ಈ ಪರಿಚ್ಛೇದವು ನೇರವಾಗಿ ಬಾಲಕಾರ್ಮಿಕ ಪದ್ಧತಿಯನ್ನು ವಿರೋಧಿಸುತ್ತದೆ.ಕೆಲಸಗಳಿಂದ ಮುಕ್ತಿ ಹೊಂದಿ ರಕ್ಷಣೆ ಪಡೆಯುವ ಸಂವಿಧಾನಬದ್ಧ ಹಕ್ಕನ್ನು ಮಕ್ಕಳಿಗೆ ನೀಡಿದೆ.

ಪರಿಚ್ಛೇದ–೩೯(ಇ)

"ಮಕ್ಕಳು ಎಳೆಯ ವಯಸ್ಸಿನಲ್ಲಿ ದುರುಪಯೋಗವಾಗದಂತೆ ಮತ್ತು ಆರ್ಥಿಕ ಅವಶ್ಯಕತೆಯಿಂದಾಗಿ ನಾಗರಿಕರು ತಮ್ಮ ವಯಸ್ಸಿಗೆ ಅಥವಾ ಬಲಕ್ಕೆ ತಕ್ಕುದಲ್ಲದ ಉಪವೃತ್ತಿಗಳಲ್ಲಿ ತೊಡಗಲು ಬಲಾತ್ಕರಿಸದೆ ಇರಬೇಕು"[೯]

ಈ ಪರಿಚ್ಛೇದವು ಮಕ್ಕಳು ಎಳೆಯವಯಸ್ಸಿನಲ್ಲಿ ಕೆಲಸ ಮಾಡುವುದನ್ನು ತಡೆಯುವಂತೆ ಸಂವಿಧಾನದ ರಾಜ್ಯ ನಿರ್ದೇಶಕ ತತ್ವಗಳಲ್ಲಿ ಸಾರಿದೆ.

ಪರಿಚ್ಛೇದ-೩೯ (ಎಫ್)

"ಮಕ್ಕಳು ಆರೋಗ್ಯಪೂರ್ಣವಾಗಿ ಅಭಿವೃದ್ದಿ ಹೊಂದಲು ಅವಶ್ಯವಿರುವ ಅವಕಾಶ ಮತ್ತು ಸೌಕರ್ಯಗಳನ್ನು ಕಲ್ಪಿಸಿಕೊಡತಕ್ಕದ್ದು. ನೈತಿಕವಾಗಿ ಭೌತಿಕವಾಗಿ ನಿರ್ಗತಿಕರಾಗದಂತೆ ಯಾವುದೇ ರೀತಿಯ ಮಕ್ಕಳ ಶೋಷಣೆ ನಡೆಯದಂತೆ ಎಲ್ಲಾ ಮಕ್ಕಳು ಮತ್ತು ಯುವಕರು ಸ್ವತಂತ್ರರಾಗಿ ಘನತೆಯಿಂದ ಬದುಕಲು ಸಾಧ್ಯವಾಗುವಂತೆ ಪರಿಸ್ಥಿತಿಯನ್ನು ನಿರ್ಮಿಸತಕ್ಕದ್ದು"[೧೦]

ಈ ಪರಿಚ್ಛೇದವು ಸಂವಿಧಾನ ಬದ್ಧ ಸರ್ಕಾರಗಳು ಹಳ್ಳಿಗಳಲ್ಲಿರುವ ಪ್ರತಿ ಮಗುವಿಗೂ ಉತ್ತಮ ಆರೋಗ್ಯ ಮತ್ತು ಸೌಕರ್ಯಗಳನ್ನು ಒದಗಿಸಬೇಕೆಂಬ ನಿರ್ದೇಶನ ನೀಡಿದೆ.

ಪರಿಚ್ಛೇದ-೪೧

"ಪ್ರತಿಯೊಬ್ಬರಿಗೂ ಕೆಲಸದ ಹಕ್ಕು ಕೊಡಲು, ಶಿಕ್ಷಣ ನೀಡಲು ನಿರುದ್ಯೋಗಿಗಳಿಗೆ, ವಯೋವೃದ್ಧರಿಗೆ, ರೋಗರುಜಿನಗಳಿಂದ ನರಳುತ್ತಿರುವವರಿಗೆ ವಿಕಲಾಂಗಿಗಳಗೆ ಮತ್ತು ಇತರ ನಿಸ್ಸಾಹಾಯಕರಿಗೆ ಸಾರ್ವಜನಿಕ ಸಹಾಯ ಒದಗಿಸಲು ಪ್ರಭುತ್ವವು ತನ್ನ ಆರ್ಥಿಕ ಸಾಮರ್ಥ್ಯ ಮತ್ತು ಅಭಿವೃದ್ಧಿಯ ಮಿತಿಗಳೊಳಗೆ ಎಲ್ಲಾ ಪ್ರಯತ್ನಗಳನ್ನು ಮಾಡತಕ್ಕದ್ದು."[೧೧]

ಈ ಪರಿಚ್ಛೇದವು ವಿಕಲಾಂಗ ಮಕ್ಕಳಿಗೆ ರೋಗಗಳಿಂದ ನರಳುತ್ತಿರುವವರಿಗೆ ಬದುಕಲು ಬೇಕಾಗುವಂತಹ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ನಿರ್ದೇಶನ ನೀಡಿದೆ.

ಪರಿಚ್ಛೇದ-೪೨

"ಪ್ರಭುತ್ವವು ಮಹಿಳೆಯರಿಗೆ ನ್ಯಾಯಯುತವಾದ ಮಾನವೀಯ ಸ್ಥಿತಿಯಿಂದೊಡಗೂಡಿದ ದುಡಿಮೆಯ ಪರಿಸರವನ್ನು ಸೃಷ್ಟಿಸತಕ್ಕದ್ದು ಮತ್ತು ಹೆರಿಗೆಗೆ ಸಾಕಷ್ಟು ಪರಿಹಾರ ಒದಗಿ ತಕ್ಕದ್ದು"[೧೨]

ಈ ಪರಿಚ್ಛೇದದ ಪ್ರಕಾರ ಹಳ್ಳಿಗಳಲ್ಲಿ ಮಹಿಳೆಯರ ಹೆರಿಗೆಗೆ ಬೇಕಾಗುವಂತಹ ಸೌಲಭ್ಯಗಳನ್ನು ಒದಗಿಸಿಕೊಡುವುದು ಮತ್ತು ಹೆರಿಗೆ ನಂತರ ಮಕ್ಕಳ ರಕ್ಷಣೆಗೆ ಸೇವಾ ಸೌಲಭ್ಯಗಳನ್ನು ಒದಗಿಸುವುದರ ಕಡೆಗೆ ನಿರ್ದೇಶನ ನೀಡುತ್ತದೆ.

ಪರಿಚ್ಛೇದ-೪೫

"ಆರುವರ್ಷದಾಟದ ಎಲ್ಲಾ ಮಕ್ಕಳಿಗೆ ಆರಂಭಿಕ ಬಾಲ್ಯದ ರಕ್ಷಣೆ ಹಾಗೂ ಶೈಕ್ಷಣಿಕ ವ್ಯವಸ್ಥೆಗಳನ್ನು ಮಾಡಲು ಸರ್ಕಾರವು ಪ್ರಯತ್ನಿಸುವುದು"[೧೩] (೨೦೦೨ರಲ್ಲಿ ಆದ ತಿದ್ದುಪಡಿ)

ಈ ಪರಿಚ್ಛೇದವು ೬ರಿಂದ ೧೪ವಯೋಮಾನದ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ನೀಡುವುದರ ಜೊತೆಗೆ ಆರು ವರ್ಷದ ಒಳಗಿರುವ ಮಕ್ಕಳಿಗೆ ಪಾಲನೆ, ಪೋಷಣೆ, ರಕ್ಷಣೆ, ಶಿಕ್ಷಣ ನೀಡುವ ಬಗ್ಗೆ ನಿರ್ದೇಶನ ನೀಡಿದೆ.

ಪರಿಚ್ಛೇದ–೪೭

"ತನ್ನ ಜನತೆಗೆ ಉತ್ತಮ ಮಟ್ಟದ ಪೌಷ್ಟಿಕ ಆಹಾರ ದೊರಕಿಸಿಕೊಡುವುದು, ಬದುಕಿನ ಮಟ್ಟ ಎತ್ತರಿಸಿಕೊಡುವುದು, ಸಾರ್ವಜನಿಕ ಆರೋಗ್ಯ ಸುಧಾರಿಸುವುದು ಇವೇ ಮೊದಲಾದ ಕೆಲಸಗಳನ್ನು ಪ್ರಭುತ್ವವು ತನ್ನ ಪ್ರಾಥಮಿಕ ಕರ್ತವ್ಯಗಳೆಂದು ಪರಿಗಣಿಸತಕ್ಕದ್ದು"[೧೪]

ಈ ಪರಿಚ್ಛೇದದ ಪ್ರಕಾರ ಮಕ್ಕಳಿಗೆ ಮೇಲಿನ ಎಲ್ಲಾ ಅವಕಾಶಗಳನ್ನು ಒದಗಿಸಿಕೊಡಬೇಕಾದರೆ ಸಮಾಜದಲ್ಲಿರುವ ಪ್ರತಿಯೊಬ್ಬ ಪ್ರಜೆಗೂ ಮೂಲಭೂತ ಹಕ್ಕುಗಳನ್ನು ಒದಗಿಸಿಕೊಟ್ಟು ಅವರ ಬದುಕನ್ನು ಉತ್ತಮ ಪಡಿಸಬೇಕು ಎಂದು ಸಂವಿಧಾನಬದ್ದ ಸರ್ಕಾರಗಳಿಗೆ ನಿರ್ದೇಶನ ನೀಡಿದೆ.

ಬಿ. ವಿವಿಧ ಕಾನೂನುಗಳು ಮತ್ತು ಮಕ್ಕಳು

ಸಂವಿಧಾನಬದ್ದ ಹಕ್ಕುಗಳನ್ನು ಒದಗಿಸಿಕೊಡುವ ದೃಷ್ಟಿಯಿಂದ ಮಕ್ಕಳಿಗಾಗಿ ಕಾನೂನುಗಳ ರಚನೆ ಅನಿವಾರ್ಯ. ತಂದೆ ತಾಯಿಗಳ ಜಗಳ, ಬಡತನ, ಸಮಾಜದ ಶೋಷಣೆ, ಮೋಸ ವಂಚನೆಗಳಿಗೆ ಬಲಿಯಾದ ಮಗುವಿಗೆ ಮತ್ತು ದುಡಿಮೆಗೆ ಸಿಲುಕಿರುವಂತಹ ಮಕ್ಕಳನ್ನು ಬಂಧಮುಕ್ತಗೊಳಿಸಬೇಕಾದರೆ ಕಾನೂನುಗಳ ರಚನೆ ಅತ್ಯವಶ್ಯಕ. ಈ ಮಕ್ಕಳ ಹಿನ್ನೆಲೆಯಲ್ಲಿ ಮಕ್ಕಳಿಗೆ ಕಾನೂನು ಬದ್ದ ರಕ್ಷಣೆ ನೀಡುವ ಸಲುವಾಗಿ ಬಾಲನ್ಯಾಯ ಅಧಿನಿಯಮ ೨೦೦೨ ರಚಿಸಲಾಗಿದೆ. ಈ ಕಾಯಿದೆಯ ಪ್ರಕಾರ ೧೮ವರ್ಷ ವಯೋಮಿತಿ ಆಗುವವರೆಗೂ ಮಕ್ಕಳು ಎಂದು ಪರಿಭಾವಿಸುತ್ತದೆ. ಅದರಂತೆ ಮಕ್ಕಳ ಪರವಾದ ಕಾನೂನುಗಳನ್ನು ಬೇರೆ ಬೇರೆ ಕ್ಷೇತ್ರ ಮತ್ತು ಇಲಾಖೆಗಳಿಗೂ ಅನ್ವಯಿಸುವಂತೆ ರಚನೆ ಮಾಡಲಾಗಿದೆ. ಅವುಗಳನ್ನು ಈ ಕೆಳಗಿನಂತೆ ವಿವರಿಸಿಲಾಗಿದೆ.

೧. ೧೯೪೮ರ ಕಾರ್ಖಾನೆ ಅಧಿನಿಯಮ

"೧೪ವರ್ಷಕ್ಕಿಂತ ಕಡಿಮೆ ಇರುವ ಯಾವುದೇ ಮಗುವನ್ನು ಈ ಕಾಯ್ದೆಯಡಿ ಯಾವುದೇ ಉದ್ಯೋಗಕ್ಕೆ ನಿಯಮಿಸಲಾಗುವುದಿಲ್ಲ. ಇದನ್ನು ಉಲ್ಲಂಘಿಸಿದಲ್ಲಿ ಕಾನೂನಿನ ಅಡಿಯಲ್ಲಿ ಶಿಕ್ಷೆಗೆ ಗುರಿ ಪಡಿಸಬಹುದಾಗಿದೆ."[೧೫]

ಸಂವಿಧಾನದ ಮೂಲಭೂತ ಹಕ್ಕುಗಳ ಪರಿಚ್ಛೇದ ೨೪ನ್ನು ಈ ಕಾನೂನು ಪ್ರತಿ ನಿಧಿಸಿದರೂ, ಮಕ್ಕಳ ಹಕ್ಕುಗಳ ಒಡಂಬಡಿಕೆಯಂತೆ ೧೮ವರ್ಷದೊಳಗಿನ ಮಕ್ಕಳನ್ನು ಈ ಕಾನೂನ ವ್ಯಾಪ್ತಿಯಲ್ಲಿ ಪರಿಗಣಿಸಿಲ್ಲ.

೨. ೧೯೫೧ರ ಮಕ್ಕಳ ಉದ್ಯೋಗ (ತಿದ್ದುಪಡಿಕಾಯ್ದೆ) (ಮಕ್ಕಳ ರಾತ್ರಿ ಕೆಲಸಕ್ಕೆ ಸಂಬಂಧಿಸಿದ ILO ಸಮಾವೇಶದ ವಿಧಿ)

“೧೫ರಿಂದ ೧೭ವರ್ಷದೊಳಗಿನ ಮಕ್ಕಳನ್ನು ರೈಲ್ವೆ ಬಂದರುಗಳ ರಾತ್ರಿ ಕೆಲಸಕ್ಕೆ ನೇಮಿಸಿಕೊಳ್ಳುವಂತಿಲ್ಲ ಮತ್ತು ೧೭ವರ್ಷದೊಳಗಿನ ಮಕ್ಕಳ ನೇಮಕಾತಿಗೆ ದಾಖಲಾಗುವ ಅವಕಾಶಗಳಿರಬೇಕು”[೧೬]

ಈ ಅಧಿನಿಯಮವು ತುಂಬ ಗೊಂದಲಕಾರಿಯಾಗಿದ್ದು ಅನೇಕ ಚರ್ಚೆಗಳಿಗೆ ಅವಕಾಶ ಮಾಡಿಕೊಡುತ್ತದೆ. ಒಂದು ಕಡೆ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳಬೇಕೆಂದು ಇನ್ನೊಂದು ಕಡೆ ಬೇಡ ಎನ್ನುವುದರಿಂದ ಈ ಅದಿನಿಯಮವನ್ನು ಪರಿಶೀಲಿಸುವುದು ಅಗತ್ಯವೆನಿಸುತ್ತದೆ.

೩. ೧೯೫೧ರ ತೋಟಗಾರಿಕೆ ಕಾರ್ಮಿಕರ ಕಾಯ್ದೆ

“ತೋಟಗಾರಿಕಾ ಕೆಲಸಗಳಲ್ಲಿ ೧೪ವರ್ಷದೊಳಗಿನವರನ್ನು ಉದ್ಯೋಗಕ್ಕೆ ನಿಯಮಿಸಿಕೊಳ್ಳುವಹಾಗಿಲ್ಲ”[೧೭]

ಈ ಅಧಿನಿಯಮವು ೧೪ ವರ್ಷ ಮೇಲ್ಪಟ್ಟ ಮಕ್ಕಳಿಗೆ ರಕ್ಷಣೆ ನೀಡುವುದಿಲ್ಲ ಮತ್ತು ಒಂದು ವೇಳೆ ಉದ್ಯೋಗಕ್ಕೆ ನಿಯಮಿಸಿದರೂ ಇಂತಹದ್ದೇ ಶಿಕ್ಷೆ ಎಂದು ವಿವರಣೆ ನೀಡಿಲ್ಲ.

೪. ೧೯೫೨ರ ಗಣಿಗಳ ಕಾಯ್ದೆ

“ಗಣಿಗಳಲ್ಲಿ ೧೮ವರ್ಷದೊಳಗಿನ ಮಕ್ಕಳ ನೇಮಕಾತಿಯನ್ನು ಗಣಿಗೆ ಸಂಬಂಧಿಸಿದ ಯಾವುದೇ ವಿಭಾಗದಲ್ಲಿ ನೇಮಕಗೊಳ್ಳುವುದನ್ನು ನಿಷೇಧಿಸಲಾಗಿದೆ. ಈ ಕಾಯಿದೆಯಲ್ಲಿ ಗಣಿಯೊಳಗೆ ಕೆಲಸಕ್ಕೆ ಸಂಬಂಧಿಸಿದಂತೆ ವಿವರಣೆ ನೀಡಲಾಗಿದ್ದು ಅ) ಮಕ್ಕಳು ೧೮ ವರ್ಷ ವಯಸ್ಸುದಾಟಿರಬೇಕು. ಆ) ನುರಿತ ವೈದ್ಯರ ದೈಹಿಕ ಸಾಮರ್ಥ್ಯ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಇಂತಹ ಕಾನೂನುಗಳು ಪಡೆದಿರಬೇಕು.”[೧೮]

ಈ ಅಧಿನಿಯಮ ಅನ್ವಯದ ಪ್ರಸ್ತುತ ಗಣಿಗಳಲ್ಲಿ ಕೆಲಸಮಾಡುತ್ತಿರುವ ಮಕ್ಕಳನ್ನು ನಿಯಂತ್ರಿಸಲು ಸಂಬಂಧಿಸಿದ ಇಲಾಖೆಗಳು ಮುಂದಾಗಿಲ್ಲ.

೫. ಸಾರಿಗೆ ಮೋಟಾರು ಕೆಲಸಗಾರರ ಅಧಿನಿಯಮ ೧೯೬೨

“ಈ ಕಾಯಿದೆಯನ್ವಯ ಯಾವುದೇ ಸಾರಿಗೆ ವಾಹನದಲ್ಲಿ ೧೪ವರ್ಷದೊಳಗಿನ ಮಕ್ಕಳ ದುಡಿಮೆಯನ್ನು ನಿಷೇಧಿಸಲಾಗಿದೆ. ಸೆಕ್ಷನ್ ೧೪ಯಾವುದೇ ಹದಿವಯಸ್ಕನನ್ನು ಆತನ ವಿರಾಮದ ಸಮಯವನ್ನು ಸೇರಿಕೊಂಡು ೬ಗಂಟೆಗಿಂತ ಹೆಚ್ಚಾಗಿ ದುಡಿಸಿಕೊಳ್ಳಬಾರದು. ಈ ಕೆಲಸದ ಅವಧಿ ಬೆಳಿಗ್ಗೆ ೧೦ರಿಂದ ಸಂಜೆ ೬ಗಂಟೆಯೊಳಗಿರಬೇಕು”[೧೯]

ಈ ಅಧಿನಿಯಮದ ಪ್ರಕಾರ ಹೇಳುವುದಾದರೆ ಕಾನೂನು ರಚನೆ ಮಾಡುವ ಸರ್ಕಾರದ ಮಟ್ಟದಲ್ಲಿ ಸಹ ಎಂಟುಗಂಟೆಗಿಂತ ಹೆಚ್ಚು ಸಮಯ ಕೆಲಸಮಾಡಿಸುವ ಮೂಲಕ ಈ ನಿಯಮ ಉಲ್ಲಂಘಿಸಲಾಗುತ್ತದೆ.

ಹೀಗಾಗಿ ಸರ್ಕಾರಗಳೇ ಸರಿಯಾಗಿ ಕಾನೂನು ಪಾಲುಸುತ್ತಿಲ್ಲ. ಇದನ್ನು ತಪ್ಪಿಸಬೇಕಾಗಿದೆ.

೬. ವೃತ್ತಿ ಶಿಕ್ಷಣ ಅಧಿನಿಯಮ ೧೯೬೧

"೧೪ ವರ್ಷದೊಳಗಿನ ಯಾವುದೇ ಮಗುವನ್ನು ಶಿಷ್ಯವೃತ್ತಿ ಮತ್ತು ತರಬೇತಿಗೆ ಆಯ್ಕೆ ಮಾಡಿಕೊಳ್ಳುವುದನ್ನು ನಿಷೇಧಿಸಲಾಗಿದೆ."[೨೦]

೭. ಬಾಲಕಾರ್ಮಿಕ ಪದ್ಧತಿ (ನಿಷೇದ ಮತ್ತು ನಿಯಂತ್ರಣ) ಕಾಯಿದೆ ೧೯೮೬ (ಸೆಕ್ಷನ್-೩೧)

"ಪ್ರತಿ ಮೂರು ಗಂಟೆಗಳ ಕೆಲಸಕ್ಕೆ ಕನಿಷ್ಠ ಒಂದು ಗಂಟೆಯ ವಿರಾಮ, ಪ್ರತಿವಾರಕ್ಕೆ ಒಂದು ದಿನ ಸಂಬಳ ಸಹಿತ ರಜೆ ಕೊಡಬೇಕು."[೨೧]

ಈ ಅಧಿನಿಯಮದ ಪ್ರಕಾರ ೧೪ವರ್ಷದೊಳಗಿನ ಮಕ್ಕಳು ಅಪಾಯಕಾರಿ ಉದ್ದಿಮೆಗಳಲ್ಲಿ ದುಡಿಯುವುದನ್ನು ನಿಷೇಧಿಸುತ್ತದೆ. ಮಕ್ಕಳ ದುಡಿಮೆಗೆ ಅವಕಾಶವಿರುವ ಹಲವು ಉದ್ದಿಮೆಗಳಿಗೆ ಕೆಲವು ನಿಯಂತ್ರಣಗಳನ್ನು ತರಲಾಗಿದೆ. ಮಕ್ಕಳು ದುಡಿಯಲೇಬೇಕಾದಲ್ಲಿ ಆ ಪರಿಸ್ಥಿತಿ ಹೇಗಿರಬೇಕೆಂಬುದನ್ನು ನಿರ್ದೇಶಿಸುತ್ತದೆ. ಆದರೆ ಗೃಹಕೃತ್ಯ, ಕೂಲಿ ಮತ್ತು ಅಪಾಯಕಾರಿಯಲ್ಲದ ವಲಯಗಳಲ್ಲಿ ಕೆಲಸಮಾಡುವ ಮಕ್ಕಳನ್ನು ಈ ಕಾನೂನು ವ್ಯಾಪ್ತಿಗೆ ಸೇರಿಸಿಲ್ಲ.

೮. ವ್ಯಾಪಾರಿ ಹಡಗು ಅಧಿನಿಯಮ ೧೯೫೮

"೧೪ವರ್ಷದೊಳಗಿನ ಯಾವುದೇ ಮಗುವನ್ನು ಸಾಗಣೆ ಹಡಗಿನಲ್ಲಿ ಯಾವುದೇ ಉದ್ಯೋಗಕ್ಕೆ ತೆಗೆದುಕೊಳ್ಳುವುದನ್ನು ನಿಷೇಧಿಸಲಾಗುತ್ತದೆ."[೨೨]

ಈ ಅಧಿನಿಯಮವು ಸಹ ೧೪ ವರ್ಷ ಮೇಲ್ಪಟ್ಟ ಮಕ್ಕಳಿಗೆ ರಕ್ಷಣೆ ನೀಡುತ್ತಿಲ್ಲ.

೯. ಭಾರತೀಯ ದಂಡ ಸಂಹಿತೆ ಐ.ಪಿ.ಸಿ. ಸೆಕ್ಷನ್ ೩೬೬ಎ

"ಭಾರತದ ಒಂದು ಭಾಗದಿಂದ ಇನ್ನೊಂದು ಪ್ರದೇಶಕ್ಕೆ ಅಪ್ರಾಪ್ತ ಹೆಣ್ಣು ಮಕ್ಕಳನ್ನು ಲೈಂಗಿಕ ಉದ್ದೇಶ ಅಥವಾ ಅದಕ್ಕೆ ಸಂಬಂಧಿಸಿದಂತೆ ಕರೆದೊಯ್ದರೆ ಪ್ರಸ್ತುತ ಅಪರಾಧಕ್ಕೆ ದಂಡ ವಿಧಿಸಲಾಗುವುದು. ೨೧ವರ್ಷದೊಳಗಿನ ಹೆಣ್ಣು ಮಕ್ಕಳನ್ನು ವೇಶ್ಯಾವೃತ್ತಿಗಾಗಿ ಎಳೆಯುವವರಿಗೆ ಜೈಲು ಶಿಕ್ಷೆಯೊಂದಿಗೆ ದಂಡವನ್ನು ವಿಧಿಸಲಾಗುವುದು."[೨೩]

೧೦. ಅನೈತಿಕ ತಡೆ ವ್ಯವಹಾರ ಅಧಿನಿಯಮ-೧೯೫೬

"ಈ ಕಾನೂನಿನ ಅಡಿಯಲ್ಲಿ ೧೬ವರ್ಷದೊಳಗಿನ ಹೆಣ್ಣು ಮಕ್ಕಳನ್ನು ಮಗು ಎಂದು ಹೇಳಲಾಗಿದೆ. ಈ ಅಧಿನಿಯಮದ ಸೆಕ್ಷನ್ ೬ರ ಪ್ರಕಾರ ಯಾರಾದರೂ ಹೆಣ್ಣು ಮಗುವಿನೊಂದಿಗೆ ವೇಶ್ಯಾಗೃಹದಲ್ಲಿ ಕಂಡುಬಂದರೆ ಹಾಗೂ ಆ ಮಗುವಿನ ವೈದ್ಯಕೀಯ

ಪರೀಕ್ಷೆಯಲ್ಲಿ ಮಗುವಿನೊಂದಿಗೆ ಲೈಂಗಿಕ ಕ್ರಿಯೆ ಆಗಿದ್ದು ವ್ಯಕ್ತವಾದರೆ ಆ ವ್ಯಕ್ತಿಗೆ ಶಿಕ್ಷೆ ವಿಧಿಸಲಾಗುವುದು."[೨೪]

"ಸೆಕ್ಷನ್ ೯ರ ಪ್ರಕಾರ ಮಕ್ಕಳ ಗೃಹದಲ್ಲಿರುವ ಮಗುವಿನ ಮೇಲೆ ಆ ಗೃಹದ ಮೇಲ್ವಿಚಾರಕರು ಅಥವಾ ಇತರೆ ಸಿಬ್ಬಂದಿಗಳು ಅತ್ಯಾಚಾರ ಅಥವಾ ಲೈಂಗಿಕ ಕಿರುಕುಳ ನೀಡಿದಲ್ಲಿ ಕಠಿಣ ಶಿಕ್ಷೆ ಅನುಭವಿಸಬೇಕಾಗುತ್ತದೆ."[೨೫]

ಈ ಅಧಿನಿಯಮವು ೧೮ವರ್ಷ ಮೇಲ್ಪಟ್ಟ ಹೆಣ್ಣು ಮಕ್ಕಳನ್ನು ಕಾನೂನು ವ್ಯಾಪ್ತಿಗೆ ತೆಗೆದು ಕೊಂಡಿಲ್ಲ. ಆದ್ದರಿಂದ ಇಂತಹ ಮಕ್ಕಳಿಗೆ ರಕ್ಷಣೆಯಾಗುವುದಿಲ್ಲ.

೧೧. ಜೀತ ಪದ್ಧತಿ ನಿರ್ಮೂಲನಾ ಕಾನೂನು ೧೯೭೬

"ಯಾರನ್ನೇ ಆಗಲಿ ಜೀತದಲ್ಲಿಡುವುದನ್ನು ನಿಷೇಧಿಸಲಾಗಿದೆ. ಜೀತಕ್ಕೆ ಬಿದ್ದವರ ಆಸ್ತಿ ಜಪ್ತಿ ಆಗಿದ್ದಲ್ಲಿ ಅದನ್ನು ಪುನಃ ಹಿಂದಕ್ಕೆ ಕೊಡಿಸಬೇಕು."[೨೬]

ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಎಂಟುಗಂಟೆಗಳಿಗಿಂತ ಹೆಚ್ಚಿನ ಅವಧಿಯ ದುಡಿಮೆ; ಕನಿಷ್ಟವೇತನಕ್ಕಿಂತ ಕಡಿಮೆ ಕೂಲಿ ಮುಂಗಡ ಹಣ ನೀಡಿ ಬೇರೆಕಡೆ ಕೆಲಸಕ್ಕೆ ಹೋಗದಂತೆ ತಡೆಯುವುದು; ಮುಂಗಡ ನೆಪ ಒಡ್ಡಿ ಕಡಿಮೆಕೂಲಿ ಕೊಡುವುದು; ಬೆದರಿಕೆಯಲ್ಲಿ ಕೆಲಸಮಾಡಿಸಿಕೊಳ್ಳುವುದು ಈ ಎಲ್ಲವೂ ಜೀತದ ಪರದಿಗೆ ಬರುತ್ತವೆ."[೨೭] ಎಂದು ಹೇಳಿದರೂ ಸ್ವತಃ ಸರ್ಕಾರದ ಇಲಾಖೆಗಳಲ್ಲಿ, ಸರ್ಕಾರೇತರ ಸಂಸ್ಥೆಗಳಲ್ಲಿ ಮತ್ತು ಹೊರಗಡೆ ದುಡಿಯುವವರು ಈಗಲೂ ಶೋಷಣೆಗೊಳಗಾಗುತ್ತಿದ್ದಾರೆ. ಇಂತವರಿಗೆ ಈ ಕಾಯ್ದೆಯಿಂದ ರಕ್ಷಣೆಯಾಗುತ್ತಿಲ್ಲ.

೧೨. ಭಾರತೀಯ ದಂಡ ಸಂಹಿತೆ (೧೮೬೦) ಕಾಯಿದೆ

"ವಿಧಿ ೩೧೫ ಬ್ರೂಣಹತ್ಯೆಯನ್ನು, ೩೧೬ ಶಿಶುಹತ್ಯೆಯನ್ನು; ಹಾಗು ೩೧೨, ೩೧೩ ಬಲವಂತದ ಗರ್ಭಪಾತವನ್ನು ಹಾಗೂ ೩೧೩ ಗರ್ಭವತಿಯ ಒಪ್ಪಿಗೆ ಇಲ್ಲದೆ ಗರ್ಭಪಾತ ಮಾಡಿಸುವುದು, ಮಾಡುವುದನ್ನು ಶಿಕ್ಷಾರ್ಹ ಅಪರಾಧ ಎಂದು ಹೇಳುತ್ತದೆ."[೨೮]

ಈ ಅಧಿನಿಯಮಗಳ ಪ್ರಕಾರ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಮಕ್ಕಳು ಅಪೌಷ್ಟಿಕ ಆಹಾರ, ಶುದ್ಧ ಕುಡಿಯುವ ನೀರಿನ ಕೊರತೆ ಮತ್ತು ಅನಾರೋಗ್ಯದಿಂದ ಸಾಯಲು ಸರ್ಕಾರದ ಸೇವಾವರ್ಗ ಕಾರಣವಾಗುವುದನ್ನು ಗಮನಿಸಬೇಕು.

೧೩. ಹಿಂದೂ ವಿವಾಹ ಅಧಿನಿಯಮ ೧೯೫೫

"ವಿಚ್ಛೇದನದ ಪ್ರಕರಣ ನ್ಯಾಯಾಲಯದ ಮುಂದೆ ಇದ್ದು, ಅಂಥ ದಂಪತಿಯ ಮಗು ಯಾರಿಗೆ ಸೇರಿಸಬೇಕು ಎಂಬ ಪ್ರಶ್ನೆ ಇದ್ದಲ್ಲಿ ಆ ಬಗ್ಗೆ ಮಗುವಿನ ಅಭಿಪ್ರಾಯ ಕೇಳಬೇಕು."[೨೯]

ಈ ಅಧಿನಿಯಮದ ಪ್ರಕಾರ ಮತ್ತು ಭಾರತ ಸಂವಿಧಾನ ಕಾಲಂ ೧೯ರಂತೆ ಭಾರತೀಯರಿಗೆಲ್ಲ ತಮ್ಮ ಅಭಿಪ್ರಾಯ ವ್ಯಕ್ತ ಪಡಿಸುವ ಮತ್ತು ಮಾತನಾಡುವ ಹಕ್ಕು ಇದೆ. ಇವರಲ್ಲಿ ಮಕ್ಕಳು ಸೇರುತ್ತಾರೆ. ಇದನ್ನು ಕುಟುಂಬ, ಸಮಾಜ ಮತ್ತು ಸರ್ಕಾರ ಗಮನಿಸಬೇಕು.

೧೪. ಜನನ-ಮರಣ ದಾಖಲೆ ಅಧಿನಿಯಮ ೧೯೬೯

"ಹುಟ್ಟಿದ ಪ್ರತಿಯೊಂದು ಮಗುವಿನ ಬಗ್ಗೆ ದಾಖಲಿಸಲೇಬೇಕು ಹಾಗೂ ಜನನ ಪ್ರಮಾಣ ಪತ್ರ ಪಡೆದಿರಬೇಕು."[೩೦]

ಈ ಅಧಿನಿಯಮದ ಪ್ರಕಾರ ಭಾರತದಲ್ಲಿ ಹುಟ್ಟಿದ ಎಲ್ಲರು ಜನನ ನೊಂದಣಿ ಮಾಡಿಸಬೇಕು. ಪ್ರಸ್ತುತ ಇಂತಹ ಕಾನೂನಿನ ಪರಿಚಯ ಈಗಲು ಹಳ್ಳಿಯಲ್ಲಿ ಕೆಲಸ ಮಾಡುವ ಅಧಿಕಾರವರ್ಗಕ್ಕೆ, ಸಮುದಾಯಕ್ಕೆ ಇಲ್ಲ. ಆದ್ದರಿಂದ ಜನನ ಮರಣ ದಾಖಲೆ ಸಮರ್ಪಕವಾಗಿ ನಡೆಯುವುದಿಲ್ಲ.

೧೫. ಮಕ್ಕಳಿಗೆ ನ್ಯಾಯ ಅಧಿನಿಯಮ ೧೯೮೬ (ಸೆಕ್ಷನ್-೨೨)

"ತಪ್ಪು ಮಾಡಿದ ಯಾವುದೇ ಮಗುವಿಗೆ ಚಿತ್ರಹಿಂಸೆ ಮರಣದಂಡನೆ ವಿಧಿಸಬಾರದು."[೩೧]

೧೬. ಹಿಂದೂ ಅಪ್ರಾಪ್ತ ವಯಸ್ಕರ ಪೋಷಕರ ಅಧಿನಿಯಮ ೧೯೫೬

"ಪೋಷಕರಿಗೆ ಅವರ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವ ಜವಾಬ್ದಾರಿಯಿದೆ,"[೩೨]

ಈ ಅಧಿನಿಯಮದ ಹಿನ್ನೆಲೆಯಲ್ಲಿ ಹೇಳುವುದಾದರೆ ಸಂವಿಧಾನದ ರಾಜ್ಯ ನಿರ್ದೇಶಕ ತತ್ವಗಳ ೪೬ರ ವಿಧಿಯಲ್ಲಿ ಹೇಳಿರುವಂತೆ ಮಕ್ಕಳನ್ನು ರಕ್ಷಿಸುವ ಪೋಷಕರಿಗೆ ಮೂಲಭೂತ ಸೌಕರ್ಯಗಳನ್ನು ಸರ್ಕಾರವು ಒದಗಿಸಿಕೊಡಬೇಕಾಗುತ್ತದೆ.

೧೭. ಅಂಗವಿಕಲ ಮಕ್ಕಳಿಗೆ ಸಮಗ್ರ ಶಿಕ್ಷಣ ೧೯೮೭

"ಅಂಗವಿಕಲ ಮಕ್ಕಳೂ ಸಹ ಇತರ ಪೂರ್ಣಾಂಗ ಮಕ್ಕಳೊಡನೆ ಬೆರೆತು ಕಲಿಯಲು ಅವಕಾಶ ಕೊಡುವುದು ಹಾಗೂ ಅವಶ್ಯಕತೆ ಇದ್ದಲ್ಲಿ ವಿಕಲಾಂಗರಿಗೆ ವಿಶೇಷ ಶಿಕ್ಷಣ ಕೊಡುವುದು ಹಾಗೂ ಅಂತಹ ವ್ಯವಸ್ಥೆ ಮಾಡುವುದು ಸರ್ಕಾರದ ಕರ್ತವ್ಯ"[೩೩]

ಈ ಅಧಿನಿಯಮದ ಪ್ರಕಾರ ಹೇಳುವುದಾದರೆ ಶಾಲೆಗೆ ಹೋಗಲು ಮತ್ತಿತರ ಕಡೆ ತಿರುಗಾಡಲು ಗ್ರಾಮದ ಪ್ರಮುಖ ತಗ್ಗು ಪ್ರದೇಶಗಳಲ್ಲಿ ಅಂಗವಿಕಲ ಮಕ್ಕಳಿಗೆ ಅನುಕೂಲವಾಗುವಂತೆ ರ್‍ಯಾಂಪ್ ಹಾಕಿಸುವುದು ಅತ್ಯಾವಶ್ಯಕವಾಗಿದೆ.

ಭಾರತದ ಸಂವಿಧಾನ ಮತ್ತು ಮಕ್ಕಳ ರಕ್ಷಣೆಗಾಗಿ ರಚನೆಯಾಗಿರುವ ಕಾನೂನುಗಳು ಮಕ್ಕಳ ಹಕ್ಕುಗಳ ಒಡಂಬಡಿಕೆಯ ಪ್ರಕಾರ ೧೮ ವರ್ಷದೊಳಗಿರುವ ಮಕ್ಕಳನ್ನು ರಕ್ಷಿಸುವಲ್ಲಿ ವಿಫಲವಾಗಿವೆ. ಇದು ಮೇಲೆ ವಿವರಿಸಿದ ಮಕ್ಕಳ ಕಾನೂನುಗಳು ಮತ್ತು ಭಾರತ ಸಂವಿಧಾನವನ್ನು ಅಧ್ಯಯನ ಮಾಡಿದಾಗ ಕಂಡುಬರುತ್ತದೆ. ಮಕ್ಕಳ ಹಕ್ಕುಗಳನ್ನು ಒಪ್ಪಿ

ಅವುಗಳನ್ನು ಜಾರಿಗೊಳಿಸಬೇಕಾದರೆ ಭಾರತದ ಸಂವಿಧಾನ ಮತ್ತು ಭಾರತದಲ್ಲಿರುವ ಮಕ್ಕಳ ಕಾನೂನುಗಳಿಗೆ ತಿದ್ದು ಪಡಿಯಾಗಬೇಕು. ಹೀಗೆ ಮಾಡುವ ಮೂಲಕ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಬದ್ದತೆಯನ್ನು ತೋರಿಸಬೇಕು.

ಭಾರತದ ಸಂವಿಧಾನ ೨೧ನೇ ವಿಧಿ ಎ ಯಲ್ಲಿ ಪ್ರಸ್ತಾಪವಾಗಿರುವಂತೆ ೬ ರಿಂದ ೧೪ ವರ್ಷದೊಳಗಿನ ಮಕ್ಕಳು ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯುವುದು ಮಗುವಿನ ಹಕ್ಕು ಎಂದು ಹೇಳಲಾಗಿದೆ. ಆದರೆ ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ಪ್ರಸ್ತಾಪಿಸಿದಂತೆ ೧೮ ವರ್ಷದವರೆಗಿನ ಮಕ್ಕಳಿಗೆ ರಕ್ಷಣೆ ನೀಡಬೇಕಾಗಿರುವುದರಿಂದ ೧೪ಕ್ಕೆ ನಿಗದಿಪಡಿಸಿರುವ ವಯೋಮಾನವನ್ನು ೧೮ಕ್ಕೇರಿಸಿ ೬ ರಿಂದ ೧೮ ವಯಸ್ಸಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕು.

ಅದೇ ರೀತಿಯಾಗಿ ಕಾರ್ಖಾನೆ ಅಧಿನಿಯಮ, ಬಾಲಕಾರ್ಮಿಕ ಪದ್ದತಿ (ನಿಶೇಧ ಮತ್ತು ನಿಯಂತ್ರಣ) ಕಾಯಿದೆ ಭಾರತೀಯ ದಂಡ ಸಂಹಿತೆ ಸೆಕ್ಷನ್ ೩೭೫ ಮುಂತಾದ ಕಾನೂನುಗಳನ್ನು ತಿದ್ದು ಪಡಿ ಮಾಡಿ ೧೮ ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ರಕ್ಷಣೆ ನೀಡಬೇಕು.

೩.೨ ಪ್ರಸ್ತುತ ಮಕ್ಕಳ ಸ್ಥಿತಿಗತಿ

ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಮಕ್ಕಳ ಸ್ಥಿತಿಗತಿ ಕುರಿತು ಅಧ್ಯಯನ ಮಾಡಲು ಚೈಲ್ಡ್ ರೈಟ್ಸ್ ಟ್ರಸ್ಟ್ ನೆರವಿನೊಂದಿಗೆ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು. ಹೀಗೆ ಅಧ್ಯಯನಕ್ಕೆ ತೊಡಗಿದಾಗ ಮಕ್ಕಳ ಹಕ್ಕುಗಳ ಹಿನ್ನಲೆಯಲ್ಲಿ ಮಕ್ಕಳ ಸ್ಥಿತಿಗತಿಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ಸಂಗ್ರಹಿಸಲಾಯಿತು. ಈ ರೀತಿ ಮಾಹಿತಿ ಸಂಗ್ರಹಿಸುವಾಗ ಸಂಬಂಧಪಟ್ಟ ಎಲ್ಲರ ನೆರವನ್ನು ಪಡೆಯಲಾಯಿತು. ಶ್ರೀಧರಗಡ್ಡೆ ಪಂಚಾಯ್ತಿ ವ್ಯಾಪ್ತಿಯ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಕಿರಿಯ ಆರೋಗ್ಯ ಮಹಿಳಾ ಸಹಾಯಕಿ ಶಲಾಶಿಕ್ಷಕರು ಗ್ರಾಮಪಂಚಾಯ್ತಿ ಕಾರ್ಯದರ್ಶಿಗಳು ನ್ಯಾಯಬೆಲೆ ಅಂಗಡಿಯವರು ಮತ್ತು ಸಮುದಾಯ ಸಂಘ, ಸಂಸ್ಥೆಯಯವರು ನೀಡಿರುವ ಅಂಕಿಅಂಶಗಳ ಆಧಾರದ ಮೇಲೆ ಪ್ರಸ್ತುತ ಮಕ್ಕಳ ಸ್ಥಿತಿಗತಿಯನ್ನು ವಿಶ್ಲೇಷಣೆ ಮಾಡಲಾಗಿದೆ.

೧. ಶ್ರೀಧರಗಡ್ಡೆ ಗ್ರಾಮಪಂಚಾಯಿತಿಯ ವಿವರ

ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿಯು ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆಯ ವ್ಯಾಪ್ತಿಗೊಳಪಡುತ್ತದೆ. ಇದು ತಾಲೂಕು ಕೇಂದ್ರದಿಂದ ೮ಕಿ.ಮೀ ದೂರದಲ್ಲಿದೆ. ಈ ಗ್ರಾಮಕ್ಕೆ ಬರಬೇಕಾದರೆ ತಾಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ಹೋಗಬೇಕು. ಶ್ರೀಧರಗಡ್ಡೆ ಗ್ರಾಮವನ್ನು ಕೇಂದ್ರವಾಗಿಸಿಕೊಂಡು ವ್ಯಾಪ್ತಿಯನ್ನು ಹೇಳುವುದಾದರೆ. ವಾಯುವ್ಯ ದಿಕ್ಕಿಗೆ ಲಕ್ಷ್ಮಿನಗರ ಕ್ಯಾಂಪ್, ಈಶಾನ್ಯ ದಿಕ್ಕಿಗೆ ಜಾಲಿಬೆಂಚೆ ಗ್ರಾಮ, ಮತ್ತು ದಕ್ಷಿಣ ದಿಕ್ಕಿನಲ್ಲಿ

ಗುಡಾರ ನಗರ ಮತ್ತು ಶ್ರೀಧರಗಡ್ಡೆ ಸೇರಿ ಒಟ್ಟು ನಾಲ್ಕು ಗ್ರಾಮಗಳನ್ನು ಒಳಗೊಂಡಿದೆ. ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿಯ ಗಡಿ ಗ್ರಾಮಗಳಾಗಿ ಪೂರ್ವಕ್ಕೆ ಕಪ್ಪಗಲ್ಲು, ಶಿರಿವಾರ ಗ್ರಾಮಗಳು ಬಂದರೆ, ಪಶ್ಚಿಮಕ್ಕೆ ಕೊಳಗಲ್ಲು ಗ್ರಾಮ ಬರುತ್ತದೆ. ದಕ್ಷಿಣಕ್ಕೆ ಜಿಲ್ಲಾ ಕೇಂದ್ರವಾದ ಬಳ್ಳಾರಿ ಬಂದರೆ ಉತ್ತರಕ್ಕೆ ಕೊರ್ಲಗುಂದಿ ಗ್ರಾಮ ಬರುತ್ತದೆ.

ಶ್ರೀಧರಗಡ್ಡೆ ಎಂಬ ಹೆಸರು ಈ ಗ್ರಾಮಕ್ಕೆ ಹೇಗೆ ಬಂತು ಎಂಬುದಕ್ಕೆ ಆ ಗ್ರಾಮದ ಹಿರಯರೂ ನಿವೃತ್ತ ಶಿಕ್ಷಕರೂ ಆಗಿರುವ ಶ್ರೀಯುತ ವಿರುಪಾಕ್ಷಗೌಡರು. ತುಂಬ ಸ್ವಾರಸ್ಯವಾಗಿ ವಿವರಿಸುತ್ತಾರೆ. ಪೂರ್ವ ದಿಕ್ಕಿನಿಂದ ಹರಿದು ಬರುವ ಹಗರಿ ಮತ್ತು ಪಶ್ಚಿಮ ದಿಂದ ಹರಿದು ಬರುವ ಹಳ್ಳಗಳು ಉತ್ತರ ದಿಕ್ಕಿನಲ್ಲಿ ಸಂಧಿಸಿ ನಡುಗಡ್ಡೆಯನ್ನು ಸೃಷ್ಟಿಸಿದ್ದವು. ಇದು ಆಗಿನ ಋಷಿ ಮುನಿಗಳಿ ವಾಸಕ್ಕೆ ಯೋಗ್ಯ ಸ್ಥಾನವಾಗಿತ್ತು. ಮತ್ತು ಇಲ್ಲಿ ಗೆಡ್ಡೆ ಗೆಣಸುಗಳು ಯಥೇಚ್ಛವಾಗಿ ಸಿಗುತ್ತಿದ್ದವು. ಹೀಗಾಗಿ ಋಷಿಮುನಿಗಳು ವಾಸಕ್ಕೆ ಯೋಗ್ಯವಾದ ಸ್ಥಳವೆಂದು ಈ ನಡುಗಡ್ಡೆಯನ್ನು ಆಯ್ಕೆ ಮಾಡಿಕೊಂಡರು. ಈ ಋಷಿಮುನಿಗಳ ವಾಸಸ್ಥಾನದಿಂದಾಗಿ ಈ ಭಾಗಕ್ಕೆ 'ಸಿದ್ದರ ಗಡ್ಡೆ' ಎಂದು ಜನರು ಕರೆಯಲಾರಂಭಿಸಿದರು ಕಾಲಕ್ರಮೇಣ ಅದು 'ಶ್ರೀಧರಗಡ್ಡೆ' ಎಂಬ ನಾಮವಾಗಿ ಪರಿವರ್ತನೆಯಾಯಿತೆಂದು ಅಭಿಪ್ರಾಯ ಪಡುತ್ತಾರೆ.

ಎ. ಜನಸಂಖ್ಯೆ ಮಾಹಿತಿ

ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು ೨೦೧೪ ಕುಟುಂಬಗಳಿವೆ. ಈ ಗ್ರಾಮ ಪಂಚಾಯಿತಿಯಲ್ಲಿ ಒಟ್ಟು ೧೦,೪೭೫ ಜನಸಂಖ್ಯೆಯನ್ನು ಹೊಂದಿದೆ. ಅದರಲ್ಲಿ ೫೩೫೦ ಪುರುಷರು ಮತ್ತು ೫೧೨೫ ಮಹಿಳೆಯರಿದ್ದಾರೆ. ಜಾಲಿಬೆಂಚಿ ಗ್ರಾಮದಲ್ಲಿ ೯೬೮ ಪುರುಷರು ಮತ್ತು ೯೩೮ ಮಹಿಳೆಯರಿದ್ದಾರೆ. ಅದೇ ರೀತಿ ಲಕ್ಷ್ಮಿನಗರ ಕ್ಯಾಂಪ್‌ನಲ್ಲಿ ೩೬೦ಪುರುಷರು ಮತ್ತು ೩೨೦ ಮಹಿಳೆಯರಿದ್ದಾರೆ. ಶ್ರೀಧರಗಡ್ಡೆ ಮತ್ತು ಗುಡಾರನಗರ ಗ್ರಾಮದಲ್ಲಿ ೪೦೨೨ ಜನ ಪುರುಷರು ಮತ್ತು ೩೮೬೭ ಮಹಿಳೆಯರಿದ್ದಾರೆ. ಗುಡಾರ ನಗರದ ಜನ ಸಂಖ್ಯೆಯ ಬಗ್ಗೆ ಪ್ರತ್ಯೇಕವಾದ ಮಾಹಿತಿ ಇಲ್ಲ.

ಬಿ. ಆರ್ಥಿಕ ಸ್ಥಿತಿ

ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎಲ್ಲಾ ಹಳ್ಳಿಗಳ ಜಮೀನಿಗೆ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ವರ್ಷಕ್ಕೆ ಆರು ತಿಂಗಳ ಕಾಲ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಈ ಗ್ರಾಮದ ಬಹುತೇಕ ಜನರು ಕೃಷಿಯನ್ನು ಅವಲಂಭಿಸಿದ್ದಾರೆ. ಈ ಭಾಗದಲ್ಲಿ ಭತ್ತ, ಹತ್ತಿ, ಮೆಕ್ಕೆ ಜೋಳ, ಮೆಣಸಿನಕಾಯಿ, ಹೈಬ್ರಿಡ್ ಜೋಳ, ಹೆಸರು, ಹಲಸಂದಿ ಮುಂತಾದ ಬೆಳೆಗಳನ್ನು ಯಥೇಚ್ಛವಾಗಿ ಬೆಳೆಯುತ್ತಾರೆ. ಇಲ್ಲಿರುವ ಜಮೀನು ಎಲ್ಲಾ ವರ್ಗದವರಿಗೆ ಸಮಾನವಗಿ ಹಂಚಿಕೆಯಾಗಿಲ್ಲ. ಆದ್ದರಿಂದ ಇಲ್ಲಿ ಬಡವ, ಶ್ರೀಮಂತ ಎಂಬ ವರ್ಗಗಳು ಸೃಷ್ಠಿಯಾಗಿವೆ.

ಈ ಪಂಚಾಯಿತಿ ವ್ಯಾಪ್ತಿಗೆ ಬರುವ ಎಲ್ಲಾ ಹಳ್ಳಿಗಳಲ್ಲಿ ಒಂದೊಂದು ಸಮುದಾಯದವರು ಬಹುತೇಕ ಒಂದೇ ಕಡೆ ನೆಲೆ ನಿಂತಿರುವುದು ಇಲ್ಲಿನ ವಿಶೇಷ. ಲಕ್ಷ್ಮಿನಗರ ಕ್ಯಾಂಪ್ ಎಂಬ ಹೆಸರೇ ಸೂಚಿಸುವಂತೆ, ಇಲ್ಲಿ ಆಂಧ್ರದ ಕಮ್ಮಾ (ರೆಡ್ಡಿ) ಸಮುದಾಯದವರು ವಲಸೆ ಬಂದು ನೆಲೆ ನಿಂತಿದ್ದಾರೆ. ಈ ಸಮುದಾಯದವರ ೧೧೦ ಮನೆಗಳು ಇವೆ. ಪ್ರಸ್ತುತ ಈ ಭಾಗದಲ್ಲಿಯೇ ಜಮೀನುಗಳನ್ನು ಖರೀದಿ ಮಾಡಿ ನೀರಾವರಿ ವ್ಯವಸ್ಥೆಗೊಳಪಡಿಸಿ ಬೆಳೆಯನ್ನು ಬೆಳೆಯುತ್ತಿದ್ದಾರೆ. ರೆಡ್ಡಿ ಸಮುದಾಯದ ಹೊಲಗಳಲ್ಲಿ ಕೆಲಸಕ್ಕೆಂದು ಬೇರೆ ಬೇರೆ ಜಿಲ್ಲೆಗಳ ಹಳ್ಳಿಗಳಿಂದ ಬಹುತೇಕರು ವಲಸೆ ಬಂದಿದ್ದಾರೆ. ಇವರು ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡದವರಾಗಿದ್ದು ಒಟ್ಟು ೨೫ ಕುಟುಂಬಗಳನ್ನು ಹೊಂದಿದ್ದಾರೆ. ಇವರು ಸುಗ್ಗಿಯ ನಂತರ ತಮ್ಮ ಹಳ್ಳಿಗಳಿಗೆ ಮರಳುತ್ತಾರೆ ಜಾತಿ ಪದ್ದತಿ ಈ ಗ್ರಾಮದಲ್ಲಿ ಜಾರಿಯಲ್ಲಿದೆ.

ಶ್ರೀಧರಗಡ್ಡೆ ಗ್ರಾಮದ ಪಕ್ಕದಲ್ಲಿರುವ ಇನ್ನೊಂದು ಹಳ್ಳಿ ಗುಡಾರ ನಗರ. ಈ ಹಳ್ಳಿಯಲ್ಲಿ ವಾಸವಾಗಿರುವ ಜನರು ಮೂಲತಃ ಅಲೆಮಾರಿ ಜನಾಂಗದವರು ಈ ಅಲೆಮಾರಿ ಜನಾಂಗದವರನ್ನು ಗುರುತಿಸಿ, ಅವರಿಗೆ ಒಂದು ಕಡೆ ನೆಲೆ ನಿಲ್ಲಲು ಸರಕಾರವೇ ೨೩೦ ಮನೆಗಳನ್ನು ನಿರ್ಮಾಣ ಮಾಡಿಕೊಟ್ಟಿದೆ. ಇಲ್ಲಿ ಕೊರಮ, ಶಿಳ್ಳೆಕ್ಯಾತ, ಗೋಸಂಗಿ, ಸಿಂಧೋಳ, ಬುಡಗಜಂಗಮ ಜನಾಂಗದವರು ವಾಸವಾಗಿದ್ದಾರೆ. ಮೇಲಿನ ಐದು ಸಮುದಾಯದವರು ಸಮ ಪ್ರಮಾಣದಲ್ಲಿ ವಾಸವಾಗಿದ್ದಾರೆ. ಅವರ ಮೂಲ ಕಸುಬಾದ ಬುಟ್ಟಿ ಹೆಣೆಯುವುದು, ಪೊರಕೆ ಮಾರುವುದು, ಪ್ಲಾಸ್ಟಿಕ್ ಸಾಮಾನು ಮಾರುವುದು, ಮೀನುಹಿಡಿಯುವುದು, ಕೂದಲು, ಪೌಡರ್ ಮತ್ತು ಹೇರ್‌ಪಿನ್ ಮಾರುವುದನ್ನು ಕೈಬಿಟ್ಟಿಲ್ಲ. ಹೀಗಾಗಿ ಈ ಸಮುದಾಯದವರು ತಿಂಗಳಿಗೊಮ್ಮೆ, ಎರಡು ತಿಂಗಳಿಗೊಮ್ಮೆ ಬಂದು ಹೋಗುತ್ತಾರೆ. ಇವರಿಗೆ ಒಂದು ಕಡೆ ನೆಲೆ ನಿಂತು ಜೀವನ ಮಾಡಲು ಯಾವುದೇ ಆಧಾರವಿಲ್ಲ ಇದರಿಂದ ಅವರ ಅಲೆಮಾರಿತನದಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

ಗ್ರಾಮ ಪಂಚಾಯಿತಿಯ ಕಾರ್ಯಾಲಯವಿರುವ ಶ್ರೀಧರಗಡ್ಡೆಯಲ್ಲಿ ೧೨೭೦ ಕುಟುಂಬಗಳಿವೆ ಇದರಲ್ಲಿ ರೆಡ್ಡಿ, ಗೌಡ ಮತ್ತು ಲಿಂಗಾಯಿತ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರ ಜೊತೆಗೆ ಅಲ್ಪ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಇತರೆ ವರ್ಗದವದ್ದಾರೆ. ಲಿಂಗಾಯಿತ ಮತ್ತು ಗೌಡ ಸಮುದಾಯದವರಲ್ಲಿ ಬಹುತೇಕ ಜಮೀನು ಕೇಂದ್ರಿಕೃತವಾಗಿದೆ. ಇದರಿಂದ ಬಡವ ಶ್ರೀಮಂತರ ಮಧ್ಯೆ ಅಂತರ ಹೆಚ್ಚಾಗಿದೆ. ಜಾತಿ ಪದ್ಧತಿ, ಮೂಢನಂಬಿಕೆ, ಬಡವರ ಶೋಷಣೆ ಈ ಗ್ರಾಮದಲ್ಲಿ ಹೆಚ್ಚಾಗಿದೆ.

ಜಾಲಿಬೆಂಚಿ ಗ್ರಾಮದಲ್ಲಿ ಬಹುತೇಕ ಪಿಂಜಾರ್/ನದಾಫ್ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿರುವುದು ಇಲ್ಲಿನ ವಿಶೇಷ. ಇವರ ಜೊತೆಗೆ ಕುರುಬ, ಗೊಲ್ಲ, ಗೌಡ, ಲಿಂಗಾಯಿತ ಸಮುದಾಯದವರು ವಾಸವಾಗಿದ್ದಾರೆ. ಪರಿಶಿಷ್ಟ ಜಾತಿ ಮತ್ತು

ಪರಿಶಿಷ್ಟ ಪಂಗಡದವರು ಈ ಭಾಗದಲ್ಲಿ ವಾಸವಾಗಿದ್ದಾರೆ. ಒಟ್ಟು ೩೮೪ ಕುಟುಂಬಗಳು ಈ ಗ್ರಾಮದಲ್ಲಿವೆ. ಒಟ್ಟಾರೆ ಇಲ್ಲಿಯ ಜನರು ಕೃಷಿಯನ್ನೇ ಪ್ರಧಾನವಾಗಿ ಅವಲಂಬಿಸಿದ್ದಾರೆ.

ಸಿ. ಸಾಮಾಜಿಕ ಸ್ಥಿತಿ

ಈ ಗ್ರಾಮ ಪಂಚಾಯತಿ ವ್ಯಾಪ್ತಿಯೊಳಗೆ ಜಾತಿಪದ್ಧತಿಯು ಬಲವಾಗಿ ಬೇರೂರಿದೆ ಜಾತಿಗೆ ಅನುಗುಣವಾಗಿ ಅವರ ಕುಲಕಸುಬುಗಳು ಮುಂದುವರೆದಿವೆ. ಈ ಕುಲಕಸುಬಿನಿಂದಾಗಿ ವರ್ಗದ ಅಂತರ ಹೆಚ್ಚಾಗಿದೆ. ಈ ಗ್ರಾಮಗಳಲ್ಲಿ ದೇವದಾಸಿ ಪದ್ಧತಿ, ಜಾರಿಯಲ್ಲಿದೆ, ಬಾಲ್ಯವಿವಾಹಗಳು ಇಲ್ಲಿ ಸರ್ವೇಸಾಮಾನ್ಯ ಎಂಬಂತೆ ಕಾಣಿಸುತ್ತದೆ. ಹೆಣ್ಣು ಮಕ್ಕಳಿಗೆ ತಾರತಮ್ಯ ಅನುಸರಿಸುವುದು ಕಂಡುಬರುತ್ತದೆ. ಗಂಡು ಮಕ್ಕಳಿಗೆ ಶಿಕ್ಷಣ ಕೊಡಿಸಿದರೆ ಹೆಣ್ಣು ಮಕ್ಕಳಿಗೆ ಮನೆಕೆಲಸ ಹೊಲದ ಕೆಲಸ ಮಾಡಿಸಿ ಶಿಕ್ಷಣ, ಉತ್ತಮ ಆರೋಗ್ಯದಿಂದ ವಂಚಿತರನ್ನಾಗಿ ಮಾಡಿದ್ದಾರೆ. ಒಟ್ಟಾರೆ ಈ ಗ್ರಾಮದಲ್ಲಿ ಜಾತಿ ಪದ್ದತಿ, ಲಿಂಗತಾರತಮ್ಯ, ವರ್ಗತಾರತಮ್ಯ ಮುಂದುವರೆದಿದೆ.

೨. ಸೇವಾ ಸೌಲಭ್ಯಗಳು

ಎ. ಪ್ರಾಥಮಿಕ ಆರೋಗ್ಯ ಉಪಕೇಂದ್ರ

ಪ್ರಾಥಮಿಕ ಆರೋಗ್ಯ ಉಪಕೇಂದ್ರವನ್ನು ಶ್ರೀಧರಗಡ್ಡೆ ಗ್ರಾಮದಲ್ಲಿ ಕಟ್ಟಲಾಗಿದೆ. ಈ ಉಪಕೇಂದ್ರವು ವಕ್ರಾಣಿ ಕ್ಯಾಂಪ್, ಗುಡಾರನಗರ, ಶ್ರೀಧರಗಡ್ಡೆ, ಲಕ್ಷ್ಮಿನಗರ ಕ್ಯಾಂಪ್ ಮತ್ತು ಜಾಲಿಬೆಂಚಿ ಗ್ರಾಮಗಳಿಗೆ ವ್ಯಾಪ್ತಿಯನ್ನು ಹೊಂದಿದೆ. ಈ ಉಪಕೇಂದ್ರದಲ್ಲಿ ಒಬ್ಬ ಕಿರಿಯ ಆರೋಗ್ಯ ಮಹಿಳಾ ಸಹಾಯಕಿ ಇರುತ್ತಾರೆ. ಇವರು ಈ ಐದು ಹಳ್ಳಿಗಳನ್ನು ಮೇಲುಸ್ತುವಾರಿ ಮಾಡುತ್ತಾರೆ.

ಬಿ. ಅಂಗನವಾಡಿ ಕೇಂದ್ರ

ಶ್ರೀಧರಗಡ್ಡೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಒಟ್ಟು ೧೧ ಅಂಗನವಾಡಿ ಕೇಂದ್ರಗಳಿವೆ. ಶ್ರೀಧರಗಡ್ಡೆ ಗ್ರಾಮದಲ್ಲಿ ೬, ಗುಡಾರ ನಗರದಲ್ಲಿ ೨, ಲಕ್ಷಿನಗರ ಕ್ಯಾಂಪಿನಲ್ಲಿ ೧, ಮತ್ತು ಜಾಲಿಬೆಂಚಿ ಗ್ರಾಮದಲ್ಲಿ ೨, ಅಂಗನವಾಡಿ ಕೇಂದ್ರಗಳಿವೆ.

ಸಿ. ಶಾಲೆಗಳು

ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ೧ ಪ್ರೌಢಶಾಲೆ, ೨ ಸ.ಹಿ.ಪ್ರಾ.ಶಾಲೆ, ೨ ಸ.ಕಿ.ಪ್ರಾ. ಶಾಲೆ ಮತ್ತು ಒಂದು ಖಾಸಗೀ ಕಿರಿಯ ಪ್ರಾಥಮಿಕ ಶಾಲೆ ಹೊಂದಿದೆ. ಪಂಚಾಯಿತಿ ಕೇಂದ್ರ ಸ್ಥಾನವಾದ ಶ್ರೀಧರಗಡ್ಡೆಯಲ್ಲಿ ಒಂದು ಪ್ರೌಢಶಾಲೆ, ಒಂದು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಮತ್ತು ಒಂದು ಖಾಸಗೀ ಶಾಲೆಯಿದೆ. ಜಾಲಿಬೆಂಚಿ ಗ್ರಾಮದಲ್ಲಿ ಒಂದು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಇದೆ. ಗುಡಾರನಗರ ಮತ್ತು ಲಕ್ಷ್ಮಿನಗರದಲ್ಲಿ ತಲಾ ಒಂದೊಂದು ಸ.ಕಿ.ಪ್ರಾ.ಶಾಲೆಗಳನ್ನು ತೆರೆಯಲಾಗಿದೆ.

ಡಿ. ನ್ಯಾಯ ಬೆಲೆ ಅಂಗಡಿ

ನ್ಯಾಯಬೆಲೆ ಅಂಗಡಿಯು ಶ್ರೀಧರಗಡ್ಡೆ ಗ್ರಾಮದಲ್ಲಿದೆ. ಇದರ ಮೇಲುಸ್ತುವಾರಿಯನ್ನು ಹೆಚ್.ಎಂ. ಅಮರಯ್ಯ ಎನ್ನುವವರು ಮಾಡುತ್ತಾರೆ. ಮತ್ತೊಂದು ನ್ಯಾಯಬೆಲೆ ಅಂಗಡಿ ಜಾಲಿಬೆಂಚಿ ಗ್ರಾಮದಲ್ಲಿದೆ. ಈ ನ್ಯಾಯಬೆಲೆ ಅಂಗಡಿಯ ಪ್ರಯೋಜನ ಪಡೆಯುತ್ತಿರುವ ಒಟ್ಟು ಕುಟುಂಬಗಳು ೧೫೩೩ ಇವೆ. ಇದರಲ್ಲಿ ಬಡತನರೇಖೆಯ ಕೆಳಗಿರುವ ಕುಟುಂಬಗಳು ೬೫೦ ಇವೆ. ಬಡತನ ರೇಖೆಯ ಮೇಲಿರುವ ಕುಟುಂಬಗಳು ೬೦೦ ಇವೆ. ಮತ್ತು ೨೮೩ ಕುಟುಂಬಗಳು ತಾತ್ಕಾಲಿಕ ಪಡಿತರ ಚೀಟಿ ಹೊಂದಿವೆ. ಸುತ್ತಲಿನ ನಾಲ್ಕು ಹಳ್ಳಿಯ ಜನರಿಗೆ ಈ ನ್ಯಾಯ ಬೆಲೆ ಅಂಗಡಿಯು ಉಪಯೋಗವಾಗುತ್ತದೆ.

೩. ಗ್ರಾಮ ಪಂಚಾಯಿತಿಯ ಮಕ್ಕಳ ಸ್ಥಿತಿಗತಿ

ಎ. ಗ್ರಾಮ ಪಂಚಾಯತಿಯ ಒಟ್ಟು ಮಕ್ಕಳು

ಒಟ್ಟು ಜನಸಂಖ್ಯೆಯಲ್ಲಿ ಮಕ್ಕಳೆಷ್ಟು?			
ವಯೋಮಾನ	ಗಂಡು	ಹೆಣ್ಣು	ಒಟ್ಟು
೦-೩ವರ್ಷ	೦೩೩೯	೦೩೫೯	೬೯೮
೩-೬ವರ್ಷ	೦೩೮೬	೦೩೪೨	೬೬೮
೬-೧೪ವರ್ಷ	೦೫೦೭	೦೪೬೦	೯೬೭
೧೪-೧೮ವರ್ಷ	೦೨೨೫	೦೨೨೦	೪೪೫
ಒಟ್ಟು ಮಕ್ಕಳು	೧೩೯೭	೧೩೮೧	೨೭೭೮
೧೮-೨೧ವರ್ಷ	೦೧೩೦	೦೧೨೫	೦೨೫೫
೨೧-೬೦ವರ್ಷ	೫೨೨೦	೫೦೦೦	೧೦೨೨೦
೬೦ ದಾಟಿದವರು	–	–	–
ಒಟ್ಟು ಮತದಾರರು	೫೩೫೦	೫೧೨೫	೧೦,೪೭೫
ಒಟ್ಟು ಜನಸಂಖ್ಯೆ	೬೭೪೭	೬೫೦೬	೧೨,೨೫೩
ಒಟ್ಟು ಮನೆಗಳ ಸಂಖ್ಯೆ	–	–	–

ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ೦–೩ ವರ್ಷದ ೬೯೮ ಮಕ್ಕಳಿದ್ದಾರೆ. ಅದರಲ್ಲಿ ೩೩೯ ಗಂಡು ಮತ್ತು ೩೫೯ ಹೆಣ್ಣು ಮಕ್ಕಳಿದ್ದಾರೆ. ೩–೬ವರ್ಷದ ಮಕ್ಕಳಲ್ಲಿ ೩೨೬ ಗಂಡು ಮತ್ತು ೩೪೨ ಹೆಣ್ಣು ಮಕ್ಕಳಿದ್ದಾರೆ. ಒಟ್ಟಾರೆ ಈ ವಯೋಮಾನದ ಮಕ್ಕಳ ಸಂಖ್ಯೆ ೬೬೮ ಆಗಿದೆ. ೬ರಿಂದ ೧೪ವರ್ಷದೊಳಗಿನ ಒಟ್ಟು ಮಕ್ಕಳ ಪ್ರಮಾಣ ೯೬೭ಇದ್ದರೆ, ಅದರಲ್ಲಿ ಗಂಡು ಮಕ್ಕಳು ೫೦೭ ಮತ್ತು ಹೆಣ್ಣು ಮಕ್ಕಳು ೪೬೦ಇದ್ದಾರೆ. ಅದೇ ರೀತಿಯಾಗಿ ೧೪ರಿಂದ ೧೮ವರ್ಷದ ಒಟ್ಟು ೪೪೫ ಮಕ್ಕಳಿದ್ದಾರೆ. ಅದರಲ್ಲಿ ೨೨೫ ಗಂಡು ಮತ್ತು ೨೨೦ ಹೆಣ್ಣು ಮಕ್ಕಳಿದ್ದಾರೆ.

ಬಿ. ರೋಗ ನಿರೋಧಕ ಲಸಿಕೆ ಪಡೆದ ಮಕ್ಕಳು

ರೋಗ ನಿರೋಧಕ ಲಸಿಕೆ ಪಡೆದ ಮಕ್ಕಳು				
ವಯೋಮಾನ	ಗಂಡು	ಹೆಣ್ಣು	ಒಟ್ಟು	ರೋಗ ನಿರೋಧಕ ಪಡೆದವರು
೦–೩ ವರ್ಷ	೦೩೩೯	೦೩೫೯	೬೯೮	೬೦೬
೩–೬ ವರ್ಷ	೦೩೨೬	೦೩೪೨	೬೬೮	೫೯೨
೬–೧೪ವರ್ಷ	೦೫೦೭	೦೪೬೦	೯೬೭	೮೧೬
ಒಟ್ಟು ಮಕ್ಕಳು	೧೩೯೭	೧೩೮೧	೨೭೭೮	೨೩೪೫
೧೮–೨೧ವರ್ಷ	೦೧೩೦	೦೧೨೫	೦೨೫೫	–
೨೧–೬೦ವರ್ಷ	೫೨೨೦	೫೦೦೦	೧೦,೨೨೦	–
೬೦ ದಾಟಿದವರು	–	–	–	–
ಒಟ್ಟು ಮತದಾರರು	೫೩೫೦	೫೧೨೫	೧೦,೪೭೫	–
ಒಟ್ಟು ಜನಸಂಖ್ಯೆ	೬೭೪೭	೬೫೦೬	೧೩,೨೫೩	–
ಒಟ್ಟು ಮನೆಗಳ ಸಂಖ್ಯೆ	–	–	–	–

ಮಕ್ಕಳು ಆರೋಗ್ಯವಂತರಾಗಿ ಬೆಳೆಯಬೇಕು ಹಾಗೆ ಆಗಬೇಕೆಂದರೆ ರೋಗ ನಿರೋಧಕ ಲಸಿಕೆಗಳು, ಪೌಷ್ಟಿಕ ಆಹಾರ ಕಾಲಕಾಲಕ್ಕೆ ಪಡೆಯಬೇಕು. ರೋಗ ನಿರೋಧಕ ಲಸಿಕೆಗಳಾದ ಬಿ.ಸಿ.ಜಿ., ಓ.ಪಿ.ವಿ, ಡಿ.ಪಿ.ಟಿ., ಮೀಜಲ್ಸ್, ಪೋಲಿಯೋ ಲಸಿಕೆಗಳನ್ನು ಹಾಕಿಸಿ ಮಕ್ಕಳಿಗೆ ಮುಂದೆ ಆಗಬಹುದಾದ ಅಂಗವಿಕಲತೆ, ದೃಷ್ಟಿದೋಷ, ಗಂಟಲು ಮಾರಿ, ನಾಯಿಕೆಮ್ಮು, ಮುಂತಾದ ರೋಗಗಳನ್ನು ತಡೆಹಿಡಿಯಬಹುದು. ಈ ಎಲ್ಲಾ ಕಾರಣಗಳಿಂದ ರೋಗ ನಿರೋಧಕ ಲಸಿಕೆಗಳು ಅಗತ್ಯವಾಗಿ ಬೇಕಾಗುತ್ತದೆ.

ಪ್ರಸ್ತುತ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎಲ್ಲಾ ಮಕ್ಕಳಿಗೆ ರೋಗನಿರೋಧಕ ಲಸಿಕೆ ದೊರೆತಿವೆಯೇ ಎಂಬುದನ್ನು ನೋಡಿದಾಗ ಈ ರೀತಿಯಾಗಿ ಕಂಡುಬರುತ್ತದೆ. ಸೊನ್ನೆಯಿಂದ-೩ರ ವಯೋಮಾನದ ೬೯೮ ಮಕ್ಕಳಲ್ಲಿ ೬೦೬ ಮಕ್ಕಳು ಮಾತ್ರ ರೋಗ ನಿರೋಧಕ ಲಸಿಕೆ ಪಡೆದಿದ್ದಾರೆ. ಉಳಿದ ೯೨ ಮಕ್ಕಳು ರೋಗ ನಿರೋಧಕ ಲಸಿಕೆ ಪಡೆದಿಲ್ಲ. ಅದೇ ರೀತಿಯಾಗಿ ೩-೬ರ ವಯೋಮಾನದ ೬೬೮ ಮಕ್ಕಳಲ್ಲಿ ಕೇವಲ ೫೯೨ಮಕ್ಕಳು ಮಾತ್ರ ರೋಗ ನಿರೋಧಕ ಲಸಿಕೆ ಪಡೆದಿದ್ದಾರೆ. ಉಳಿದ ೭೬ಮಕ್ಕಳು ರೋಗ ನಿರೋಧಕ ಲಸಿಕೆಯಿಂದ ವಂಚಿತರಾಗಿದ್ದಾರೆ. ಅದೇ ರೀತಿಯಾಗಿ ೬-೧೪ ವಯೋಮಾನದ ೯೬೭ ಮಕ್ಕಳಲ್ಲಿ ಆರೋಗ್ಯ ತಪಾಸಣೆ ಮಾಡಿಸಿಕೊಂಡ ಮಕ್ಕಳು ಕೇವಲ ೮೧೬ ಮಾತ್ರ ಇನ್ನುಳಿದ ೧೫೧ ಮಕ್ಕಳು ಆರೋಗ್ಯ ತಪಾಸಣೆಯಿಂದ ವಂಚಿತರಾಗಿದ್ದಾರೆ. ೧೪ರಿಂದ ೧೮ ವಯೋಮಾನದ ೪೪೫ ಮಕ್ಕಳಲ್ಲಿ ೩೩೧ ಮಕ್ಕಳು ಮಾತ್ರ ಆರೋಗ್ಯ ತಪಾಸಣೆ ಮಾಡಿಸಿಕೊಂಡಿದ್ದಾರೆ. ಉಳಿದ ೧೧೪ ಮಕ್ಕಳು ಆರೋಗ್ಯ ತಪಾಸಣೆಯಿಂದ ವಂಚಿತರಾಗಿದ್ದಾರೆ. ಒಟ್ಟು ೩೪೧ ಮಕ್ಕಳು ರೋಗ ನಿರೋಧಕ ಲಸಿಕೆ ಮತ್ತು ಆರೋಗ್ಯ ತಪಾಸಣೆಯಿಂದ ವಂಚಿತರಾಗಿದ್ದಾರೆ.

ಸಿ. **ಅಂಗನವಾಡಿ ಕೇಂದ್ರದ ಮಕ್ಕಳ ಸ್ಥಿತಿಗತಿ**

ಮಕ್ಕಳ ಅಭಿವೃದ್ಧಿ			
ಅಂಗನವಾಡಿಗಳ ಸಂಖ್ಯೆ : ೧೧	ಗಂಡು	ಹೆಣ್ಣು	ಒಟ್ಟು
ಅಂಗನವಾಡಿಗಳಲ್ಲಿ ದಾಖಲಾದ ಮಕ್ಕಳು	೨೧೮	೨೨೫	೪೪೩
ಇತರ ಪ್ರಾಥಮಿಕ ಪೂರ್ವ ಶಾಲೆಗಳಿಗೆ ದಾಖಲಾದ ಮಕ್ಕಳು	-	-	-
ಹಾಜರಾಗುತ್ತಿರುವ ಮಕ್ಕಳ ಸಂಖ್ಯೆ ದಾಖಲು ಮಾಡಿದ ಪ್ರಕರಣ	೧೬೫	೧೫೭	೩೨೨

ಅಂಗನವಾಡಿ ಮತ್ತು ಶಿಕ್ಷಣದಿಂದ ಹೊರಗುಳಿದಿರುವ ಮಕ್ಕಳು			
ವಯೋಮಾನ	ಗಂಡು	ಹೆಣ್ಣು	ಒಟ್ಟು
೦–೩ವರ್ಷ	೩೩೯	೩೫೯	೬೯೮
೩–೬ವರ್ಷ	೧೬೧	೧೮೫	೩೪೬
೬–೧೪ವರ್ಷ	೬೪	೭೪	೧೩೮
೧೪–೧೮ವರ್ಷ	೪೨	೬೪	೧೦೬
ದುಡಿಮೆಯಲ್ಲಿರುವ ಮಕ್ಕಳ ಸಂಖ್ಯೆ	–	–	–
ಅನಾಥ ಮಕ್ಕಳು	೨	–	–
ಕಾಣೆಯಾದ, ಓಡಿಹೋದ, ಸಾಗಣೆಯಾದ	–	–	–
ಮಕ್ಕಳ ಸಂಖ್ಯೆ	–	–	–
ಮಕ್ಕಳು ಕಣ್ಮರೆಯಾದ ಬಗ್ಗೆ ಪೋಲೀಸ್ ದೂರು ದಾಖಲು ಮಾಡಿದ ಪ್ರಕರಣ	–	–	–

ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಒಟ್ಟು ೧೧ ಅಂಗನವಾಡಿ ಕೇಂದ್ರಗಳಿವೆ. ಈ ಕೇಂದ್ರಗಳಲ್ಲಿ ೦–೩ ಮತ್ತು ೩–೬ ವಯೋಮಾನದ ಮಕ್ಕಳನ್ನು ದಾಖಲೆ ಮಾಡಿಕೊಳ್ಳುತ್ತಾರೆ. ಪ್ರಸ್ತುತ ಅಂಗನವಾಡಿ ಕೇಂದ್ರಕ್ಕೆ ಬರುವ ೩ರಿಂದ ೬ರ ವಯೋಮಾನದ ಮಕ್ಕಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ೩ ರಿಂದ ೬ ರವರೆಗಿನ ವಯೋಮಾನದ ೬೬೮ ಮಕ್ಕಳಲ್ಲಿ ಅಂದರೆ ೩೨೬ ಗಂಡು ಮತ್ತು ೩೪೨ಹೆಣ್ಣುಮಕ್ಕಳಲ್ಲಿ ಅಂಗನವಾಡಿ ಕೇಂದ್ರಕ್ಕೆ ದಾಖಲಾದವರು ಕೇವಲ ೨೧೮ಗಂಡು ಮತ್ತು ೨೨೫ಹೆಣ್ಣುಮಕ್ಕಳು ಮಾತ್ರ, ಒಟ್ಟಾರೆ ೬೬೮ ಮಕ್ಕಳಲ್ಲಿ ೪೪೩ ಮಕ್ಕಳು ಮಾತ್ರ ಅಂಗನವಾಡಿ ಕೇಂದ್ರದಲ್ಲಿ ದಾಖಲಾಗಿದ್ದಾರೆ. ಇದರಲ್ಲಿ ಹಾಜರಾಗುತ್ತಿರುವವರು ೧೬೫ ಗಂಡು ಮತ್ತು ೧೫೭ ಹೆಣ್ಣು ಮಕ್ಕಳು. ಅಂದರೆ ೩ರಿಂದ ೬ರ ವಯೋಮಾನದ ೬೬೮ ಮಕ್ಕಳಲ್ಲಿ ೩೨೨ ಮಕ್ಕಳು ಮಾತ್ರ ಅಂಗನವಾಡಿ ಸೌಲಭ್ಯವನ್ನು ಪಡೆಯುತ್ತಾರೆ. ಉಳಿದ ೩೪೬ ಮಕ್ಕಳು ಅಂಗನವಾಡಿ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಈ ಅಂಕಿ ಅಂಶಗಳಿಂದ ತಿಳಿದು ಬರುವುದೇನೆಂದರೆ ಅನೇಕ ಮಕ್ಕಳು ಅಂಗನವಾಡಿ ಕೇಂದ್ರದಲ್ಲಿ ದೊರೆಯುವ ಪೌಷ್ಟಿಕ ಆಹಾರದಿಂದ ವಂಚಿತರಾಗಿದ್ದಾರೆ. ಇಂಥ ಮಕ್ಕಳಿಗೆ ಸರಿಯಾದ ಸಮಯಕ್ಕೆ ಚುಚ್ಚುಮದ್ದುಗಳು ಸಿಗದಿರುವುದರಿಂದ ಅನಾರೋಗ್ಯಗೊಂಡು ಅಂಗವಿಕಲತೆ, ದಡಾರ, ಸಿಡುಬು, ಮುಂತಾದ ಕಾಯಿಲೆಗಳಿಗೆ ತುತ್ತಾಗುತ್ತಾರೆ.

ಮಕ್ಕಳ ಹಕ್ಕುಗಳ ಒಡಂಬಡಿಕೆಯ ಹಿನ್ನೆಲೆಯಲ್ಲಿ ಹೇಳುವುದಾದರೆ ಪರಿಚ್ಛೇದ ೬ನ್ನು ಸರ್ಕಾರ ಉಲ್ಲಂಘಿಸಿದಂತಾಗುತ್ತದೆ. ಈ ಪರಿಚ್ಛೇದದ ಪ್ರಕಾರ ಜೀವಿಸುವ ಹಕ್ಕನ್ನು ಈ ಮಕ್ಕಳು ಕಳೆದುಕೊಳ್ಳುತ್ತಾರೆ. ಮತ್ತು ಇಂತಹ ಸ್ಥಿತಿಯಲ್ಲಿರುವ ಮಕ್ಕಳು ಪರಿಚ್ಛೇದ ೨೪ರ ಪ್ರಕಾರ ಆರೋಗ್ಯ ರಕ್ಷಣೆಯಿಂದ ವಂಚಿತರಾಗುತ್ತಾರೆ.

ಡಿ. ಶಾಲಾ ಕಾಲೇಜು ಮಕ್ಕಳ ಸ್ಥಿತಿಗತಿ

ಪ್ರಾಥಮಿಕ ಶಾಲೆಗಳ ಸಂಖ್ಯೆ : ೪	ಗಂಡು	ಹೆಣ್ಣು	ಒಟ್ಟು
ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ	–	–	–
ಪ್ರಾಥಮಿಕ ಶಾಲೆಗಳಿಗೆ ದಾಖಲಾದ ಮಕ್ಕಳು	೪೩೮	೩೮೩	೮೨೧
ಹಾಜರಾಗುತ್ತಿರುವ ಮಕ್ಕಳ ಸಂಖ್ಯೆ	೨೪೬	೨೯೫	೫೪೧
ಪ್ರೌಢ ಶಾಲೆಗೆ ದಾಖಲಾದ ಮಕ್ಕಳು	೧೪೧	೧೦೯	೨೫೦
ಹಾಜರಾಗುತ್ತಿರುವ ಮಕ್ಕಳು	೯೬	೪೪	೧೪೦

೬ ರಿಂದ ೧೪ ವಯೋಮಾನದ ಮಕ್ಕಳು ಸಾಮಾನ್ಯವಾಗಿ ಪ್ರಾಥಮಿಕ ಶಾಲೆಗೆ ಹೋಗುವ ವಯಸ್ಸಿನವರಾಗಿರುತ್ತಾರೆ. ಈ ಗ್ರಾಮ ಪಂಚಾಯ್ತಿಯಲ್ಲಿ ಒಟ್ಟು ೬ ಶಾಲೆಗಳಿವೆ ೬ರಿಂದ ೧೪ ವಯೋಮಾನದ ೯೬೭ ಮಕ್ಕಳಿದ್ದಾರೆ. ಅದರಲ್ಲಿ ೫೦೭ ಗಂಡು ಮತ್ತು ೪೬೦ ಹೆಣ್ಣು ಮಕ್ಕಳಿದ್ದಾರೆ. ಇದರಲ್ಲಿ ಪ್ರಾಥಮಿಕ ಶಾಲೆಗೆ ದಾಖಾಲಾದ ಮಕ್ಕಳ ಸಂಖ್ಯೆ ೪೩೮ ಗಂಡು ಮತ್ತು ೩೮೩ ಹೆಣ್ಣು ಮಕ್ಕಳು ಇದ್ದಾರೆ. ಇದರಲ್ಲಿ ಹಾಜರಾಗುತ್ತಿರುವ ಮಕ್ಕಳ ಸಂಖ್ಯೆ ೨೪೬ ಗಂಡು ಮತ್ತು ೨೯೫ ಹೆಣ್ಣು ಮಕ್ಕಳು ಆಗಿದೆ. ಒಟ್ಟು ಪ್ರಾಥಮಿಕ ಶಾಲೆಗೆ ಹೋಗುವವರು ೫೪೧ ಮಕ್ಕಳು ಮಾತ್ರ. ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ೯೬೭ ಮಕ್ಕಳಲ್ಲಿ ೪೨೬ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ.

ಮಕ್ಕಳು ಹಕ್ಕುಗಳ ಒಡಂಬಡಿಕೆಯ ಹಿನ್ನೆಲೆಯಲ್ಲಿ ಹೇಳುವುದಾದರೆ ಪರಿಚ್ಛೇದ ೧೨ ಮತ್ತು ೧೩ ರನ್ನು ನೇರವಾಗಿ ಉಲ್ಲಂಘಿಸಿದಂತಾಗುತ್ತದೆ. ಶಾಲೆಯಿಂದ ಹೊರಗಿರುವ ಇಂತಹ ಮಕ್ಕಳು ಮಾಹಿತಿ ಪಡೆಯುವ ಸ್ವಾತಂತ್ರದಿಂದ ವಂಚಿತರಾಗುತ್ತಾರೆ. ಜೊತೆಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕು ಕಳೆದುಕೊಳ್ಳುತ್ತಾರೆ. ಪರಿಚ್ಛೇದ ೨೪ರ ಪ್ರಕಾರ ಈ ಮಕ್ಕಳು ಆರೋಗ್ಯ ರಕ್ಷಣೆಯಿಂದ ವಂಚಿತರಾಗುತ್ತಾರೆ. ಏಕೆಂದರೆ ಶಾಲೆಯಿಂದ ಹೊರಗಿರುವ ಬಹುತೇಕ ಮಕ್ಕಳು ಅಪಾಯಕಾರಿ ಕೆಲಸಗಳಲ್ಲಿ ತೊಡಗಿಸಿಕೊಂಡಿರುತ್ತಾರೆ.

ಅ. ೧೪ ರಿಂದಿ ೧೮ರ ವಯೋಮಾನದ ಮಕ್ಕಳ ಸ್ಥಿತಿ

೧೪ ರಿಂದ ೧೮ ವಯೋಮಾನದವರು ಈ ಪಂಚಾಯಿತಿಯಲ್ಲಿ ಒಟ್ಟು ೪೪೫ ಮಕ್ಕಳಿದ್ದಾರೆ. ಇದರಲ್ಲಿ ೨೨೫ ಗಂಡು ಮತ್ತು ೨೨೦ ಹೆಣ್ಣು ಮಕ್ಕಳಿದ್ದಾರೆ. ಪ್ರೌಢಶಾಲೆ

ಮತ್ತು ಕಾಲೇಜಿಗೆ ದಾಖಲಾಗುವ ೧೪೧ ಗಂಡು ಮತ್ತು ೧೨೯ ಹೆಣ್ಣು ಮಕ್ಕಳಿದ್ದಾರೆ. ಒಟ್ಟು ೨೫೦ ಮಕ್ಕಳು ದಾಖಲಾಗಿದ್ದಾರೆ. ಅದರಲ್ಲಿ ಹಾಜರಾಗುವ ಮಕ್ಕಳೆಂದರೆ ೯೬ ಗಂಡು ಮತ್ತು ೪೪ ಹೆಣ್ಣು ಮಕ್ಕಳು ಮಾತ್ರ ಶಾಲೆ ಕಾಲೇಜಿನೊಳಗಿದ್ದಾರೆ. ಒಟ್ಟಾರೆ ಹಾಜರಾಗುವ ಮಕ್ಕಳ ಪ್ರಮಾಣ ೧೪೦. ಅಂದರೆ ೧೪ ರಿಂದ ೧೮ ವಯೋಮಾನದ ೪೪೫ ಮಕ್ಕಳಲ್ಲಿ ೩೦೫ ಮಕ್ಕಳು ಶಾಲೆ ಕಾಲೇಜಿನಿಂದ ಹೊರಗಿದ್ದಾರೆ ಎಂಬುದು ತಿಳಿದು ಬರುತ್ತದೆ.

ಮಕ್ಕಳ ಹಕ್ಕುಗಳ ಒಡಂಬಡಿಕೆಯ ಹಿನ್ನೆಲೆಯಲ್ಲಿ ಹೇಳುವುದಾದರೆ ಪರಿಚ್ಛೇದ ೨೮, ೨೯, ೩೧, ೩೨ನ್ನು ನೇರವಾಗಿ ಉಲ್ಲಂಘಿಸುತ್ತಾರೆ. ಇಂತಹ ಮಕ್ಕಳಿಗೆ ಮನೋರಂಜನೆ, ವಿಶ್ರಾಂತಿ ಮತ್ತು ಶಿಕ್ಷಣ ಪಡೆಯದೆ ದುಡಿಮೆಯಲ್ಲಿ ತೊಡಗಿರುತ್ತಾರೆ. ಅಥವಾ ವಲಸೆ ಹೋಗಿರುತ್ತಾರೆ. ಹೆಣ್ಣು ಮಕ್ಕಳಾದರೆ ಬಾಲ್ಯವಿವಾಹವಾಗಿರುತ್ತಾರೆ ಇತ್ಯಾದಿಗಳು.

ಇ. ಮದುವೆಗಳು ಮತ್ತು ಮಕ್ಕಳ ಜನನ ವಿಚಾರಗಳು

ಮದುವೆಗಳು ಮತ್ತು ಮಕ್ಕಳ ಜನನ ವಿಚಾರಗಳು	
ಈ ವರ್ಷ ನಡೆದ ಒಟ್ಟು ಮದುವೆಗಳು	೭೨
ಇದರಲ್ಲಿ ೧೮ ವರ್ಷಗಳಿಗಿಂತ ಕಡಿಮೆ ವಯಸ್ಸಿನವರಿಗಾದ ಮದುವೆಗಳು	೨೫
ಈ ವರ್ಷ ಆರೋಗ್ಯ ಕೇಂದ್ರದಲ್ಲಿ ವರದಿ ಆದಂತೆ ಎಷ್ಟು ಗರ್ಭಿಣಿಯರು ನೋಂದಾಯಿತರಾಗಿದ್ದರು?	೧೩೮
೧೮ ವರ್ಷದೊಳಗಿನ ಗರ್ಭಿಣಿಯರ ಸಂಖ್ಯೆ	೨೮
ಈ ವರ್ಷ ಪಂಚಾಯಿತಿ ವ್ಯಾಪ್ತಿಯಲ್ಲಿ ಆದ ಒಟ್ಟು ಹೆರಿಗೆಗಳು	೧೩೭
ದಾದಿ ಅಥವಾ ವೈದ್ಯರ ಸಹಾಯದಿಂದ ಆದ ಹೆರಿಗೆಗಳು	೭೭+೬೦=೧೩೭
ಒಟ್ಟು ಜನ್ಮ ದಾಖಲೆಗಳು	-
ಒಟ್ಟು ಗರ್ಭಪಾತಗಳು	-

ಈ ಗ್ರಾಮ ಪಂಚಾಯಿತಿಯಲ್ಲಿ ಇದೇ ವರ್ಷ ಅಂದರೆ ೨೦೦೭ರಲ್ಲಿ ೭೨ಮದುವೆಗಳಾಗಿವೆ. ಇದರಲ್ಲಿ ೧೮ ವರ್ಷಗಳಿಗಿಂತ ಕಡಿಮೆ ವಯಸ್ಸಿನವರಿಗೆ ಒಟ್ಟು ೨೫ ಮದುವೆಗಳಾಗಿವೆ. ಮಕ್ಕಳ ಹಕ್ಕುಗಳ ಒಡಂಬಡಿಕೆಯ ಪ್ರಕಾರ ಇವೆಲ್ಲ ಬಾಲ್ಯವಿವಾಹಗಳಾಗುತ್ತವೆ.

ಆರೋಗ್ಯ ಉಪಕೇಂದ್ರದ ವರದಿಯಂತೆ ಒಟ್ಟು ೧೩೮ ಹೆಂಗಸರು ಗರ್ಭಿಣಿಯರೆಂದು ದಾಖಲಾಗಿದ್ದಾರೆ. ಅದರಲ್ಲಿ ೧೮ ವರ್ಷಕ್ಕಿಂತ ಕಡಿಮೆ ವಯಸ್ಸಿನ ೨೮ ಮಹಿಳೆಯರು ಗರ್ಭಿಣಿಯರಾಗಿದ್ದಾರೆ. ಇಂತಹ ಮಹಿಳೆಯರ ಅಂಗಾಂಗಗಳು ಸರಿಯಾದ ಪ್ರಮಾಣದಲ್ಲಿ ಬೆಳವಣಿಗೆ ಆಗದಿರುವುದರಿಂದ ಹೆರಿಗೆ ಸಮಯದಲ್ಲಿ ತಾಯಿ ಮತ್ತು ಮಕ್ಕಳು ಸಾಯುವ ಸಾಧ್ಯತೆ ಅಧಿಕವಾಗಿರುತ್ತದೆ.

ಈ ವರ್ಷ ಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು ೧೩೭ ಹೆರಿಗೆಗಳು ಆಗಿವೆ. ಆದರೆ ಈ ಹೆರಿಗೆಗಳಲ್ಲಿ ೬೦ ಹೆರಿಗೆಗಳು ಮಾತ್ರ ದಾದಿ ಅಥವಾ ವೈದ್ಯರಿಂದ ಆಗಿವೆ. ಉಳಿದ ೭೭ ಹೆರಿಗೆಗಳು ಮನೆಯಲ್ಲೇ ಆಗಿವೆ. ಇಂತಹ ಹೆರಿಗೆಗಳಲ್ಲಿ ಯಾವುದೇ ಶುಚಿತ್ವ ಮತ್ತು ಮುಂಜಾಗ್ರತೆ ಕ್ರಮಗಳಿರುವುದಿಲ್ಲ.

ಮಕ್ಕಳ ಹಕ್ಕುಗಳ ಒಡಂಬಡಿಕೆ ಹಿನ್ನೆಲೆಯಲ್ಲಿ ಹೇಳುವುದಾದರೆ ಪರಿಚ್ಛೇದ ೧೮ ಮತ್ತು ಪರಿಚ್ಛೇದ ೨೪ನ್ನು ಸರ್ಕಾರವು ನೇರವಾಗಿ ಉಲ್ಲಂಘಿಸಿದಂತಾಗುತ್ತದೆ.

ಎಫ್. ಮಕ್ಕಳು ಮತ್ತು ತಾಯಂದಿರ ಮರಣ ದಾಖಲೆಗಳು

ಮಕ್ಕಳು ಮತ್ತು ತಾಯಂದಿರ ಮರಣ ದಾಖಲೆಗಳು			
ಮಕ್ಕಳ ಮರಣ	ಗಂಡು	ಹೆಣ್ಣು	ಒಟ್ಟು
ಹುಟ್ಟಿದ ಒಂದು ವಾರದೊಳಗೆ ಮರಣ	–	–	–
ಹುಟ್ಟಿದ ಒಂದು ತಿಂಗಳೊಳಗೆ ಮರಣ	–	–	–
ಹುಟ್ಟಿದ ಒಂದು ವರ್ಷದೊಳಗೆ ಮರಣ	೧	೩	೪
ಹುಟ್ಟಿದ ಐದು ವರ್ಷದೊಳಗೆ ಮರಣ	೩	೪	೭
ಹೆರಿಗೆ ಸಮಯದಲ್ಲಿ ನಿಧನರಾದ ತಾಯಂದಿರ ಸಂಖ್ಯೆ :	೦೧	೦೧	೦೧
ಹೀಗೆ ನಿಧನರಾದ ೫ ವರ್ಷದೊಳಗಿನ ತಾಯಂದಿರು:			

ಎಫ್.ಅ ಜನನ ದಾಖಲೆಗಳು

ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಒಟ್ಟು ೧೩೭ ಹೆರಿಗೆಗಳು ಆಗಿವೆ. ಇದರಲ್ಲಿ ಜನನ ದಾಖಲೆ ಪ್ರಮಾಣ ಪತ್ರ ಪಡೆದಿದರುವ ಮಕ್ಕಳು ೯೦ ಉಳಿದ ೪೭ ಮಕ್ಕಳು ಜನನ ದಾಖಲೆ ಪತ್ರ ಪಡೆದಿಲ್ಲ.

ಮಕ್ಕಳ ಹಕ್ಕುಗಳ ಒಡಂಬಡಿಕೆ ಹಿನ್ನೆಲೆಯಲ್ಲಿ ಹೇಳುವುದಾದರೆ ಇಂತಹ ಮಕ್ಕಳು ಪರಿಚ್ಛೇದ ೭ನ್ನು ನೇರವಾಗಿ ಉಲ್ಲಂಘಿಸಿದಂತಾಗುತ್ತದೆ. ಮಗು ಎಲ್ಲಿ ಹುಟ್ಟಿದೆ ಎಂಬುದಕ್ಕೆ

ದಾಖಲೆಗಳೇ ಇರುವುದಿಲ್ಲ. ಹೀಗಾಗಿ ಮಗುವಿನ ಭವಿಷ್ಯಕ್ಕೆ ಮತ್ತು ಸರ್ಕಾರಕ್ಕೆ ಮಾಹಿತಿಯೇ ಇಲ್ಲದಂತಾಗುತ್ತದೆ.

ಎಫ್.ಆ ತಾಯಿ ಮಕ್ಕಳ ಮರಣ

ಈ ಪಂಚಾಯ್ತಿ ವ್ಯಾಪ್ತಿಯಲ್ಲಿ ಒಟ್ಟು ೧೧ ಮಕ್ಕಳು ಮರಣ ಹೊಂದಿದ್ದಾರೆ. ಹುಟ್ಟಿದ ಒಂದು ವರ್ಷದೊಳಗೆ ೧ ಗಂಡು ಮತ್ತು ೩ ಹೆಣ್ಣು ಮಕ್ಕಳು ಮರಣಹೊಂದಿವೆ. ಹುಟ್ಟಿದ ೫ ವರ್ಷದೊಳಗೆ ೩ ಗಂಡು ಮತ್ತು ೪ ಹೆಣ್ಣು ಮಕ್ಕಳು ಮರಣ ಹೊಂದಿವೆ. ಹೆರಿಗೆ ಸಮಯದಲ್ಲಿ ಒಬ್ಬ ತಾಯಿ ಸತ್ತು ಹೋಗಿರುವ ಮಾಹಿತಿ ಇದೆ. ಇಂತಹ ಮಕ್ಕಳು ಮಕ್ಕಳ ಹಕ್ಕುಗಳ ಒಡಂಬಡಿಕೆ ಪರಿಚ್ಛೇದ-೬ ಪ್ರಕಾರ ಜೀವಿಸುವ ಹಕ್ಕನೇ ಕಳೆದು ಕೊಂಡಿದ್ದಾರೆ.

ಜಿ. ಅಂಗವಿಕಲತೆ ಇರುವ ಮಕ್ಕಳು

ಅಂಗವಿಕಲತೆ ಇರುವ ಮಕ್ಕಳು			
ವಯಸ್ಸು	ಗಂಡು	**ಹೆಣ್ಣು**	**ಒಟ್ಟು**
ಈ ವರ್ಷ ಅಂಗವಿಕಲತೆಯೊಂದಿಗೆ ಹುಟ್ಟಿದ ಮಕ್ಕಳು	೨	೧	೩
೦-೩ವರ್ಷ	-	-	-
೩-೬ವರ್ಷ	-	-	-
೬-೧೪ವರ್ಷ	-	-	-
೧೪-೧೮ವರ್ಷ	-	-	-
ದೈಹಿಕ ಅಂಗವಿಕಲತೆ ಇರುವ ಮಕ್ಕಳ ಒಟ್ಟು ಸಂಖ್ಯೆ	೧೧	೮	೧೯
ಮಾನಸಿಕ ಅಂಗವಿಕಲತೆ ಇರುವ ಮಕ್ಕಳ ಒಟ್ಟು ಸಂಖ್ಯೆ	೩	೩	೬

ಈ ವರ್ಷ ಹುಟ್ಟಿದ ೨ ಗಂಡು ಮಕ್ಕಳು ಮತ್ತು ೧ ಹೆಣ್ಣು ಮಗು ಅಂಗವಿಕಲರಾಗಿದ್ದಾರೆ. ಒಟ್ಟು ಸೊನ್ನೆ ಯಿಂದ ೧೮ ವರ್ಷದೊಳಗಿರುವ ಅಂಗವಿಕಲ ಮಕ್ಕಳ ಸಂಖ್ಯೆ ೨೮ ಆಗಿದೆ. ದೈಹಿಕ ಅಂಗವಿಕಲತೆ ಇರುವ ೧೧ ಗಂಡು ಮತ್ತು ೮ ಹೆಣ್ಣು ಮಕ್ಕಳಿದ್ದಾರೆ. ಹಾಗೆಯೇ ಮಾನಸಿಕ ಅಂಗವಿಕಲತೆ ಇರುವ ೩ ಗಂಡು ಮತ್ತು ೩ ಹೆಣ್ಣು ಮಕ್ಕಳಿದ್ದಾರೆ. ಇದಕ್ಕೆ ಕಾರಣವನ್ನು ಹುಡುಕಿದಾಗ ಇಂತಹ ಮಕ್ಕಳು ಬಾಲ್ಯದಲ್ಲಿ ರೋಗ ನಿರೋಧಕ ಲಸಿಕೆಗಳನ್ನು ಸಮಯಕ್ಕೆ ಸರಿಯಾಗಿ ಪಡೆಯದಿರುವುದಿಲ್ಲ.

ಹೆಚ್. ಅನಾಥ ಮಕ್ಕಳು

ಈ ಗ್ರಾಮ ಪಂಚಾಯ್ತಿಯಲ್ಲಿ ಎರಡು ಅನಾಥ ಮಕ್ಕಳಿವೆ. ಆ ಮಕ್ಕಳ ರಕ್ಷಣೆಗೆ ಈಗಲೂ ಸರಕಾರ ಮುಂದಾಗಿಲ್ಲ. ಮಕ್ಕಳ ಹಕ್ಕುಗಳ ಒಡಂಬಡಿಕೆಯ ಪ್ರಕಾರ ಪರಿಚ್ಛೇದ ೨ರನ್ನು ಇಲ್ಲಿ ಉಲ್ಲಂಘಿಸಿದಂತಾಗುತ್ತದೆ. ಏಕೆಂದರೆ ಇಂತಹ ಮಕ್ಕಳಿಗೆ ಸರ್ಕಾರವು ರಕ್ಷಣೆ ನೀಡಿ ದತ್ತು ವ್ಯವಸ್ಥೆಯನ್ನು ಮಾಡಬೇಕು.

೩.೩ ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಕಾರಣಗಳು

ಈಗಾಗಲೇ ಪ್ರಸ್ತಾಪ ಮಾಡಿರುವಂತೆ ಮಕ್ಕಳ ಹಕ್ಕುಗಳು ಒಡಬಂಡಿಕೆಯನ್ನು ಒಪ್ಪಿ ಅವುಗಳನ್ನು ಜಾರಿಗೊಳಿಸಲು ಭಾರತವು ಹಲವಾರ ಕ್ರಿಯಾಯೋಜನೆಗಳನ್ನು ರೂಪಿಸಿದೆ. ಸಂವಿಧಾನದ ಪ್ರಸ್ಥಾವನೆಯಲ್ಲಿ ಹೇಳಿರುವಂತೆ ಭಾರತದ ಪ್ರತಿಯೊಬ್ಬ ಪ್ರಜೆ ಘನತೆ ಗೌರವಗಳಿಂದ ಬದುಕಲು ಅನುಕೂಲವಾಗುವಂತೆ ಮೂಲಭೂತ ಹಕ್ಕುಗಳನ್ನು ನೀಡಿದೆ. ದೇಶದಲ್ಲಿರುವ ಮಕ್ಕಳ ರಕ್ಷಣೆಗಾಗಿ ಹಲವಾರು ಕಾಯ್ದೆ ಕಾನೂನುಗಳನ್ನು ರೂಪಿಸಿದೆ. ಇಷ್ಟೆಲ್ಲ ಕ್ರಿಯಾ ಯೋಜನೆಗಳು ಕಾಯ್ದೆ ಮತ್ತು ಕಾನೂನುಗಳನ್ನ ಜಾರಿಗೆ ತಂದರೂ ಕೂಡ ಭಾರತದಲ್ಲಿ ಮಕ್ಕಳ ಪರಿಸ್ಥಿತಿಯಲ್ಲಿ ಏನೇನು ಸುಧಾರಣೆಯಾಗಿಲ್ಲ ಎಂಬುದು ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿಯ ಅಂಕಿ ಅಂಶಗಳನ್ನು ನೋಡಿದಾಗ ತಿಳಿದು ಬರುತ್ತದೆ.

ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಕಾರಣಗಳನ್ನು ಹುಡುಕುತ್ತಾ ಹೊರಟಾಗ ಹಲವಾರು ರೀತಿಯ ಕಾರಣಗಳು ನಮಗೆ ಗೋಚರವಾಗುತ್ತವೆ. ಪ್ರಸ್ತುತ ಪಂಚಾಯ್ತಿಯಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಕಾರಣಗಳನ್ನು ಮೂರು ನೆಲೆಗಳಲ್ಲಿ ಗುರುತಿಸಲಾಗಿದೆ. ಮೊದಲನೆಯದು ಕೌಟುಂಬಿಕ ಹಿನ್ನಲೆಯಲ್ಲಿ, ಎರಡನೆಯದು ಸಮಾಜ ಹಿನ್ನಲೆಯಲ್ಲಿ ಮತ್ತು ಮೂರನೆಯದು ಸರ್ಕಾರದ ಹಿನ್ನಲೆಯಲ್ಲಿ. ಈ ಮೂರು ವ್ಯವಸ್ಥೆಗಳು ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಕಾರಣವಾಗಿರುವುದನ್ನು ಪ್ರಕರಣ ಅಧ್ಯಯನದ ಮೂಲಕ ನೋಡಲಾಗಿದೆ.

ಪ್ರಕರಣಗಳ ಅಧ್ಯಯನ

ಪ್ರಕರಣ–೧

ಶ್ರೀಧರಗಡ್ಡೆ ಗ್ರಾಮದಲ್ಲಿ ತಿಮ್ಮಪ್ಪ ತಂದೆ ಯಂಕಪ್ಪ ಎಂಬ ವ್ಯಕ್ತಿಗೆ ಆರುಜನ ಮಕ್ಕಳು. ಆತನಿಗೆ ೪ ಹೆಣ್ಣು ಮತ್ತು ೨ ಗಂಡು ಮಕ್ಕಳಿದ್ದಾರೆ. ಈತನಿಗೆ ಒಂದು ಎಕರೆ ಮಾತ್ರ ಜಮೀನು ಇದೆ. ತಿಮ್ಮಪ್ಪ ಮತ್ತು ಆತನ ಹೆಂಡತಿ ಲಕ್ಷ್ಮಿ ದಿನಾಲು ಕೂಲಿ ಕೆಲಸಮಾಡಿ ಹೊಟ್ಟೆ ತುಂಬಿಸಬೇಕು. ಇವರು ಪರಿಶಿಷ್ಟ ಜಾತಿಗೆ ಸೇರಿದ್ದಾರೆ. ಮೊದಲ ಮಗ ಮೂಕಪ್ಪನಿಗೆ ೭ನೇ ತರಗತಿಯವರೆಗೆ ಓದಿಸಿ ಕುರಿಕಾಯುವ ಕೆಲಸಕ್ಕೆ ನೇಮಿಸಿದ್ದಾರೆ. ಎರಡನೆಯ ಮಗಳು

೧೩ ವರ್ಷದ ರತ್ನಮ್ಮ, ತಾಯಿ ಜೊತೆ ಕೂಲಿ ಕೆಲಸಕ್ಕೆ ಹೋಗುತ್ತಾಳೆ. ೩ನೆಯವಳು ೧೧ ವರ್ಷದ ಬಸಮ್ಮ ಮನೆಯಲ್ಲಿರುವ ಎರಡು ಮಕ್ಕಳನ್ನು ಆಡಿಸುತ್ತಾ ತಾಯಿ ಕೆಲಸದಲ್ಲಿ ನೆರವಾಗುತ್ತಾಳೆ. ಇನ್ನೊಬ್ಬ ಮಗ ೮ ವರ್ಷದ ರಂಗ ೩ನೇ ತರಗತಿಯಾಗಿದ್ದು ಶಾಲೆಗೆ ಹೋಗುತ್ತಾನೆ. ಈ ಕುಟುಂಬದಲ್ಲಿರುವ ೫ ಮಕ್ಕಳಿಗೆ ಶಿಕ್ಷಣ ರಕ್ಷಣೆ ಮತ್ತು ಪೋಷಣೆ ದೂರದ ಮಾತಾಗಿದೆ.

ಪ್ರಕರಣ–೨

ಇದು ಗುಡಾರನಗರ ಗ್ರಾಮದ ಲಿಂಗಯ್ಯನ ಪರಿಸ್ಥಿತಿ ಇವರು ಕೊರವ ಜನಾಂಗಕ್ಕೆ ಸೇರಿದವರು. ಈತನಿಗೆ ನಾಲ್ವರು ಮಕ್ಕಳು ಅದರಲ್ಲಿ ಎರಡು ಗಂಡು ಮತ್ತು ಎರಡು ಹೆಣ್ಣು ಮಕ್ಕಳಿದ್ದಾರೆ. ಹಿರಿಯ ಮಗಳು ರಾಜಕ್ಕ. ಇವರು ದಿನಾಲು ಬುಟ್ಟಿ, ಪೊರಕೆಗಳನ್ನು ಹೆಣೆದು ಊರೊಳಗೆ ಮಾರಿ, ಬಂದ ಆದಾಯದಲ್ಲಿ ಜೀವನ ನಡೆಸುತ್ತಾರೆ. ತಾಯಿಗೆ ಮಗನನ್ನು ಓದಿಸಬೇಕೆಂಬ ಬಯಕೆ. ಆದರೆ ತಂದೆ ಇರುವ ಹಣವನ್ನೆಲ್ಲ ದಿನಾಲು ಕುಡಿದು ಹಾಳು ಮಾಡಿ ಹೆಂಡತಿ ಮಕ್ಕಳಿಗೆ ಹೊಡೆಯುತ್ತಾನೆ. ಇಂಥ ಪರಿಸ್ಥಿತಿಯಲ್ಲಿ ಬದುಕು ಸಾಗಿಸಲು ಸಾಕುಬೇಕಾಗುತ್ತದೆ.

ಪ್ರಕರಣ–೩

ಇದು ಲಕ್ಷ್ಮಿನಗರ ಗ್ರಾಮದ ಪ್ರಕರಣ. ರಾಮಣ್ಣ ತಂದೆ ಸುಂಕಪ್ಪ ಈತನ ಹೆಂಡತಿ ಮಾದೇವಿ. ಇವರು ಕುರುಬ ಜನಾಂಗಕ್ಕೆ ಸೇರಿದವರು. ರಾಮಣ್ಣ ಅಂಗವಿಕಲನಾಗಿದ್ದಾನೆ. ಸೂರ್ಯಕಾಂತಿ ಕಾಳುಗಳನ್ನು, ಮೀಷನ್ ಬೇರ್ಪಡಿಸುವಾಗ ಆಕಸ್ಮಾತ್ ಮೀಷನ್ನಿನೊಳಗೆ ಕೈ ಸೇರಿ ಕತ್ತರಿಸಿದೆ. ಇದರಿಂದ ಮನೆಯಲ್ಲಿರುವ ಹೆಂಡತಿ ಮಾದೇವಿಗೆ ಸಂಸಾರವನ್ನು ಸಂಭಾಳಿಸುವ ಜವಾಬ್ದಾರಿ ಹೆಗಲೇರಿದೆ. ಇತ್ತೀಚಿಗೆ ಈಕೆಗೂ ಕ್ಷಯ ರೋಗ ಪ್ರಾರಂಭವಾಗಿ ಸೊರಗಿದ್ದಾಳೆ. ಮನೆಯಲ್ಲಿರುವ ನಾಲ್ಕು ಮಕ್ಕಳ ಆರೈಕೆ ಮತ್ತು ಪೋಷಣೆ ಮಾಡುವುದು ಹೇಗೆ ಎಂಬ ಚಿಂತೆಯಲ್ಲಿದ್ದಾಳೆ.

ಪ್ರಕರಣ–೪

ಇದು ಜಾಲಿಬೆಂಚಿ ಗ್ರಾಮದ ಪ್ರಕರಣ. ಈರಯ್ಯ ತಂದೆ ಸವಾರೆಪ್ಪ ಈತನಿಗೆ ನಾಲ್ವರು ಮಕ್ಕಳಿದ್ದಾರೆ. ಪಿತ್ರಾರ್ಜಿತ ಆಸ್ತಿಯಾದ ಹತ್ತು ಎಕರೆ ಜಮೀನು ಇದ್ದು ಅದೆಲ್ಲವೂ ನೀರಾವರಿಗೆ ಒಳಪಟ್ಟಿದೆ. ಉತ್ತಮ ಬೆಳೆಯನ್ನು ಬೆಳೆಯುತ್ತಾನೆ. ಆದರೆ ಈತನಿಗೆ ಮಕ್ಕಳನ್ನು ಶಾಲೆಗೆ ಕಳಿಸುವುದು ಇಷ್ಟವಿಲ್ಲ. ಏಕೆಂದರೆ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವುದರಿಂದ ಸರ್ಕಾರಿ ನೌಕರಿ ಸಿಗುವುದಿಲ್ಲ, ಅರೆಬರೆ ಕಲಿತು ಪೋಲಿಗಳಾಗುತ್ತಾರೆ ಎಂಬ ಭಾವನೆಯಿಂದ ಇಬ್ಬರೂ ಮಕ್ಕಳನ್ನು ಹೊಲದ ಕೆಲಸಕ್ಕೆ ನೇಮೀಸಿದ್ದಾನೆ. ಈತನು ಮಾತ್ರ ಚಾವಡಿ ಮುಂದೆ ಕುಳಿತು ಕಾಡಹರಟೆ, ಜೂಜುಗಳಲ್ಲಿ ತೊಡಗಿರುತ್ತಾನೆ.

ಈ ನಾಲ್ಕು ಪ್ರಕರಣಗಳ ಅಧ್ಯಯನದ ಹಿನ್ನಲೆಯಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಕಾರಣವಾದ ಅಂಶಗಳನ್ನು ಪಟ್ಟಿ ಮಾಡಲಾಗಿದೆ. ಅವುಗಳನ್ನು ಒಂದೊಂದಾಗಿ ಕೆಳಗಿನಂತೆ ವಿವರಿಸಿದೆ.

೧. ಕೌಟುಂಬಿಕ ನೆಲೆಯಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆ

ಮಾನವ ಸಮುದಾಯದಲ್ಲಿ ಪ್ರತಿಯೊಬ್ಬರೂ ಸಂತಾನ ಪಡೆಯುವ, ತನ್ಮೂಲಕ ವಂಶಾಭಿವೃದ್ಧಿ ಮಾಡುವ, ತನ್ನ ವಂಶದ ಕುಡಿಯನ್ನು ಸ್ವಾವಲಂಬನೆಯಾಗುವವರೆಗೂ ಪ್ರೀತಿಯಿಂದ ಸಲಹುವಗುಣ ನಿಸರ್ಗದತ್ತವಾಗಿ ಬಂದಿರುವಂತಹದು. ಆದಾಗ್ಯೂ ಸಮಾಜದಲ್ಲಿ ವರ್ಗಶ್ರೇಣಿ, ಆರ್ಥಿಕ ಅಸಮಾನತೆ ಮುಂತಾದ ಕಾರಣಗಳಿಂದ ಬಡತನ, ಅಜ್ಞಾನ, ಅನಕ್ಷರತೆ ಸೃಷ್ಟಿಯಾಯಿತು. ಈ ರೀತಿಯ ಹಲವಾರು ಅಂಶಗಳು ಕೌಟುಂಬಿಕ ನೆಲೆಯೊಳಗೆ ಮಕ್ಕಳ ಹಕ್ಕುಗಳ ಉಲ್ಲಂಘನೆ ಕಾರಣವಾದವು. ಅವುಗಳನ್ನು ಒಂದೊಂದಾಗಿ ಕೆಳಗಿನಂತೆ ವಿವರಿಸಿದೆ.

ಎ. ಬಡತನ

ಮೊದಲನೆ ಪ್ರಕರಣಾಧ್ಯಯನವನ್ನು ನೋಡಿದಾಗ ತಿಮ್ಮಪ್ಪ ಎಂಬ ವ್ಯಕ್ತಿಗೆ ತೀರ್ವವಾದ ಬಡತನವಿರುವುದು ಕಂಡುಬರುತ್ತದೆ. ಮನೆ ತುಂಬ ಮಕ್ಕಳಿದ್ದು ಜೀವನ ನಡೆಸಲು ಯಾವುದೇ ಪಿತ್ರಾರ್ಜಿತ ಆಸ್ತಿ ಇಲ್ಲದ್ದರಿಂದ ದಿನಬೆಳಗಾದರೆ ಕೂಲಿ ಮಾಡಿ ಗೇಣು ಹೊಟ್ಟೆ ತುಂಬಿಸಿಕೊಳ್ಳುವುದೇ ಒಂದು ಸಹಾಸವಾಗಿದೆ. ಇಂತಹ ಬಡತನವು ಆತನ ಮಕ್ಕಳನ್ನು ಕೆಲಸಕ್ಕೆ ಕಳಿಸುವಂತೆ ಮಾಡಿದೆ. ಮಕ್ಕಳು ಕೆಲಸಕ್ಕೆ ಹೋಗುವುದರಿಂದ ಮನೋರಂಜನೆ ಮತ್ತು ವಿಕಾಸ ಹೊಂದುವ ಹಕ್ಕಿನಿಂದ ವಂಚಿತರಾಗುತ್ತಾರೆ. ಬಡತನದ ಕಾರಣದಿಂದ ಮಕ್ಕಳು ತಮ್ಮ ಸಹಜ ಬಾಲ್ಯವನ್ನು ಕಳೆದುಕೊಳ್ಳುತ್ತಾರೆ.

ಬಿ. ಅನಕ್ಷರತೆ

ನಾಲ್ಕನೇ ಪ್ರಕರಣಾಧ್ಯಯನವನ್ನು ಗಮನಿಸಿದಾಗ ಅಲ್ಪ ಸ್ವಲ್ಪ ಸ್ಥಿತಿವಂತನಾದ ತಂದೆ ಅನಕ್ಷರಸ್ಥನಾದ್ದರಿಂದ ಮಕ್ಕಳನ್ನು ದುಡಿಮೆಗೆ ತಳ್ಳಿರುವುದು ಕಂಡುಬರುತ್ತದೆ. ಶಾಲೆಯಿಂದ ಹೊರಗಿರುವ ಎಲ್ಲ ಮಕ್ಕಳ ಪರಿಸ್ಥಿತಿಗಳಿಗೆ ಕುಟುಂಬದೊಳಗಿನ ಅನಕ್ಷರತೆ, ಬಡತನ ಇತ್ಯಾದಿಗಳು ಮಕ್ಕಳ ಬೆಳವಣಿಗೆ ಬೇಕಾಗುವ ವಾತಾವರಣವನ್ನು ಒದಗಿಸದೆ ಹಕ್ಕಿನಿಂದ ವಂಚಿತರನ್ನಾಗಿ ಮಾಡುತ್ತವೆ.

ಸಿ. ಅಜ್ಞಾನ

ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಅಜ್ಞಾನವೂ ಪ್ರಮುಖ ಕಾರಣವಾಗಿದೆ. ನಾಲ್ಕನೇ ಮತ್ತು ಎರಡನೇ ಪ್ರಕರಣಗಳನ್ನು ನೋಡಿದಾಗ ಮಕ್ಕಳನ್ನು ತಂದೆ ತಾಯಿಗಳು ತಮ್ಮ

ಸೇವೆ ಮಾಡಿಸಿಕೊಳ್ಳಲಿಕ್ಕೆ ಪಡೆದಿದ್ದಾರೆ ಎಂಬಂತೆ ವರ್ತಿಸುವುದು ಕಂಡುಬರುತ್ತದೆ. ಈರಯ್ಯನಿಗೆ ಮಕ್ಕಳ ಬಾಳ ಬೆಳಕಾಗಬೇಕಾದ ಅವಶ್ಯಕತೆಯಾಗಲಿ, ಅಗತ್ಯತೆಯಾಗಲೀ ಕಾಣಿಸುವುದಿಲ್ಲ. ಇದಕ್ಕೆಲ್ಲ ಮುಖ್ಯ ಕಾರಣ ಆತನಲ್ಲಿರುವ ಅಜ್ಞಾನ. ಇಂತಹ ಪ್ರಕರಣಗಳು ಕುಟುಂಬದ್ದೊಳಗೆ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗಲು ಕಾರಣವಾಗಿವೆ.

ಡಿ. ಕುಡಿತ

ಈ ಪಂಚಾಯಿತಿ ವ್ಯಾಪ್ತಿಯಲ್ಲಿ ಸಂಜೆಯಾಗುತ್ತಲೇ ದುಡಿದು ತಂದ ಹಣವನ್ನು ಮಧ್ಯದಂಗಡಿಗಳಿಗೆ ಕೊಂಡೊಯ್ದು ಕಂಠ ಪೂರ್ತಿ ಕುಡಿಯುತ್ತಾರೆ. ಮನೆಗೆ ಬಂದು ಕುಟುಂಬದವರೊಂದಿಗೆ ಜಗಳವಾಡುತ್ತಾರೆ. ರಾತ್ರಿಯಲ್ಲ ಆಹಾರ ಸೇವಿಸದೆ ಅಶಕ್ತರಾಗಿ ಪುನಃ ಸಂಜೆ ಹೆಂಡತಿ ದುಡಿಮೆಗೆ ಕೈಚಾಚುತ್ತಾರೆ. ಹಣ ಕೊಡದಿದ್ದರೆ ಹೊಡೆಯಲು ಶುರು ಮಾಡುತ್ತಾರೆ. ಇನ್ನೂ ಹಣ ಕಡಿಮೆ ಬಂದರೆ ಮಕ್ಕಳನ್ನು ದುಡಿಮೆಗೆ ಹಚ್ಚುತ್ತಾರೆ. ಇಂತಹ ಘಟನೆ, ಪರಿಸರಗಳು ಮಕ್ಕಳ ಬೆಳವಣಿಗೆಯ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತವೆ. ಇದನ್ನೆ ಲಿಂಗಯ್ಯನ ಪ್ರಕರಣದಲ್ಲಿ ಗಮನಿಸಬಹುದಾಗಿದೆ.

ಇ. ಜೂಜಾಟ

ಗ್ರಾಮೀಣ ಪ್ರದೇಶಗಳಲ್ಲಿ ಹೆಂಡತಿ ಮಕ್ಕಳನ್ನು ಹೊಲಕ್ಕೆ ದುಡಿಯಲು ಕಳಿಸಿ, ಈ ಕಡೆ ಇವರು ಇಸ್ಪೇಟ್ ಜೂಜುಗಳಲ್ಲಿ ತೊಡಗಿರುತ್ತಾರೆ. ಇವರದು ಶ್ರಮವಿಲ್ಲದೆ ಶ್ರೀಮಂತರಾಗಬೇಕೆಂಬ ಬಯಕೆ. ಈ ರೀತಿಯ ಚಟಕ್ಕೆ ಬಿದ್ದು ದಿನಾಲು ಹಣವನ್ನು ಪೋಲು ಮಾಡಿಕೊಳ್ಳುತ್ತಾರೆ. ಇಂತಹ ಪ್ರಕರಣಗಳು ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವ್ಯಾಪಕವಾಗಿ ಕಂಡು ಬರುತ್ತವೆ. ಇಂತಹ ಪ್ರಕರಣಗಳನ್ನು ತಡೆಗಟ್ಟುವಲ್ಲಿ ಪೋಲಿಸ್ ಇಲಾಖೆಗಳು ದಿವ್ಯ ಮೌನ ವಹಿಸಿವೆ. ಇದರ ಪರಿಣಾಮ ನೇರವಾಗಿ ಮಕ್ಕಳ ಮೇಲಾಗುತ್ತದೆ. ಮಕ್ಕಳು ಮನೋರಂಜನೆ, ಆರೋಗ್ಯ ಮತ್ತು ಶಿಕ್ಷಣದಿಂದ ವಂಚಿತರಾಗುತ್ತಾರೆ. ಇದು ಈರಯ್ಯನ ಪ್ರಕರಣದಲ್ಲಿ ಕಾಣಬಹುದಾಗಿದೆ.

ಎಫ್. ಸೋಮಾರಿತನ

ಕೆಲವರಿಗೆ ಕನಸುಗಳೇ ಇರುವುದಿಲ್ಲ. ಇಂಥಹವರಿಗೆ ಜವಾಬ್ದಾರಿಬೇಕಿಲ್ಲ. ಹೆಂಡತಿಯೊಂದಿಗೆ ಕಾಮತೃಷೆ ತೀರಿಸಿಕೊಂಡರೆ ಮುಗಿಯಿತು. ಹುಟ್ಟಿದ ಮಕ್ಕಳಿಗೆ ತಾವು ಜವಾಬ್ದಾರಲ್ಲ ಎಂಬಂತಿರುತ್ತಾರೆ. ಇಂತಹ ಪರಿಸ್ಥಿತಿಗಳಿಗೆ ಬಲಿಯಾದ ಮಕ್ಕಳು ಬಿಕ್ಷೆಬೇಡಿ ತಂದ ಹಣದಿಂದಲೆ ಇವರು ಜೀವನ ನಡೆಸುತ್ತಾರೆ. ಈ ರೀತಿಯ ಪ್ರಕರಣಗಳು ಗುಡಾರನಗರದ ಗ್ರಾಮದಲ್ಲಿ ಹೆಚ್ಚು ಹೆಚ್ಚು ಕಂಡುಬರುತ್ತವೆ. ಈ ಅಂಶವು ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಕಾರಣವಾಗುತ್ತದೆ.

ಜಿ. ಅನಾರೋಗ್ಯ

ಒಂದು ಕುಟುಂಬದೊಳಗೆ ಪೋಷಕರೇ ಅನಾರೋಗ್ಯಕ್ಕೆ ತುತ್ತಾದರೆ ಅಂತಹ ಕುಟುಂಬದ ಮಕ್ಕಳಿಗೆ ರಕ್ಷಣೆಯೇ ಇಲ್ಲವಂತಾಗುತ್ತದೆ. ೪ನೇ ಪ್ರಕರಣದಲ್ಲಿ ರಾಮಣ್ಣ ಮತ್ತು ಆತನ ಹೆಂಡತಿಯ ಪರಿಸ್ಥಿತಿಯನ್ನು ಉಲ್ಲೇಖಿಸಬಹುದಾಗಿದೆ. ಈ ರೀತಿ ಪ್ರಕರಣಗಳು ಅಪರೂಪವಾದರೂ ಸಹ ಕುಟುಂಬದೊಳಗೆ ಮಕ್ಕಳ ರಕ್ಷಣೆ, ಪಾಲನೆ, ಪೋಷಣೆಗೆ ಅವಕಾಶವಿಲ್ಲದಂತಾಗುತ್ತದೆ.

೨. ಸಮಾಜದ ನೆಲೆ

ನಾಡಿನಲ್ಲಿರುವ ಮಾನವ ಜೀವಿ ಒಬ್ಬೊಂಟಿಯಾಗಿ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲಾರ. ತನ್ನ ಬೇಕು ಬೇಡಗಳನ್ನು ಪೂರೈಸಿಕೊಳ್ಳಲು ಇತರರ ಮೇಲೆ ಅವಲಂಬಿಸಬೇಕಾಗುತ್ತದೆ. ಈ ಕಾರಣದಿಂದ ವ್ಯಕ್ತಿ ಮತ್ತು ಸಮಾಜಗಳ ನಡುವೆ ಹಲವಾರು ಸಂಬಂಧಗಳು ಏರ್ಪಡುತ್ತವೆ. ಇಂಥ ಸಂಬಂಧಗಳು ವರ್ಗ, ವರ್ಣ, ಶ್ರೇಣಿಯನ್ನು ಆಧರಿಸಿರುತ್ತವೆ. ಇವುಗಳು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಕಾರಣವಾಗುತ್ತವೆ.

ಎ. ಜಾತಿ ಪದ್ಧತಿ

ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜಾತಿ ಪದ್ಧತಿಯೂ ಈಗಲೂ ಚಾಲ್ತಿಯಲ್ಲಿದೆ. ಸಾರ್ವಜನಿಕ ಸ್ಥಳಗಳಾದ ದೇವಸ್ಥಾನ, ಗ್ರಂಥಾಲಯ, ಹೋಟೆಲ್‌ಗಳಲ್ಲಿ, ಕೆಳವರ್ಗದವರಿಗೆ ಪ್ರವೇಶವನ್ನು ನಿಷೇಧಿಸಲಾಗಿದೆ. ಕೆಳವರ್ಗದಿಂದ ಬಂದ ಮಗುವಿನ ಜೊತೆ, ಮೇಲ್ವರ್ಗದ ಜನರು, ತಮ್ಮ ಮಕ್ಕಳನ್ನು ಜೊತೆಗೆ ಆಟವಾಡಲು, ಜೊತೆಯಾಗಿರಲು ಬಿಡುವುದಿಲ್ಲ. ಹೀಗಾಗಿ ಮಕ್ಕಳಲ್ಲಿ ಮೇಲು ಕೀಳು ಮನೋಭಾವನೆ ಬೆಳೆಯತೊಡಗುತ್ತದೆ ಮತ್ತು ಸಮಾನತೆ ಹಕ್ಕಿನ ೧೫ನೇ ವಿಧಿಯ ನೇರ ಉಲ್ಲಂಘನೆಯಾಗುತ್ತದೆ. ಸಂವಿಧಾನದ ೧೭ನೇ ವಿಧಿಯು ನೇರವಾಗಿ ಅಸ್ಪೃಶ್ಯತೆಯನ್ನು ನಿಷೇಧಿಸುತ್ತದೆ. ಆದರೂ ಹಳ್ಳಿಗಳಲ್ಲಿರುವ ಜಾತಿ ಪದ್ಧತಿಯಿಂದ ಮಕ್ಕಳ ಶೋಷಣೆ ಮುಂದುವರೆದಿದೆ.

ಬ. ಬಾಲ್ಯ ವಿವಾಹಗಳು

ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣು ಮೈನೆರತೆರೆ ಸಾಕು, ಅದು ಅಂಗೈಯಲ್ಲಿರುವ ಹುಣ್ಣು ಎಂದು ಭಾವಿಸುತ್ತಾರೆ. ಅಪ್ರಾಪ್ತ ವಯಸ್ಸಿನಲ್ಲಿ ಮದುವೆ ಮಾಡಿ ಜವಾಬ್ದಾರಿಯನ್ನು ಕಳೆದುಕೊಳ್ಳುತ್ತಾರೆ. ಇಂತಹ ೨೮ ಪ್ರಕರಣಗಳು ಈ ಗ್ರಾಮ ಪಂಚಾಯ್ತಿಯಲ್ಲಿ ಕಂಡುಬಂದಿವೆ. ಬಾಲ್ಯ ವಿವಾಹದಿಂದಾಗಿ ಹೆಣ್ಣು ಮಕ್ಕಳು ಗರ್ಭಿಣಿಯರಾಗಿ ಹೆರಿಗೆ ಸಮಯದಲ್ಲಿ ತಾಯಿ

ಮತ್ತು ಮಗು ಮರಣ ಹೊಂದುವ ಸಂಭವ ಹೆಚ್ಚಾಗಿರುತ್ತದೆ. ಇದೂ ಕೂಡ ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಕಾರಣವಾಗುತ್ತದೆ.

ಸಿ. ದೇವದಾಸಿ ಪದ್ಧತಿ

ಜಾಲಿಬೆಂಚಿ ಗ್ರಾಮದಲ್ಲಿ ಮೂರು ದೇವದಾಸಿ ಕುಟುಂಬಗಳಿವೆ. ಈ ದೇವದಾಸಿಯರು ತಲಾ ಮೂರು ಮಕ್ಕಳನ್ನು ಪಡೆದಿದ್ದಾರೆ. ಆದರೆ ಈ ಮಕ್ಕಳ ಮುಂದಿನ ಭವಿಷ್ಯದ ಬಗ್ಗೆ ಚಿಂತಿಸುವಂತಾಗಿದೆ. ದೇವದಾಸಿ ತಾಯಂದಿರಿಗೆ ಯಾವುದೇ ಆಸ್ತಿ ಇಲ್ಲ. ಇವರ ಕೈಹಿಡಿದವ ಈಗ ಜೊತೆಗಿಲ್ಲ ಮತ್ತು ಯಾವುದೇ ಆರ್ಥಿಕ ನೆರವು ನೀಡಿಲ್ಲ. ಹೀಗಾಗಿ ಇಂಥ ಮಕ್ಕಳು ಬೀದಿಪಾಲಾಗುತ್ತಾರೆ. ಎಲ್ಲ ಮಕ್ಕಳಂತೆ ಈ ಮಕ್ಕಳು ತಂದೆಯ ಹೆಸರನ್ನು ಹೇಳಿಕೊಳ್ಳಲು ಮುಜುಗರ ಪಡುತ್ತಾರೆ. ಇಂತಹ ಮಕ್ಕಳಿಗೆ ಪೋಷಣೆ, ರಕ್ಷಣೆ ಇಲ್ಲದಂತಾಗುತ್ತದೆ. ಆದ್ದರಿಂದ ದೇವದಾಸಿ ಪದ್ಧತಿಯೂ ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಕಾರಣವಾಗಿದೆ.

ಡಿ. ವೃತ್ತಿ ಕಸುಬುಗಳು

ಮಕ್ಕಳ ಹಕ್ಕುಗಳ ಉಲ್ಲಂಘನೆ ವೃತ್ತಿಕಸುಬುಗಳು ಕಾರಣವಾಗಿವೆ. ಒಂದು ಜಾತಿಯ ಜನರು ಅವರ ಜಾತಿಗನುಗುಣವಾಗಿ ವೃತ್ತಿಯನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಉದಾ:- ಮಾಡಿವಾಳ ಸಮುದಾಯದ ವ್ಯಕ್ತಿ ಪ್ರತಿದಿನ ತನ್ನ ಬಟ್ಟೆ ತೊಳೆಯುವ ಕೆಲಸವನ್ನು ಮಾಡುವಾಗ ಗ್ರಾಮವು ಬೆಳೆದಂತೆ ಒಕ್ಕಲು ಮನೆಗಳು ಹೆಚ್ಚಾಗುತ್ತವೆ. ಆಗ ಬೇರೆ ದಾರಿ ಇಲ್ಲದೆ ತನ್ನ ಒಕ್ಕಲುನ್ನು ಉಳಿಸಿಕೊಳ್ಳುವ ಸಲುವಾಗಿ ಮಕ್ಕಳನ್ನು ತನ್ನ ಜೊತೆಗೆ ಸೇರಿಸಿಕೊಳ್ಳುತ್ತಾನೆ. ಇಂತಹ ಹಲವಾರು ಪ್ರಕರಣಗಳು ಈ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಕಂಡುಬರುತ್ತವೆ. ಆದ್ದರಿಂದ ವೃತ್ತಿ ಕಸುಬುಗಳು ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಕಾರಣವಾಗಿವೆ.

ಇ. ಲಿಂಗತಾರತಮ್ಯ

ಈ ಗ್ರಾಮ ಪಂಚಾಯಿತಿಯಲ್ಲಿ ಲಿಂಗ ತಾರತಮ್ಯವು ಹೆಚ್ಚಾಗಿ ಕಂಡುಬರುತ್ತದೆ. ಗಂಡು ಮಕ್ಕಳನ್ನು ಬೆಳಿಗ್ಗೆ ಪಠ್ಯ ಚಟುವಟಿಕೆಗಳಲ್ಲಿ ತೊಡಗಿಸಿದರೆ, ಹೆಣ್ಣು ಮಕ್ಕಳನ್ನು ಸೆಗಣಿ ಬಳೆಯಲು, ತಾಯಿಗೆ ಅಡಿಗೆ ಕೆಲಸದಲ್ಲಿ ನೆರವಾಗಲು ಬಳಸಿಕೊಳ್ಳುತ್ತಾರೆ. ಹೆಣ್ಣು ಮಕ್ಕಳನ್ನು ಹೆಚ್ಚು ಓದಿಸಿದರೆ ಹೆಚ್ಚು ಓದಿರುವ ವಿದ್ಯಾವಂತನನ್ನು ಹುಡುಕಿ ವರೋಪಚಾರ ಮಾಡಬೇಕಾಗುತ್ತದೆ. ಅಲ್ಲದೆ ಆರ್ಥಿಕ ಹೊರೆಯಾಗಿ ಕಷ್ಟವನ್ನು ಅನುಭವಿಸಿಬೇಕಾಗುತ್ತದೆ. ಹೆಣ್ಣು ಮಕ್ಕಳನ್ನು ಓದಿಸಿದರೆ ಗಂಡು ಮಗುವಿನಂತೆ ದುಡಿದು ತಂದೆ ತಾಯಿಗಳನ್ನು ಸಲಹುವುದಿಲ್ಲ. ಎಂಬೆಲ್ಲ ಕಾರಣದಿಂದ ಲಿಂಗತಾರತಮ್ಯ ಮಾಡಲಾಗುತ್ತದೆ. ಈ ಎಲ್ಲಾ ಅಂಶಗಳು ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಕಾರಣವಾಗಿವೆ.

೩. ಸರ್ಕಾರಗದ ನೆಲೆ

ಮಕ್ಕಳ ಹಕ್ಕುಗಳನ್ನು ಜಾರಿಗೊಳಿಸಲು ಸರ್ಕಾರ ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ. ಬಡ ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸಲು ಅಂಗನವಾಡಿ ಕೇಂದ್ರಗಳನ್ನು ತೆಗೆದಿದೆ. ಮಕ್ಕಳು ರೋಗರುಜಿನಗಳಿಂದ ಮುಕ್ತರಾಗಿ ಆರೋಗ್ಯವಂತರಾಗಿ ಬಾಳಬೇಕೆಂದು ಆರೋಗ್ಯಕೇಂದ್ರಗಳನ್ನು ತೆರೆದಿದೆ. ಯಾವೊಬ್ಬ ಮಗುವು ಕೂಡ ಶಾಲೆಯಿಂದ ಹೊರಗೆ ಉಳಿಯಬಾರದೆಂಬ ಉದ್ದೇಶದೊಂದಿಗೆ ಪ್ರತಿಹಳ್ಳಿಯಲ್ಲಿ ಸರ್ಕಾರಿ ಶಾಲೆಗಳನ್ನು ತೆರೆಯಲಾಗಿದೆ. ಇವೆಲ್ಲವುಗಳು ಮಕ್ಕಳ ಹಕ್ಕುಗಳನ್ನು ಒದಗಿಸಲು ಮಾಡುವಂಥ ಪ್ರಯತ್ನಗಳೇ. ಆದರೆ ಅವುಗಳು ಸಮರ್ಪಕವಾಗಿ ಮಕ್ಕಳಿಗೆ ತಲುಪುತ್ತಿವೆಯೇ ಎಂಬುದು ಮುಖ್ಯ ಪ್ರಶ್ನೆಯಾಗಿದೆ. ಇಂತಹ ಪ್ರಶ್ನೆಗಳನ್ನಿಟ್ಟುಕೊಂಡು ಸರ್ಕಾರದ ನೆಲೆಯಲ್ಲಿ ಶ್ರೀಧರಗಡ್ಡೆ ಪಂಚಾಯಿತಿ ವ್ಯಾಪ್ತಿಯಲ್ಲಿ ಮಕ್ಕಳ ಹಕ್ಕುಗಳು ಉಲ್ಲಂಘನೆಗೆ ಕಾರಣವಾದ ಅಂಶಗಳನ್ನು ಪಟ್ಟಿ ಮಾಡಲಾಗಿದೆ.

ಎ. ಅಸಮರ್ಪಕ ಯೋಜನೆಗಳು

ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸರ್ಕಾರದ ಯೋಜನೆಗಳನ್ನು ನೋಡಿದಾಗ ಹಲವಾರು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಅಂಗನವಾಡಿ ಕೇಂದ್ರಗಳನ್ನು ಮಕ್ಕಳಿರುವ ಪ್ರದೇಶದಿಂದ ತುಂಬಾ ದೂರದಲ್ಲಿ ಕಟ್ಟಿರುವುದು, ತಿಪ್ಪೆಗುಂಡಿಗಳ ಪಕ್ಕದಲ್ಲಿ ಕಟ್ಟಿಸಿರುವುದು, ಚರಂಡಿ ನೀರು ಕೇಂದ್ರ ಪಕ್ಕದಲ್ಲಿ ಹರಿಯುವುದು, ಶಾಲೆಗಳನ್ನು ರಸ್ತೆ ಬದಿ, ತಿಪ್ಪೆಗುಂಡಿ, ಶೌಚಾಲಯದ ಪಕ್ಕದಲ್ಲಿ ಕಟ್ಟಿಸಿರುವುದು, ಅವುಗಳ ಸ್ವಚ್ಚತೆಗೆ ಯಾರನ್ನು ನೇಮಿಸದಿರುವುದು ಕಂಡು ಬರುತ್ತದೆ. ಇಂತಹ ಪರಿಸರದಲ್ಲಿರುವ ಸರ್ಕಾರಿ ಸೇವೆಗಳು ಮಕ್ಕಳ ಹಿತಕ್ಕೆ ಪೂರಕವಾಗಿರುವುದಿಲ್ಲ. ಹೀಗಾಗಿ ಅವುಗಳ ಸದ್ಭಳಕೆ ಆಗುವುದಿಲ್ಲ. ಇಂತಹ ಅಸಮರ್ಪಕ ಯೋಜನೆಗಳು ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಕಾರಣವಾಗಿವೆ.

ಬ. ಇಲಾಖೆಗಳ ನಿರ್ಲಕ್ಷ್ಯ

ಯಾವುದೇ ಒಂದು ಸರ್ಕಾರದ ವ್ಯವಸ್ಥೆಯು ಸುಸೂತ್ರವಾಗಿ ನಡೆಯಬೇಕೆಂದರೆ ಅಧಿಕಾರಿಗಳು ಜವಾಬ್ದಾರಿ ಮತ್ತು ಕಾಳಜಿಯಿಂದ ಕೆಲಸ ಮಾಡಬೇಕಾಗುತ್ತದೆ. ಹಳ್ಳಿಗಳಲ್ಲಿರುವ ರೋಗಪೀಡಿತ, ಅಂಗವಿಕರ ಮಕ್ಕಳನ್ನು ಗುರುತಿಸದೆ ಇರುವುದು, ಶಾಲಾ ಶಿಕ್ಷಕರು ಎಲ್ಲಾ ಮಕ್ಕಳನ್ನು ದಾಖಲು ಮಾಡಿಕೊಂಡಿದ್ದೇವೆ ಎಂದು ಹೇಳಿ ಶಾಲೆ ಬಿಟ್ಟ ಮಕ್ಕಳನ್ನು ಮುಖ್ಯವಾಹಿನಿ ತರದೆ ಸುಳ್ಳು ಅಂಕಿಅಂಶ ನೀಡುವುದು, ಆರೋಗ್ಯ ಕಾರ್ಯಕರ್ತೆಯರು ಕೇಂದ್ರಸ್ಥಾನದಲ್ಲಿ ವಾಸವಾಗದಿರುವುದು ಇಂತಹ ನಿರ್ಲಕ್ಷ ತನದ ಅಂಶಗಳು ಮಕ್ಕಳ ಹಕ್ಕುಗಳ ಉಲ್ಲಂಘನೆ ಕಾರಣವಾಗಿವೆ.

ಸಿ. ನಿರಂಕುಶ ಪ್ರಭುತ್ವ

ಗ್ರಾಮ ಪಂಚಾಯಿತಿಗಳಲ್ಲಿ ಸರ್ಕಾರಿ ನೌಕರರು ತಮಗೆ ವಹಿಸಿರುವ ಜವಾಬ್ದಾರಿಯನ್ನು ನಿಷ್ಠೆಯಿಂದ ಮಾಡವುದು ಬಿಟ್ಟು ನಿರಂಕುಶ ಪ್ರಭುಗಳಂತೆ ವರ್ತಿಸುತ್ತಾರೆ. ಅಧಿಕಾರಿಗಳ ಮಾತು ಕೇಳಿದವರಿಗೆ ಮನೆ ಮತ್ತಿತರ ಸೌಲಭ್ಯಗಳನ್ನು ಒದಗಿಸದಿರುವುದು, ಕುಟುಂಬ ಪಡಿತರ ಚೀಟಿ ವಿತರಣೆಯಲ್ಲಿ ತಾರತಮ್ಯ ಮಾಡುವುದು ಮತ್ತು ಮಕ್ಕಳ ಹಿತ ದೃಷ್ಟಿಯಿಂದ ಅಧಿಕಾರಿಗಳು ನಿರ್ಣಯವನ್ನು ತೆಗೆದುಕೊಳ್ಳದೇ ಇರುವುದು ಇಂತಹ ಅಂಶಗಳು ಮಕ್ಕಳ ಹಕ್ಕುಗಳ ಉಲ್ಲಂಘನೆ ಕಾರಣವಾಗಿವೆ.

ಡಿ. ಕಳಪೆ ಸೇವಾ ಸೌಲಭ್ಯಗಳು

ಅಂಗನವಾಡಿ ಕೇಂದ್ರದಲ್ಲಿ ಬಡಮಕ್ಕಳಿಗೆ ಒದಗಿಸುವ ಪೌಷ್ಟಿಕ ಆಹಾರ ಕಳಪೆ ಮಟ್ಟದ್ದಾಗಿರುತ್ತದೆ. ಹೆಸರುಕಾಳು, ಅಕ್ಕಿ, ಮುಂತಾದವುಗಳಲ್ಲಿ ಹುಳು, ಮಣ್ಣು, ಕಸಕಡ್ಡಿ ಸೇರಿರುವುದರಿಂದ ಅವುಗಳನ್ನು ಬಳಸಲು ಯೋಗ್ಯವಾಗಿರುವುದಿಲ್ಲ. ಇದರಿಂದ ಮಕ್ಕಳಿಗೆ ಪೌಷ್ಟಿಕಾಂಶ ಹೆಚ್ಚಳವಾಗದೆ ಅಪೌಷ್ಟಿಕತೆಯಿಂದ ನರಳುತ್ತಾರೆ. ಈ ರೀತಿಯ ಅಂಶಗಳು ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಕಾರಣವಾಗಿವೆ.

ಇ. ಮೇಲುಸ್ತುವಾರಿ ಕೊರತೆ

ಹಳ್ಳಿಗಳಲ್ಲಿ ನೇಮಕವಾಗಿರುವ ಅಂಗನವಾಡಿ ಕಾರ್ಯಕರ್ತೆಯರು ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಗಳು, ಶಾಲಾ ಶಿಕ್ಷಕರು, ಮತ್ತು ಆರೋಗ್ಯ ಕಾರ್ಯಕರ್ತೆಯರು ಮಕ್ಕಳ ಹಿತಕ್ಕೆ ಕೆಲಸ ಮಾಡಲು ನೇಮಕವಾಗಿರುತ್ತಾರೆ. ಇವರ ಮೇಲೆ ಇರುವ ಅಧಿಕಾರಿಗಳು ಸರಿಯಾಗಿ ಮೇಲುಸ್ತುವಾರಿ ಮಾಡುವುದಿಲ್ಲ. ಒಂದು ವೇಳೆ ಉಸ್ತುವಾರಿ ನಡೆಸಿದಾಗ ತಪ್ಪುಗಳನ್ನು ನೋಡಿದರೂ ನೋಡದವರಂತೆ ಮುಲಾಜಿಗೆ ಬಿದ್ದು ಹೊರಟು ಹೋಗುತ್ತಾರೆ. ಎಲ್ಲಾ ಅಂಶಗಳು ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಕಾರಣವಾಗಿವೆ.

ಎಫ್. ಲಂಚಗುಳಿತನ

ಈ ಗ್ರಾಮ ಪಂಚಾಯಿತಿಯಲ್ಲಿ ಲಂಚದ ಪ್ರಕರಣಗಳು ಕಂಡುಬರುತ್ತವೆ. ಅರ್ಹ ಬಡವರಿಗೆ ಆಶ್ರಯ ಯೋಜನೆಯ ಮನೆಯನ್ನು ಕಟ್ಟಿಸಿಕೊಡುವ ಬದಲು ಹಣ ನೀಡಿದವರಿಗೆ, ಕಟ್ಟಿಸಿಕೊಡುವುದು, ಹೆರಿಗೆ ಭತ್ಯೆಗಳಲ್ಲಿ ಅರ್ಧದಷ್ಟು ಹಣವನ್ನು ತಾವೇ ಪಡೆಯುವುದು, ಆಹಾರ ಸಾಮಾಗ್ರಿಗಳನ್ನು ಮಾರಿಕೊಳ್ಳುವುದು ಇತ್ಯಾದಿ. ಹೀಗಾಗಿ ಬಡಕುಟುಂಬಗಳು ವಸತಿ ಹೀನವಾಗುತ್ತವೆ. ಪೌಷ್ಟಿಕ ಆಹಾರಗಳನ್ನು ಮಾರಿಕೊಳ್ಳುವುದರಿಂದ ಮಗುವಿನ ಆರೋಗ್ಯ ಮಟ್ಟ ಸುಧಾರಣೆಯಾಗುವುದಿಲ್ಲ ಈ ಎಲ್ಲ ಅಂಶಗಳು ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಕಾರಣವಾಗಿವೆ.

ಜಿ. ಸ್ವಾರ್ಥ

ಅರ್ಹ ಬಡವರನ್ನು ಗುರುತಿಸಿ ಪಡಿತರ ಚೀಟಿಯನ್ನು ವಿತರಿಸುವ ಮೂಲಕ ಬಡತನ ನಿರ್ಮೂಲನೆಗೆ ಕಾರಣವಾಗುವ ಬದಲು ಜನಪ್ರತಿನಿಧಿಗಳು, ಅಧಿಕಾರಶಾಹಿಗಳು ತಮ್ಮ ಸಹೋದರ ಸಂಬಂಧಿಗಳ ಹೆಸರುಗಳನ್ನು ಸೇರಿಸುವುದು. ಮನೆಗಳನ್ನು ಬಂಧುಬಳಗದವರಿಗೆ ಹಂಚುವುದು, ಸರ್ಕಾರದ ಹಣವನ್ನು ಕಳಪೆ ಕಾಮಗಾರಿಗಳಿಂದ ಲೂಟಿ ಮಾಡಿರುವುದು ಕಂಡುಬರುತ್ತದೆ. ಹೀಗಾಗಿ ಬಡ ಕುಟುಂಬದ ಸ್ಥಿತಿ ಸುಧಾರಣೆಯಾಗದೆ ಅವರ ಮಕ್ಕಳ ಸ್ಥಿತಿಗತಿಯಲ್ಲಿಯೂ ಸುಧಾರಣೆಯಾಗುವುದಿಲ್ಲ ಈ ಎಲ್ಲಾ ಅಂಶಗಳು ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಕಾರಣವಾಗಿವೆ.

ಮಕ್ಕಳ ಹಕ್ಕುಗಳ ಉಲ್ಲಂಘನೆಯ ಪರಿಣಾಮಗಳು

ಭಾರತ ಸಂವಿಧಾನ ಮತ್ತು ಅದಕ್ಕೆ ಸಂಬಂಧಿಸಿದ ಅನೇಕ ಕಾನೂನುಗಳು ಮಕ್ಕಳ ಹಿತವನ್ನು ಕಾಪಾಡಲು ಮುಂದಾಗಿರುವುದು ಈಗಾಗಲೇ ನಮಗೆ ತಿಳಿದಿರುವ ವಿಷಯ ಸಂವಿಧಾನದ ಆಶಯಕ್ಕನುಗುಣವಾಗಿ ಮಕ್ಕಳನ್ನು ರಕ್ಷಿಸಲು ಅನೇಕ ಕ್ರಿಯಾಯೋಜನೆಗಳನ್ನು ಜಾರಿಗೆ ತಂದಿದೆ. ಸ್ಥಳೀಯ ಮಟ್ಟದಲ್ಲಿ ಅಂಗನವಾಡಿ, ಆರೋಗ್ಯ ಕೇಂದ್ರ ಮತ್ತು ಶಾಲೆಗಳನ್ನು ತೆರೆಯಲಾಗಿದೆ. ಆದರೆ ಅವು ಸಮರ್ಪಕವಾಗಿ ಕಾರ್ಯ ನಿರ್ವಹಿಸದೇ ಇರುವುದರಿಂದ ಮತ್ತು ಸಮರ್ಪಕ ಮೇಲುಸ್ತುವಾರಿ ಮಾಡದಿರುವುದರಿಂದ ಅವುಗಳ ಪರಿಣಾಮ ಮಕ್ಕಳ ಮೇಲಾಗಿದೆ. ಪ್ರಸ್ತುತ ಮಕ್ಕಳ ಹಕ್ಕುಗಳ ಉಲ್ಲಂಘನೆಯ ಪರಿಣಾಮಗಳನ್ನು ಈ ಕೆಳಗಿನಂತೆ ವಿವರಿಸಿದೆ.

೧. ತಾಯಿ ಮಕ್ಕಳ ಮರಣದಲ್ಲಿ ಏರಿಕೆ

ಸರ್ಕಾರವು ಈಗಾಗಲೇ ಪ್ರತಿ ಎರಡು ಗ್ರಾಮ ಪಂಚಾಯಿತಿಗಳಿಗೆ ಒಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತೆರೆದಿದೆ. ಪ್ರತಿ ೫ ಸಾವಿರ ಜನಸಂಖ್ಯೆಗೆ ಒಂದರಂತೆ ಆರೋಗ್ಯ ಉಪಕೇಂದ್ರವನ್ನು ತೆರೆದಿದೆ. ಆದರೆ ಅಧಿಕಾರಿಗಳು ತಮ್ಮ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುವುದಿಲ್ಲ. ಹೆರಿಗೆ ಸಮಯದಲ್ಲಿ, ಹುಟ್ಟಿದ ನಂತರ ಸರಿಯಾದ ಔಷದೋಪಚಾರಗಳು ಸಿಗದಿದ್ದರೆ ಹುಟ್ಟಿದ ಮಕ್ಕಳು ಬದುಕನ್ನು ಕಾಣದೆ ಮರಣ ಹೊಂದುತ್ತವೆ. ಇಂತಹ ಪರಿಸ್ಥಿತಿ ಪ್ರಸ್ತುತ ಗ್ರಾಮಪಂಚಾಯಿತಿಯಲ್ಲಿ ಮುಂದುವರೆದಿದೆ.

೨. ಅನಾರೋಗ್ಯ, ಅಂಗವಿಕಲ ಮಕ್ಕಳು

ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಉಪಕೇಂದ್ರಗಳನ್ನು ಕಟ್ಟಿಸಲಾಗಿದೆ. ಆದರೆ ಅವುಗಳ ಸಮರ್ಪಕ ನಿರ್ವಹಣೆ ಇಲ್ಲವಾಗಿದೆ. ಅಲ್ಲದೆ ಆರೋಗ್ಯ ಕಾರ್ಯಕರ್ತೆಯರು

ಎಲ್ಲಾ ಮಕ್ಕಳಿಗೆ ರೋಗ ನಿರೋಧಕ ಲಸಿಕೆಗಳನ್ನು ಹಾಕುವುದಿಲ್ಲ. ಇಂತಹ ಕಾರಣಗಳಿಂದ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಮಕ್ಕಳು ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಮಕ್ಕಳಿಗೆ ಕಾಲಕಾಲಕ್ಕೆ ಚುಚ್ಚುಮದ್ದು ಮತ್ತಿತರ ಸೌಕರ್ಯಗಳು ದೊರೆಯದಿರುವುದರಿಂದ ಮಕ್ಕಳು ಅಂಗವಿಕಲತೆಗೆ ಒಳಗಾಗುತ್ತಾರೆ.

೩. ಶಿಕ್ಷಣ, ಮನೋರಂಜನೆಯಿಂದ ವಂಚನೆ

ಮಕ್ಕಳು ಶಾಲೆಗೆ ಹೋಗದೆ ಹೊರಗುಳಿದಿರುವುದರಿಂದ ಅನಕ್ಷರಸ್ತರ ಪ್ರಮಾಣ ಹೆಚ್ಚುತ್ತಾ ಹೋಗುತ್ತದೆ. ಜೊತೆಗೆ ಆರೋಗ್ಯಕರ ಬಾಲ್ಯ ಅನುಭವಿಸದೆ ಹಕ್ಕಿನಿಂದ ವಂಚಿತರಾಗುತ್ತಾರೆ. ಸಮಾಜದಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗಿರುವ ಮಾಹಿತಿ ಸಿಗದೆ ತಪ್ಪುದಾರಿ ಹಿಡಿಯುವ ಸಂಭವವಿರುತ್ತದೆ. ಪ್ರಸ್ತುತ ಪಂಚಾಯಿತಿಯಲ್ಲಿ ಮಕ್ಕಳು ಶಿಕ್ಷಣ ಮನೋರಂಜನೆ ಪಡೆಯದೆ ಶೋಷಣೆಗೊಳಗಾಗಿದ್ದಾರೆ.

೪. ಬಾಲಕಾರ್ಮಿಕತೆ

ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಶೇ ೪೦ ರಷ್ಟು ಮಕ್ಕಳು ಶಾಲೆಯಿಂದ ಹೊರಗಿದ್ದಾರೆ. ಕುಟುಂಬದವರ ಹೊಟ್ಟೆ ತುಂಬಿಸುವ ಸಲುವಾಗಿ ಕೂಲಿ ಕೆಲಸ ಮಾಡುತ್ತಾರೆ. ಸರ್ಕಾರವು ಅರ್ಹಬಡವರನ್ನು ಗುರುತಿಸಿ ಪಡಿತರ ಚೀಟಿ ವಿತರಣೆ ಮಾಡದಿರುವುದರಿಂದ ಅವರ ಮಕ್ಕಳ ಬಾಲಕಾರ್ಮಿಕರಾಗುತ್ತಾರೆ. ಇದರಿಂದಾಗಿ ಅಪಾರವಾದ ಮಾನವ ಸಂಪನ್ಮೂಲ ಸಮರ್ಪಕವಾಗಿ ಬಳಕೆಗೊಳ್ಳುವುದಿಲ್ಲ.

೫. ಬಿಕ್ಷಾಟನೆ, ಬೀದಿ ಮತ್ತು ಅನಾಥ ಮಕ್ಕಳ ಹೆಚ್ಚಳ

ಗ್ರಾಮೀಣ ಪ್ರದೇಶದಲ್ಲಿರುವ ಬಡಕುಟುಂಬಗಳಿಗೆ ವಸತಿ ಸೌಕರ್ಯ ಮತ್ತು ಉದ್ಯೋಗ ಸೌಲಭ್ಯ ಕಲ್ಪಿಸದಿದ್ದರೆ ಆ ಕುಟುಂಬದ ಮಕ್ಕಳು ಬಿಕ್ಷಾಟನೆಗಾಗಿ ಬೀದಿಸುತ್ತವುದು, ಅನಾಥಮಕ್ಕಳಿಗೆ ರಕ್ಷಣೆಯಿಲ್ಲದಂತಾಗುತ್ತದೆ. ಇಂತಹ ಕೆಟ್ಟ ಪರಿಸರದಲ್ಲಿ ಬೆಳೆದಂತಹ ಮಕ್ಕಳು ಸಮಾಜಕಂಟಕರಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ.

೬. ಮಾನಸಿಕ ಪರಿಣಾಮ

ಹುಟ್ಟಿದಾಗ ಎಲ್ಲ ಮಕ್ಕಳು ಆಕಾಶದಂತೆ ಶುಭ್ರವಾಗಿರುತ್ತಾರೆ. ಬೆಳೆಯುತ್ತಾ ಬೆಳೆಯುತ್ತಾ ಸಮಾಜದಿಂದ ಉಂಟಾಗುವ ಪರಿಣಾಮಗಳು ಮಕ್ಕಳ ಮೇಲಾಗುತ್ತವೆ. ಇವು ಮಕ್ಕಳ ಮನೋಭಾವನೆಯನ್ನು ಬದಲಿಸುತ್ತವೆ. ಬಾಲ್ಯದಲ್ಲಿ ತಮಗೆ ಬೇಕೆನಿಸಿದ್ದು ಸಿಗದಿದ್ದಾಗ ಅವು ಬೇರೊಂದು ರೀತಿಯ ಪರಿಣಾಮಬೀರಿ ಕಳ್ಳಕಾಕರಾಗುವ ಸಂಭವ ಹೆಚ್ಚಾಗಿರುತ್ತದೆ. ಒಳ್ಳೆ ಪರಿಸರದಲ್ಲಿ ಬೆಳೆದ ಮಕ್ಕಳು ಸಾಮಾನ್ಯವಾಗಿ ಉತ್ತಮ ನಾಗರೀಕರಾಗುತ್ತಾರೆ.

ಅಡಿ ಟಿಪ್ಪಣಿಗಳು

೧. ಗುರುಮೂರ್ತಿ ಕೆ.ಜಿ: ೧೯೯೮; ಪ್ರೌಢರ ಜಗತ್ತಿನಲ್ಲಿ ಮಕ್ಕಳು, ಪು.೬೭

೨. ಬೆಕೆಟ್ ಡಿಸೋಜಾ: ೨೦೦೪; ಎಳೆಯರಿಗೊಂದು ಬಾಳ್ವೆ, ಪು.೪೧

೩. ಭಾರತಿ ಜೀವಿ: ೧೯೯೯; ಮಕ್ಕಳ ಕಲ್ಯಾಣಕಾರ್ಯ, ಪು.೮೨

೪. ಜಸ್ವೀರ್ ಸಿಂಗ್: ರಾಹು(ಅನು): ೨೦೦೦; ನಮ್ಮ ಬಡತನ ಸಂವಿಧಾನಕ್ಕೊಂದು ಕಳಂಕ, ಪು.೧೯

೫. ಸಂಗೊಳ್ಳಿ ಎನ್.ಎಸ್: ೨೦೦೬; ಮಾನವ ಹಕ್ಕುಗಳು, ಪು.೪೮

೬. ವಾಸುದೇವ ಶರ್ಮಾ: ೨೦೦೨; ಮಕ್ಕಳ ಹಕ್ಕುಗಳು, ಪು.೫

೭. ಅದೇ, ಪು.೬

೮. ಅದೇ, ಪು.೬

೯. ಸಂಗೊಳ್ಳಿ ಎನ್.ಎಸ್: ೨೦೦೬; ಮಾನವ ಹಕ್ಕುಗಳು, ಪು.೪೯

೧೦. ಜಸ್ವೀರ್ ಸಿಂಗ್: ರಾಹು(ಅನು): ೨೦೦೦; ನಮ್ಮ ಬಡತನ ಸಂವಿಧಾನಕ್ಕೊಂದು ಕಳಂಕ, ಪು.೨೦

೧೧. ಅದೇ, ಪು.೨೦

೧೨. ಅದೇ, ಪು.೨೦

೧೩. ವಾಸುದೇವ ಶರ್ಮಾ: ೨೦೦೨; ಮಕ್ಕಳ ಹಕ್ಕುಗಳು, ಪು.೭

೧೪. ಜಸ್ವೀರ್ ಸಿಂಗ್: ರಾಹು(ಅನು): ೨೦೦೦; ನಮ್ಮ ಬಡತನ ಸಂವಿಧಾನಕ್ಕೊಂದು ಕಳಂಕ, ಪು.೨೧

೧೫. ಬೆಕೆಟ್ ಡಿಸೋಜಾ: ೨೦೦೪; ಎಳೆಯರಿಗೊಂದು ಬಾಳ್ವೆ, ಪು.೪೩

೧೬. ಅದೇ, ಪು.೪೩

೧೭. ಅದೇ, ಪು.೪೩

೧೮. ಅದೇ, ಪು.೪೩

೧೯. ಅದೇ, ಪು.೪೩

೨೦. ಅದೇ, ಪು.೪೩

೨೧. ವಾಸುದೇವ ಶರ್ಮಾ: ೨೦೦೨; ಮಕ್ಕಳ ಹಕ್ಕುಗಳು, ಪು.೮೧

೨೨. ಬೆಕೆಟ್ ಡಿಸೋಜಾ: ೨೦೦೪; ಎಳೆಯರಿಗೊಂದು ಬಾಳ್ವೆ, ಪು.೪೫

೨೩. ಅದೇ, ಪು.೪೫

೨೪. ಅದೇ, ಪು.೪೫

೨೫. ಅದೇ, ಪು.೪೫

೨೬. ವಾಸುದೇವ ಶರ್ಮಾ: ೨೦೦೨; ಮಕ್ಕಳ ಹಕ್ಕುಗಳು, ಪು.೯

೨೭. ಅದೇ, ಪು.೯

೨೮. ಅದೇ, ಪು.೩೬

೨೯. ಅದೇ, ಪು.೩೮

೩೦. ಅದೇ, ಪು.೪೨

೩೧. ಅದೇ, ಪು.೫೦

೩೨. ಅದೇ, ಪು.೫೨

೩೩. ಅದೇ, ಪು.೬೮

ಅಧ್ಯಾಯ–೪

ಮಕ್ಕಳ ಸೇವಾ ಸೌಲಭ್ಯಗಳು ಮತ್ತು ಕ್ರಿಯಾಯೋಜನೆಗಳು

೪.೧. ಪ್ರಸ್ತುತ ಸೇವಾ ಸೌಲಭ್ಯಗಳ ಸ್ಥಿತಿಗತಿ

೪.೨. ಕರ್ನಾಟಕ ರಾಜ್ಯ ಮಕ್ಕಳ ಕ್ರಿಯಾಯೋಜನೆ

೪.೩. ಗ್ರಾಮಪಂಚಾಯಿತಿ ಕಾರ್ಯಗಳು ಮತ್ತು ಮಕ್ಕಳು

ಅಧ್ಯಾಯ-೪

ಮಕ್ಕಳ ಸೇವಾ ಸೌಲಭ್ಯಗಳು ಮತ್ತು ಕ್ರಿಯಾಯೋಜನೆಗಳು

ಭಾರತದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿ ಬ್ರಿಟೀಷರ ದಾಸ್ಯದಿಂದ ಬಿಡುಗಡೆಗೊಂಡ ನಂತರ ನಮ್ಮದೇ ಆದ ಸಂವಿಧಾನವನ್ನು ೧೯೫೦ರಲ್ಲಿ ರಚನೆಮಾಡಿಕೊಳ್ಳಲಾಯಿತು. ದೇಶದಲ್ಲಿರುವ ಆಶಕ್ತರ, ಅನಾಥರ, ದೀನ ದಲಿತರ ಉದ್ಧಾರಕ್ಕಾಗಿ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ಒದಗಿಸಿಕೊಟ್ಟು ಅದರಂತೆ ನಡೆಯಲು ಅನೇಕ ಕಾಯ್ದೆ ಕಾನೂನುಗಳನ್ನು ರೂಪಿಸಲಾಯಿತು. ಸಮಾಜದಲ್ಲಿ ಅಸಮಾನತೆ ಹೋಗಲಾಡಿಸಿ ಸಮಾನ ನ್ಯಾಯ ಒದಗಿಸಲು ಸಂವಿಧಾನದ ವಿಧಿಗಳಲ್ಲಿ ಪ್ರಸ್ತಾಪಿಸಲಾಯಿತು. ಇಂತಹ ಸಂವಿಧಾನ ಬದ್ಧ ಹಕ್ಕನ್ನು ದೇಶದ ಪ್ರಜೆಗಳಾದ ಮಕ್ಕಳಿಗೂ ಒದಗಿಸಿಕೊಡಲು ಅನೇಕ ಕ್ರಿಯಾಯೋಜನೆಗಳನ್ನು, ಕಾನೂನುಗಳನ್ನು ರೂಪಿಸಲಾಯಿತು. ೧೯೭೪ರಲ್ಲಿ ಮಕ್ಕಳ ರಾಷ್ಟ್ರೀಯ ಕಾರ್ಯನೀತಿ, ೧೯೮೭ರಲ್ಲಿ ರಾಷ್ಟ್ರೀಯ ಬಾಲಕಾರ್ಮಿಕ ಕಾಯ್ದೆ ಮತ್ತು ೧೯೯೨ರ ರಾಷ್ಟ್ರೀಯ ಮಕ್ಕಳ ಕ್ರಿಯಾಯೋಜನೆ ಮುಂತಾದವುಗಳನ್ನು ರಚನೆ ಮಾಡಿ ಮಕ್ಕಳ ಹಕ್ಕುಗಳನ್ನು ಅನುಷ್ಠಾನಕ್ಕೆ ತರಲು ಬೇಕಾಗುವಂತಹ ಪೂರಕವಾದ ಸೇವಾಸೌಲಭ್ಯಗಳನ್ನು ಒದಗಿಸಲಾಯಿತು.

ದೇಶದಲ್ಲಿರುವ ಪ್ರತಿ ಮಗುವು ಅನಾರೋಗ್ಯ, ಅಂಗವಿಕಲತೆ, ರೋಗರುಜಿನಗಳಿಂದ ಮುಕ್ತವಾಗಿ ಆರೋಗ್ಯವಂತ ಪ್ರಜೆಯಾಗಿ ಬೆಳೆಯಲು ಹಳ್ಳಿಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಲಾಯಿತು. ಸಂವಿಧಾನದ ೨೧ಎ ವಿಧಿಯನ್ವಯ ೬ ರಿಂದ ೧೪ ವರ್ಷದ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸಲು ಪ್ರತಿ ಹಳ್ಳಿಗಳಿಗೂ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಯಿತು. ಹುಟ್ಟಿದ ಮಕ್ಕಳು ಬಡತನ ಇತ್ಯಾದಿ ಕಾರಣಗಳಿಂದ ಅಪೌಷ್ಟಿಕತೆಯಿಂದ ಬಳಲುವುದನ್ನು ತಪ್ಪಿಸಲು ಹಳ್ಳಿಗಳಲ್ಲಿ ಅಂಗನವಾಡಿ

ಕೇಂದ್ರಗಳನ್ನು ಪ್ರಾರಂಭಿಸಿ, ತಾಯಿ ಮತ್ತು ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸಿಲಾಯಿತು. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸಿ ಅಂತಹ ಕುಟುಂಬಗಳಿಗೆ ಆಹಾರ ಧಾನ್ಯಗಳನ್ನು ಸರಬರಾಜು ಮಾಡಲು ಹಳ್ಳಿಗಳಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲಾಯಿತು. ಈ ಎಲ್ಲ ಸೇವಾ ಸೌಲಭ್ಯಗಳು ಅತ್ಯಂತ ತಳಮಟ್ಟದಲ್ಲಿರುವ ನಾಗರೀಕರಿಗೆ ತಲುಪಿಸಿ, ಕಲ್ಯಾಣ ರಾಷ್ಟ್ರವಾಗಿ ನಿರ್ಮಾಣ ಮಾಡುವ ಉದ್ದೇಶವನ್ನು ಹೊಂದಲಾಯಿತು. ಈ ಉದ್ದೇಶದ ಈಡೇರಿಕೆಗೆ ಯೋಜನೆಗಳ ವರದಿ ತರಿಸಿಕೊಂಡು ಅವುಗಳ ವಿಮರ್ಶೆಯ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಗುತ್ತಿದೆ. ಈ ಮೌಲ್ಯ ಮಾಪನದಿಂದ ಬಂದ ಫಲಿತಾಂಶಗಳ ಆಧಾರದ ಮೇಲೆ ಹೊಸ ಹೊಸ ಯೋಜನೆಗಳನ್ನು ರೂಪಿಸಲಾಗುತ್ತದೆ. ಇದರ ಮೂಲಕ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಬದ್ಧತೆಯನ್ನು ಪುನರ್‌ದೃಢೀಕರಿಸುವ ಹಾಗೂ ಸಂವಿಧಾನದ ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶಕ ತತ್ವಗಳನ್ನು ಜಾರಿಗೆ ತರಲು ಪ್ರಯತ್ನಸಲಾಗುತ್ತಿದೆ. ಸಮಾಜದಲ್ಲಿ ಮಕ್ಕಳ ಮೇಲಾಗುವ ದೌರ್ಜನ್ಯ, ಹಿಂಸೆ, ಲೈಂಗಿಕ ಶೋಷಣೆ, ಬಾಲಕಾರ್ಮಿಕತೆ ಮುಂತಾದ ಅನಿಷ್ಟಗಳನ್ನು ತೊಡೆದು ಹಾಕಲು ಮಕ್ಕಳಿಗೆ ಸಂಬಂಧಿಸಿದ ಅನೇಕ ಕಾನೂನುಗಳನ್ನು ಜಾರಿಗೆ ತರಲಾಯಿತು. ಉದಾಹರಣೆ:- ಬಾಲ ನ್ಯಾಯ (ಆರೈಕೆ ಮತ್ತು ರಕ್ಷಣೆ) ಕಾಯಿದೆ ೨೦೦೨, ಬಾಲ ಕಾರ್ಮಿಕತೆ ನಿಷೇದ ಮತ್ತು ನಿಯಂತ್ರಣ ಕಾಯಿದೆ ೧೯೮೬, ಮುಂತಾದ ಕಾನೂನುಗಳ ಮೂಲಕ ಮಕ್ಕಳ ಹಕ್ಕುಗಳನ್ನು ರಕ್ಷಿಸಲಾಗುತ್ತಿದೆ.

೪.೧ ಪ್ರಸ್ತುತ ಸೇವಾ ಸೌಲಭ್ಯಗಳ ಸ್ಥಿತಿಗತಿ

ಮೇಲೆ ಪ್ರಸ್ತಾಪಿಸಿದಂತೆ ಮಕ್ಕಳ ಹಕ್ಕುಗಳ ರಕ್ಷಣೆಗೆ ಅನೇಕ ಕ್ರಿಯಾಯೋಜನೆ ಮತ್ತು ಕಾಯ್ದೆ ಕಾನೂನುಗಳನ್ನು ರೂಪಿಸಿದರೂ ಕೂಡ ಅವು ತಳಮಟ್ಟಕ್ಕೆ ಸಮರ್ಪಕವಾಗಿ ತಲುಪಲು ವಿಫಲವಾಗಿವೆಯೆಂಬುದು ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿಯ ಕ್ಷೇತ್ರಕಾರ್ಯ ಅಧ್ಯಯನದಿಂದ ತಿಳಿದು ಬರುತ್ತದೆ. ಸಂವಿಧಾನದ ಆಶಯದಂತೆ ಹಳ್ಳಿಗಳಲ್ಲಿ ಮಕ್ಕಳು ಶಿಕ್ಷಣವನ್ನು ಪಡೆಯಲು ಸರ್ಕಾರ ಶಾಲೆಗಳನ್ನು ತೆರೆದಿದೆ. ಆದರೆ ಅವುಗಳ ಗುಣಮಟ್ಟ ಮತ್ತು ನಿರ್ವಹಣೆ ವಾಸ್ತವದಲ್ಲಿ ಹೇಗಿದೆ? ಅವು ಮಕ್ಕಳ ಹಕ್ಕುಗಳನ್ನು ಒದಗಿಸಲು ಯೋಗ್ಯವಾಗಿವೆಯೇ ಎಂಬ ಪ್ರಶ್ನೆ ಶಾಲೆಗಳಿಗೆ ಭೇಟಿಕೊಟ್ಟಾಗ ಕಾಡುತ್ತದೆ. ಅದರಂತೆ ಅಂಗನವಾಡಿ ಕೇಂದ್ರಗಳ ಸ್ಥಿತಿಗತಿ ಹೇಗಿದೆ? ಅವು ಮಕ್ಕಳ ಆರೈಕೆ ಮತ್ತು ಪೋಷಣೆಗೆ ಬೇಕಾಗುವಂತಹ ಯೋಗ್ಯ ಪರಿಸರವನ್ನು ನಿರ್ಮಿಸಿಕೊಂಡಿವೆಯೇ?

ಆರೊಗ್ಯ ಕೇಂದ್ರಗಳ ಮೂಲ ಭೂತ ಸೌಲಭ್ಯಗಳು ಹೇಗಿವೆ? ಆರೋಗ್ಯ ಕೇಂದ್ರಕ್ಕೆ ವಿದ್ಯುತ್, ಹೆರಿಗೆ ಕಿಟ್, ಹಾಸಿಗೆ ಸೌಲಭ್ಯ ಮುಂತಾದ ಸಲಕರಣೆಗಳನ್ನು ಒದಗಿಸಲಾಗಿದೆಯೇ? ಈ ಸೇವಾ ಸೌಲಭ್ಯಗಳು ಎಲ್ಲರಿಗೂ ತಲುಪುವಂತೆ ಪೂರಕವಾದ ವಾತಾವರಣದಲ್ಲಿ ನಿರ್ಮಾಣ ಮಾಡಲಾಗಿದೆಯೇ? ಇಲ್ಲವೇ? ಎಂದು ಪಂಚಾಯ್ತಿ ವ್ಯಾಪ್ತಿಯಲ್ಲಿರುವ ಸೇವಾಸೌಲಭ್ಯಗಳನ್ನು ಗಮನಿಸಿದಾಗ ಈ ರೀತಿಯ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಕೆಲವೊಂದು ಸೇವಾ ಸೌಲಭ್ಯಗಳ ಪ್ರಸ್ತುತ ಸ್ಥಿತಿಗತಿಗಳನ್ನು ಕ್ಷೇತ್ರಕಾರ್ಯದಿಂದ ಗಮನಿಸಿ ದಾಖಲಿಸಿ ಕೆಳಗಿನಂತೆ ವಿವರಿಸಲಾಗಿದೆ.

೧. ಪ್ರಾಥಮಿಕ ಆರೋಗ್ಯ ಉಪಕೇಂದ್ರ, ಶ್ರೀಧರಗಡ್ಡೆ

ಈ ಫೋಟೋದಲ್ಲಿ ಕಾಣುತ್ತಿರುವ ಆರೋಗ್ಯ ಉಪಕೇಂದ್ರವು ಶ್ರೀಧರಗಡ್ಡೆ ಗ್ರಾಮದ ಪಂಚಾಯ್ತಿ ವ್ಯಾಪ್ತಿಗೆ ಒಳಪಡುತ್ತದೆ. ಈ ಉಪಕೇಂದ್ರಕ್ಕೆ ಜಾಲಿಬೆಂಚೆ, ಗುಡಾರನಗರ, ಲಕ್ಷ್ಮಿನಗರ, ಮತ್ತು ಶ್ರೀಧರಗಡ್ಡೆ ಗ್ರಾಮಗಳು ಸೇರುತ್ತವೆ. ಪ್ರಸ್ತುತ ಶ್ರೀಧರಗಡ್ಡೆಯಲ್ಲಿರುವ ಆರೋಗ್ಯ ಉಪಕೇಂದ್ರದ ಉಸ್ತುವಾರಿಯನ್ನು ಕಿರಿಯ ಆರೋಗ್ಯ ಮಹಿಳಾ ಸಹಾಯಕಿ ಶ್ರೀಮತಿ ಪದ್ಮಾವತಿಯವರು ವಹಿಸಿಕೊಂಡಿದ್ದಾರೆ. ಈ ಕೇಂದ್ರದಲ್ಲಿ ಖಾಲಿ ಇರುವ ಕಿರಿಯ ಆರೋಗ್ಯ ಪುರುಷಸಹಾಯಕ ಹುದ್ದೆಗೆ ಯಾರು ನೇಮಕವಾಗಿಲ್ಲ.

ಶ್ರೀಧರ ಗಡ್ಡೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ನಾಲ್ಕು ಗ್ರಾಮದ ಜನರು ಬಂದು ಸೇವಾ ಸೌಲಭ್ಯಗಳನ್ನು ಪಡೆಯುವಂತಹ ಸ್ಥಳದಲ್ಲಿ ಆರೋಗ್ಯ ಉಪಕೇಂದ್ರ ನಿರ್ಮಾಣವಾಗಿಲ್ಲ. ಲಕ್ಷ್ಮಿನಗರ ಜನರು ಈ ಉಪಕೇಂದ್ರದ ಸೇವೆಯನ್ನು ಪಡೆಯಲು ಬರಬೇಕಾದರೆ ಜಿಲ್ಲಾ ಕೇಂದ್ರ ಬಳ್ಳಾರಿಯನ್ನು ಹಾದು ಬರಬೇಕಾಗುತ್ತದೆ. ಇದರ ದೂರ ಒಟ್ಟು ೨೦ಕಿ.ಮಿಗಳು ಆದ್ದರಿಂದ ಈ ಉಪ ಕೇಂದ್ರಕ್ಕೆ ಬರದೆ ರೋಗಿಗಳು ಮತ್ತು ತಾಯಂದಿರು ಜಿಲ್ಲಾಕೇಂದ್ರಕ್ಕೆ ಹೋಗುತ್ತಾರೆ.

ಪ್ರಸ್ತುತ ಆರೋಗ್ಯ ಉಪಕೇಂದ್ರವು ಕಿರಿಯ ಆರೋಗ್ಯ ಮಹಿಳಾ ಸಹಾಯಕಿ ವಾಸಿಸುವಷ್ಟು ಯೋಗ್ಯವಾಗಿಲ್ಲ. ಏಕೆಂದರೆ ಈ ಕೇಂದ್ರಕ್ಕೆ ಸಮರ್ಪಕ ವಿದ್ಯುತ್ ಸೌಕರ್ಯವಿಲ್ಲ. ವಾಸಿಸಲು ಯೋಗ್ಯವಾಗಿರುವಂತಹ ಪರಿಸರ ಈ ಕೇಂದ್ರದ ಸುತ್ತಲೂ ಇಲ್ಲ. ಆರೋಗ್ಯ ಉಪಕೇಂದ್ರದ ಸುತ್ತಲೂ ಹುಲ್ಲು, ಕಟ್ಟಿಗೆ, ಕಲ್ಲು ಮಣ್ಣುಗಳನ್ನು ಹಾಕಿದ್ದಾರೆ. ಈ ಆರೋಗ್ಯ ಕೇಂದ್ರವನ್ನು ಅತಿಕ್ರಮಣ ಮಾಡಿ ಕಿಟಕಿಗೆ ದನಕರುಗಳನ್ನು ಕಟ್ಟಿಹಾಕಿ ಕೊಟ್ಟಿಗೆಯನ್ನಾಗಿ ಪರಿವರ್ತಿಸಿದ್ದಾರೆ.

ಈ ಆರೋಗ್ಯ ಉಪಕೇಂದ್ರಕ್ಕೆ ಶುದ್ಧ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಇಲ್ಲ. ಆರೋಗ್ಯ ಉಪಕೇಂದ್ರದ ಸುತ್ತಲೂ ಕಾಂಪೌಂಡ್ ವ್ಯವಸ್ಥೆಯನ್ನು ಮಾಡಿಸಿಲ್ಲ. ಹೊಸದಾಗಿ ಕಟ್ಟಿಸಿರುವ ಈ ಆರೋಗ್ಯ ಉಪಕೇಂದ್ರದ ಗೋಡೆಯು ಈಗಾಗಲೇ ಕುಸಿದಿದೆ. ಇಂತಹ ಅವ್ಯವಸ್ಥೆಯ ಆಗರಗಳಿಂದ ಕೂಡಿರುವ ಆರೋಗ್ಯ ಉಪಕೇಂದ್ರದಲ್ಲಿ ತಾಯಂದಿರ ಹೆರಿಗೆ ಮತ್ತು ತಾಯಿ ಮಕ್ಕಳ ಆರೈಕೆ ತುಂಬಾ ದೂರದ ಮಾತಾಗಿ ಉಳಿಯುತ್ತದೆ. ಆರೋಗ್ಯ ಉಪಕೇಂದ್ರದಲ್ಲಿ ಯಾವುದೇ ಹೆರಿಗೆ ಕಿಟ್‌ಗಳಾಗಲಿ ಹಾಸಿಗೆಗಳಾಗಲಿ ಇಲ್ಲ. ರೋಗ ನಿರೋಧಕ ಲಸಿಕೆಗಳು ಈ ಕೇಂದ್ರದಲ್ಲಿ ದೊರೆಯುವುದಿಲ್ಲ. ಇಂತಹ ಅವ್ಯವಸ್ಥೆಯ ಕಾರಣಗಳಿಂದ ಆರೋಗ್ಯ ಉಪಕೇಂದ್ರವಿರುವ ಸ್ಥಳದಲ್ಲಿ ವಾಸಿಸದೆ ಆರೋಗ್ಯ ಸಹಾಯಕಿ



ಶ್ರೀಧರಗಡ್ಡೆ ಗ್ರಾಮ ಪಂಚಾಯ್ತಿಯಲ್ಲಿರುವ ಆರೋಗ್ಯ ಉಪಕೇಂದ್ರದ
ಮುಂದೆ ಕಟ್ಟಿಗೆ, ಮೆದೆ, ಕಲ್ಲು ಮಣ್ಣು ಹಾಕಿ ಅತಿಕ್ರಮಿಸಿರುವ ದೃಶ್ಯ



ಶ್ರೀಧರಗಡ್ಡೆ ಗ್ರಾಮದ ಪ್ರಾಥಮಿಕ ಆರೋಗ್ಯ ಉಪಕೇಂದ್ರವನ್ನು
ದನದ ಕೊಟ್ಟಿಗೆಯಾಗಿ ಪರಿವರ್ತಿಸಿರುವ ದೃಶ್ಯ

7ª



ಶ್ರೀಧರಗಡ್ಡೆ ಗ್ರಾಮದಲ್ಲಿ ಇರುವ ಅಂಗನವಾಡಿ ಕೇಂದ್ರದ ಮೇಲ್ಛಾವಣಿ
ದುಸ್ಥಿತಿಯಲ್ಲಿರುವುದು



ಶ್ರೀಧರಗಡ್ಡೆ ಗ್ರಾಮದ ನಾಲ್ಕನೇ ಅಂಗನವಾಡಿ ಕೇಂದ್ರವನ್ನು ಗ್ರಾಮ
ದವರು ಅತಿಕ್ರಮಣ ಮಾಡಿರುವ ದೃಶ್ಯ

80

ತಾಲೂಕು ಕೇಂದ್ರವಾದ ಬಳ್ಳಾರಿಯಿಂದ ಬಂದು ಹೋಗುತ್ತಾರೆ. ಗ್ರಾಮಕ್ಕೆ ಬಂದ ಸಮಯದಲ್ಲಿ ಮಾತ್ರ ಹೆರಿಗೆ ಔಷದೋಪಚಾರ ಮುಂತಾದ ಕೆಲಸಗಳನ್ನು ಊರ ಚಾವಡಿ ಮುಂದೆ ಮಾಡಲಾಗುತ್ತದೆ.

ಇಂತಹ ಹಲವಾರು ಕಾರಣಗಳು ಮತ್ತು ಸರ್ಕಾರ, ಸಮಾಜ ಮತ್ತು ಪಾಲಕರ ನಿರ್ಲಕ್ಷತೆಯಿಂದ ಆರೋಗ್ಯ ಉಪಕೇಂದ್ರವು ಹಾಳುಬಿದ್ದಿದ್ದು, ಜನರ ಆರೋಗ್ಯ ರಕ್ಷಣೆಯಿಂದ ದೂರ ಉಳಿದಿದೆ. ಈ ರೀತಿಯ ಅವ್ಯವಸ್ಥೆಯಿಂದಾಗಿ ಮಕ್ಕಳ ಹಕ್ಕುಗಳ ಒಡಂಬಡಿಕೆ ಪರಿಚ್ಛೇದ-೬ ಮತ್ತು ಸಂವಿಧಾನ ಮೂಲಭೂತ ಹಕ್ಕಿನ ೨೧ನೇ ವಿಧಿಯಂತೆ ಜೀವಿಸುವ ಹಕ್ಕನ್ನು ಈ ಕೇಂದ್ರವು ಒದಗಿಸಲು ವಿಫಲವಾಗಿದೆ. ಆದ್ದರಿಂದ ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಅಂಗವಿಕಲತೆ ಹೊಂದಿರುವವರು, ಅನಾರೋಗ್ಯ ಪೀಡಿತರು ಮತ್ತು ಮಕ್ಕಳು ಮರಣ ಹೊಂದುವುದು ಈಗಲೂ ಮುಂದುವರೆದಿದೆ. ಇವುಗಳನ್ನು ಗಮನಿಸಿ ಸರಿಪಡಿಸಬೇಕಾದ ಗ್ರಾಮ ಪಂಚಾಯಿತಿಗಳಿಗೆ, ಸಮರ್ಪಕವಾದ ಮಾಹಿತಿ ಕೊರತೆ, ತರಬೇತಿ ಕೊರತೆ, ಜನಪ್ರತಿನಿಧಿಗಳ ಸ್ವಾರ್ಥ, ಅಜ್ಞಾನ, ಅನಕ್ಷರತೆ ಮುಂತಾದ ಕಾರಣಗಳಿಂದ ಜನತೆಗೆ ಸಂಜೀವಿನಿಯಾಗಬೇಕಿದ್ದ ಈ ಆರೋಗ್ಯ ಉಪಕೇಂದ್ರವು ನರಕವನ್ನು ಸೃಷ್ಟಿಸಿದೆ.



ಶ್ರೀಧರಗಟ್ಟೆ ಗ್ರಾಮದ 6ನೇ-ಅಂಗನವಾಡಿ ಕೇಂದ್ರವನ್ನು
ಸಿಮೆಂಟ್ ಶೀಟಿನಲ್ಲಿ ಮೇಲ್ಚಾವಣಿ ಹಾಕಿರುತ್ತಾರೆ.



ಶ್ರೀಧರಗಟ್ಟೆ ಗ್ರಾಮದ 4ನೇ ಅಂಗನವಾಡಿ ಕೇಂದ್ರದೊಳಗೆ
ಅಡಿಗೆ ಮಾಡುತ್ತಿರುವ ದೃಶ್ಯ

81

೨. ಅಂಗನವಾಡಿ ಕೇಂದ್ರಗಳ ಸ್ಥಿತಿಗತಿ

ಈ ಮೇಲಿನ ಫೋಟೋಗಳಲ್ಲಿ ಕಾಣಿಸುವ ಅಂಗನವಾಡಿ ಕೇಂದ್ರಗಳು ಶ್ರೀಧರಗಡ್ಡೆ ಗ್ರಾಮದಲ್ಲಿವೆ. ಅದರಲ್ಲಿ ಕಾಣಿಸುವ ಅಂಗನವಾಡಿ ೪ನೇ ಕೇಂದ್ರ ಪ್ರಸ್ತುತ ಈ ಕೇಂದ್ರವು ಮಕ್ಕಳ ಕಲಿಕೆಗೆ ಯೋಗ್ಯವಾಗಿಲ್ಲ. ಕೇಂದ್ರದ ಮೇಲ್ಛಾವಣಿ ಸ್ವಲ್ಪಸ್ವಲ್ಪ ಕುಸಿದು ಬೀಳುತ್ತಿದೆ. ಇದರಿಂದಾಗಿ ಮಕ್ಕಳ ಪ್ರಾಣಕ್ಕೆ ಅಪಾಯವಿದೆ. ಈ ಕೇಂದ್ರದ ಹೊರಗಡೆ ಸುತ್ತಲೂ ಕಟ್ಟಿಗೆ, ಕಲ್ಲುಗಳನ್ನು ಹಾಕಿ ಅತಿಕ್ರಮಣ ಮಾಡಿ ವೈಯಕ್ತಿಕ ಉಪಯೋಗಕ್ಕೆ ಬಳಸಿಕೊಂಡಿದ್ದಾರೆ. ಅಂಗನವಾಡಿ ಕೇಂದ್ರದ ಗೋಡೆಯನ್ನು ಆಸರೆಯಾಗಿ ಮಾಡಿಕೊಂಡು ಚಪ್ಪರ ಹಾಕಿ ದನಕರುಗಳನ್ನು ಕಟ್ಟಿದ್ದಾರೆ. ಇದರಿಂದಾಗಿ ಕೇಂದ್ರದಲ್ಲಿ ಕುಳಿತಿರುವ ಮಕ್ಕಳ ಆರೋಗ್ಯದ ಮೇಲೆ ತುಂಬಾ ಕೆಟ್ಟಪರಿಣಾಮವನ್ನುಂಟುಮಾಡುತ್ತದೆ.

ಈ ಕೇಂದ್ರಕ್ಕೆ ಪ್ರತ್ಯೇಕ ಅಡಿಗೆ ಕೋಣೆ ನಿರ್ಮಿಸಿ ಕೊಟ್ಟಿಲ್ಲ. ಮಕ್ಕಳಿಗೆ ತಯಾರಿಸುವ ಚಿತ್ರಾನ್ನ, ಪೊಂಗಲ್, ಉಪ್ಪಿಟ್ಟು, ಅಮಲೈಜ್‌ಫುಡ್ ಮತ್ತಿತರ ಆಹಾರ ಬೇಯಿಸುವುದನ್ನು ಕೇಂದ್ರದೊಳಗೆ ಮಾಡಲಾಗುತ್ತದೆ. ಇದರಿಂದಾಗಿ ಕೊಠಡಿಯ ಒಳಗಿರುವ ಮಕ್ಕಳು ಹೊಗೆ, ವಾಸನೆ ಕುಡಿದು ನರಕವನ್ನು ಅನುಭವಿಸುತ್ತಾರೆ. ಹೀಗೆ ಅಂಗನವಾಡಿ ಕೇಂದ್ರ ಮಕ್ಕಳ ಆರೈಕೆ ರಕ್ಷಣೆಯ–ಕೇಂದ್ರವಾಗದೆ, ಮುಗ್ದ ಮಕ್ಕಳ ಭಕ್ಷಣೆಯ ಕೇಂದ್ರವಾಗಿದೆ.

ಅಂಗನವಾಡಿಕೇಂದ್ರದಲ್ಲಿ ಕುಡಿಯುವ ನೀರಿನ ಸೌಲಭ್ಯವಿಲ್ಲ. ದೂರದ ಸ್ಥಳದಲ್ಲಿರುವ ಕುಡಿಯುವ ನೀರಿಗಾಗಿ ಮಕ್ಕಳು ಪರದಾಡುವಂತಾಗಿದೆ. ಕೇಂದ್ರದಲ್ಲಿ ಮೂಲಭೂತ ಸೌಕರ್ಯಗಳಾದ ಶೌಚಾಲಯ, ಪ್ರತ್ಯೇಕ ಅಡಿಗೆ ಕೋಣೆಯಿಲ್ಲದೆ ಮಕ್ಕಳು ತೊಂದರೆಗೆ ಸಿಲುಕಿದ್ದಾರೆ. ಅಂಗನವಾಡಿ ಕೇಂದ್ರದಲ್ಲಿ ಮಕ್ಕಳ ಮನೋವಿಕಾಸಕ್ಕೆ ಅನುಕೂಲಕರ ವಾತವರಣ ಒದಗಿಸಿಲ್ಲ. ಕೇಂದ್ರದ ಮುಂದೆ ಆಟವಾಡಲು ಮಕ್ಕಳಿಗೆ ಆಟದ ಮೈದಾನವಿಲ್ಲ. ಆಟ–ಪಾಠದ ಸಲಕರಣೆಗಳಿಲ್ಲ.

ಅನಾರೋಗ್ಯಕರ ಪರಿಸರದಿಂದಾಗಿ ಮಕ್ಕಳು ಅಂಗನವಾಡಿ ಕೇಂದ್ರಗಳಿಗೆ ಹೋಗುವುದಿಲ್ಲ. ಹೀಗಾಗಿ ಬೀದಿಯಲ್ಲಿ ಮಕ್ಕಳು ಅಲೆದಾಡುವುದು ಸರ್ವೇ ಸಾಮಾನ್ಯ ದೃಶ್ಯವಾಗಿದೆ. ಮೇಲೆ ಪ್ರಸ್ತಾಪಿಸಿದ ಅವ್ಯವಸ್ಥೆ ಕುರಿತು ಅಂಗನವಾಡಿ ಕಾರ್ಯಕರ್ತೆ ಕಲ್ಯಾಣಮ್ಮ ಅವರನ್ನು ಪ್ರಶ್ನಿಸಿದಾಗ ಅವರು ಸಂಬಂಧಪಟ್ಟ ಇಲಾಖೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತೆ ಮನವಿಗಳನ್ನು ಸಲ್ಲಿಸಲಾಗಿದೆ. ಅದಾಗ್ಯೂ ಯಾರು ಕ್ರಮಕೈಗೊಂಡಿಲ್ಲ ಎಂದು ಹೇಳುವ ಮೂಲಕ ಅಧಿಕಾರಿಗಳ ದಿವ್ಯನಿರ್ಲಕ್ಷವನ್ನು ಎತ್ತಿ ಹಿಡಿಯುತ್ತಾರೆ.

ಇದೇ ಗ್ರಾಮದಲ್ಲಿರುವ ೫ ಮತ್ತು ೬ನೇ ಕೇಂದ್ರಗಳಿಗೆ ಸರ್ಕಾರದಿಂದ ನಿರ್ಮಿಸಿದ ಸ್ವಂತ ಕಟ್ಟಡಗಳಿಲ್ಲ. ಹೀಗಾಗಿ ಅಂಗನವಾಡಿ ಕೇಂದ್ರಗಳನ್ನು ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುತ್ತದೆ. ಈ ಬಾಡಿಗೆ ಕೇಂದ್ರಗಳ ಸ್ಥಿತಿಯೂ ಶೋಚನೀಯವಾಗಿದೆ. ೫ ಮತ್ತು

೭ನೇ ಕೇಂದ್ರದ ಮೇಲ್ಚಾವಣಿಗೆ ಸಿಮೆಂಟ್ ಶೀಟ್ ಹಾಕಿರುವುದರಿಂದ ಹೊತ್ತೇರಿದಂತೆಲ್ಲ ಬಿಸಿಲು ಹೆಚ್ಚಾಗಿ, ಕೊಠಡಿಯ ಒಳಗೆ ಬಿಸಿ ಆವಿ ಬರುತ್ತದೆ. ಎಳೆಯ ಮಕ್ಕಳು ಇಂತಹ ಹಿಂಸೆಯನ್ನು ಸಹಿಸಿಕೊಂಡು ಕುಳಿತುಕೊಳ್ಳಬೇಕಾಗಿದೆ.

ಪ್ರಸ್ತುತ ಅಂಗನವಾಡಿ ಕೇಂದ್ರಗಳಲ್ಲಿ ಯಾವುದೇ ಮೂಲಭೂತ ಸೌಲಭ್ಯಗಳಿಲ್ಲ. ಮಕ್ಕಳಿಗೆ ಕುಡಿಯುವ ನೀರು ಸಹ ದೊರೆಯುವುದಿಲ್ಲ. ಶೌಚಾಲಯವಂತೂ ಮೊದಲೇ ಇಲ್ಲ. ಮಕ್ಕಳ ಮನೋರಂಜನೆಗೆ ಅನುಕೂಲವಾಗಲು ಬೇಕಾದಂತಹ ಆಟದ ಮೈದಾನ, ಆಟದ ಸಾಮಾನುಗಳು ಇಲ್ಲ. ಇದರಿಂದಾಗಿ ಮಕ್ಕಳನ್ನು ಕೂಡಿ ಹಾಕಿ ಶಿಕ್ಷಿಸುತ್ತಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಪರಿಸರದಲ್ಲಿ ಬೆಳೆದ ಮಕ್ಕಳಿಗೆ ಮಾನಸಿಕವಾಗಿ, ದೈಹಿಕವಾಗಿ ಕೆಟ್ಟ ಪರಿಣಾಮಗಳುಂಟಾಗುತ್ತವೆ.

ಹೀಗೆ ಅವ್ಯವಸ್ಥೆಗಳ ಕೇಂದ್ರಬಿಂದುವಾಗಿರುವ ಅಂಗನವಾಡಿ ಕೇಂದ್ರಗಳು ಮಕ್ಕಳನ್ನು ಆಕರ್ಷಿಸುವಲ್ಲಿ ವಿಫಲವಾಗಿವೆ. ಇಂತಹ ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗಿರುವ ೮೦ ಮಕ್ಕಳಲ್ಲಿ ಇದರ ಸೌಲಭ್ಯ ಪಡೆಯುತ್ತಿರುವ ಮಕ್ಕಳು ಶೇ ೨೦ ರಷ್ಟು ಮಾತ್ರ ಇನ್ನೂ ಉಳಿದ ಮಕ್ಕಳು ಬೀದಿಸುತ್ತುತ್ತಾ ಮನೆಯೊಳಗಿನ ಮಗುವನ್ನು ಆಡಿಸುತ್ತಾ ಕಾಲಕಳೆಯುತ್ತಾರೆ. ಈ ರೀತಿಯ ವ್ಯವಸ್ಥೆಗಳಿಂದ ಮಕ್ಕಳ ಹಕ್ಕುಗಳು ರಕ್ಷಣೆಯಾಗುವುದಿಲ್ಲ. ಬದಲಿಗೆ ಸರ್ಕಾರದ ಸೇವಾ ವಲಯಗಳು ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ನೇರ ಹೊಣೆಗಾರರಾಗುತ್ತವೆ. ಇದಕ್ಕೆ ಮುಖ್ಯವಾದ ಕಾರಣಗಳೆಂದರೆ ಅಧಿಕಾರಶಾಹಿತ್ವ, ಸೂಕ್ತಮೇಲ್ವಿಚಾರಣೆ ಇಲ್ಲದಿರುವುದು ಮಕ್ಕಳ ಬಗ್ಗೆ ಕಾಳಜಿ, ಕಳಕಳಿ ಇಲ್ಲದಿರುವುದು ಕ್ಷೇತ್ರಕಾರ್ಯದಿಂದ ತಿಳಿದು ಬರುತ್ತದೆ.

ಇದಲ್ಲದೆ ಗುಡಾರನಗರ, ಜಾಲಿಬೆಂಚಿ ಮತ್ತು ಲಕ್ಷ್ಮಿನಗರ ಕ್ಯಾಂಪಿನಲ್ಲಿರುವ ಅಂಗನವಾಡಿ ಕೇಂದ್ರಗಳೂ ಸಹ ಯಾವುದೇ ವೈಜ್ಞಾನಿಕ ತಿಳುವಳಿಕೆ ಇಲ್ಲದೆ ನಿರ್ಮಾಣ ಮಾಡಿರುವುದು ಕಂಡುಬರುತ್ತದೆ. ಲಕ್ಷ್ಮಿನಗರ ಕ್ಯಾಂಪಿನಲ್ಲಿರುವ ಅಂಗನವಾಡಿ ಕೇಂದ್ರವನ್ನು ತುಂಗಭದ್ರಕಾಲುವೆಯ ಪಕ್ಕದಲೇ ನಡೆಸಲಾಗುತ್ತಿದೆ. ಪೋಷಕರು, ಮಕ್ಕಳು ಕೇಂದ್ರಕ್ಕೆ ಹೊರಟಾಗ ಎಲ್ಲಿ ಆಟವಾಡುತ್ತ ನೀರಿನೊಳಗೆ ಬೀಳುತ್ತಾರೊ ಎಂಬ ಭಯದಿಂದ ಅಂಗನವಾಡಿ ಕೇಂದ್ರಗಳಿಗೆ ಮಕ್ಕಳನ್ನು ಕಳಿಸುವುದಿಲ್ಲ.

ಜಾಲಿಬೆಂಚಿ ಗ್ರಾಮದಲ್ಲಿ ನಿರ್ಮಾಣಗೊಂಡಿರುವ ಅಂಗನವಾಡಿ ೧ನೇ ಕೇಂದ್ರವನ್ನು ಊರ ಬಾವಿ ಮುಂದೆ ನಿರ್ಮಿಸಿದ್ದಾರೆ. ಹೀಗಾಗಿ ಮಕ್ಕಳು ಕೇಂದ್ರಕ್ಕೆ ಹೋಗಬೇಕಾದರೆ ಜೀವ ಹಿಡಿದುಕೊಂಡೆ ತಿರುಗಾಡಬೇಕಾಗುತ್ತದೆ. ಅಪ್ಪಿತಪ್ಪಿಯೂ ಮಕ್ಕಳ ಕಡೆ ಗಮನಿಸದೆ ಮೈಮರೆತರೆ ಮಕ್ಕಳು ಬಾವಿಯಲ್ಲಿ ಬೀಳುವ ಸಾಧ್ಯತೆಯಿದೆ. ಎಲ್ಲಾ ಅಂಗನವಾಡಿ ಕೇಂದ್ರಗಳಂತೆ ಈ ಕೇಂದ್ರದಲ್ಲಿಯೂ ಮಕ್ಕಳಿಗೆ ಕುಡಿಯುವ ನೀರಿನ ವ್ಯವಸ್ಥೆಯಾಗಿಲ್ಲ. ಪ್ರತ್ಯೇಕ

ಅಡಿಗೆ ಕೋಣೆ ನಿರ್ಮಿಸಿಕೊಟ್ಟಿಲ್ಲ. ಶೌಚಾಲಯ, ಆಟದ ಮೈದಾನ ಮೊದಲಾದ ಅಗತ್ಯಗಳನ್ನು ಪೂರೈಸಲು ಸರ್ಕಾರಗಳು ವಿಫಲವಾಗಿವೆ.

ಅಂಗನವಾಡಿ ಕೇಂದ್ರಗಳಿಗೆ ಕೊಡುವ ಪೌಷ್ಠಿಕ ಆಹಾರವೂ ಗುಣಮಟ್ಟದಿಂದ ಕೂಡಿರುವುದಿಲ್ಲ. ಅಕ್ಕಿಯಲ್ಲಿ ಕಲ್ಲು, ಮಣ್ಣು, ಜಲ್ಲಿಗಳು ಸೇರಿಕೊಂಡಿರುತ್ತವೆ. ಕಾಳುಗಳು ಹುಳು ಹಿಡಿದಿರುತ್ತವೆ. ಇಂತಹ ಆಹಾರ ಸೇವಿಸುವ ಮಕ್ಕಳಲ್ಲಿ ಪೌಷ್ಟಿಕಾಂಶ ಹೆಚ್ಚಳವಾಗುವ ಬದಲು ಅನಾರೋಗ್ಯ ಉಂಟಾಗುತ್ತದೆ ಎಂದು ಈ ಗ್ರಾಮದ ಮಹಿಳೆ ಯಂಕಮ್ಮ ದೂರುತ್ತಾಳೆ. ಕೇಂದ್ರಕ್ಕೆ ಬಂದಿರುವಂತಹ ಪೌಷ್ಟಿಕ ಆಹಾರವು ಎಲ್ಲರಿಗೂ ವಿತರಿಸದೇ ಅದನ್ನು ಅಂಗನವಾಡಿ ಕಾರ್ಯಕರ್ತೆಯರು ವೈಯಕ್ತಿಕವಾಗಿ ಬಳಸಿಕೊಳ್ಳುತ್ತಾರೆ ಎಂದು ಗ್ರಾಮಸ್ಥರು ದೂರುತ್ತಾರೆ.

ಒಟ್ಟಾರೆಯಾಗಿ ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳನ್ನು ಗಮನಿಸಿದಾಗ ಭಾರತದ ಸಂವಿಧಾನ ನಿರ್ದೇಶಕ ತತ್ವಗಳಡಿ ೪೫ನೇ ವಿಧಿಯಲ್ಲಿ ಹೇಳುವಂತೆ ಆರು ವರ್ಷದಾಟಿದ ಎಲ್ಲಾ ಮಕ್ಕಳಿಗೆ ಆರಂಭಿಕ ಬಾಲ್ಯದ ರಕ್ಷಣೆ ಹಾಗೂ ಶೈಕ್ಷಣಿಕ ವ್ಯವಸ್ಥೆಗಳನ್ನು ಮಾಡಲು ಸರ್ಕಾರವು ಪ್ರಯತ್ನಿಸುವುದು ಎಂಬ ಮಾತು ಸುಳ್ಳಾಗಿದೆ. ಇದು ಅಧಿಕಾರಶಾಹಿಗಳು ಮತ್ತು ಆಳುವ ವರ್ಗ ಸಂವಿಧಾನಕ್ಕೆ ಮಾಡುವ ದ್ರೋಹವಾಗಿದೆ. ಮಕ್ಕಳಿಗೆ ನಿಜವಾದ ಅರ್ಥದಲ್ಲಿ ಅವರ ಹಕ್ಕುಗಳನ್ನು ಒದಗಿಸುವ ಕೆಲಸ ಜರೂರಾಗಿ ಈ ಪಂಚಾಯಿತಿಗಳಲ್ಲಿ ಆಗಬೇಕಿದೆ.



ಜಾಲಿಬೆಂಚಿ ಗ್ರಾಮದ ಶಾಲೆಯ ಮುಂದೆ ಮಳೆನ ಸಂಗ್ರಹದ ದೃಶ್ಯ, ಮಕ್ಕಳಿಗೆ ಆಟವಾಡಲು ಆಟದ ಮೈದಾನ ಇಲ್ಲದಿರುವುದು.



ಗುಡಾರ ನಗರ ಗ್ರಾಮದ ಅಂಗನವಾಡಿ ಕೇಂದ್ರ, ಶಾಲೆಯ ಮುಂದೆ ಕೊಳಚೆ ನೀರು ಹರಿಯುತ್ತಿರುವ ದೃಶ್ಯ

84

೩. ಶಾಲೆಗಳ ಸ್ಥಿತಿಗತಿ

ಈ ಮೇಲಿನ ಪೋಟೊಗಳಲ್ಲಿ ಕಾಣಿಸುವ ಶಾಲೆಗಳು ಜಾಲಿಬೆಂಚೆ ಮತ್ತು ಗುಡಾರನಗರದ ಗ್ರಾಮಗಳಲ್ಲಿವೆ. ಜಾಲಿಬೆಂಚೆ ಗ್ರಾಮದ ಶಾಲೆಯಲ್ಲಿ ೮ನೇ ತರಗತಿಯನ್ನು ಇತ್ತಿಚಿಗೆ ಪ್ರಾರಂಭಿಸಲಾಗಿದೆ. ಪ್ರಸ್ತುತ ಜಾಲಿಬೆಂಚೆ ಗ್ರಾಮದಲ್ಲಿರುವ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ರಸ್ತೆಯ ಪಕ್ಕದಲ್ಲಿ ಕಟ್ಟಿಸಿದ್ದಾರೆ. ಇಲ್ಲಿ ವಾಹನಗಳ ಓಡಾಟ ಜನಸಂದಣಿ ಯಾವಾಗಲೂ ಇರುತ್ತದೆ. ಇಲ್ಲಿಯ ಗಲಾಟೆ ಗೋಜಲುಗಳಿಂದ ಮಕ್ಕಳ ಕಲಿಕೆಯ ಏಕಾಗ್ರತೆಗೆ ಭಂಗ ಬರುತ್ತದೆ. ಮಳೆಗಾಲದಲ್ಲಿ ಶಾಲೆಗೆ ಹೋಗಲು ರಸ್ತೆಯಿರುವುದಿಲ್ಲ. ಶಾಲೆಯ ಸುತ್ತಲೂ ಕೆಸರುಗುಂಡಿಗಳಿಂದ ಕೂಡಿದೆ. ಅಲ್ಲದೆ ಈ ಶಾಲಾ ಕಟ್ಟಡವನ್ನು ತಿಪ್ಪೆಗುಂಡಿಗಳು ಸುತ್ತುವರಿದಿವೆ. ಇದರಿಂದಾಗಿ ಶಾಲೆಯ ಒಳಗೆ ದುರ್ನಾತ ಬರುತ್ತದೆ. ಇಂತಹ ಅವ್ಯವಸ್ಥೆಯು ಮಕ್ಕಳನ್ನು ಶಾಲಾಕೇಂದ್ರಕ್ಕೆ ಆಕರ್ಷಿಸುವ ಬದಲು ವಿಮುಖರನ್ನಾಗಿ ಮಾಡುತ್ತದೆ. ಈ ಶಾಲೆಯ ಸುತ್ತಲೂ ಜೇಲಿಯು ಬೆಳೆದಿರುವುದರಿಂದ ಪ್ರತಿದಿನ ಶಾಲೆಯೊಳಗೆ ಹುಳ ಹುಪ್ಪಡಿಸೇರಿಕೊಳ್ಳುವ ಸಾಧ್ಯತೆ ಇರುತ್ತದೆ. ಇಂತಹ ಭಯದ ವಾತಾವರಣದಲ್ಲಿ ಮಕ್ಕಳ ಕಲಿಕೆ ನಡೆಯುತ್ತದೆ.

ಮಕ್ಕಳ ವಿರಾಮದ ಅವಧಿಯಲ್ಲಿ ಮನೋರಂಜನೆ ಪಡೆಯಲು ಆಟದ ಮೈದಾನವಿಲ್ಲ. ಹೀಗಾಗಿ ಮಕ್ಕಳು ವಿರಾಮದ ಸಮಯದಲ್ಲಿ ಸುಮ್ಮನೆ ಹೊರಗಡೆ ಕುಳಿತುಕೊಳ್ಳುತ್ತಾರೆ. ಇದರಿಂದ ಮಕ್ಕಳ ದೈಹಿಕ ಬೆಳವಣಿಗೆಗೆ ಮತ್ತು ಕ್ರೀಡೆಗಳಿಗೆ ಹಿನ್ನಡೆ ಉಂಟಾಗುತ್ತದೆ.

ಪ್ರಸ್ತುತ ಈ ಶಾಲೆಗಳಿಗೆ ಶುದ್ಧವಾದ ಕುಡಿಯುವ ನೀರಿನ ವ್ಯವಸ್ಥೆಯಿಲ್ಲ. ಮಕ್ಕಳಿಗೆ ಕುಡಿಯಲು ನೀರಿನ ವ್ಯವಸ್ಥೆ ಮಾಡಲು ಮತ್ತು ಅಡಿಗೆ ಮಾಡಲು ತುಂಬ ತೊಂದರೆಯನ್ನುಭವಿಸಬೇಕಾಗಿದೆ. ಮಕ್ಕಳಿಗೆಂದು ಕಟ್ಟಿಸಿರುವ ಶೌಚಾಲಯವನ್ನು ಶಿಕ್ಷಕರು, ಗ್ರಾಮಸ್ಥರು, ಬಳಸುತ್ತಾರೆ. ಅವುಗಳನ್ನು ಸ್ವಚ್ಚಗೊಳಿಸಲು ನೀರಿನ ಕೊರತೆಯಿದೆ. ಈ ಶಾಲೆಯಲ್ಲಿ ಮಕ್ಕಳಿಗೆ ಆಟ ಆಡಲು, ಆಟದ ಸಾಮಾನುಗಳು ಇರುವುದಿಲ್ಲ. ಇದರಿಂದಾಗಿ ಮಕ್ಕಳ ಕ್ರೀಡಾ ಚಟುವಟಿಕೆಗಳಿಗೆ ತೊಂದರೆಯಾಗಿದೆ.

ಮಕ್ಕಳು ಅಧ್ಯಯನ ಮಾಡಲು ಶಾಲೆಯೊಳಗೆ ಗ್ರಂಥಾಲಯದ ವ್ಯವಸ್ಥೆಯಿಲ್ಲ ಮತ್ತು ವಿಜ್ಞಾನದಲ್ಲಿನ ಪ್ರಯೋಗಗಳನ್ನು ಮಾಡಲು ಪ್ರಯೋಗಶಾಲೆ ಮತ್ತು ಪ್ರಯೋಗೋಪಕರಣಗಳು ಸಹ ಇಲ್ಲ. ಶಾಲೆಗೆ ಕಾಂಪೌಂಡ್ ವ್ಯವಸ್ಥೆ ಇಲ್ಲದಿರುವುದರಿಂದ ಸಂಜೆ ಸಮಯದಲ್ಲಿ ದನ-ಕರುಗಳು ನುಗ್ಗಿ ಗಲೀಜು ಮಾಡುವುದಲ್ಲದೆ, ಕಿಟಕಿ ಬಾಗಿಲುಗಳನ್ನು ಹಾಳು ಮಾಡಿವೆ.

ಗುಡಾರನಗರದಲ್ಲಿರುವ ಶಾಲೆಯನ್ನು ಇತ್ತೀಚೆಗೆ ಅಂದರೆ ೨೦೦೬ನೇ ಸಾಲಿನಲ್ಲಿ ಕಟ್ಟಿಸಲಾಗಿದೆ. ಆದರೂ ಕೂಡ ಇಲ್ಲಿ ಶಾಲೆ ಕಟ್ಟಿಸುವಾಗ ವೈಜ್ಞಾನಿಕ ಮಾನದಂಡಗಳನ್ನು

ಅನುಸರಿಸಿಲ್ಲ. ಮಕ್ಕಳ ಕಲಿಕೆಯಲ್ಲಿ ಆಗುವ ಅನುಕೂಲತೆಗಳನ್ನು ಗಮನಿಸಿಲ್ಲ. ಪ್ರಸ್ತುತ ಇಲ್ಲಿರುವ ಶಾಲೆ ಕಿರಿಯ ಪ್ರಾಥಮಿಕ ಶಾಲೆಯಾಗಿದ್ದು ೧ ರಿಂದ ೫ನೇ ತರಗತಿಯವರೆಗೆ ಮಾತ್ರ ನಡೆಯುತ್ತದೆ.

ಇಲ್ಲಿನ ಶಾಲಾವಾತಾವರಣವು ಫೋಟೋದಲ್ಲಿ ತೋರಿಸಿದಂತೆ ಅಂಗನವಾಡಿ ಮತ್ತು ಶಾಲೆಗಳನ್ನು ಒಂದರಪಕ್ಕ ಮತ್ತೊಂದನ್ನು ಕಟ್ಟಿಸಲಾಗಿದೆ. ಶಾಲೆಯ ಮುಂದೆ ಕೊಳಚೆ ನೀರು ಹರಿದು ಹೋಗುತ್ತದೆ. ಅದರ ಮುಂದೆ ಮುಖ್ಯರಸ್ತೆಯೊಂದು ಹಾದು ಹೋಗುತ್ತದೆ. ಶಾಲೆಗೆ ಬರಬೇಕಾದರೆ ಮಕ್ಕಳೆಲ್ಲರೂ ಮುಖ್ಯರಸ್ತೆ ಮತ್ತು ಚರಂಡಿಯನ್ನು ಹಾದು ಬರಬೇಕಾಗುತ್ತದೆ. ಇದರಿಂದ ಮಕ್ಕಳಿಗೆ ಅಪಾಯವುಂಟಾಗುವ ಸಾಧ್ಯತೆಗಳಿವೆ. ಅಲ್ಲದೆ ಶಾಲೆಯ ಮುಂದೆ ವಾಹನಗಳ ಸಂಚಾರ ತುಂಬಾ ಇರುವುದರಿಂದ ಮಕ್ಕಳ ಏಕಾಗ್ರತೆಗೆ ಮತ್ತು ಕಲಿಕೆಗೆ ಭಂಗಬರುತ್ತದೆ.

ಶಾಲೆಯ ಮುಂದೆ ಕೊಳಚೆ ನೀರು ಹರಿಯುವುದರಿಂದಾಗಿ ಮಕ್ಕಳು ಅನೇಕ ರೋಗ ರುಜಿನಗಳಿಗೆ ಬಲಿಯಾಗುತ್ತಾರೆ ಹಾಗೂ ಮಕ್ಕಳಿಗೆ ಮನೋರಂಜನೆ ಪಡೆಯಲು ಸ್ಥಳದ ವ್ಯವಸ್ಥೆಯಿಲ್ಲದಂತಾಗಿದೆ. ಶಾಲೆಯಲ್ಲಿರುವ ಮಕ್ಕಳಿಗೆ ಶೌಚಾಲಯ ವ್ಯವಸ್ಥೆಯಿಲ್ಲ ಇದರಿಂದ ಶೌಚಕ್ಕೆ ಹೊರಗಡೆ ಹೋಗುತ್ತಾರೆ. ಪ್ರಸ್ತುತ ಶಾಲೆಗೆ ಕಾಂಪೌಂಡ್ ವ್ಯವಸ್ಥೆಯಿಲ್ಲ. ಶಾಲೆಯೊಳಗೆ ಪಾಠೋಪಕರಣಗಳಿಲ್ಲ ಮತ್ತು ಪೀಠೋಪಕರಣಗಳಿಲ್ಲ. ಹೀಗಾಗಿ ಇಂತಹ ಶಾಲೆಗಳಲ್ಲಿ ಮಕ್ಕಳ ಮನೋದೈಹಿಕ ಬೆಳವಣಿಗೆ ಅವಕಾಶವಿಲ್ಲದಂತಾಗಿದೆ.

ಸ್ಥಳೀಯ ಸರ್ಕಾರವಾದ ಗ್ರಾಮ ಪಂಚಾಯಿತಿಗಳು ಸ್ಥಳೀಯ ಸೇವಾ ಸೌಲಭ್ಯಗಳ ಕುರಿತು ಕಾಳಜಿ ವಹಿಸುವುಸಿಲ್ಲ. ಗ್ರಾಮ ಪಂಚಾಯಿತಿಗಳಿಗೆ ಬರುವ ಅನುದಾನದಲ್ಲಿ ರಸ್ತೆ, ಚರಂಡಿ, ವಿದ್ಯುತ್, ನೀರು ಮುಂತಾದವುಗಳಿಗೆ ಬಳಸಿಕೊಂಡು ಪಂಚಾಯಿತಿ ಪ್ರಜೆಗಳಲ್ಲಿ ಮಕ್ಕಳು ಸಹ ಒಂದು ಭಾಗ ಎಂದು ಪರಿಗಣಿಸದೆ ಮಕ್ಕಳ ಸೇವಾಸೌಲಭ್ಯಗಳನ್ನು ಆಲಕ್ಷತನದಿಂದ ಕಾಣುತ್ತಾರೆ.

ಇದು ಮಕ್ಕಳ ಹಕ್ಕುಗಳ ಒಡಂಬಡಿಕೆಯ ಪರಿಚ್ಛೇದ ೨೧, ೧೩ ಹಾಗೂ ೩೧ರಲ್ಲಿ ಉಲ್ಲೇಖಿಸಿದಂತೆ ಮಕ್ಕಳ ಮಾನಸಿಕ ದೈಹಿಕ ಬೆಳವಣಿಗೆ, ಮನೋರಂಜನೆ, ಮತ್ತು ವಿಶ್ರಾಂತಿ ಮುಂತಾದವುಗಳನ್ನು ಒದಗಿಸಬೇಕು ಇಲ್ಲದಿದ್ದರೆ ಸರ್ಕಾರದ ವ್ಯವಸ್ಥೆಗಳು ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸಿದಂತಾಗುತ್ತದೆ.

೪. ನ್ಯಾಯಬೆಲೆ ಅಂಗಡಿ

ನ್ಯಾಯಬೆಲೆ ಅಂಗಡಿಯು ಪ್ರಸ್ತುತ ಶ್ರೀಧರಗಡ್ಡೆ ಗ್ರಾಮದಲ್ಲಿದೆ. ಪಡಿತರ ಧಾನ್ಯಗಳನ್ನು ಪಡೆಯಬೇಕಾದರೆ ಲಕ್ಷ್ಮಿನಗರದವರು ೧೭ಕಿ.ಮಿ.ದೂರದಿಂದ ಬರಬೇಕು.

ಲಕ್ಷ್ಮೀನಗರ ಗ್ರಾಮದವರಿಗೆ ಈ ಸೌಲಭ್ಯ ಪಡೆಯಲು ತುಂಬಾ ತೊಂದರೆಯಾಗುತ್ತಿದೆ ಮತ್ತು ಜಾಲಬೆಂಚೆ ಗ್ರಾಮದವರು ಸ್ವಗ್ರಾಮದಲ್ಲಿಯೇ ಪಡಿತರ ಧಾನ್ಯವನ್ನು ಪಡೆಯುತ್ತಾರೆ.

ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಒಟ್ಟು ೨೦೧೪ ಕುಟುಂಬಗಳು ಬರುತ್ತವೆ. ಇದರಲ್ಲಿ ಒಟ್ಟು ೧೫೩೩ ಕುಟುಂಬಗಳಿಗೆ ಪಡಿತರ ಚೀಟಿಯನ್ನು ವಿತರಿಸಲಾಗಿದೆ. ಬಡತನ ರೇಖೆಗಿಂತ ಕೆಳಗಿರುವ ಒಟ್ಟು ೬೫೦ ಕುಟುಂಬಗಳಿಗೆ ಅಂತ್ಯೋದಯ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. ತಾತ್ಕಾಲಿಕ ಪಡಿತರ ಚೀಟಿಯನ್ನು ಒಟ್ಟು ೨೮೩ ಕುಟುಂಬಗಳಿಗೆ ವಿತರಿಸಲಾಗಿದೆ. ಅದೇರೀತಿ ಹಳದಿ ಪಡಿತರ ಚೀಟಿಯನ್ನು ೬೦೦ ಕುಟುಂಬಗಳಿಗೆ ವಿತರಿಸಲಾಗಿದೆ.

ಪ್ರಸ್ತುತ ಈ ಗ್ರಾಮ ಪಂಚಾಯ್ತಿಯಲ್ಲಿ ಕ್ಷೇತ್ರಕಾರ್ಯದ ಆಧಾರದ ಮೇಲೆ ಹೇಳುವುದಾದರೆ ಪಡಿತರ ಚೀಟಿಯನ್ನು ಅರ್ಹ ಬಡವರನ್ನು ಗುರುತಿಸಿ ವಿತರಿಸಲಾಗಿಲ್ಲ. ಪಡಿತರಚೀಟಿ ವಿತರಣೆ ಮಾಡುವಾಗ, ರಾಜಕೀಯ, ಅಧಿಕಾರಶಾಹಿತ್ವ ಮುಂತಾದವುಗಳ ಪ್ರಭಾವಕ್ಕೊಳಗಾಗಿ ಬಂಧುಗಳಿಗೆ, ಶ್ರೀಮಂತರ ಕುಟುಂಬಗಳಿಗೆ, ಪಡಿತರ ಚೀಟಿಯನ್ನು ಕೊಡಲಾಗಿದೆ. ಇದರಿಂದಾಗಿ ಹಳ್ಳಿಗಳಲ್ಲಿರುವ ಬಡಕುಟುಂಬಗಳು ಉಪಜೀವನಕ್ಕಾಗಿ ವಲಸೆ ಪ್ರವೃತ್ತಿ ಮುಂದುವರೆಸಿವೆ. ಅಲ್ಲದೆ ಮಕ್ಕಳು ಶಿಕ್ಷಣ, ರಕ್ಷಣೆ ಮತ್ತು ಆರೋಗ್ಯದಿಂದ ವಂಚನೆಯಾಗುವುದು ಮುಂದುವರೆದಿದೆ.

೫. ಪಂಚಾಯ್ತಿ ಗ್ರಂಥಾಲಯ

ಶ್ರೀಧರಗಡ್ಡೆ ಗ್ರಾಮಪಂಚಾಯಿತಿಗೆ ಪಂಚಾಯಿತಿ ಗ್ರಂಥಾಲಯವನ್ನು ಒದಗಿಸಿಕೊಡಲಾಗಿದೆ. ಆದರೆ ಅದರ ಸಮರ್ಪಕ ನಿರ್ವಹಣೆ ನಡೆಯುತ್ತಿಲ್ಲ. ದೇಶದಲ್ಲಿ ನಡೆಯುವ ವಿದ್ಯಮಾನಗಳನ್ನು ಗ್ರಾಮ ಪಂಚಾಯಿತಿಯ ಎಲ್ಲಾ ಜನರಿಗೂ ತಲುಪಿಸಬೇಕೆಂಬ ಉದ್ದೇಶದೊಂದಿಗೆ ಮಾಹಿತಿ ವಿನಿಮಯಕ್ಕಾಗಿ, ಜ್ಞಾನಾರ್ಜನೆಗಾಗಿ ಪುಸ್ತಕ ಸೌಲಭ್ಯಗಳನ್ನು ಒದಗಿಸಲಾಯಿತು. ಅದರಲ್ಲೂ ವಿಶೇಷವಾಗಿ ಪಂಚಾಯಿತಿ ಗ್ರಂಥಾಲಯಗಳಲ್ಲಿ ಮಕ್ಕಳಿಗಾಗಿ ಮಾಹಿತಿ ಮತ್ತು ವಿಚಾರಗಳನ್ನು ತಿಳಿಯಲು ಪುಸ್ತಕಗಳನ್ನು ಹೊಂದಿರಬೇಕು ವಾಸ್ತವದಲ್ಲಿ ಈ ಪಂಚಾಯಿತಿ ಗ್ರಂಥಾಲಯವನ್ನು ತೆಗೆದಿರುವುದಿಲ್ಲ ಅವುಗಳಿಗೆ ಸದಾ ಬೀಗ ಹಾಕಲಾಗಿರುತ್ತದೆ. ಹೀಗಾಗಿ ಗ್ರಾಮದ ಜನರು ಮತ್ತು ಮಕ್ಕಳು ಮಾಹಿತಿ ಮತ್ತು ವಿಚಾರಗಳ ವಿನಿಮಯ ಹಕ್ಕಿನಿಂದ ವಂಚಿತರಾಗಿದ್ದಾರೆ.

೬. ಮುಂದುವರೆದ ಕಲಿಕಾಕೇಂದ್ರ

ಹಳ್ಳಿಗಳಲ್ಲಿ ಸೇವಾ ಸೌಲಭ್ಯಗಳ ಬಗ್ಗೆ ತಿಳುವಳಿಕೆ ಬರಬೇಕಾದರೆ ಅಕ್ಷರ ಜ್ಞಾನಬೇಕು. ಅಕ್ಷರ ಜ್ಞಾನದಿಂದ ಶಿಕ್ಷಣದ ಮಹತ್ವ ಅರಿತು ಜನರು ಜಾಗೃತರಾಗಿ ಅವರ ಹಕ್ಕುಗಳನ್ನು ಅವರೇ ಪಡೆಯುತ್ತಾರೆ. ವಾಸ್ತವದಲ್ಲಿ ಗ್ರಾಮ ಪಂಚಾಯಿತಿ ಕಟ್ಟಡದಲ್ಲಿರುವ ಮುಂದುವರೆದ

ಶಿಕ್ಷಣ ಕೇಂದ್ರವು ನಡೆಯುವುದಿಲ್ಲ. ಇದಕ್ಕೆ ಕಾರಣವನ್ನು ಕೇಳಿದಾಗ ನೋಡಲ್ ಪ್ರೇರಕರು ಕಲಿಕಾಕೇಂದ್ರಗಳನ್ನು ಮುಂದುವರೆಸಲು ಯಾವುದೇ ಅನುದಾನ ಬಂದಿಲ್ಲ ನಮಗೆ ಸಂಬಳವೂ ಕೊಡುವುದಿಲ್ಲ. ಹೀಗಾಗಿ ನಾವು ಕೇಂದ್ರಗಳನ್ನು ನಡೆಸುವುದಿಲ್ಲ ಎಂದು ಸ್ಪಷ್ಟ ಮಾತುಗಳಲ್ಲಿ ಹೇಳುತ್ತಾರೆ.

ಒಟ್ಟಾರೆಯಾಗಿ ಶ್ರೀಧರಗಡ್ಡೆ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಸೇವಾ ಸೌಲಭ್ಯಗಳ ಸ್ಥಿತಿಗತಿಯನ್ನು ಗಮನಿಸಲು ಕ್ಷೇತ್ರಕಾರ್ಯವನ್ನು ಕೈಗೊಂಡಾಗ ಕಂಡುಬಂದಿರುವ ಅಂಶವೇನೆಂದರೆ ಸರ್ಕಾರದ ಎಲ್ಲಾ ಸೇವಾ ಸೌಲಭ್ಯಗಳು ಸಮರ್ಪಕವಾಗಿ ಜಾರಿಗೆ ಬಂದಿಲ್ಲ. ಇದಕ್ಕೆ ಕಾರಣ ಸರ್ಕಾರದ ನಿರ್ಲಕ್ಷ ಜನಪ್ರತಿನಿಧಿಗಳ ಸ್ವಾರ್ಥ, ಸಮಾಜದ ಅಜಾಗುರುಕತೆ ಮುಂತಾದ ಅಂಶಗಳು ಗೋಚರವಾಗುತ್ತವೆ. ಇಂತಹ ಕಾರಣಗಳಿಂದ ಸಂವಿಧಾನದಲ್ಲಿ ಪ್ರಸ್ತಾಪಿಸಿದ ಕಲ್ಯಾಣ ರಾಜ್ಯದ ಕನಸು ನನಸಾಗದೇ ಉಳಿದಿದೆ.

೪.೨ ಕರ್ನಾಟಕ ರಾಜ್ಯ ಮಕ್ಕಳ ಕ್ರಿಯಾಯೋಜನೆ

ನಮ್ಮ ದೇಶದಲ್ಲಿ ಚಾಲ್ತಿಯಲ್ಲಿರುವ ಕಾಯ್ದೆ ಕಾನೂನುಗಳು, ಕ್ರಿಯಾಯೋಜನೆಗಳು ಮುಂತಾದವುಗಳಿಗೆ ಮೂಲಬೇರು ಭಾರತದ ಸಂವಿಧಾನ ಈ ಸಂವಿಧಾನವು ದೇಶದಲ್ಲಿರುವ ಮಕ್ಕಳನ್ನು ಸಹ ಪ್ರಜೆಗಳು ಎಂದು ತಿಳಿಸಿದೆ. ದೇಶದಲ್ಲಿರುವ ಮಕ್ಕಳ ಮತ್ತು ಮಹಿಳೆಯರ ಸ್ಥಿತಿಗತಿಗಳನ್ನು ಗಮನಿಸಿದ ಕೇಂದ್ರ ಸರ್ಕಾರ ಹಲವಾರು ಕ್ರಿಯಾಯೋಜನೆಗಳನ್ನು ರೂಪಿಸಿತು. ಇದರ ಮೂಲಕ ಮಕ್ಕಳಿಗೆ ಎಲ್ಲ ರೀತಿಯ ಆರೋಗ್ಯ, ಶಿಕ್ಷಣ ಸೇವಾಸೌಲಭ್ಯಗಳನ್ನು ಒದಗಿಸಲು ಪ್ರಯತ್ನಿಸಿತು. ಅದರಂತೆ ಕರ್ನಾಟಕದಲ್ಲಿಯೂ ರಾಷ್ಟ್ರೀಯ ಕ್ರಿಯಾಯೋಜನೆಯ ಅನುಸಾರ ರಾಜ್ಯ ಕ್ರಿಯಾಯೋಜನೆಯನ್ನು ರೂಪಿಸಿತು. ಹೀಗೆ ಕ್ರಿಯಾಯೋಜನೆಗಳನ್ನು ರೂಪಿಸುವಾಗ ಅನುಸರಿಸಿದ ಮಾನದಂಡಗಳೇನು ಎಂಬುದನ್ನು ಹೇಳುತ್ತಾ ಕರ್ನಾಟಕ ರಾಜ್ಯ ಮಕ್ಕಳ ಕ್ರಿಯಾಯೋಜನೆಯಲ್ಲಿ ಸ್ಪಷ್ಟಪಡಿಸಿದೆ.

"ಪ್ರಸ್ತುತ ರಾಜ್ಯ ಕ್ರಿಯಾಯೋಜನೆಯನ್ನು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯ ಆಶಯಗಳು, ಶತಮಾನದ ಗುರಿಗಳು ಮತ್ತು ರಾಷ್ಟ್ರೀಯ ಮಕ್ಕಳ ಕ್ರಿಯಾ ಯೋಜನೆಯ ಕರಡು, ಅನೇಕ ಇಲಾಖೆಗಳಿಂದ ಸಂಗ್ರಹಿಸಿದ ಪ್ರಾಥಮಿಕ ದತ್ತಾಂಶಗಳಿಂದ ಮಾರ್ಗದರ್ಶನ ಹಾಗೂ ಜನಗಣತಿ, ರಾಜ್ಯ ಸರ್ಕಾರದ ಇಲಾಖೆಗಳ ನಿಯತಕಾಲಿಕ ಸಮೀಕ್ಷೆಗಳು, ವಿವಿಧ ಕಾರ್ಯಸೂಚಕ ಸಮೂಹ ಸಮೀಕ್ಷೆ (MICS) ಮತ್ತು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (NFHS)ಯಂತಹ ದತ್ತಾಂಶ ವಿಶ್ಲೇಷಣೆ ಹಾಗೂ ಯುನಿಸೆಫ್ ಪ್ರಕಟಣೆ ಇವುಗಳನ್ನೆಲ್ಲ ಆಧರಿಸಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ರಾಜ್ಯಕ್ರಿಯಾಯೋಜನೆ ಈ ಹಿಂದೆ ಹೊರಡಿಸಲಾಗಿದ್ದ ಮಕ್ಕಳ ಕ್ರಿಯಾಯೋಜನೆಯಲ್ಲಿ ಅಗತ್ಯವಿರುವ ಕಡೆ ಪುನರ್ ಪರಿಷ್ಕರಿಸಿ ಹೊಸ ವಿಷಯಗಳನ್ನು ಒಳಗೊಂಡಿದೆ"[೧] ಎಂದು ಹೇಳುವ ಮೂಲಕ ಮಕ್ಕಳ

ಹಕ್ಕುಗಳನ್ನು ಒಡಂಬಡಿಕೆಯನ್ನು ಗೌರವಿಸುವುದರ ಜೊತೆಗೆ ಭಾರತ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವ ಪ್ರಯತ್ನ ಪ್ರಸ್ತುತ ಕ್ರಿಯಾಯೋಜನೆಯಲ್ಲಿ ಮಾಡಲಾಗಿದೆ ಎಂದು ಹೇಳಿದೆ.

ಪ್ರಸ್ತುತ ಕರ್ನಾಟಕದ ಮಕ್ಕಳ ಸ್ಥಿತಿಗತಿ

ಕರ್ನಾಟಕವು ೫ ಕೋಟಿ ೨೭ ಲಕ್ಷ ಜನ ಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಒಟ್ಟು ಜನಸಂಖ್ಯೆಯ ಶೇ ೧೨.೯೪ರಷ್ಟು ಮಕ್ಕಳು ಸೊನ್ನೆಯಿಂದ ಆರು ವರ್ಷದೊಳಗಿನವರಾಗಿದ್ದಾರೆ. ಅಂದರೆ ೩೫.೦೧.೪೮೯ ಗಂಡು ಮಕ್ಕಳು ಮತ್ತು ೩೩, ೨೪, ೬೭೯ ಹೆಣ್ಣು ಮಕ್ಕಳಿದ್ದಾರೆ. ಒಟ್ಟಾರೆ ಸೊನ್ನೆಯಿಂದ ಆರುವರ್ಷದ ಮಕ್ಕಳ ಸಂಖ್ಯೆ ೬೮,೨೬,೧೬೮ ಇದೆ. ಈ ಮಕ್ಕಳ ಒಟ್ಟು ಲಿಂಗಾನುಪಾತವು ಪ್ರತಿ ಸಾವಿರ ಗಂಡುಗಳಿಗೆ ೯೪೯ ಹೆಣ್ಣು ಮಕ್ಕಳಿದ್ದಾರೆ. ಅದೇ ರೀತಿಯಾಗಿ ಆರರಿಂದ ಹದಿನಾಲ್ಕು ವಯೋಮಾನದ ಮಕ್ಕಳು ೭೯.೨೪ಲಕ್ಷ ಮಕ್ಕಳಿದ್ದಾರೆ.

ಸೊನ್ನೆಯಿಂದ ಐದು ವರ್ಷದೊಳಗೆ ಸಾಯುವ ಮಕ್ಕಳ ಸಂಖ್ಯೆ ಪ್ರತಿ ಸಾವಿರ ಜೀವಂತ ಜನನದಲ್ಲಿ ೬೯೮ ಮಕ್ಕಳು ಹುಟ್ಟಿದ ತಕ್ಷಣ ಅಸುನೀಗುತ್ತವೆ. ರಕ್ತ ಹೀನತೆ ಹೊಂದಿರುವ ಗರ್ಭಿಣಿಯರ ಸಂಖ್ಯೆ ಶೇ ೪೮.೫೦ ರಷ್ಟು ಇದ್ದರೆ, ಕಡಿಮೆ ಪೌಷ್ಠಿಕಾಂಶ ಹೊಂದಿರುವ ಮಕ್ಕಳು ಶೇ. ೯೦ರಷ್ಟು ಇದ್ದಾರೆ. ಮಕ್ಕಳ ಜನನ ದಾಖಲಾತಿ ಶೇ ೯೨ರಷ್ಟು ಇದೆ. ಕರ್ನಾಟಕದಲ್ಲಿ ಮದುವೆಯಾಗುವ ಹೆಣ್ಣು ಮಕ್ಕಳ ಸರಾಸರಿ ವಯಸ್ಸು ೧೬.೯ ಇದೆ ೬ರಿಂದ ೧೪ ವಯೋಮಾನದ ೧೦,೫೩.೭೪೪ ಮಕ್ಕಳು ಶಾಲೆಯಿಂದ ಹೊರಗಡೆ ಇದ್ದಾರೆ, ಒಂದು ಲಕ್ಷ ಹೆರಿಗೆಗಳಲ್ಲಿ ಮರಣಹೊಂದುವ ತಾಯಂದಿರ ಪ್ರಮಾಣ ೧೯೫ ಆಗಿದೆ ಅಂಗವಿಕಲ ಮಕ್ಕಳ ಸಂಖ್ಯೆ ೫ ರಿಂದ ೧೨ ವರ್ಷದೊಳಗಿನವರು ಒಂದುಲಕ್ಷ ಮಕ್ಕಳಲ್ಲಿ ೧.೯೬೪ ಮಕ್ಕಳು ಅಂಗವಿಕಲರಿದ್ದಾರೆ. ಸಾವಿರ ಮಕ್ಕಳಲ್ಲಿ ೩.೩% ಮಕ್ಕಳು ಹಗಲು ಕುರುಡುತನದಿಂದ ಬಳಲುತ್ತಿದ್ದಾರೆ. (HIV) AIDS ಹೊಂದಿರುವ. ಸೊನ್ನೆಯಿಂದ ಹದಿನಾಲ್ಕು ವರ್ಷದ ಮಕ್ಕಳ ಸಂಖ್ಯೆ ೧.೭೦.೦೦೦ ಇದೆ.

ಕ್ರಿಯಾಯೋಜನೆಯ ವಿವರ

ಪ್ರಸ್ತುತ ಮಕ್ಕಳ ಕ್ರಿಯಾ ಯೋಜನೆಯನ್ನು ರೂಪಿಸುವಾಗ ಹಿಂದೆ ರಚನೆಯಾಗಿರುವ ಮಕ್ಕಳ ಕ್ರಿಯಾ ಯೋಜನೆಯನ್ನು ಪ್ರಸ್ತಾಪಿಸುತ್ತಾ ಸದ್ಯದ ಮಕ್ಕಳ ಪರಿಸ್ಥಿತಿಯನ್ನು ವಿವರಿಸುತ್ತಾ ಹೋಗುತ್ತದೆ. ಮಕ್ಕಳ ಹಕ್ಕುಗಳನ್ನು ಒದಗಿಸುವ ಸಲುವಾಗಿ ೨೦೦೩-೨೦೧೦ರ ವರೆಗೆ ಕ್ರಿಯಾಯೋಜನೆಯನ್ನು ರೂಪಿಸಿ ಅದರಲ್ಲಿ ೨೦೦೫ರ ವರೆಗೆ ಸಾಧಿಸಬೇಕಾದ ಗುರಿಗಳು ನಂತರ ೨೦೦೭ರವರೆಗೆ ಸಾದಿಸಬೇಕಾದ ಗುರಿಗಳು ಅವುಗಳ ಸಾಧನೆಯ ಆಧಾರದ ಮೇಲೆ

೨೦೧೦ವರಗೆ ಸಾಧಿಸಬೇಕಾದ ಗುರಿಗಳ ಬಗ್ಗೆ ಹೇಳುತ್ತಾ ಹೋಗುತ್ತದೆ. ಹಾಗೆಯೇ ಕ್ರಿಯಾಯೋಜನೆಯ ಗುರಿಗಳನ್ನು ಈಡೇರಿಸಲು ಮಾಡಬೇಕಾದ ಪ್ರಕ್ರಿಯೆಯನ್ನು ವಿವರಿಸಲಾಗಿದೆ. ಈ ಕರ್ನಾಟಕ ರಾಜ್ಯ ಮಕ್ಕಳ ಕ್ರಿಯಾ ಯೋಜನೆಯಲ್ಲಿ ಮುಖ್ಯವಾಗಿ ಮಹಿಳೆ ಮತ್ತು ಮಕ್ಕಳ ಆರ್ರೋಗ್ಯ, ರಕ್ಷಣೆ, ಕುಡಿಯುವ ನೀರು ಮತ್ತು ನೈರ್ಮಲ್ಯ, ಶಿಕ್ಷಣ, ಬಾಲಕಾರ್ಮಿಕತೆ, HIV ಏಡ್ಸ್, ಅಂಗವಿಕಲ ಮಕ್ಕಳ ರಕ್ಷಣೆ ಮತ್ತು ಬಾಲ್ಯಾರಂಭದ ಪಾಲನೆ ಪೋಷಣೆ ಕುರಿತು ಹೇಳಲಾಗಿದೆ. ಈ ರೀತಿಯಾಗಿ ಕರ್ನಾಟಕ ರಾಜ್ಯ ಮಕ್ಕಳ ಕ್ರಿಯಾಯೋಜನೆ ಮುಂದುವರೆಯುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ಕ್ರಿಯಾಯೋಜನೆಯನ್ನು ವಿವರಿಸುವಾಗ ಸದ್ಯದ ಮಕ್ಕಳ ಪರಿಸ್ಥಿತಿ, ೨೦೧೦ರವರೆಗೆ ಹಾಕಿಕೊಂಡಿರುವ ನಿರ್ದಿಷ್ಟ ಗುರಿಗಳು ಮತ್ತು ೨೦೧೦ರೊಳಗೆ ಈ ಗುರಿಗಳನ್ನು ಸಾಧಿಸಲು ಮಾಡಬೇಕಾದ ಕಾರ್ಯತಂತ್ರಗಳ ಬಗ್ಗೆ ಮಾತ್ರ ಪ್ರಸ್ತಾಪಿಸಲಾಗಿದೆ.

ಎ. ಮಕ್ಕಳ ಆರೋಗ್ಯ

"ಪ್ರತಿಮಗುವಿಗೂ ಜೀವಿಸುವ ಹಕ್ಕಿದೆ, ನವಜಾತ ಶಿಶುಗಳ ಮತ್ತು ಹಸುಳೆಗಳ ಮರಣ, ಶಿಶುಮರಣ, ಐದು ವರ್ಷದ ಕೆಳಗಿನ ಮಕ್ಕಳ ಮರಣ ಮತ್ತು ಮಕ್ಕಳಲ್ಲಿ ರೋಗ ಹರಡುವಿಕೆ ಮುಂತಾದ ವಿಷಯಗಳನ್ನು ಉದ್ದೇಶಿಸುವುದರ ಮೂಲಕ ಮಕ್ಕಳ ಜೀವಿಸುವ ಹಕ್ಕಿನ ರಕ್ಷಣೆ ಮತ್ತು ಆ ಹಕ್ಕಿನ ಜಾರಿಗಾಗಿ ಎಲ್ಲ ಕ್ರಮಗಳನ್ನು ಕೈಗೊಳ್ಳುವುದು ಸರ್ಕಾರದ ಮತ್ತು ಸಮುದಾಯದ ಕರ್ತವ್ಯ."[೨]

ಪರಿಚ್ಛೇದ-೨೪

"ಮಕ್ಕಳ ಹಕ್ಕುಗಳ ಒಡಂಬಡಿಕೆಯ ಪ್ರಕಾರ ಅತ್ಯುತ್ತಮಗುಣ ಮಟ್ಟದ ಆರೋಗ್ಯ, ಅನಾರೋಗ್ಯಕ್ಕೆ ಆರೈಕೆ ಮತ್ತು ಆರೋಗ್ಯ ಪುನಶ್ಚೇತನಗೊಳಿಸುವ ಸೌಕರ್ಯಗಳು ಪ್ರತಿ ಮಗುವಿಗೂ ದೊರಕಬೇಕಾದ ಹಕ್ಕುಗಳು ಈ ಹಕ್ಕನ್ನು ಸರ್ಕಾರ ಗುರುತಿಸುತ್ತದೆ. ಯಾವ ಮಗುವೂ ಈ ಸೌಕರ್ಯಗಳಿಂದ ವಂಚಿತರಾಗದಂತೆ ಸರ್ಕಾರ ನೋಡಿಕೊಳ್ಳಬೇಕು."[೩]

ಈಗಿನ ಸ್ಥಿತಿ: ೨೦೦೧

ಐ.ಎಂ.ಆರ್.೫೮, ಗ್ರಾಮೀಣ ೬೫, ನಗರ ೨೫, ೫ ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣ ೬೯.೮

೨೦೧೦ರೊಳಗೆ ಸಾಧಿಸಬೇಕಿರುವ ಗುರಿಗಳು

ನವಜಾತ ಶಿಶುಗಳ ಮರಣ ಪ್ರಮಾಣ IMR ೩೦ಕ್ಕಿಳಿಸುವುದು. ೧ ರಿಂದ ೪ ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣವನ್ನು ೧೦ಕ್ಕಿಂತ ಕಡಿಮೆ ಗೊಳಿಸುವುದು. ೫ ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣ (USMR)ವನ್ನು ೪೦ಕ್ಕೆ ಕಡಿಮೆಗೊಳಿಸುವುದು.

ಳವಾರದೊಳಗಿನ ಹಸುಗಳೆಗಳ ಮರಣ ಪ್ರಮಾಣವನ್ನು ೧೫ಕ್ಕಿಂತ ಕಡಿಮೆಗೊಳಿಸುವುದು. ಎಲ್ಲ ವಯೋಮಾನದ ಮಕ್ಕಳಲ್ಲಿ ರೋಗ ನಿರೋಧಕ ಲಸಿಕೆ/ಚುಚ್ಚುಮದ್ದಿನ ವ್ಯಾಪ್ತಿಯನ್ನು ಶೇ ೧೦೦ಕ್ಕೇರಿಸಿ ಅದನ್ನೂ ಹಾಗೆಯೇ ಉಳಿಸಿಕೊಳ್ಳುವುದು. ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು. ಶಿಶು ಆರೋಗ್ಯ ಕೇಂದ್ರಗಳನ್ನು ಶಿಶುಸ್ನೇಹಿ ಆಸ್ಪತ್ರೆಗಳೆಂದು ಘೋಷಿಸಲು ನಿಗದಿತ ಕ್ರಮಗಳ ಸ್ಥಾಪನೆ ಶೇ೧೦೦ರಷ್ಟನ್ನು ಸಾಧಿಸುವುದು ಮತ್ತು ಹೊಸ ಆಸ್ಪತ್ರೆಗಳಿಗೂ ವಿಸ್ತರಿಸುವುದು.

ಕಾರ್ಯ ತಂತ್ರಗಳು

"ಪ್ರತಿಯೊಬ್ಬ ಗರ್ಭಿಣಿಯು ತನ್ನನ್ನು ತಾನು ನೊಂದಯಿಸಿಕೊಳ್ಳುವಂತೆ ಪ್ರೋತ್ಸಾಹಿಸುವುದು ಹಾಗೆಯೇ ಪ್ರತಿ ಮರಣವನ್ನು ಮತ್ತು ಮರಣಕ್ಕೆ ಕಾರಣವನ್ನು ಸಮೀಪದ ನೊಂದಣಿ ಕಛೇರಿಯಲ್ಲಿ ನೊಂದಾಯಿಸುವುದು. ರೋಗ ನಿರೋಧಕ ಲಸಿಕೆ ನೀಡುವುದನ್ನು ನಿಯತಕಲಿಕೆ ಕಾರ್ಯಕ್ರಮವಾಗಿ ಬಲಗೊಳಿಸುವುದು. ಮೌಲ್ಯಮಾಪನ ಸಮೀಕ್ಷೆಯ ತಪಾಸಣೆಯಂತೆ ಪ್ರತಿ ಜಿಲ್ಲೆಯಲ್ಲೂ ಎಲ್ಲಾ ರೋಗನಿರೋಧಕ ಲಸಿಕೆಗಳ ವ್ಯಾಪ್ತಿಯನ್ನು ೮೫% ಕ್ಕಿಂತ ಅಧಿಕಗೊಳಿಸುವುದು."[೪]

ಬಿ. ಸಂತಾನೋತ್ಪತ್ತಿ ಮತ್ತು ತಾಯಂದಿರ ಆರೋಗ್ಯ

ಪರಿಚ್ಛೇದ-೨೪ ೨(ಡಿ)

"ಪ್ರಕಾರ ತಾಯಂದಿರಿಗೆ ಪ್ರಸವ ಪೂರ್ವ ಮತ್ತು ಪ್ರಸವೋತ್ತರ ಆರೋಗ್ಯ ಸೇವೆಗಳನ್ನು ಒದಗಿಸಲೇಬೇಕು. (ಎಫ್) ಆರೋಗ್ಯ ಶಿಕ್ಷಣ, ಕುಟುಂಬ ಯೋಜನೆ ಮತ್ತು ಪೂರಕ ಸೇವೆಗಳ ಮಾಹಿತಿ, ಮಾರ್ಗದರ್ಶನಗಳನ್ನು ಪೋಷಕರಿಗೆ ನೀಡುವ ಮೂಲಕ ರೋಗ ಹರಡುವುದನ್ನು ತಡೆಗಟ್ಟಲೇ ಬೇಕು."[೫]

ಈಗಿನ ಸ್ಥಿತಿ: ೨೦೦೧

ಒಂದು ಲಕ್ಷ ಹೆರಿಗೆಗಳಲ್ಲಿ ಮರಣ ಹೊಂದುವ ತಾಯಂದಿರ ಪ್ರಮಾಣ ೧೯೫ ಆಗಿದೆ. ಪ್ರತಿ ಸಾವಿರ ಗಂಡುಗಳಿಗೆ ಹೊಂದಿರುವ ಹೆಣ್ಣು ಮಕ್ಕಳ ಸಂಖ್ಯೆ ೯೪೯ ಆಗಿದೆ. ಶೇ ೨೦ ಕ್ಕಿಂತ ಕಡಿಮೆ ಜನರು ಆರೋಗ್ಯ ಸೌಲಭ್ಯಗಳನ್ನು ಪಡೆಯುತ್ತಾರೆ.

೨೦೧೦ ರೊಳಗೆ ಸಾಧಿಸಬೇಕಿರುವ ಗುರಿಗಳು

ಹೆರಿಗೆ ಸಮಯದಲ್ಲಿ ಮರಣಹೊಂದುವ ತಾಯಂದಿರ ಪ್ರಮಾಣವನ್ನು ೯೦ಕ್ಕೆ ಇಳಿಸುವುದು. ಪ್ರತಿ ಸಾವಿರ ಗಂಡುಗಳಿಗೆ ೯೭೫ ಹೆಣ್ಣುಗಳನ್ನು ಹೊಂದುವಂತೆ ಮಾಡುವುದು. ಆಸ್ಪತ್ರೆ ಆರೋಗ್ಯ ಕೇಂದ್ರಗಳಲ್ಲಿ ೮೦% ರಷ್ಟು ಪ್ರಮಾಣವನ್ನು ಉಳಿಸಿಕೊಳ್ಳುವುದು. ಶೇ೭೫ ರಷ್ಟು ಜನರು ಆರೋಗ್ಯ ಸೌಲಭ್ಯಗಳನ್ನು ಪಡೆದುಕೊಳ್ಳುವುದು.

ಕಾರ್ಯತಂತ್ರಗಳು

"ಜನಸಂಖ್ಯೆ ನಿಯಂತ್ರಣ, ಶಿಶುಮರಣ ತಡೆ ಮತ್ತು ಸುರಕ್ಷಿತ ತಾಯ್ತನ, ಲೈಂಗಿಕ ಸೋಂಕು ರೋಗಗಳ ತಡೆ, ಜನನ ನಾಳದ ಸೋಂಕು ಮತ್ತು ಸ್ತ್ರೀಯರ ಪ್ರಸೂತಿ ಆರೋಗ್ಯ ಸಮಸ್ಯೆಗಳನ್ನು ಒಳಗೊಂಡಂತೆ ತಾಯಿ ಮಗು ಆರೋಗ್ಯದ ಕಾರ್ಯಕ್ರಮಗಳನ್ನು ವಿಸ್ತೃತಗೊಳಿಸುವುದು. ತಾಯಿ ಮಗು ಆರೋಗ್ಯ ಕುರಿತು ಲಭ್ಯವಿರುವ ಸೇವೆಗಳನ್ನು ಬಳಸಲು ಜನರನ್ನು ಪ್ರೇರೇಪಿಸಲು ಮಾಹಿತಿ, ಶಿಕ್ಷಣ ನೀಡಲು ಸೂಕ್ತವಾದ ಮಾಧ್ಯಮಗಳ ಮೂಲಕ ಉತ್ತೇಜಿಸುವಂತಹ ಸೂಕ್ತ ಸಂವಹನ ಮತ್ತು ಕಾರ್ಯತಂತ್ರಗಳನ್ನು ಜಾರಿ ಮಾಡಬೇಕು."[೬]

ಸಿ. ಪೌಷ್ಟಿಕತೆ

ಪರಿಚ್ಛೇದ ೨೪

"ರೋಗಗಳನ್ನು ತಡೆಗಟ್ಟಲು ಮತ್ತು ಅಪೌಷ್ಟಿಕತೆಯನ್ನು ನಿವಾರಿಸಲು ಪ್ರಾಥಮಿಕ ಆರೋಗ್ಯ ಪಾಲನೆಯ ಚೌಕಟ್ಟಿನಲ್ಲಿ ಈಗ ಲಭ್ಯವಿರುವ ತಂತ್ರಜ್ಞಾನದ ನೆರವಿನಿಂದ ಪರಿಸರ ಮಾಲಿನ್ಯ, ಅದರಿಂದ ಉಂಟಾಗುವ ಅಪಾಯ ಮತ್ತು ಆತಂಕಗಳನ್ನು ಗಮನದಲ್ಲಿಟ್ಟು ಕೊಂಡು ಸಾಕಷ್ಟು ಪೌಷ್ಟಿಕ ಆಹಾರ ಮತ್ತು ಪರಿಶುದ್ಧ ಕುಡಿಯುವ ನೀರು ಲಭ್ಯವಾಗುವಂತೆ ಮಾಡುವುದು."[೭]

ಈಗಿನ ಸ್ಥಿತಿ: ೨೦೦೧

ಐದು ವರ್ಷದ ಒಳಗಿನ ಮಕ್ಕಳಲ್ಲಿ ೬.೨% ರಷ್ಟು ಅಪೌಷ್ಟಿಕತೆ ಹೊಂದಿದ್ದಾರೆ. ಸಾಧಾರಣ ರೀತಿಯಲ್ಲಿ ಪೌಷ್ಟಿಕಾಂಶ ಹೊಂದಿರುವ ಮಕ್ಕಳು ಶೇ ೪೫.೪ ರಷ್ಟು ಇದ್ದಾರೆ.

೨೦೧೦ರೊಳಗೆ ಸಾಧಿಸಬೇಕಿರುವ ಗುರಿಗಳು

೫ ವರ್ಷದೊಳಗಿನ ಮಕ್ಕಳಲ್ಲಿ ತೀವ್ರತರದಲ್ಲಿರುವ ಅಪೌಷ್ಠಿಕ ಕೊರತೆಯನ್ನು ೨.೦ಕ್ಕೆ ಇಳಿಸುವುದು. ಸಾಧಾರಣ ಪೌಷ್ಠಿಕಾಂಶದ ಕೊರತೆ ಹೊಂದಿರುವ ಮಕ್ಕಳ ಪ್ರಮಾಣವನ್ನು ೨೧ಕ್ಕೆ ಇಳಿಸುವುದು.

ಕಾರ್ಯತಂತ್ರಗಳು

"ಎಲ್ಲ ಗರ್ಭಿಣಿಯರಿಗೂ ತಾಯಿ ಮಗುವಿನ ನಿರಂತರ ಸಾಮಿಪ್ಯದ ಬಗ್ಗೆ ಹೆರಿಗೆಯಾದ ತತ್‌ಕ್ಷಣದಿಂದ ತಾಯಿ ಹಾಲುಣಿಸುವ ಬಗ್ಗೆ, ನಂತರ ತಾಯಿ ಹಾಲಿನ ಪೋಷಣೆ ಮತ್ತು ಕಾಲಕಾಲಕ್ಕೆ ಪೂರಕ ಆಹಾರವುಣಿಸುವುದರ ಅಗತ್ಯತೆ ಮತ್ತು ಮಗು ಹುಟ್ಟಿದ ೭೨ ಗಂಟೆಗಳೊಳಗೆ ಆರೋಗ್ಯ ಇಲಾಖೆಯವರು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಮನೆಗಳಿಗೆ ಭೇಟಿಕೊಡುವುದು, ಸಮುದಾಯದೊಡನೆ ಭೇಟಿ ನೀಡಿ ಇವುಗಳ ವಿಚಾರದಲ್ಲಿ ತಿಳುವಳಿಕೆ ನೀಡಬೇಕು."[೮]

ಡಿ. ನೀರು ಮತ್ತು ನೈರ್ಮಲ್ಯ

ಈಗಿನ ಸ್ಥಿತಿ:

ಶೇ ೬೫ರಷ್ಟು ಜನರಿಗೆ ಕೊಳಾಯಿಯಿಂದ ಕುಡಿಯುವ ನೀರು ಸರಬರಾಜುಗುತ್ತಿದೆ. ಶೇ ೩೬.೩ರಷ್ಟು ಆರೋಗ್ಯ ನೈರ್ಮಲ್ಯ ವ್ಯವಸ್ಥೆಯನ್ನು ಹೊಂದಿದ್ದಾರೆ.

೨೦೧೦ರೊಳಗೆ ಸಾಧಿಸಬೇಕಾದ ಗುರಿಗಳು

೨೦೧೦ರೊಳಗೆ ಶೇ೧೦೦ ಶುದ್ಧ ಕುಡಿಯುವ ನೀರನ್ನು, ಒದಗಿಸುವುದು ಅದಕ್ಕಾಗಿ ಕನಿಷ್ಟ ಒಬ್ಬ ವ್ಯಕ್ತಿಗೆ ೫೫ ಲೀಟರ್ ನೀರನ್ನು ಒದಗಿಸುವುದು ಶೇ ೧೦೦ರಷ್ಟು ಜನರಿಗೆ ಆರೋಗ್ಯಕರ ನೈರ್ಮಲ್ಯವನ್ನು ಒದಗಿಸುವುದು ಕೊಳಗೇರಿಗಳಲ್ಲಿ ವಾಸಿಸುವ ಜನರಿಗೆ ಶೇ ೧೦೦% ಕುಡಿಯುವ ಪರಿಶುದ್ಧವಾದ ನೀರನ್ನು ಒದಗಿಸುವುದು.

ಕಾರ್ಯತಂತ್ರಗಳು

"ಸಮುದಾಯವು ನೀರಿನ ಸಂರಕ್ಷಣೆ, ಸಂಗ್ರಹಣೆ ಮತ್ತು ಬಳಕೆ ವ್ಯವಸ್ಥೆಯನ್ನು ರೂಪಿಸಿ ಅದನ್ನು ನಿರ್ವಹಿಸುವುದು, ಇವುಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಲು ಗಮನಕೊಡಬೇಕು ನೀರು ಸರಬರಾಜಿನಲ್ಲಿ ಸಂಭವಿಸಬಹುದುದಾದ ಸಮಸ್ಯೆಗಳನ್ನೆದುರಿಸಲು ಪಂಚಾಯ್ತಿ ಮತ್ತು ಜಿಲ್ಲಾ ಮಟ್ಟದಲ್ಲಿ ಆಪತ್ತು ನಿರ್ವಹಣಾ ತಂಡಗಳನ್ನು ರಚಿಸಬೇಕು."[೯]

ಇ. ಬಾಲ್ಯಾರಂಭದಲ್ಲಿ ಲಾಲನೆ ಪಾಲನೆ ಮತ್ತು ಜನನ ನೊಂದಾವಣೆ

"ಬಾಲ್ಯಾರಂಭದಲ್ಲಿ ಲಾಲನೆ ಪಾಲನೆ ಪಡೆಯುವುದು ಮಗುವಿನ ಹಕ್ಕು"[೧೦] ಸಮುದಾಯಕ್ಕೆ ಆರಂಭಿಕ ಬಾಲ್ಯ ರಕ್ಷಣೆಯ ಸಮಗ್ರ ಕಾರ್ಯಕ್ರಮಗಳನ್ನು ಪ್ರಾರಂಭಿಸಿ ನಡೆಸಿಕೊಂಡು ಹೋಗುವುದಕ್ಕೆ ಸಂಬಂಧಪಟ್ಟ ಇಲಾಖೆಗಳಿಂದ ಮತ್ತು ಸ್ಥಳೀಯ ಆಡಳಿತದಿಂದ ಪ್ರೋತ್ಸಾಹ ದೊರೆಯಬೇಕು.

ಈಗಿನ ಸ್ಥಿತಿ: ೨೦೦೧

ಇಲ್ಲಿಯವರೆಗೆ ELCE ಕಾರ್ಯಕ್ರಮಗಳು ತಲುಪಿರುವುದು ICDS ಯೋಜನೆಗಳು ೧೬೬ ಗ್ರಾಮಗಳಲ್ಲಿ, ೧೦ ನಗರಗಳಲ್ಲಿ, ಮತ್ತು ೯ ಬುಡಕಟ್ಟುಗಳಲ್ಲಿ, ಯೋಜನೆಗಳನ್ನು ಹೊಂದಲಾಗಿದೆ. ಅಂಗನವಾಡಿ ಕೇಂದ್ರಗಳು ೩೫.೯೦೦ ಗ್ರಾಮೀಣ ಪ್ರದೇಶಗಳಲ್ಲಿ, ೧೫೦ ನಗರ ಪ್ರದೇಶದಲ್ಲಿ, ೩.೨೫೦ ಬುಡಕಟ್ಟು ಪ್ರದೇಶಗಳಲ್ಲಿ ಹೊಂದಲಾಗಿದೆ.

ಅಂಗನವಾಡಿಕೇಂದ್ರದ ಸದುಪಯೋಗ ಪಡೆಯುತ್ತಿರುವ ೧೨.೧೨.೦೦೦ ಮಕ್ಕಳು ಸೊನ್ನೆಯಿಂದ-೩ವರ್ಷದೊಳಗಿನವರಾಗಿದ್ದಾರೆ. ೧೨,೨೨.೦೦೦ ಮಕ್ಕಳು ೩ರಿಂದ ೬ ವರ್ಷದೊಳಗಿನವರಾಗಿದ್ದಾರೆ. ೨,೧೫.೦೦೦ ಗರ್ಭಿಣಿಯರು ಫಲಾನುಭವಿಗಳಾಗಿದ್ದಾರೆ. ೨.೨೮.೦೦೦ ಹಾಲುಣಿಸುವ ತಾಯಂದಿಯರಿದ್ದಾರೆ. ಒಟ್ಟು ೩೦.೬೯ಲಕ್ಷ ಫಲಾನುಭವಿಗಳಿದ್ದಾರೆ.

೨೦೧೦ರವರೆಗೆ ಸಾಧಿಸಬೇಕಾದ ಗುರಿಗಳು

ಆರಂಭಿಕ ಬಾಲ್ಯಾರಕ್ಷಣೆ (ELCE) ೨೦೧೦ರ ಹೊತ್ತಿಗೆ ಶೇ ೯೦% ರಷ್ಟು ಸಾಧಿಸುವುದು. ವಿವಾಹಗಳು ಗರ್ಭದಾರಣೆ ಮತ್ತು ಜನನಗಳ ಕಡ್ಡಾಯ ನೊಂದಣಿ ಮಾಡಿಸುವುದನ್ನು ಶೇ ೧೦೦ರಷ್ಟು ಸಾಧಿಸಿ ಮುಂದುವರೆಸಿಕೊಂಡು ಹೋಗುವುದು.

ಕಾರ್ಯತಂತ್ರಗಳು

"ಸ್ಥಳೀಯ ಪ್ರಾಧಿಕಾರಗಳು ಎಲ್ಲ ಗರ್ಭಧಾರಣೆಗಳು ಮತ್ತು ಜನನಗಳನ್ನು ನೋಂದಾಯಿಸಬೇಕು ಮತ್ತು ಮುಂದೆ ಉಪಯೋಗಕ್ಕಾಗಿ ಆ ದಾಖಲೆಗಳನ್ನು ರಕ್ಷಿಸಿಡಬೇಕು ಹೀಗೆ ಮಾಡುವಾಗ ಅಂಗನವಾಡಿ ಮತ್ತು ಆರೋಗ್ಯ ಕಾರ್ಯಕರ್ತೆಯರುಗಳ ನೆರವು ಪಡೆಯಬೇಕು."[೧೧]

ಎಫ್. ಉತ್ತಮ ಗುಣಮಟ್ಟದ ಶಿಕ್ಷಣ

ಪರಿಚ್ಛೇದ:೨೮

"ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ಪ್ರಸ್ತಾಪಿಸಿರುವಂತೆ ಮಕ್ಕಳ ಶಿಕ್ಷಣದ ಹಕ್ಕನ್ನು ಸರ್ಕಾರಗಳು ಮಾನ್ಯಮಾಡಬೇಕು ಮತ್ತು ಪ್ರಗತಿಪರವಾಗಿ ಹಾಗೂ ಸಮಾನ ಅವಕಾಶದ ತಳಹದಿಯ ಮೇಲೆ ಈ ಹಕ್ಕನ್ನು ಸಾಧಿಸುವ ಸಲುವಾಗಿ ನಿರ್ದಿಷ್ಟವಾಗಿ ಸರ್ಕಾರವು ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕು ಮತ್ತು ಅದು ಎಲ್ಲರಿಗೂ ಉಚಿತವಾಗಿ ಲಭಿಸುವಂತೆ ಮಾಡಬೇಕು."[೧೨]

ಪರಿಚ್ಛೇದ:೧೩

"ಮಗುವಿಗೆ ಅಭಿವ್ಯಕ್ತಿ ಸ್ವಾತಂತ್ರವಿದೆ ಯಾವುದೇ ಗಡಿತಡೆಗಳಿಲ್ಲದೆ ಮೌಖಿಕ ಬರಹರೂಪದಲ್ಲಿ ಅಥವಾ ಮುದ್ರಣ ಕಲಾ ರೂಪದಲ್ಲಿ ಅಥವಾ ಮಗು ಬಯಸುವ ಯಾವುದೇ ಮಾಧ್ಯಮಗಳಲ್ಲಿ ಎಲ್ಲಾ ತೆರನಾದ ಮಾಹಿತಿಯನ್ನು ಮತ್ತು ಆಲೋಚನೆಗಳನ್ನು ಕೋರುವ, ಪಡೆಯುವ ಮತ್ತು ಹಂಚುವ ಸ್ವಾತಂತ್ರ್ಯವನ್ನು ಈ ಹಕ್ಕು ಒಳಗೊಂಡಿರುತ್ತದೆ."[೧೩]

ಈಗಿನ ಸ್ಥಿತಿ ೨೦೦೧

೩ ರಿಂದ ೬ವರ್ಷ ವಯೋಗುಂಪಿನ ಪ್ರತೀ ಮಗುವಿಗೂ ಪ್ರಾಥಮಿಕ ಪೂರ್ವ ಶೈಕ್ಷಣಿಕ ಸೌಲಭ್ಯ ಪಡೆಯುತ್ತಿರುವ ಮಕ್ಕಳು ಶೇ ೬೪.೪ ರಷ್ಟು ಮಕ್ಕಳು ಹಾಜರಾಗುತ್ತಾರೆ. ಪ್ರಾಥಮಿಕ ಸೆಕೆಂಡರಿ ಶಾಲಾ ಹಂತಗಳಲ್ಲಿ ಮಕ್ಕಳು ಶಾಲೆತೊರೆಯುವ ಪ್ರಮಾಣವು ಶೇ ೮.೨ ರಷ್ಟಿದೆ.

೨೦೧೦ರೊಳಗೆ ಸಾಧಿಸಬೇಕಾದ ಗುರಿಗಳು

೩ ರಿಂದ ೬ ವರ್ಷದ ಪ್ರತಿ ಮಗುವಿಗೂ ಶಾಲಾಪೂರ್ವ ಶಿಕ್ಷಣವನ್ನು ಕರ್ನಾಟಕದ ಎಲ್ಲಾ ಭಾಗಗಳನ್ನು ತಲುಪಲು ಕಾರ್ಯಕ್ರಮದ ಸಾರ್ವತ್ರಿಕರಣ ಮಾಡಲಾಗುವುದು.

ಪ್ರಾಥಮಿಕ ಮತ್ತು ಸೆಕೆಂಡರಿ ಶಾಲಾ ಹಂತಗಳಲ್ಲಿ ಮಕ್ಕಳು ಶಾಲೆ ತೊರೆಯುವ ಪ್ರಮಾಣವನ್ನು ಶೇ ೨೦ಕ್ಕಿಂತ ಕೆಳಗಿಳಿಸಿ ಉಳಿಸಿಕೊಳ್ಳುವುದು.

ಕಾರ್ಯತಂತ್ರಗಳು

"೨೦೦೫ನೇ ಇಸವಿ ವೇಳೆಗೆ ಕರ್ನಾಟಕಕ್ಕೆ ರಾಜ್ಯ ಶಿಕ್ಷಣ ನೀತಿಯೊಂದನ್ನು ಸಿದ್ಧಪಡಿಸುವುದು. ಜನನ ಪ್ರಮಾಣ ಪತ್ರ ಇಲ್ಲದೆಯೂ ಶಾಲೆಗಳಿಗೆ ಮತ್ತು ಶಾಲಾಪೂರ್ವ ಕೇಂದ್ರಗಳಿಗೆ ಪ್ರವೇಶ ನೀಡುವುದು. ಸರಕಾರಿ ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರ ಶಾಲಾ ಚೀಲ ಉನ್ನತ ಗುಣಮಟ್ಟದ ಪಠ್ಯಪುಸ್ತಕ ಮತ್ತು ಅಗತ್ಯವೆನಿಸಿದಲ್ಲಿ ಶಾಲೆಗೆ ಹೋಗಿ ಬರುವ ವಾಹನ ಸೌಲಭ್ಯ ಸಹಿತವಾದ ಉಚಿತ ಶಿಕ್ಷಣವನ್ನು ಒದಗಿಸುವುದು."[೧೪]

ಜಿ. ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ

ಪರಿಚ್ಛೇದ –೩೨

ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ಪ್ರಸ್ತಾಪಿಸಿದಂತೆ "ಮಕ್ಕಳು ಆರ್ಥಿಕ ಶೋಷಣೆ ಮತ್ತು ಯಾವುದೇ ಅಪಾಯಕಾರಿ ಪರಿಸ್ಥಿತಿಯಲ್ಲಿ ದುಡಿಮೆ ಅಥವಾ ಮಕ್ಕಳ ಶಿಕ್ಷಣಕ್ಕೆ ತೊಂದರೆ ಒಡ್ಡುವಂಥ ಪರಿಸ್ಥಿತಿ, ಅಥವಾ ಮಕ್ಕಳ ಆರೋಗ್ಯ ಅಥವಾ ದೈಹಿಕ ಮಾನಸಿಕ ಆಧ್ಯಾತ್ಮಿಕ ನೈತಿಕ ಅಥವಾ ಸಾಮಾಜಿಕ ಅಭಿವೃದ್ಧಿ ಬೆಳವಣಿಗೆಗೆ ಅಪಾಯವನ್ನೊಡ್ಡುವ ಪರಿಸ್ಥಿತಿಯಿಂದ ಮಕ್ಕಳಿಗೆ ರಕ್ಷಣೆ ಒದಗಿಸುವ ಹಕ್ಕನ್ನು ಸರ್ಕಾರ ಗುರ್ತಿಸುತ್ತದೆ."[೧೫]

ಜಿ.೧ ಆರ್ಥಿಕ ಶೋಷಣೆಯಿಂದ ರಕ್ಷಣೆ ಪಡೆಯುವ ಹಕ್ಕು

"ಆರ್ಥಿಕ ಶೋಷಣೆ ಮತ್ತು ಮಕ್ಕಳ ಶ್ರೇಯೋಭಿವೃದ್ದಿಗೆ ಹಾನಿಕರವಾದ ದುಡಿಮೆಯಿಂದ ಮಕ್ಕಳಿಗೆ ಸರ್ಕಾರ ರಕ್ಷಣೆ ಒದಗಿಸಬೇಕು."[೧೬]

ಈಗಿನ ಸ್ಥಿತಿ:೨೦೦೧

ಅಪಾಯಕಾರಿ ಕ್ಷೇತ್ರದಲ್ಲಿ ದುಡಿಯುವ ೧೪ ವರ್ಷದೊಳಗಿನ ಮಕ್ಕಳ ೬,೧೧೨ ಮಕ್ಕಳು ಇದ್ದಾರೆ. ೩೨, ೧೮೮ ಮಕ್ಕಳು ಅಪಾಯಕಾರಿಯಲ್ಲದ ಉದ್ದಿಮೆಯಲ್ಲಿ ದುಡಿಯುತ್ತಿದ್ದಾರೆ.

೨೦೧೦ರವರೆಗೆ ಸಾಧಿಸಬೇಕಾದ ಗುರಿಗಳು

ಯಾವುದೇ ರೂಪದಲ್ಲೂ ಬಾಲಕಾರ್ಮಿಕ ಪದ್ಧತಿ (ಎಲ್ಲಾ ವಿಧದ ಉದ್ದಿಮೆಗಳಲ್ಲೂ ಜೀತ, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ, ಮನೆಗೆಲಸ, ಹೋಟೆಲ್, ಬೇಕರಿಗಳು ಇತ್ಯಾದಿ) ಮಗುವಿನ ಅಭಿವೃದ್ಧಿಗೆ ಹಾನಿಕಾರಕ. ಆದ್ದರಿಂದ ೨೦೦೭ರ ವೇಳಗೆ ಸರ್ಕಾರ ಎಲ್ಲಾ ರೂಪಗಳಲ್ಲಿರುವ ಬಾಲಕಾರ್ಮಿಕ ಪದ್ದತಿಯನ್ನು ನಿವಾರಣೆ ಶೇ ೧೦೦ರಷ್ಟು ಮಾಡುತ್ತದೆ.

ಕಾರ್ಯತಂತ್ರಗಳು

"೧೪ ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಸಂಬಳಕ್ಕಾಗಿ ಅಥವಾ ಜೀವನೋಪಾಯಕ್ಕಾಗಿ ಅಪಾಯಕಾರಿ ಮತ್ತು ಅಪಾಯಕಾರಿಯಲ್ಲದ ಉದ್ದಿಮೆಗಳಲ್ಲಿ ದುಡಿಯುವುದನ್ನು ತಡೆಗಟ್ಟುವುದು ಬಾಲಕಾರ್ಮಿಕ ಪದ್ಧತಿ ನಿವಾರಣೆಗಾಗಿ ರಾಜ್ಯ ಕ್ರಿಯಾಯೋಜನೆಯನ್ನು ಜಾರಿಗೆ ತರುವುದು."[೧೭]

ಪ್ರಸ್ತುತ ಕರ್ನಾಟಕ ರಾಜ್ಯ ಮಕ್ಕಳ ಕ್ರಿಯಾ ಯೋಜನೆಯ (೨೦೦೩-೨೦೧೦) ಗುರಿ ಉದ್ದೇಶಗಳನ್ನು ಈಡೇರಿಸಲು ನಮಗೆ ಉಳಿದಿರುವ ಸಮಯ ಕೇವಲ ಎರಡು ವರ್ಷಗಳು ಮಾತ್ರ. ಹಾಗಾದರೆ ಈ ಕ್ರಿಯಾಯೋಜನೆಯನ್ನು ಇಲ್ಲಿಯವರೆಗೆ ಎಷ್ಟರ ಮಟ್ಟಿಗೆ ಅನುಷ್ಠಾನಕ್ಕೆ ತರಲಾಗಿದೆ ಎಂಬುದು ಮುಖ್ಯವಾದ ಪ್ರಶ್ನೆಯಾಗುತ್ತದೆ. ಪ್ರಸ್ತುತ ಕ್ರಿಯಾಯೋಜನೆಯಲ್ಲಿ ಮಕ್ಕಳ ರೋಗ ನಿರೋಧಕ ಲಸಿಕೆಯನ್ನು ೨೦೦೭ರೊಳಗೆ ಶೇಖಡ ೧೦೦ರಷ್ಟು ಸಾಧಿಸಲಾಗುವುದು ಮತ್ತು ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಶೇ ೮೦ಕ್ಕಿಂತ ಹೆಚ್ಚು ಹೆರಿಗೆಗಳನ್ನು ಆಸ್ಪತ್ರೆಯಲ್ಲಿ ಆಗುವಂತೆ ನೋಡಿಕೊಳ್ಳಲಾಗುವುದು ಎಂದು ಹೇಳಿದೆ. ಆದರೆ ಶ್ರೀಧರಗಡ್ಡೆ ಗ್ರಾಮ ಪಂಚಾಯ್ತಿಯ ಆರೋಗ್ಯ ಉಪಕೇಂದ್ರವನ್ನು ನೋಡಿದಾಗ ಅಲ್ಲಿರುವ ಆರೋಗ್ಯ ಉಪಕೇಂದ್ರವು ಹಾಳುಬಿದ್ದಿದೆ. ಹೀಗಿರುವಾಗ ರೋಗ ನಿರೋಧಕ ಲಸಿಕೆ ಶೇ ೧೦೦ರಷ್ಟು ಸಾಧಿಸುವುದು ಮತ್ತು ಹೆರಿಗೆಗಳನ್ನು ಆಸ್ಪತ್ರೆಗಳಲ್ಲಿ ೮೦%ರಷ್ಟು ಮಾಡಿಸುವುದು ದೂರದ ಮಾತಾಯಿತು.

ಶುದ್ಧವಾದ ಕುಡಿಯುವ ನೀರನ್ನು ೨೦೦೭ರೊಳಗೆ ಎಲ್ಲಾ ಕುಟುಂಬಗಳಿಗೆ ಶೇ ೯೫ರಷ್ಟು ಒದಗಿಸುವುದಾಗಿ ಹೇಳಿಕೊಂಡಿದೆ. ಆದರೆ ವಾಸ್ತವದಲ್ಲಿ ಗುಡಾರನಗರ, ಜಾಲಿಬೆಂಚೆ ಗ್ರಾಮದ ಜನರು ಚರಂಡಿ ನೀರನ್ನು ಬಟ್ಟೆ ತೊಳೆಯಲು ಮತ್ತಿತರ ಕೆಲಸಗಳಿಗೆ ಈ ನೀರನ್ನು ಬಳಸಿಕೊಳ್ಳುತ್ತಿರುವುದು ಕಂಡು ಬರುತ್ತಿದೆ.

ECCE ಕಾರ್ಯಕ್ರಮಗಳನ್ನು ೨೦೦೭ರೊಳಗೆ ಶೇ ೭೫ ರಷ್ಟು ತಲುಪಿಸುವುದಾಗಿ ಹೇಳಿಕೊಂಡಿದೆ. ಆದರೆ ಪ್ರಸ್ತುತ ಗ್ರಾಮ ಪಂಚಾಯ್ತಿಯಲ್ಲಿ ಅರ್ಧಕ್ಕಿಂತ ಹೆಚ್ಚಿನ ಸಂಖ್ಯೆಯ ಮಕ್ಕಳು ಅಂಗನವಾಡಿ ಕೇಂದ್ರದಿಂದ ಹೊರಗುಳಿದಿದ್ದಾರೆ.

ಸಂವಿಧಾನದ ಆಶಯದಂತೆ ಶಿಕ್ಷಣ ಹಕ್ಕಿನ ಅನುಷ್ಠಾನವನ್ನು ೨೦೦೭ರೊಳಗೆ ಶೇ೧೦೦ರಷ್ಟು ಸಾಧಿಸುವುದಾಗಿ ಹೇಳಿಕೊಂಡಿದೆ. ವಾಸ್ತವದಲ್ಲಿ ಗ್ರಾಮ ಪಂಚಾಯ್ತನ್ನು ನೋಡಿದಾಗ ಅರ್ಧಕ್ಕಿಂತ ಹೆಚ್ಚಿನ ಸಂಖ್ಯೆಯ ಮಕ್ಕಳು ಶಾಲೆಯಿಂದ ಹೊರಗಿರುವುದು ಕಾಣಬರುತ್ತದೆ. ಬಾಲಕಾರ್ಮಿಕ ಪದ್ದತಿಯನ್ನು ಶೇ ೧೦೦ರಷ್ಟು ಕೊನೆಗೊಳಿಸುವುದಾಗಿ ಕ್ರಿಯಾಯೋಜನೆಯಲ್ಲಿ ಹೇಳಿಕೊಂಡಿದೆ. ಆದರೆ ಬಾಲಕಾರ್ಮಿಕ ಮಕ್ಕಳು ಶೇ ೩೦ ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಪಂಚಾಯ್ತಿಯಲ್ಲಿ ಕಾಣಿಸಿಕೊಳ್ಳುತ್ತಾರೆ.

ಒಟ್ಟಾರೆಯಾಗಿ ಹೇಳುವುದಾದರೆ ಪ್ರಸ್ತುತ ಕ್ರಿಯಾಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರಗಳು ವಿಫಲವಾಗಿವೆ. ಇದನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕಾದರೆ ಸ್ಥಳೀಯ ಸರ್ಕಾರಗಳು ಬದ್ಧತೆಯನ್ನು ತೋರಿಸಬೇಕು ಎಂಬುದು ನನ್ನ ನಂಬಿಕೆಯಾಗಿದೆ.

೪.೩ ಗ್ರಾಮ ಪಂಚಾಯಿತಿ ಕಾರ್ಯಗಳು ಮತ್ತು ಮಕ್ಕಳು

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ೧೯೯೩ರ ಅನುಸೂಚಿ –೧ರಲ್ಲಿ ನಿಗದಿಪಡಿಸಿದಂತೆ ಗ್ರಾಮಪಂಚಾಯ್ತಿ ಕಾರ್ಯಗಳನ್ನು ವಿವರಿಸಲಾಗಿದೆ. ಹೀಗೆ ವಿವರಿಸುವಾಗ ಮಕ್ಕಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯ್ತಿಗಿರುವ ಅಧಿಕಾರ ಮತ್ತು ಕಾರ್ಯಗಳನ್ನು ಕ್ಷೇತ್ರ ಕಾರ್ಯದ ಆಧಾರದ ಮೇಲೆ ವಿಶ್ಲೇಷಿಸಲಾಗಿದೆ.

ಎ. ಸಾಮಾನ್ಯ ಪ್ರಕಾರ್ಯಗಳು

೧. "ಪಂಚಾಯ್ತಿ ಪ್ರದೇಶದ ಅಭಿವೃದ್ಧಿಗಾಗಿ ವಾರ್ಷಿಕ ಯೋಜನೆಯನ್ನು ಸಿದ್ದಪಡಿಸುವುದು."[೧೮]

ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿಯು ವಾರ್ಷಿಕ ಯೋಜನೆಗಳನ್ನು ತಯಾರಿಸುವಾಗ ಮಕ್ಕಳ ಹಿತದೃಷ್ಠಿಯನ್ನು ಕಡೆಗಣಿಸಲಾಗಿದೆ. ಸ್ಥಳೀಯವಾಗಿರುವ ಶಿಕ್ಷಣ, ಆರೋಗ್ಯ, ನೈರ್ಮಲ್ಯದ ಕಡೆಗೆ ಗಮನ ನೀಡಿಲ್ಲ.

೨. "ವಾರ್ಷಿಕ ಬಜೆಟ್ ಸಿದ್ಧ ಪಡಿಸುವುದು"[೧೯] ಈ ವಾರ್ಷಿಕ ಬಜೆಟ್ ಸಿದ್ಧಪಡಿಸುವಾಗ ಪ್ರಸ್ತುತ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಟ್ಟು ಜನಸಂಖ್ಯೆಯಲ್ಲಿ ನೇರವಾಗಿ ಮಕ್ಕಳ ಸೌಲಭ್ಯಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಬಜೆಟ್‌ನ್ನು ನಿಗದಿ ಪಡಿಸಿಲ್ಲ. ಪಂಚಾಯ್ತಿಯಲ್ಲಿ ಶೇ ೪೦% ಮಕ್ಕಳೇ ಇರುವುದರಿಂದ ಶೇ ೩೩% ರಷ್ಟು ಹಣಕಾಸನ್ನು ವಾರ್ಷಿಕ ಬಜೆಟ್ ಸಿದ್ಧ ಪಡಿಸುವಾಗ ನಿಗದಿಪಡಿಸಬೇಕು."

೩. "ಪ್ರಕೃತಿ ವಿಕೋಪಗಳಿಗೆ ಪರಿಹಾರವನ್ನು ಒದಗಿಸುವುದು"[೨೦]

ಪ್ರಸ್ತುತ ಗ್ರಾಮಪಂಚಾಯಿತಿಗಳಲ್ಲಿ ಮಳೆ, ಗಾಳಿಯಿಂದ ಮನೆಗಳು ಬಿದ್ದಾಗ ಮತ್ತು ಆಕಸ್ಮಿಕ ಬೆಂಕಿಯಿಂದ ಅನಾಹುತವಾದಾಗ ಅಂತಹ ಕುಟುಂಬಗಳಿಗೆ ಪರಿಹಾರವನ್ನು ಒದಗಿಸಬೇಕು.

೪. "ಸಾರ್ವಜನಿಕ ಸ್ವತ್ತುಗಳಲ್ಲಿನ ಅತಿಕ್ರಮಣವನ್ನು ತೊಡೆದು ಹಾಕುವುದು."

ಪ್ರಸ್ತುತ ಗ್ರಾಮ ಪಂಚಾಯಿಗಳಲ್ಲಿನ ಆರೋಗ್ಯಕೇಂದ್ರ ಮತ್ತು ಅಂಗನವಾಡಿ ಕೇಂದ್ರಗಳ ಮುಂದೆ ದನ ಕರು ಕಟ್ಟಲು ಅತಿಕ್ರಮಣ ಮಾಡಿರುವುದನ್ನು ತಡೆಯಲು ವಿಫಲವಾಗಿವೆ.

೫. "ಸ್ವಯಂಸೇವೆಯನ್ನು ಸಂಘಟಿಸುವುದು ಮತ್ತು ಸಮುದಾಯ ಕಾರ್ಯಗಳಿಗಾಗಿ ವಂತಿಗೆ ನೀಡುವುದು."[೨೧]

೬. "ಗ್ರಾಮಗಳ ಅತ್ಯವಶ್ಯಕ ಅಂಕಿ ಅಂಶಗಳನ್ನು ಇಟ್ಟುಕೊಳ್ಳುವುದು."[೨೩]

ಪ್ರಸ್ತುತ ಈ ಗ್ರಾಮ ಪಂಚಾಯಿತಿಯಲ್ಲಿ ಕೇವಲ ಮತದಾರರ ಸಂಖ್ಯೆಯನ್ನು ಮಾತ್ರ ಜನಸಂಖ್ಯೆ ಎಂದು ಪರಿಗಣಿಸಿದ್ದಾರೆ. ಆದರೆ ಮಕ್ಕಳಿಗೆ ಸಂಬಂಧಿಸಿದ ಯಾವುದೇ ಅಂಕಿ ಅಂಶಗಳನ್ನು ಸಂಗ್ರಹಿಸಿಕೊಂಡಿಲ್ಲ.

ಬಿ. ಕೃಷಿ ವಿಸ್ತರಣೆ ಸೇರಿದಂತೆ

೧. "ಕೃಷಿ ಮತ್ತು ತೋಟಗಾರಿಕೆಗೆ ಉತ್ತೇಜನ ಮತ್ತು ಅಭಿವೃದ್ಧಿ ಪಡಿಸುವುದು."[೨೪]

ಪ್ರಸ್ತುತ ಗ್ರಾಮ ಪಂಚಾಯಿತಿಯಲ್ಲಿ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಬಡಕುಟುಂಬಗಳನ್ನು ಗಮನಿಸಿ ಅವರಿಗೆ ಪ್ರೋತ್ಸಾಹ ನೀಡಿಲ್ಲ. ಹೀಗಾಗಿ ಗ್ರಾಮೀಣ ಬಡ ಕುಟುಂಬಗಳ ವಲಸೆ ಮುಂದುವರೆದಿದೆ. ಅದರ ಪರಿಣಾಮ ನೇರವಾಗಿ ಮಕ್ಕಳ ಮೇಲಾಗುತ್ತದೆ.

೨. "ಬಂಜರುಭೂಮಿ ಅಭಿವೃದ್ಧಿಪಡಿಸುವುದು.

೩. ಹುಲ್ಲುಗಾವಲುಗಳ ಅಭಿವೃದ್ಧಿ, ನಿರ್ವಹಣೆ ಮತ್ತು ಅವುಗಳ ಅನಧಿಕೃತ ಪರಭಾರೆ ಮತ್ತು ಬಳಕೆಯನ್ನು ತಡೆಯುವುದು."[೨೫]

ದನಕರುಗಳಿಗೆ ಮೇವನ್ನು ಸಂಗ್ರಹಿಸಲು ಮತ್ತು ಉರುವಲು ಕಟ್ಟಿಗೆಗಳನ್ನು ತರಲು ಬಹುತೇಕ ಮಕ್ಕಳು ಶಾಲೆ ಬಿಡುತ್ತಾರೆ. ಇಂತಹದನ್ನು ತಪ್ಪಿಸಲು ಹುಲ್ಲು ಕಟ್ಟಿಗೆಗಳನ್ನು ಪಂಚಾಯಿತಿಯು ಸಂಗ್ರಹಿಸಬೇಕು.

ಸಿ. ಪಶುಸಂಗೋಪನೆ, ಹೈನುಗಾರಿಕೆ ಮತ್ತು ಕೋಳಿಸಾಕಾಣಿಕೆ

೧. "ದನಕರುಗಳ, ಕೋಳಿ ಮತ್ತು ಇತರ ಜಾನುವಾರಗಳ ತಳಿಸಂವರ್ಧನೆ ಮಾಡುವುದು.

೨. ಹೈನುಗಾರಿಕೆ, ಕೋಳಿ ಸಾಕಣೆ ಮತ್ತು ಹಂದಿಸಾಕಣೆಗೆ ಉತ್ತೇಜನ ನೀಡುವುದು.

೩. ಹುಲ್ಲುಗಾವಲುಗಳ ಅಭಿವೃದ್ಧಿ ಪಡಿಸುವುದು"[೨೬]

ಶ್ರೀಧರಗಡ್ಡೆ ಗ್ರಾಮ ಪಂಚಾಯ್ತಿಯಲ್ಲಿ ಉಪಕಸಬುಗಳಾದ ಹೈನುಗಾರಿಕೆ, ಕೋಳಿಸಾಕಾಣಿಕೆ ಮುಂತಾದ ಯೋಜನೆಗಳು ಪ್ರಯೋಜನ ಪಡೆದಿರುವ ಕುಟುಂಬಗಳು ಕಂಡುಬರುವುದಿಲ್ಲ. ಈ ಕಾರಣದಿಂದಾಗಿ ಗುಡಾರನಗರ ಪ್ರದೇಶದ ಜನರು ವಲಸೆ ಹೋಗುತ್ತಿದ್ದಾರೆ.

ಡಿ. ಖಾದಿ, ಗ್ರಾಮ ಮತ್ತು ಗುಡಿ ಕೈಗಾರಿಕೆಗಳು

೧. "ಗ್ರಾಮೀಣ ಮತ್ತು ಗುಡಿ ಕೈಗಾರಿಕೆಗಳಿಗೆ ಉತ್ತೇಜನ ನೀಡುವುದು.

೨. ಗ್ರಾಮೀಣ ಪ್ರದೇಶಗಳ ಪ್ರಯೋಜನಕ್ಕಾಗಿ ಸಮ್ಮೇಳನಗಳು ವಿಚಾರ ಸಂಕಿರಣಗಳು ಮತ್ತು ತರಬೇತಿ ಕಾರ್ಯಕ್ರಮಗಳು, ಕೃಷಿ ಮತ್ತು ಕೈಗಾರಿಕಾ ಪ್ರದರ್ಶನಗಳನ್ನು ಏರ್ಪಡಿಸುವುದು ಮತ್ತು ವ್ಯವಸ್ಥೆ ಮಾಡುವುದು."[೨೭]

ಪ್ರಸ್ತುತ ಗ್ರಾಮಪಂಚಾಯಿತಿಯಲ್ಲಿ ಯಾವುದೇ ಗುಡಿಕೈಗಾರಿಕೆಗಳಾಗಲಿ ತರಬೇತಿ ಕಾರ್ಯಕ್ರಮಗಳಾಗಲಿ ಕಂಡುಬರುವುದಿಲ್ಲ.

ಇ. ಸಾಮಾಜಿಕ ಮತ್ತು ಹೊಲಗದ್ದೆ ಅರಣ್ಯ ನಿರ್ಮಾಣ, ಸಣ್ಣ ಅರಣ್ಯೋತ್ಪನ್ನ ಸೌದೆ ಮತ್ತು ಮೇವು.

೧. "ತನ್ನ ನಿಯಂತ್ರಣದಲ್ಲಿರುವ ರಸ್ತೆಗಳ ಪಕ್ಕದಲ್ಲಿ ಮತ್ತು ಇತರ ಸಾರ್ವಜನಿಕ ಭೂಮಿಗಳಲ್ಲಿ ಮರಗಳನ್ನು ನೆಡುವುದು ಮತ್ತು ಸಂರಕ್ಷಿಸುವುದು.

೨. ಸೌದೆ ನೆಡುತೋಪುಗಳು ಮತ್ತು ಮೇವು ಅಭಿವೃದ್ಧಿ ಪಡಿಸುವುದು

೩. ಹೊಲಗದ್ದೆ ಅರಣ್ಯ ನಿರ್ಮಾಣಕ್ಕೆ ಉತ್ತೇಜನ ನೀಡುವುದು

೪. ಸಾಮಾಜಿಕ ಅರಣ್ಯ ನಿರ್ಮಾಣದ ಅಭಿವೃದ್ಧಿ ಮಾಡುವುದು."[೨೮]

ಪ್ರಸ್ತುತ ಗ್ರಾಮಪಂಚಾಯಿತಿಯಲ್ಲಿ ಮಕ್ಕಳು ಮತ್ತು ಮಹಿಳೆಯರು ಪ್ರತಿನಿತ್ಯ ಉರುವಲು ಸೌದೆ ಮತ್ತು ಮೇವಿಗಾಗಿ ಮಾನವ ಸಂಪನ್ಮೂಲವನ್ನು ವ್ಯಯಿಸುತ್ತಾರೆ. ಈ ಕಾರಣದಿಂದ ಅನೇಕ ಮಕ್ಕಳು ಶಾಲೆ ಬಿಡುತ್ತಾರೆ. ಉರುವಲು ಮತ್ತು ಮೇವು ಸಂಗ್ರಹಕ್ಕೆ ಗ್ರಾಮಪಂಚಯಿತಿಯು ಗಮನ ಹರಿಸಿಲ್ಲ.

ಎಫ್. ಮೀನುಗಾರಿಕೆ

"ಗ್ರಾಮಗಳಲ್ಲಿ ಮೀನುಗಾರಿಕೆ ಅಭಿವೃದ್ಧಿ ಪಡಿಸುವುದು."[೨೯]

ಪ್ರಸ್ತುತ ಗ್ರಾಮ ಪಂಚಾಯ್ತಿಯ ವ್ಯಾಪ್ತಿಯಲ್ಲಿ ಮೀನುಗಾರಿಕೆ ಅಭಿವೃದ್ಧಿ ಪಡಿಸುವ ಯೋಜನೆಗಳಿಲ್ಲ.

ಜಿ. ಗ್ರಾಮೀಣ ಗೃಹ ನಿರ್ಮಾಣ

೧. "ಗ್ರಾಮ ಠಾಣೆಯ ಪರಿಮಿತಿಯೊಳಗೆ ಮನೆ ನಿವೇಶನ ಹಂಚಿಕೆ ಮಾಡುವುದು.

೨. ಮನೆಗಳು ನಿವೇಶನಗಳು ಮತ್ತು ಇತರೆ ಖಾಸಗೀ ಮತ್ತು ಸಾರ್ವಜನಿಕ ಸ್ವತ್ತುಗಳಿಗೆ ಸಂಬಂಧಿಸಿದ ದಾಖಲೆಗಳ ನಿರ್ವಹಣೆ ಮಾಡುವುದು."[೩೦]

ಪ್ರಸ್ತುತ ಗ್ರಾಮ ಪಂಚಾಯ್ತಿಯಲ್ಲಿ ಕಡುಬಡವರನ್ನು ಗುರುತಿಸಿ ಅಂತವರಿಗೆ ನಿವೇಶನಗಳನ್ನು ಹಂಚಿಕೆ ಮಾಡಿಲ್ಲ. ಈ ಕಾರಣದಿಂದ ಪಂಚಾಯ್ತಿ ವ್ಯಾಪ್ತಿಯಲ್ಲಿ ಬಹುತೇಕ ಜನರು ಸೋರುವ ಗುಡಿಸಲಿನಲ್ಲಿ ವಾಸವಾಗಿದ್ದಾರೆ.

ಹೆಚ್. ಕುಡಿಯುವ ನೀರು

"೧. ಕುಡಿಯುವ ನೀರಿನ ಬಾವಿಗಳು, ಕೆರೆ ಮತ್ತು ಕುಂಟೆಗಳ ನಿರ್ಮಾಣ, ದುರಸ್ತಿ ಮತ್ತು ನಿರ್ವಹಣೆ.

೨. ಜಲಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ

೩. ಗ್ರಾಮೀಣ ನೀರು ಪೂರೈಕೆ ಯೋಜನೆಗಳ ನಿರ್ವಹಣೆ"[೩೧]

ಪ್ರಸ್ತುತ ಗ್ರಾಮ ಪಂಚಾಯ್ತಿಯಲ್ಲಿ ಸಮರ್ಪಕವಾಗಿ ಕುಡಿಯುವ ನೀರಿನ ವ್ಯವಸ್ಥೆಯಾಗಿಲ್ಲ. ಜಾಲಿಬೆಂಚಿ ಮತ್ತು ಗುಜಾರನಗರ ಗ್ರಾಮಗಳಿಗೆ ನೀರಿನ ತೊಂದರೆಯುಂಟಾಗಿದೆ. ಅಲ್ಲಿನ ಜನರು ಚರಂಡಿ ಮತ್ತು ಕೊಳಚೆ ನೀರುಗಳಲ್ಲಿ ಬಟ್ಟೆಗಳನ್ನು ತೊಳೆಯುವುದು, ಬಳಸುವುದು, ಕ್ಷೇತ್ರಕಾರ್ಯದ ಸಮಯದಲ್ಲಿ ಕಂಡುಬಂದಿದೆ. ಇಂತಹ ಹಲವಾರು ಕಾರಣಗಳಿಂದ ಮಕ್ಕಳು ಅನಾರೋಗ್ಯಕ್ಕೆ ಒಳಗಾಗಿದ್ದಾರೆ.

ಐ. ರಸ್ತೆಗಳು, ಕಟ್ಟಡಗಳು, ಅಡಿಗಾಲುವೆಗಳು, ಆಣೆಕಟ್ಟುಗಳು ಹಾಯ್ಗಡ, ಜಲಮಾರ್ಗಗಳು ಮತ್ತು ಇತರೆ ಸಂಪರ್ಕ ಮಾರ್ಗಗಳು

೧. "ಗ್ರಾಮ ರಸ್ತೆಗಳು, ಚರಂಡಿಗಳು ಮತ್ತು ಅಡಿಗಾಲುವೆಗಳ ನಿರ್ಮಾಣ ಮತ್ತು ನಿರ್ವಹಣೆ

೨. ಅದರ ನಿಯಂತ್ರಣದಲ್ಲಿರುವ ಅಥವಾ ಸರ್ಕಾರದಿಂದ ಅಥವಾ ಯಾವುದೇ ಇತರ ಸಾರ್ವಜನಿಕ ಪ್ರಾಧಿಕಾರದಿಂದ ಅದಕ್ಕೆ ವರ್ಗಾಯಿಸಲಾದ ಕಟ್ಟಡಗಳ ನಿರ್ವಹಣೆ

೩. ದೋಣಿಗಳು, ಹಾಯ್ಗಡಗಳು ಮತ್ತು ಜಲಮಾರ್ಗಗಳ ನಿರ್ವಹಣೆ"[೩೨]

ಪ್ರಸ್ತುತ ಗ್ರಾಮ ಪಂಚಾಯ್ತಿಯಲ್ಲಿ ಚರಂಡಿ, ರಸ್ತೆ ವ್ಯವಸ್ಥೆ ಮಾಡಲಾಗಿದೆ ಆದರೆ ಅವುಗಳ ನಿರ್ವಹಣೆ ಮಾತ್ರ ಸಮರ್ಪಕವಾಗಿಲ್ಲ. ಈ ಕಾರಣದಿಂದ ಚರಂಡಿ ನೀರು ರಸ್ತೆಗೆ ಹರಿಯುತ್ತದೆ.

ಜೆ. ವಿದ್ಯುಚ್ಛಕ್ತಿಯ ಹಂಚಿಕೆಯೂ ಸೇರಿದಂತೆ ಗ್ರಾಮೀಣ ವಿದ್ಯುದೀಕರಣ

"ಸಾರ್ವಜನಿಕ ರಸ್ತೆಗಳು ಮತ್ತು ಇತರ ಸ್ಥಳಗಳಲ್ಲಿ ದ್ವೀಪಗಳನ್ನು ಒದಗಿಸುವುದು ಮತ್ತು ಅವುಗಳ ನಿರ್ವಹಣೆ."[೩೩]

ಪ್ರಸ್ತುತ ಗ್ರಾಮ ಪಂಚಾಯ್ತಿಯಲ್ಲಿ ಸಮರ್ಪಕ ವಿದ್ಯುತ್ ಪೂರೈಕೆ ಇಲ್ಲ. ರಾತ್ರಿ ಹೊತ್ತಿನಲ್ಲಿ ಅತಿ ಕಡಿಮೆ ವೋಲ್ಟೇಜ್ ಬರುವುದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತದೆ. ಮತ್ತು ಭಾಗ್ಯಜ್ಯೋತಿಯನ್ನು ಎಲ್ಲಾ ಗ್ರಾಮೀಣ ಪ್ರದೇಶಗಳಿಗೂ

ಬಡಕುಟುಂಬಗಳಿಗೆ ದೊರೆಯಬೇಕಾಗಿದೆ. ಮತ್ತು ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ವ್ಯವಸ್ಥಿತವಾಗಿ ಬಳಕೆ ಮಾಡಬೇಕಿದೆ.

ಕೆ. ಸಾಂಪ್ರದಾಯಿಕವಲ್ಲದ ಶಕ್ತಿ ಮೂಲಗಳು

೧. "ಸಾಂಪ್ರದಾಯಿಕವಲ್ಲದ ಶಕ್ತಿಯೋಜನೆಗಳನ್ನು ಉತ್ತೇಜನ ಮತ್ತು ಅಭಿವೃದ್ಧಿಪಡಿಸುವುದು.

೨. ಜೈವಿಕ ಅನಿಲ ಸ್ಥಾವರಗಳು ಸೇರಿದಂತೆ ಸಮುದಾಯ ಸಾಂಪ್ರದಾಯಿಕವಲ್ಲದ ಶಕ್ತಿ ಸಾಧನಗಳ ನಿರ್ವಹಣೆ

೩. ಸುಧಾರಿತ ಒಲೆಗಳು ಮತ್ತು ಇತರ ಪರಿಣಾಮಕಾರಿ ಶಕ್ತಿ ಸಾಧನಗಳ ಪ್ರಸಾರ"[೩೪]

ಪ್ರಸ್ತುತ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಸಾಂಪ್ರದಾಯಿಕವಲ್ಲದ ಅನಿಲಗಳ ಬಳಕೆ ಗೋಬರ್ ಅನಿಲ, ಜೈವಿಕ ದ್ರವ್ಯ, ಸೌರಶಕ್ತಿ ಮತ್ತು ಗಾಳಿ ಶಕ್ತಿ ಬಳಕೆ ಎಲ್ಲಿಯೂ ಕಂಡುಬರುವುದಿಲ್ಲ. ಈ ಕಾರಣದಿಂದ ಮಕ್ಕಳು ಉರುವಲು ಮತ್ತು ಮೇವಿಗಾಗಿ ಅಲೆಯುವುದು ಇನ್ನೂ ಕೂಡ ತಪ್ಪಿಲ್ಲ.

ಎಲ್. ಬಡತನ ನಿವಾರಣಾ ಕಾರ್ಯಕ್ರಮಗಳು

೧. "ಬಡತನ ನಿವಾರಣೆಯಲ್ಲಿ ಸಾರ್ವಜನಿಕ ಜಾಗೃತಿಗೆ ಉತ್ತೇಜನ ಮತ್ತು ಸಂಪೂರ್ಣ ಉದ್ಯೋಗ ಮತ್ತು ಉತ್ಪಾದಕ ಸ್ವತ್ತುಗಳ ಸೃಜನೆ ಇತ್ಯಾದಿ ಕುರಿತ ಬಡತನ ನಿವಾರಣಾ ಕಾರ್ಯಕ್ರಮಗಳಲ್ಲಿ ಜನತೆ ಪಾಲ್ಗೊಳ್ಳುವಂತೆ ಮಾಡುವುದು.

೨. ಗ್ರಾಮ ಸಭೆಯ ಮೂಲಕ ನಡೆಸಲಾಗುವ ಅನೇಕ ಕಾರ್ಯಕ್ರಮಗಳಲ್ಲಿ ಫಲಾನುಭವಿಗಳ ಆಯ್ಕೆ

೩. ಪರಿಣಾಮಕಾರಿ ಅನುಷ್ಠಾನ ಮತ್ತು ಮೇಲ್ವಿಚಾರಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು."[೩೫]

ಶ್ರೀಧರಗಡ್ಡೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬಡತನ ನಿರ್ಮೂಲನೆ ಕಾರ್ಯಕ್ರಮಗಳನ್ನು ಕೈಗೊಂಡಿರುವುದು ಕಂಡು ಬರುವುದಿಲ್ಲ. ಎಸ್.ಜೆ.ಎಸ್.ಆರ್.ವೈ ಮತ್ತು ಇತರ ಉದ್ಯೋಗ ಸೃಷ್ಟಿ ಕಾರ್ಯಕ್ರಮಗಳು ಜೆ.ಸಿ.ಬಿ. ಯಂತ್ರದಿಂದ ಕೆಲಸ ಮಾಡಿಸುವುದರಿಂದ ಬಡಜನರಿಗೆ ಉದ್ಯೋಗ ಸಿಗುತ್ತಿಲ್ಲ. ಮನೆ, ಪಡಿತರ ಚೀಟಿ ವಿತರಣೆ ಸಂಬಂಧಿಸಿದಂತೆ ರಾಜಕೀಯ ಅನುಸರಿಸುವುದರಿಂದ ಬಡಜನರು ಸೌಲಭ್ಯ ವಂಚಿತರಾಗಿದ್ದಾರೆ.

ಎಮ್. ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಗಳು ಸೇರಿದಂತೆ ಶಿಕ್ಷಣ

೧. "ಪ್ರಾಥಮಿಕ ಮತ್ತು ಸೆಕಂಡರಿ ಶಿಕ್ಷಣದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಮತ್ತು ಅದರಲ್ಲಿ ಪಾಲ್ಗೊಳ್ಳುವಂತೆ ಮಾಡುವುದು

೨. ಪ್ರಾಥಮಿಕ ಶಾಲೆಗಳಲ್ಲಿ ಪೂರ್ಣ ಪ್ರಮಾಣದ ಪ್ರವೇಶ ಮತ್ತು ಹಾಜಾರಾತಿಯನ್ನು ಖಚಿತಪಡಿಸಿಕೊಳ್ಳುವುದು."[೩೬]

ಶ್ರೀಧರಗಡ್ಡೆ ಗ್ರಾಮ ಪಂಚಾಯ್ತಿಯಲ್ಲಿ ಶಾಲೆಯಿಂದ ಹೊರಗಿರುವ ಮಕ್ಕಳ ಸಂಖ್ಯೆ೪೨೪ ಇದೆ. ಆದರೂ ಇಂತಹ ಮಕ್ಕಳ ಬಗ್ಗೆ ಗ್ರಾಮ ಪಂಚಾಯಿತಿಯಲ್ಲಿ ಯಾವುದೇ ಮಾಹಿತಿ ಹೊಂದಿರುವುದಿಲ್ಲ. ಪಂಚಾಯಿತಿ ವ್ಯಾಪ್ತಿಯಲ್ಲಿ ಸಾಕಷ್ಟು ಮಕ್ಕಳು ಬಾಲಕಾರ್ಮಿಕರಾಗಿದ್ದಾರೆ. ಪ್ರಾಥಮಿಕ ಪೂರ್ವಶಿಕ್ಷಣ ಪಡೆಯುವ ಮಕ್ಕಳ ಕುರಿತು ಪಂಚಾಯಿತಿಯಲ್ಲಿ ದಾಖಲೆಗಳಿಲ್ಲ. ಈ ಎಲ್ಲಾ ಕಾರಣಗಳಿಂದ ಮಕ್ಕಳ ವಿಚಾರದಲ್ಲಿ ಗ್ರಾಮ ಪಂಚಾಯಿತಿಗಳು ಸಂಪೂರ್ಣವಾಗಿ ಸೋತಿವೆ.

ಎನ್. ವಯಸ್ಕರ ಮತ್ತು ಅನೌಪಚಾರಿಕ ಶಿಕ್ಷಣ

"ವಯಸ್ಕರ ಸಾಕ್ಷರತೆಗೆ ಉತ್ತೇಜನ ನೀಡುವುದು."[೩೭]

ಪ್ರಸ್ತುತ ಗ್ರಾಮ ಪಂಚಾಯ್ತಿಯಲ್ಲಿ ವಯಸ್ಕರ ಶಿಕ್ಷಣವಾದ ಮುಂದುವರೆದ ಕಲಿಕಾಕೇಂದ್ರಗಳು. ನಡೆಯುತ್ತಿಲ್ಲ.

ಒ. ಗ್ರಂಥಾಲಯಗಳು

"ಗ್ರಾಮಗ್ರಂಥಾಲಯಗಳು ಮತ್ತು ವಾಚನಾಲಯಗಳು"[೩೮]

ಪ್ರಸ್ತುತ ಗ್ರಾಮ ಪಂಚಾಯ್ತಿಯಲ್ಲಿ ಗ್ರಂಥಾಲಯ ವ್ಯವಸ್ಥೆ ಮಾಡಿದೆ ಆದರೆ ಗ್ರಂಥಾಲಯ ನಿರ್ವಹಣೆಯಲ್ಲಿ ಸೋತಿದೆ.

ಪಿ. ಸಾಂಸ್ಕೃತಿಕ ಚಟುವಟಿಕೆಗಳು

"ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಉತ್ತೇಜನ ನೀಡುವುದು."[೩೯]

ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಅನುಕೂಲವಾಗುವಂತೆ ಗ್ರಾಮ ಪಂಚಾಯ್ತಿಗಳು ಶಾಲೆ ಅಂಗನವಾಡಿ ಕೇಂದ್ರಗಳಿಗೆ ಅನುದಾನ ನೀಡಿ ಪ್ರೋತ್ಸಾಹಿಸಬೇಕು.

ಕ್ಯೂ. ಮಾರುಕಟ್ಟೆಗಳು ಮತ್ತು ಜಾತ್ರೆಗಳು

"ಜಾತ್ರೆಗಳನ್ನು (ದನಗಳ ಜಾತ್ರೆಗಳೂ ಸೇರಿ) ಸಾಂಸ್ಕೃತಿಕ ಚಟುವಟಿಕೆಗಳಿಗೆ ಉತ್ತೇಜನ"[೪೦]

ಪ್ರಸ್ತುತ ಗ್ರಾಮ ಪಂಚಾಯ್ತಿಯಲ್ಲಿ ಈ ರೀತಿಯ ಉತ್ತೇಜನಗಳು ಕಂಡುಬರುವುದಿಲ್ಲ.

ಆರ್. ಗ್ರಾಮೀಣ ನೈರ್ಮಲ್ಯ

೧. "ಸಾಮಾನ್ಯ ನೈರ್ಮಲ್ಯ ನಿರ್ವಹಣೆ

೨. ಸಾರ್ವಜನಿಕ ರಸ್ತೆಗಳು, ಚರಂಡಿಗಳು ಕೆರೆಗಳು ಬಾವಿಗಳು ಮತ್ತು ಇತರ

ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛಗೊಳಿಸುವುದು.

೩. ಸ್ಮಶಾನಗಳ ನಿರ್ವಹಣೆ ಮತ್ತು ನಿಯಂತ್ರಣ

೪. ಸಾರ್ವಜನಿಕ ಪಾಯಿಖಾನೆ ಮನೆಗಳ ನಿರ್ಮಾಣ ಮತ್ತು ನಿಯಂತ್ರಣ

೫. ಕೋರುವವರಿಲ್ಲದ ಶವ ಮತ್ತು ಮಂಡಲ ವಿಲೇವಾರಿ

೬. ಬಟ್ಟೆ ಒಗೆಯುವ ಮತ್ತು ಸ್ನಾನಘಟ್ಟಗಳ ವ್ಯವಸ್ಥೆ ಮತ್ತು ನಿಯಂತ್ರಣ"[೪೧]

ಪ್ರಸ್ತುತ ಗ್ರಾಮ ಪಂಚಾಯ್ತಿಯಲ್ಲಿ ರಸ್ತೆಗಳ ಮಧ್ಯದಲ್ಲಿ ಗುಂಡಿಗಳು ತುಂಬಿಕೊಂಡಿವೆ. ರಸ್ತೆ ಪಕ್ಕದಲ್ಲಿ ಹರಿಯುವ ಚರಂಡಿಗಳನ್ನು ಸ್ವಚ್ಛಗೊಳಿಸದೆ ಇರುವುದರಿಂದ ದುರ್ನಾತ ಬೀರುತ್ತಿವೆ. ಸಾರ್ವಜನಿಕ ಶೌಚಾಲಯಗಳು ಪ್ರಸ್ತುತ ಹಾಳುಬಿದ್ದು ಸಮರ್ಪಕ ನಿರ್ವಹಣೆಯ ಕೊರತೆಯಿಂದ ಸೊರಗುತ್ತಿವೆ.

ಎಸ್. ಜನಾರೋಗ್ಯ ಮತ್ತು ಕುಟುಂಬ ಕಲ್ಯಾಣ

೧. "ಕುಟುಂಬ ಕಲ್ಯಾಣ ಯೋಜನೆಗಳನ್ನು ಕಾರ್ಯಗತಗೊಳಿಸುವುದು

೨. ಸಾಂಕ್ರಾಮಿಕ ರೋಗಗಳನ್ನು ತಡೆಯುವುದು ಮತ್ತು ಪರಿಹಾರ ಕ್ರಮಗಳು

೩. ಮಾಂಸ, ಮೀನು ಮತ್ತು ಕೆಟ್ಟು ಹೋಗುವ ಇತರ ಆಹಾರ ವಸ್ತುಗಳ ಮಾರಾಟ ನಿಯಂತ್ರಣ

೪. ಮಾನವರಿಗೆ ಮತ್ತು ಪ್ರಾಣಿಗಳಿಗೆ ಲಸಿಕೆ ಹಾಕುವ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದು.

೫. ತಿನ್ನುವ ಮತ್ತು ಮನೋರಂಜನೆಯ ವಸ್ತುಗಳಿಗೆ ಲೈಸನ್ಸ್ ನೀಡುವುದು

೬. ಬೀದಿ ನಾಯಿಗಳನ್ನು ನಾಶ ಮಾಡುವುದು

೭. ಚರ್ಮ ಮತ್ತು ತೊಗಲುಗಳ ಸಂಸ್ಕರಣೆ, ಹದ ಮಾಡುವುದು ಮತ್ತು ಬಣ್ಣ ಹಾಕುವ ಬಗ್ಗೆ ನಿಯಂತ್ರಣ

೮. ಉಪದ್ರವಕಾರಿ ಮತ್ತು ಅಪಾಯಕಾರಿ ವೃತ್ತಿಗಳ ನಿಯಂತ್ರಣ"[೪೨]

ಪ್ರಸ್ತುತ ಗ್ರಾಮ ಪಂಚಾಯಿತಿಯಲ್ಲಿ ಮಕ್ಕಳು ಮತ್ತು ತಾಯಂದಿರ ಆರೈಕೆ ಸಮರ್ಪಕವಾಗಿ ನಡೆಯುತ್ತಿಲ್ಲ. ಬಹುತೇಕರು ಅಂಗವಿಕಲರು. ಪೌಷ್ಟಿಕ ಆಹಾರ ಸೇವನೆಯಿಂದ ವಂಚಿತರಾದವರು, ರೋಗ ನಿರೋಧಕ ಲಸಿಕೆಯಿಂದ ವಂಚಿತರಾದ ಮಕ್ಕಳು ಕಂಡುಬರುತ್ತಾರೆ. ಗುಡಾರ ನಗರದ ಗ್ರಾಮದಲ್ಲಿ ಕುಟುಂಬ ಕಲ್ಯಾಣ ಯೋಜನೆಯಿಂದ ವಂಚಿತರಾದವರು ಕಂಡುಬರುತ್ತಾರೆ.

ಟಿ. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ

೧. "ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಪಾಲ್ಗೊಳ್ಳುವುದು.

೨. ಶಾಲಾ ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕ ಆಹಾರದ ಕಾರ್ಯಕ್ರಮಗಳಿಗೆ ಉತ್ತೇಜನ"[೪೩]

ಪ್ರಸ್ತುತ ಗ್ರಾಮ ಪಂಚಾಯ್ತಿಯ ಅಂಗನವಾಡಿ ಮತ್ತು ಆರೋಗ್ಯ ಕೇಂದ್ರಗಳ ನಿರ್ವಹಣೆಯನ್ನು ನೋಡಿದಾಗ ಗ್ರಾಮಪಂಚಾಯಿತಿಯ ಅಲಕ್ಷತನ ಎದ್ದು ಕಾಣುತ್ತದೆ.

ಯು. ಅಂಗವಿಕಲರ ಮತ್ತು ಮಾನಸಿಕ ಅಸ್ವಸ್ಥತೆಯುಳ್ಳ ವ್ಯಕ್ತಿಗಳ ಕಲ್ಯಾಣವೂ ಸೇರಿದಂತೆ ಸಮಾಜ ಕಲ್ಯಾಣ

೧. "ಅಂಗವಿಕಲರ ಮಾನಸಿಕ ಅಸ್ವಸ್ಥ ವ್ಯಕ್ತಿಗಳ ಮತ್ತು ನಿರ್ಗತಿಕರ ಕಲ್ಯಾಣವೂ ಸೇರಿದಂತೆ ಸಮಾಜ ಕಲ್ಯಾಣ ಕಾರ್ಯಕ್ರಮದ ಅನುಷ್ಠಾನದಲ್ಲಿ ಪಾಲ್ಗೊಳ್ಳುವುದು

೨. ವೃದ್ಧಾಪ್ಯ ಮತ್ತು ವಿಧವಾ ವೇತನಗಳ ಯೋಜನೆಗಳ ಮೇಲ್ವಿಚಾರಣೆ"[೪೪]

ಪ್ರಸ್ತುತ ಪಂಚಾಯ್ತಿಯಲ್ಲಿ ೨೮ ಅಂಗವಿಕಲ ಮಕ್ಕಳಿಗೆ ಗ್ರಾಮ ಪಂಚಾಯ್ತಿಯಿಂದ ನೆರವು ಸಿಕ್ಕಿಲ್ಲ. ವೃದ್ಧಾಪ್ಯ ಮತ್ತು ವಿಧವಾವೇತನ ನೀಡುವಾಗ ನಡೆಯುವ ಅವ್ಯವಹಾರವನ್ನು ಪಂಚಾಯಿತಿಯು ತಡೆಯಬೇಕು.

ವಿ. ದುರ್ಬಲ ವರ್ಗಗಳ ಅದರಲ್ಲೂ ವಿಶೇಷವಾಗಿ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ

೧. "ಅನುಸೂಚಿತ ಜಾತಿಗಳ ಅನುಸೂಚಿನ ಪಂಗಡಗಳ ಮತ್ತು ಇತರ ದುರ್ಬಲವರ್ಗಗಳ ಕಲ್ಯಾಣವು ಸೇರಿದಂತೆ ಜನರಲ್ಲಿ ಜಾಗೃತಿ ಮೂಡಿಸುವುದು.

೨. ದುರ್ಬಲ ವರ್ಗಗಳ ಕಲ್ಯಾಣದ ನಿರ್ದಿಷ್ಟ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಪಾಲ್ಗೊಳ್ಳುವುದು."[೪೫]

ಪ್ರಸ್ತುತ ಪಂಚಾಯ್ತಿಯಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳು ಪರಿಸ್ಥಿತಿಯಲ್ಲಿ ಏನೇನು ಸುಧಾರಣೆಯಾಗಿಲ್ಲ

ಡಬ್ಲ್ಯು. ಸಾರ್ವಜನಿಕ ವಿತರಣ ವ್ಯವಸ್ಥೆ

೧. "ಅತ್ಯಾವಶ್ಯಕ ಸರಕುಗಳ ವಿತರಣೆಗೆ ಸಂಬಂಧಿಸಿದಂತೆ ಜನರಲ್ಲಿ ಜಾಗೃತಿ ಮೂಡಿಸುವುದು.

೨. ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೇಲ್ವಿಚಾರಣೆ"[೪೬]

ಪ್ರಸ್ತುತ ಪಂಚಾಯ್ತಿಯಲ್ಲಿ ಸಾರ್ವಜನಿಕ ಪಡಿತರ ಚೀಟಿ ವಿತರಣಾ ವ್ಯವಸ್ಥೆಯ ಲಾಭವು ಅರ್ಹ ಬಡಕುಟುಂಬಗಳಿಗೆ ದೊರೆತಿಲ್ಲ.

ಎಕ್ಸ್. ಸಮುದಾಯ ಸ್ವತ್ತುಗಳ ನಿರ್ವಹಣೆ

೧. "ಸಮುದಾಯ ಸ್ವತ್ತುಗಳ ನಿರ್ವಹಣೆ

೨. ಇತರ ಸಮುದಾಯ ಸ್ವತ್ತುಗಳ ಸಂರಕ್ಷಣೆ ಮತ್ತು ನಿರ್ವಹಣೆ"[೪೭]

ಸಮುದಾಯದ ಸ್ವತ್ತುಗಳಾದ ಅಂಗನವಾಡಿ, ಶಾಲೆಗಳ ನಿರ್ವಹಣೆ ಮಾಡಲು ಪಂಚಾಯ್ತಿಗಳು ಸೋತಿವೆ.

ವೈ. ದನದ ಕೊಟ್ಟಿಗೆಗಳು, ದೊಡ್ಡಿಗಳು ಮತ್ತು ಗಾಡಿ ನಿಲ್ದಾಣಗಳ ನಿರ್ಮಾಣ ಮತ್ತು ನಿರ್ವಹಣೆ

"ಕಸಾಯಿ ಖಾನೆಗಳ ನಿರ್ಮಾಣ ಮತ್ತು ನಿರ್ವಹಣೆ

ಸಾರ್ವಜನಿಕ ಉದ್ಯಾನವನ, ಆಟದ ಮೈದಾನ ಇತ್ಯಾದಿಗಳ ನಿರ್ವಹಣೆ

ಸಾರ್ವಜನಿಕ ಸ್ಥಳಗಳಲ್ಲಿ ಗೊಬ್ಬರಗುಂಡಿಗಳ ನಿಯಂತ್ರಣ

ಸಂತೆಗಳನ್ನು ಏರ್ಪಡಿಸುವುದು ಮತ್ತು ನಿಯಂತ್ರಿಸುವುದು

ವಹಿಸಿಕೊಡಬಹುದಾದಂಥ ಇತರ ಪ್ರಕಾರ್ಯಗಳು"[೪೮]

ಪ್ರಸ್ತುತ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಉದ್ಯಾನವನವಾಗಲಿ ಮಕ್ಕಳಿಗೆ ಆಟವಾಡಲು ಆಟದ ಮೈದಾನವಾಗಲೀ ಇಲ್ಲ.

ಗ್ರಾಮಪಂಚಾಯಿತಿ ಕಾರ್ಯಗಳು ಮತ್ತು ಮಕ್ಕಳು ಎಂದು ನೋಡುವಾಗ ಗ್ರಾಮ ಪಂಚಾಯಿತಿಯ ಅಧಿಕಾರದ ವ್ಯಾಪ್ತಿಯಲ್ಲಿ ಸಂಪೂರ್ಣವಾಗಿ ಮಕ್ಕಳಿಗೆ ಹಕ್ಕುಗಳನ್ನು ಒದಗಿಸಲು ಸಾಧ್ಯತೆ ಇದೆ. ಆದರೆ ಪಂಚಾಯ್ತಿ ಸದಸ್ಯರು ಗ್ರಾಮ ಪಂಚಾಯ್ತಿಯ ಕಾರ್ಯಗಳನ್ನು ನೆರವೇರಿಸುವಾಗ ವಿಶಾಲವಾದ ದೃಷ್ಟಿಕೋನದಿಂದ ನೋಡಬೇಕಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಅಧ್ಯಯನದ ಚೌಕಟ್ಟಿನ ಮಿತಿಯಿಂದಾಗಿ ಗ್ರಾಮಪಂಚಾಯ್ತಿ ಕಾರ್ಯಗಳನ್ನು ವಿವರವಾಗಿ ವಿವರಿಸಿಲ್ಲ.

ಅಡಿ ಟಿಪ್ಪಣಿಗಳು

೧. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ: ೨೦೦೪; ಕರ್ನಾಟಕ ರಾಜ್ಯ ಮಕ್ಕಳ ಕ್ರಿಯಾಯೋಜನೆ ೨೦೦೩–೧೦, ಪು.೧

೨. ಅದೇ, ಪು.೨೩

೩. ಅದೇ, ಪು.೨೩

೪. ಅದೇ, ಪು.೨೭

೫. ಅದೇ, ಪು.೨೯

೬. ಅದೇ, ಪು.೩೧

೭. ಅದೇ, ಪು.೩೩

೮. ಅದೇ, ಪು.೩೫

೯. ಅದೇ, ಪು.೪೦

೧೦. ಅದೇ, ಪು.೪೧

೧೧. ಅದೇ, ಪು.೪೩

೧೨. ಅದೇ, ಪು.೪೮

೧೩. ಅದೇ, ಪು.೪೮

೧೪. ಅದೇ, ಪು.೫೩

೧೫. ಅದೇ, ಪು.೭೧

೧೬. ಅದೇ, ಪು.೭೧

೧೭. ಅದೇ, ಪು.೭೩

೧೮. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ: ೧೯೯೮; ಪ್ರಜೆಗಳೇ ಪ್ರಭುಗಳು, ಪು.೩೪

೧೯. ಅದೇ, ಪು.೩೪

೨೦. ಅದೇ, ಪು.೩೪

೨೧. ಅದೇ, ಪು.೩೪

೨೨. ಅದೇ, ಪು.೩೪

೨೩. ಅದೇ, ಪು.೩೪

೨೪. ಅದೇ, ಪು.೩೪

೨೫. ಅದೇ, ಪು.೩೪

೨೬. ಅದೇ, ಪು.೩೪

೨೭. ಅದೇ, ಪು.೩೪

೨೮. ಅದೇ, ಪು.೩೪

೨೯. ಅದೇ, ಪು.೩೪

೩೦. ಅದೇ, ಪು.೩೪

೩೧. ಅದೇ, ಪು.೩೪

೩೨. ಅದೇ, ಪು.೩೪

೩೩. ಅದೇ, ಪು.೩೫

೩೪. ಅದೇ, ಪು.೩೫

೩೫. ಅದೇ, ಪು.೩೫

೩೬. ಅದೇ, ಪು.೩೬

೩೭. ಅದೇ, ಪು.೩೬

೩೮. ಅದೇ, ಪು.೩೬

೩೯. ಅದೇ, ಪು.೩೬

೪೦. ಅದೇ, ಪು.೩೬

೪೧. ಅದೇ, ಪು.೩೬

೪೨. ಅದೇ, ಪು.೩೬

೪೩. ಅದೇ, ಪು.೩೭

೪೪. ಅದೇ, ಪು.೩೭

೪೫. ಅದೇ, ಪು.೩೭

೪೬. ಅದೇ, ಪು.೩೭

೪೭. ಅದೇ, ಪು.೩೭

೪೮. ಅದೇ, ಪು.೩೭

ಅಧ್ಯಾಯ–೫

ಮಕ್ಕಳು ಮತ್ತು ಸ್ಥಳೀಯ ಸರ್ಕಾರ

೫.೧ ಮಕ್ಕಳ ಹಕ್ಕುಗಳ ಜಾರಿಗಾಗಿ ಗ್ರಾಮ ಪಂಚಾಯ್ತಿಗಳ ಪಾತ್ರ

೫.೨ ಸ್ಥಾಯಿ ಸಮಿತಿ ಮತ್ತು ಉಪಸಮಿತಿಗಳ ಪಾತ್ರ

೫.೩ ಸಮುದಾಯ ಸಂಘಟನೆಗಳು ಮತ್ತು ಸಂಘಸಂಸ್ಥೆಗಳ ಪಾತ್ರ

ಅಧ್ಯಾಯ-೫

ಮಕ್ಕಳು ಮತ್ತು ಸ್ಥಳೀಯ ಸರ್ಕಾರ

ಪ್ರಸ್ತುತ ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಕ್ಕಳ ಹಕ್ಕುಗಳ ಹಿನ್ನೆಲೆಯಾಗಿಟ್ಟುಕೊಂಡು ಕ್ಷೇತ್ರಕಾರ್ಯವನ್ನು ಕೈಗೊಂಡಾಗ ಪ್ರತಿ ಹಂತದಲ್ಲೂ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗಿರುವುದು ಕಂಡುಬರುತ್ತದೆ. ಮಕ್ಕಳಿಗಾಗಿ ಇಷ್ಟೊಂದು, ಕಾಯ್ದೆ ಕಾನೂನುಗಳು, ಕ್ರಿಯಾಯೋಜನೆಗಳನ್ನು ಸರಕಾರವು ರೂಪಿಸಿದ್ದರೂ ಕೂಡ ಅವುಗಳ ಅನುಷ್ಠಾನಗೊಳಿಸುವ ಹಂತದಲ್ಲಿ ಸಂಪೂರ್ಣವಾಗಿ ಸೋತುಹೋಗಿದೆ. ಯಾಕೆ ಹೀಗೆ? ಸರ್ಕಾರಗಳು ಕೇವಲ ಯಾಂತ್ರಿಕವಾಗಿ ಕಾರ್ಯನಿರ್ವಹಿಸುತ್ತವೆಯೇ? ಅವುಗಳಿಗೆ ಮಾನವೀಯ ಸ್ಪಂದನೆಗಳು ಇಲ್ಲವೆ? ಅಥವಾ ಸಂವಿಧಾನಬದ್ಧ ಸರ್ಕಾರಗಳಿಗೆ ಸಂವಿಧಾನಿಕ ಆಶಯಗಳಾದ ಮೂಲಭೂತ ಹಕ್ಕುಗಳ ಬಗ್ಗೆ ಗೊತ್ತಿಲ್ಲವೆ? ಅಧಿಕಾರ ಶಾಹಿಗಳ ಕಪಿಮುಷ್ಠಿಯಲ್ಲಿ ಸಂವಿಧಾನ ನಲುಗುತ್ತಿದೆಯೇ? ಯಾವ ತಂದೆ ತಾಯಿಗಳಿಗೂ ಮಕ್ಕಳ ಬಗ್ಗೆ ಕಾಳಜಿ ಇಲ್ಲವೆ? ಅಥವಾ ನಮ್ಮ ಮನೆಯ ಮಕ್ಕಳ ಬಗ್ಗೆ ಇರುವ ಕಾಳಜಿ ಗೌರವ, ಪಕ್ಕದ ಮನೆಯ ಮಕ್ಕಳ ಬಗ್ಗೆ ನಾವು ತೋರಿಸುವುದಿಲ್ಲವೆ? ನಮ್ಮ ಸಮಾಜವು ಅಷ್ಟೊಂದು ಹೃದಯ ಹೀನವಾಗಿವೆಯೇ? ದೇಶದ ಬಗ್ಗೆ ಭಾಷ್ಯ ಬರೆಯುವ ಮಕ್ಕಳನ್ನು ಬಾಲ್ಯದಲ್ಲೇ ಚಿವುಟಲಾಗುತ್ತಿದೆಯೇ? ಶತಶತಮಾನಗಳ ಇತಿಹಾಸವನ್ನು ಗಮನಿಸಿದಾಗ ಅಮಾಯಕರ, ಅಸಹಾಯಕರ, ಮುಗ್ಧರ ಮೇಲೆ ದೌರ್ಜನ್ಯ, ದಬ್ಬಾಳಿಕೆ ನಡೆದಿರುವುದು ಸ್ಪಷ್ಟ ಇಂತಹ ಮುಗ್ದತೆ ಅಸಹಾಯಕತೆಯನ್ನು ದೊಡ್ಡವರಾದ ನಾವು ದುರ್ಬಳಕೆ ಮಾಡಿಕೊಂಡಿದ್ದೇವೆ ಎನಿಸುತ್ತದೆ.

ಸ್ಥಳೀಯ ಸರ್ಕಾರವಾದ ಗ್ರಾಮಪಂಚಾಯಿತಿಗಳು ಮಕ್ಕಳ ಹಕ್ಕುಗಳನ್ನು ಜಾರಿಗೊಳಿಸುವಲ್ಲಿ ಬದ್ದತೆಯನ್ನು ವ್ಯಕ್ತಪಡಿಸಿಲ್ಲ. ಸಂವಿಧಾನದ ಆಶಯಗಳನ್ನು ಜಾರಿಗೊಳಿಸುವ ಸಲುವಾಗಿಯೇ ದೊಡ್ಡ ಪ್ರಮಾಣದ ಕಾರ್ಯಾಂಗವನ್ನು ನೇಮಕ ಮಾಡಿದರೂ ಕೂಡ

ಅದರ ಫಲ ಮಾತ್ರ ಮಕ್ಕಳಿಗೆ ದೊರೆತಿಲ್ಲ. ಬಹುಶಃ ಇದಕ್ಕೆ ಕಾರಣ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಲ್ಲಿ ಸ್ಪಷ್ಟವಾಗಿ ಮಕ್ಕಳ ಕುರಿತಾದ ಉಲ್ಲೇಖಗಳ ವಿವರಣೆ ನೀಡದಿರುವುದು ಒಂದು ಕಾರಣವಾದರೆ, ಸ್ಥಳೀಯ ಜನಪ್ರತಿನಿಧಿಗಳ ನಿರ್ಲಕ್ಷ, ಬದ್ಧತೆ ಇಲ್ಲದಿರುವುದು ಮತ್ತು ಜನ ಪ್ರತಿನಿಧಿಗಳ ಅನಕ್ಷರತೆ, ಅಜ್ಞಾನ, ದೂರದೃಷ್ಟಿಯ ಕೊರತೆ, ಅಧಿಕಾರ ಶಾಹಿತ್ವ, ಸಮಾಜದ ನಿರ್ಲಕ್ಷ ಇವೆಲ್ಲವುಗಳ ಮಧ್ಯೆ ಮಕ್ಕಳ ಹಕ್ಕುಗಳು ನಲುಗಿವೆ. ಕ್ಷೇತ್ರ ಕಾರ್ಯದ ಆಧಾರದ ಮೇಲೆ ಮಕ್ಕಳ ಹಕ್ಕುಗಳನ್ನು ಜಾರಿಗೆ ತರಬೇಕಾದರೆ ಸ್ಥಳೀಯ ಸರ್ಕಾರಗಳು ಮಾಡಬಹುದಾದ ಸಾಧ್ಯತೆಗಳ ಕುರಿತು ಪ್ರಸ್ತುತ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿದೆ.

೫.೧ ಮಕ್ಕಳ ಹಕ್ಕುಗಳ ಜಾರಿಗಾಗಿ ಗ್ರಾಮ ಪಂಚಾಯ್ತಿಗಳ ಪಾತ್ರ

ವಿಶ್ವಸಂಸ್ಥೆಯು ಜಾಗತಿಕವಾಗಿ ಮಕ್ಕಳ ಹಕ್ಕುಗಳನ್ನು ಒದಗಿಸುವ ದೃಷ್ಟಿಯಿಂದ ಸಹಸ್ರಮಾನದ ಅಭಿವೃದ್ಧಿ ಗುರಿಗಳು ಮತ್ತು ಮಕ್ಕಳಿಗೆ ಸೂಕ್ತವಾದ ಜಗತ್ತು ಎಂಬ ಕ್ರಿಯಾಯೋಜನೆಗಳನ್ನು ರೂಪಿಸಿದೆ. ಅದರಂತೆ ನಮ್ಮದೇಶದಲ್ಲಿ ಭಾರತ ಸರ್ಕಾರ, ಕರ್ನಾಟಕ ಸರ್ಕಾರ ಮಕ್ಕಳಿಗೆ ಸಂಬಂಧಿಸಿದ ಅನೇಕ ಕ್ರಿಯಾಯೋಜನೆಗಳನ್ನು ರೂಪಿಸಿದೆ. ಅದೇ ರೀತಿ ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯ್ತಿಗಳು ಸಹ ಮಕ್ಕಳ ಕ್ರಿಯಾಯೋಜನೆಗಳನ್ನು ರೂಪಿಸಿವೆ. ಆದರೆ ಸ್ಥಳೀಯ ಮಟ್ಟದಲ್ಲಿ ಮಕ್ಕಳಿಗಾಗಿ ಕ್ರಿಯಾಯೋಜನೆಗಳಾಗಲಿ, ಅಂಕಿ ಸಂಖ್ಯೆಗಳಾಗಲಿ ಹೊಂದಿಲ್ಲ ಪ್ರಸ್ತುತ ಗ್ರಾಮ ಪಂಚಾಯ್ತಿಗಳಲ್ಲಿ ಅಂತಹ ವಾತಾವರಣ ನಿರ್ಮಾಣಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಮಕ್ಕಳ ಹಕ್ಕುಗಳ ಜಾರಿ ಕುರಿತು ಈ ಕೆಳಗಿನಂತೆ ವಿವರಿಸಲಾಗಿದೆ.

ಎ. ಮಕ್ಕಳ ಸ್ಥಿತಿಗತಿಗೆ ಸಂಬಂಧಿಸಿದ ಅಂಕಿಅಂಶಗಳ ಸಂಗ್ರಹ

ಶ್ರೀಧರಗಡ್ಡೆ ಗ್ರಾಮ ಪಂಚಾಯ್ತಿಗೆ ಹೋಗಿ ಪಂಚಾಯ್ತಿಯಲ್ಲಿರುವ ಒಟ್ಟು ಜನಸಂಖ್ಯೆಯ ಮಾಹಿತಿಯನ್ನು ಕೇಳಿದರೆ ಕೇವಲ ಮತದಾರರ ಸಂಖ್ಯೆಯನ್ನು ಮಾತ್ರ ತಿಳಿಸಿ ಇದನ್ನೇ ಒಟ್ಟು ಜನಸಂಖ್ಯೆ ಎಂದು ಮಾಹಿತಿ ನೀಡುತ್ತಾರೆ. ಆದರೆ ವಾಸ್ತವದಲ್ಲಿ ಮಕ್ಕಳು ಪಂಚಾಯ್ತಿ ಒಂದು ಭಾಗ ಎಂಬುದನ್ನು ಗಮನಿಸಿಲ್ಲ. ಹಳ್ಳಿಯಲ್ಲಿರುವ ಸಾಮಾನ್ಯ ಮಾಹಿತಿಗಳಾದ ಜನಸಂಖ್ಯೆ, ಒಟ್ಟು ಕುಟುಂಬ, ಹೋಟೆಲ್, ಅಂಗಡಿ, ಕೈ ಪಂಪು, ಶಾಲೆ ಮತ್ತು ಅಂಗನವಾಡಿ ಕೇಂದ್ರಗಳು ಮತ್ತಿತರ ಮಾಹಿತಿಯನ್ನು ಸಂಖ್ಯೆಗಳ ಲೆಕ್ಕದಲ್ಲಿ ಕೊಡುತ್ತಾರೆ. ಪ್ರಸ್ತುತ ಪಂಚಾಯ್ತಿಯಲ್ಲಿ ಮಕ್ಕಳ ಸಂಖ್ಯೆ, ಮಕ್ಕಳ ಆರೋಗ್ಯ, ಶಿಕ್ಷಣ, ಮಕ್ಕಳ ಮರಣ, ರೋಗ ನಿರೋಧಕ ಲಸಿಕೆ ಮತ್ತು ಬಾಲ್ಯವಿವಾಹ ಮುಂತಾದವುಗಳ ಕುರಿತು ಯಾವುದೇ ಮಾಹಿತಿ ಗ್ರಾಮ ಪಂಚಾಯಿತಿಯಲ್ಲಿ ಇಲ್ಲ.

ಈ ಎಲ್ಲಾ ಹಿನ್ನೆಲೆಗಳಿಂದ ವಿವರಿಸುವುದಾದರೆ ಒಂದು ಗ್ರಾಮದ ಅಭಿವೃದ್ಧಿಯೆಂದರೆ ಮಕ್ಕಳ ಅಭಿವೃದ್ಧಿ ಎಂಬುದನ್ನು ಪಂಚಾಯಿತಿಯು ಗಮನಿಸಬೇಕು. ಈ ಕಾರಣದಿಂದಾಗಿ

ಪಂಚಾಯ್ತಿಯಲ್ಲಿರುವ ಒಟ್ಟು ಜನಸಂಖ್ಯೆಯಲ್ಲಿ ಸೊನ್ನೆಯಿಂದ ಹದಿನೆಂಟು ವಯಸ್ಸಿನೊಳಗಿರುವ ಮಕ್ಕಳ ಸಂಖ್ಯೆಯನ್ನು ಲೆಕ್ಕ ಹಾಕಬೇಕು. ಇದರ ಮೂಲಕ ಭೌತಿಕ ಸೇವಾ ಸೌಲಭ್ಯಗಳಾದ ಅಂಗನವಾಡಿ ಕೇಂದ್ರ, ಶಾಲೆ, ಆರೋಗ್ಯಕೇಂದ್ರಗಳನ್ನು ಮಕ್ಕಳ ಅಗತ್ಯಕ್ಕನುಗುಣವಾಗಿ ಅವುಗಳ ಸಂಖ್ಯೆಯನ್ನು ಹೆಚ್ಚಿಸಬೇಕು.

ಪಂಚಾಯ್ತಿ ವ್ಯಾಪ್ತಿಯಲ್ಲಿ ಮಕ್ಕಳಿಗೆ ನೀಡುವ ರೋಗ ನಿರೋಧಕ ಲಸಿಕೆಗಳಾದ ಬಿ.ಸಿ.ಜಿ., ಒ.ಪಿ.ವಿ., ಮೀಜಲ್ಸ್, ಪೋಲಿಯೋ ಮುಂತಾದ ರೋಗ ನಿರೋಧಕ ಲಸಿಕೆಗಳನ್ನು ಪಡೆದ ಮಕ್ಕಳೆಷ್ಟು ಮತ್ತು ರೋಗ ನಿರೋಧಕ ಪಡೆಯದ ಮಕ್ಕಳೆಷ್ಟು ಎಂಬುದರ ಬಗ್ಗೆ ಮಾಹಿತಿಯನ್ನು ಹೊಂದಬೇಕು. ಹಾಗೆಯೇ ಪಂಚಾಯಿತಿ ವ್ಯಾಪ್ತಿಯಲ್ಲಿರುವ ೩ ರಿಂದ ೬ ವರ್ಷದೊಳಗಿನ ಎಲ್ಲಾ ಮಕ್ಕಳು ಅಂಗನವಾಡಿ ಕೇಂದ್ರಕ್ಕೆ ಹೋಗುತ್ತಾರೆಯೇ? ಅಂಗನವಾಡಿ ಸೌಲಭ್ಯವಂಚಿತರಾದ ಮಕ್ಕಳೆಷ್ಟು? ಎಂಬುದರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಬೇಕು. ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿರುವ ಅಂಗವಿಕಲ, ಅನಾಥ ಮಕ್ಕಳೆಷ್ಟು? ಇಂತಹ ಮಕ್ಕಳಿಗೆ ಸೇವಾಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು? ಹಾಗೆಯೇ ಪ್ರಾಥಮಿಕ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಎಷ್ಟು? ಶಾಲೆಯಿಂದ ಹೊರಗುಳಿದಿರುವ ಮಕ್ಕಳು ಯಾರು? ಅದಕ್ಕೆ ಕಾರಣಗಳು ಏನು? ಎಂಬುದರ ಬಗ್ಗೆ ಪಂಚಾಯಿತಿಗಳು ಗಮನ ಹರಿಸಬೇಕು.

ಪಂಚಾಯಿತಿಯೊಳಗೆ ಮಕ್ಕಳ ಹುಟ್ಟು, ಮಕ್ಕಳ ಆರೋಗ್ಯ, ಅಪೌಷ್ಠಿಕತೆ, ತಾಯಿ ಮತ್ತು ಮಕ್ಕಳ ಮರಣದ ಬಗ್ಗೆ ಲೆಕ್ಕಹಾಕಿ ಅವುಗಳಿಗೆ ಪರಿಹಾರ ಹುಡುಕಿಕೊಳ್ಳಲು ಗ್ರಾಮ ಪಂಚಾಯ್ತಿಯು ಪ್ರಯತ್ನಿಸಬೇಕು. ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಬಡಕುಟುಂಬಗಳು ಯಾವುವು? ಅವರ ಮಕ್ಕಳ ಸ್ಥಿತಿಗತಿಗಳೇನು? ಎಂಬುದರ ಬಗ್ಗೆ ಲೆಕ್ಕಹಾಕಬೇಕು. ಕುಟುಂಬದವರು ಮತ್ತು ಮಕ್ಕಳು ವಲಸೆ ಹೋಗುತ್ತಿದ್ದರೆ ಅಂತಹ ಕುಟುಂಬಗಳಿಗೆ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಡಬೇಕು.

ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆಯುವ ಬಾಲ್ಯ ವಿವಾಹ ಪ್ರಕರಣಗಳೆಷ್ಟು? ಹೊಸದಾಗಿ ಮದುವೆಯಾಗಿರುವ ಜೋಡಿಗಳು ಯಾರು? ಗರ್ಭಿಣಿಯರ ಸಂಖ್ಯೆ ಎಷ್ಟು? ಅದರಲ್ಲಿ ರಕ್ತ ಹೀನತೆ ಕೊರತೆಯಿಂದ ಕಬ್ಬಿಣಾಂಶ ಮಾತ್ರೆ ಪಡೆಯುವ ಗರ್ಭಿಣಿಯರ ಸಂಖ್ಯೆ ಎಷ್ಟು? ಮುಂತಾದ ಮಾಹಿತಿಗಳನ್ನು ಹೊಂದುವುದರಿಂದ, ಪಂಚಾಯ್ತಿ ವ್ಯಾಪ್ತಿಯಲ್ಲಿ ಮಕ್ಕಳಿಗೆ ರಕ್ಷಣೆ, ಪಾಲನೆ, ಪೋಷಣೆ ನೀಡಿ ಅವರ ಹಕ್ಕುಗಳನ್ನು ಒದಗಿಸಲು ಸಹಾಯಕವಾಗುತ್ತದೆ. ಇದರ ಮೂಲಕ ಮಕ್ಕಳಿಗೆ ಸಂವಿಧಾನಬದ್ಧ ಹಕ್ಕನ್ನು ಒದಗಿಸಿಕೊಡಲು ಪ್ರಯತ್ನಿಸಿದಂತಾಗುತ್ತದೆ.

ಬಿ. ಮಕ್ಕಳ ಭೌತಿಕ ಸೇವಾಸೌಲಭ್ಯಗಳ ಸುಧಾರಣೆ

ಈಗಾಗಲೇ ಪಂಚಾಯಿತಿ ವ್ಯಾಪ್ತಿಯಲ್ಲಿ ಕ್ಷೇತ್ರಕಾರ್ಯ ಕೈಗೊಂಡಿರುವ ಆಧಾರದ ಮೇಲೆ ಹೇಳುವುದಾದರೆ ಮಕ್ಕಳಿಗೆ ಸಂಬಂಧಿಸಿದ ಸೇವಾ ಸೌಲಭ್ಯಗಳಾದ ಅಂಗನವಾಡಿ ಕೇಂದ್ರ, ಆರೋಗ್ಯಕೇಂದ್ರ, ಶಾಲೆ, ಗ್ರಂಥಾಲಯ, ಮುಂತಾದ ವ್ಯವಸ್ಥೆಗಳು ಮಕ್ಕಳ ರಕ್ಷಣೆಗೆ ಪೂರಕವಾಗಿಲ್ಲ, ಬದಲಿಗೆ ಮಾರಕವಾಗಿವೆ. ಇಂತಹ ವ್ಯವಸ್ಥೆಗಳನ್ನು ಗ್ರಾಮ ಪಂಚಾಯಿತಿಗಳು ಕಾಳಜಿಯಿಂದ ಗಮನಿಸಿ ಸುಧಾರಿಸಬೇಕಿದೆ. ಪಂಚಾಯಿತಿಯಲ್ಲಿನ ಒಂದೊಂದು ಸೌಲಭ್ಯಗಳನ್ನು ಸರಿಪಡಿಸುವ ಕುರಿತು ವಿವರವಾಗಿ ಪ್ರಸ್ತಾಪಿಸಗಿಲಾಗಿದೆ.

ಬಿ.೧ ಪ್ರಾಥಮಿಕ ಆರೋಗ್ಯ ಉಪಕೇಂದ್ರ

ಪ್ರಸ್ತುತ ಗ್ರಾಮ ಪಂಚಾಯಿತಿಯಲ್ಲಿರುವ ಆರೋಗ್ಯ ಉಪಕೇಂದ್ರವು ಅಲ್ಲಿನ ಸಮುದಾಯದ ಜನರಿಗೆ ಆರೋಗ್ಯ ರಕ್ಷಣೆ ನೀಡುತ್ತಿಲ್ಲ. ಮೊದಲು ಈ ಆರೋಗ್ಯ ಉಪಕೇಂದ್ರದ ಕಟ್ಟಡವನ್ನು ದುರಸ್ಥಿಗೊಳಿಸಿ ರಕ್ಷಣೆ ನೀಡಬೇಕಿದೆ. ಆರೋಗ್ಯ ಉಪಕೇಂದ್ರದ ಕಟ್ಟಡಕ್ಕೆ ವಿದ್ಯುತ್ ಸೌಕರ್ಯವನ್ನು ಒದಗಿಸಬೇಕು, ಸುತ್ತಮುತ್ತಲಿರುವ ಬೇಲಿ ಕಸಗಳನ್ನು ತೆಗೆಯಿಸಬೇಕು, ಅಲ್ಲದೆ ಈ ಕೇಂದ್ರಕ್ಕೆ ಕಾಂಪೌಂಡ್ ವ್ಯವಸ್ಥೆ ಕಲ್ಪಿಸಬೇಕು, ದನಕರುಗಳನ್ನು ಕಟ್ಟಿ ಅತಿಕ್ರಮಣ ಮಾಡುವುದನ್ನು ತೆಗೆಸಿ ಆ ಕುಟುಂಬಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು. ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಎರಡು ಪ್ರತ್ಯೇಕ ಆರೋಗ್ಯ ಉಪಕೇಂದ್ರ ನಿರ್ಮಾಣ ಮಾಡಬೇಕು. ದೂರದ ಸ್ಥಳಗಳಿಗೆ ಹೋಗಿ ಹೆರಿಗೆ ಮತ್ತಿತರ ಆರೋಗ್ಯ ಸೌಲಭ್ಯಗಳನ್ನು ಪಡೆಯುವುದನ್ನು ತಪ್ಪಿಸಲು ಲಕ್ಷ್ಮಿನಗರ, ವಕ್ರಾಣಿ ಕ್ಯಾಂಪ್‌ನ ಜನತೆಗೆ ಅನುಕುಲವಾಗುವ ಸ್ಥಳದಲ್ಲಿ ಆರೋಗ್ಯ ಉಪಕೇಂದ್ರವನ್ನು ನಿರ್ಮಾಣ ಮಾಡಬೇಕು.

ಮುಖ್ಯವಾಗಿ ಶ್ರೀಧರಗಡ್ಡೆ ಗ್ರಾಮದಲ್ಲಿರುವ ಆರೋಗ್ಯ ಉಪಕೇಂದ್ರಕ್ಕೆ ಹೆರಿಗೆಗೆ ಬೇಕಾಗುವ ಸೌಲಭ್ಯಗಳನ್ನು ಒದಗಿಸಬೇಕು. ಹಾಸಿಗೆ, ಮಂಚ, ಹೆರಿಗೆ ಕಿಟ್, ರೆಫ್ರಿಜರೇಟರ್, ಮುಂತಾದ ಸಲಕರಣೆಗಳನ್ನು ವ್ಯವಸ್ಥಿತವಾಗಿ ಒದಗಿಸಿ, ತಾಯಂದಿರ ಹೆರಿಗೆಗೆ ಮತ್ತು ಮಕ್ಕಳಿಗೆ ರೋಗ ನಿರೋಧಕ ಲಸಿಕೆಗಳನ್ನು ಹಾಕಲು ಅನುಕೂಲ ಮಾಡಿಕೊಡಬೇಕು. ಅಲ್ಲದೆ ಆರೋಗ್ಯ ಉಪಕೇಂದ್ರಕ್ಕೆ ಶೌಚಾಲಯ ವ್ಯವಸ್ಥೆ ಮಾಡಿಕೊಟ್ಟು ಸಾಕಷ್ಟು ನೀರಿನ ಬಳಕೆಗೆ ಅವಕಾಶ ಮಾಡಿ ಕೊಡಬೇಕು. ಜೊತೆಗೆ ಶುದ್ಧವಾದ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಬೇಕು.

ಈ ಉಪಕೇಂದ್ರದಲ್ಲಿ ಕಿರಿಯ ಆರೋಗ್ಯ ಮಹಿಳಾ ಸಹಾಯಕಿ ವಾಸಿಸಲು ಯೋಗ್ಯವಾದ ಸ್ಥಳದಲ್ಲಿ ವಸತಿ ನಿರ್ಮಾಣ ಮಾಡಿಕೊಡಬೇಕು. ಇದರಿಂದ ರಾತ್ರಿ ಹೊತ್ತು ಹೆರಿಗೆಯಾದರೆ ಸೇವೆಸಲ್ಲಿಸಲು ಸಾಧ್ಯವಾಗುತ್ತದೆ. ಪ್ರಸ್ತುತ ಆರೋಗ್ಯ ಕೇಂದ್ರಕ್ಕೆ ಕಿರಿಯ ಆರೋಗ್ಯ ಪುರುಷ ಸಹಾಯಕರನ್ನು ನೇಮಿಸಬೇಕು.

ಬಿ.೨ ಅಂಗನವಾಡಿ ಕೇಂದ್ರ

ಪ್ರಸ್ತುತ ಗ್ರಾಮ ಪಂಚಾಯಿತಿಯಲ್ಲಿ ಇರುವ ಅಂಗನವಾಡಿ ಕೇಂದ್ರಗಳು ಮಕ್ಕಳ ಹಕ್ಕುಗಳ ರಕ್ಷಣೆಗೆ ಪೂರಕವಾಗಿಲ್ಲ. ಇಲ್ಲಿರುವ ಅಂಗನವಾಡಿ ಕೇಂದ್ರಗಳು ಮಕ್ಕಳನ್ನು ಆಕರ್ಷಿಸುವಂತೆ ವ್ಯವಸ್ಥೆ ಮಾಡಬೇಕು. ಪ್ರಸ್ತುತ ಬಾಡಿಗೆ ಕೇಂದ್ರದಲ್ಲಿ ನಡೆಸುತ್ತಿರುವ ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳನ್ನು ಕಟ್ಟಿಸಿಕೊಡಬೇಕು. ಈಗಾಗಲೇ ನಿರ್ಮಾಣಗೊಂಡಿರುವ ಅಂಗನವಾಡಿ ಕೇಂದ್ರಗಳಿಗೆ ಪ್ರತ್ಯೇಕವಾದ ಅಡಿಗೆ ಕೋಣೆ ಕಟ್ಟಿಸಿಕೊಡಬೇಕು. ಮಕ್ಕಳು ಶೌಚಾಲಯಕ್ಕೆ ಹೋಗಲು ಪ್ರತಿ ಕೇಂದ್ರದಲ್ಲಿ ಸೌಲಭ್ಯ ಕಲ್ಪಿಸಿಕೊಡಬೇಕು. ಮುಖ್ಯವಾಗಿ ಗಮನಿಸಬೇಕಾದುದೇನೆಂದರೆ ಈ ಅಂಗನವಾಡಿ ಕೇಂದ್ರಗಳನ್ನು ಸಮುದಾಯದವರು ಅತಿಕ್ರಮಣ ಮಾಡಿರುವುದನ್ನು ತಡೆಗಟ್ಟಿ, ಅಂತಹ ಕುಟುಂಬಗಳಿಗೆ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಡಬೇಕು. ಪ್ರತಿ ಅಂಗನವಾಡಿ ಕೇಂದ್ರಕ್ಕೂ ಕಾಂಪೌಂಡ್ ವ್ಯವಸ್ಥೆ ಮಾಡಿಕೊಡಬೇಕು.

ಈ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರದ ಪರಿಸರವನ್ನು ಉತ್ತಮಗೊಳಿಸಬೇಕು. ಕೇಂದ್ರದ ಸುತ್ತಲೂ ಗಿಡಗಳನ್ನು ನೆಟ್ಟು ಅಂಗನವಾಡಿ ಕೇಂದ್ರವನ್ನು ಸುಂದರಗೊಳಿಸಬೇಕು. ಅಲ್ಲದೆ ಅಂಗನವಾಡಿ ಕಟ್ಟಡಗಳನ್ನು ಕಟ್ಟುವಾಗ ಆಯಾ ವಾರ್ಡಿನಲ್ಲೇ ಅಂದರೆ ಯಾವ ವಾರ್ಡಿನ ಮಕ್ಕಳು ಅಂಗನವಾಡಿ ಕೇಂದ್ರಕ್ಕೆ ಬರುತ್ತಾರೋ ಅದೇ ವಾರ್ಡಿನಲ್ಲಿ ಅಂಗನವಾಡಿ ಕಟ್ಟಡಗಳನ್ನು ಕಟ್ಟಿಸಬೇಕು. ಹೀಗೆ ಮಾಡುವುದರಿಂದ ದೂರದ ವಾರ್ಡಿನಿಂದ ಇನ್ನೊಂದು ವಾರ್ಡಿಗೆ ಮಕ್ಕಳು ಅಲೆಯುವುದನ್ನು ಮತ್ತು ಮಕ್ಕಳು ದೂರದಲ್ಲಿರುವ ಕಾರಣದಿಂದ ಕೇಂದ್ರಕ್ಕೆ ಗೈರುಹಾಜರಾಗುವುದನ್ನು ತಪ್ಪಿಸಬಹುದು. ವಾಸ್ತವವಾಗಿ ಮಕ್ಕಳು ದೂರದಿಂದ ಅಂಗನವಾಡಿಕೇಂದ್ರಕ್ಕೆ ನಡೆದು ಬರುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ.

ಬಿ.೩ ಶಾಲೆ

ಪ್ರಸ್ತುತ ಗ್ರಾಮ ಪಂಚಾಯ್ತಿಯಲ್ಲಿ ಶ್ರೀಧರಗಡ್ಡೆ ಮತ್ತು ಲಕ್ಷ್ಮಿನಗರಗಳನ್ನು ಹೊರತು ಪಡಿಸಿದರೆ ಬೇರೆಕಡೆ ಉತ್ತಮವಾಗಿಲ್ಲ. ಜಾಲಿಬೆಂಚೆ ಗ್ರಾಮದಲ್ಲಿ ಶಾಲೆಯನ್ನು ರಸ್ತೆ ಪಕ್ಕ ಕಟ್ಟಿಸಿದ್ದಾರೆ. ಶಾಲೆ ಸುತ್ತಲೂ ತಿಪ್ಪೆ ಗುಂಡಿ ಮತ್ತು ಬೇಲಿಗಳು ಆವರಿಸಿವೆ. ಇಂತಹ ಕಟ್ಟಡಗಳನ್ನು ಸ್ಥಳಾಂತರಗೊಳಿಸಿ ಮಕ್ಕಳಿಗೆ ಉತ್ತಮ ಪರಿಸರದಲ್ಲಿ ಶಾಲಾ ಕಟ್ಟಡವನ್ನು ಕಟ್ಟಿಸಬೇಕು. ಶಾಲೆ ಮುಂದಿರುವ ಚರಂಡಿ ತಿಪ್ಪೆಗುಂಡಿಗಳನ್ನು ತೆಗಿಸಿ ಸುಂದರವಾದ ಪರಿಸರವನ್ನು ನಿರ್ಮಾಣ ಮಾಡಬೇಕು. ಪ್ರತಿಶಾಲೆಗೂ ಶೌಚಾಲಯವನ್ನು ಕಟ್ಟಿಸಿ, ಸಾಕಷ್ಟು ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕು. ಶಾಲಾ ಶೌಚಾಲಯವನ್ನು ಸಮುದಾಯದವರು ಬಳಸದಂತೆ ತಡೆಯಬೇಕು. ಪ್ರಸ್ತುತದಲ್ಲಿರುವ ಎಲ್ಲಾ ಶಾಲೆಗಳಿಗೆ ಕಾಂಪೌಂಡ್ ವ್ಯವಸ್ಥೆ ಮಾಡಿಕೊಡಬೇಕು. ಇದರಿಂದಾಗಿ ಎಲ್ಲಾ ಕೇಂದ್ರಗಳಿಗೆ ದನಕರುಗಳು ನುಗ್ಗುವುದನ್ನು ತಪ್ಪಿಸಲು

ಸಾಧ್ಯವಾಗುತ್ತದೆ. ಜೊತೆಗೆ ಅತಿಕ್ರಮಣ ಮಾಡುವುದನ್ನು ತಪ್ಪಿಸಬಹುದು. ಅಲ್ಲದೆ ಶಾಲೆಯ ಕಿಟಕಿ ಬಾಗಿಲುಗಳನ್ನು ಮುರಿಯುವುದನ್ನು ತಪ್ಪಿಸಬಹುದಾಗಿದೆ. ಪ್ರತಿ ಶಾಲೆ ಮುಂದೆ ಮಕ್ಕಳು ಆಟವಾಡಲು ಆಟದ ಮೈದಾನ ಅವಶ್ಯಕ ಅಂತಹ ವ್ಯವಸ್ಥೆ ಇರುವಲ್ಲಿ ಮಾತ್ರ ಗ್ರಾಮ ಪಂಚಾಯಿತಿಯು ಶಾಲೆಗಳಿಗೆ ಅನುಮತಿ ನೀಡಬೇಕು. ಪ್ರತಿ ಶಾಲೆಗಳಿಗೂ ವಿದ್ಯುತ್ ಸೌಕರ್ಯವನ್ನು ಒದಗಿಸಬೇಕು. ಶಾಲೆಯಲ್ಲಿರುವ ಮಕ್ಕಳಿಗೆ ಕುಳಿತುಕೊಳ್ಳಲು ಪೀಠೋಪಕರಣ ವ್ಯವಸ್ಥೆ ಮಾಡಬೇಕು. ವಿಜ್ಞಾನ ಪ್ರಯೋಗಗಳಿಗೆ ಪ್ರಯೋಗೋಪಕರಣಗಳನ್ನು ಒದಗಿಸಿಕೊಡಬೇಕು.

ಬಿ.೪ ಗ್ರಂಥಾಲಯ

ಪ್ರಸ್ತುತ ಗ್ರಾಮ ಪಂಚಾಯ್ತಿಯಲ್ಲಿರುವ ಗ್ರಂಥಾಲಯವು ಸಮುದಾಯಕ್ಕೆ ಉಪಯೋಗವಾಗುತ್ತಿಲ್ಲ. ಈ ಗ್ರಾಮ ಪಂಚಾಯಿತಿಯಲ್ಲಿರುವ ಗ್ರಂಥಾಲಯವನ್ನು ಪ್ರತಿದಿನ ತೆರೆಯುವ ವ್ಯವಸ್ಥೆ ಮಾಡಬೇಕು. ಇದರಿಂದಾಗಿ ಹಳ್ಳಿಗಳಲ್ಲಿರುವ ಜನರಿಗೆ ದೇಶದ ವಿದ್ಯಮಾನಗಳನ್ನು ತಿಳಿಯಲು ಸಹಾಯವಾಗುತ್ತದೆ. ಅದರಲ್ಲಿಯೂ ಮಕ್ಕಳ ಕಲಿಕೆಗೆ ಸಂಬಂಧಿಸಿದ ಪುಸ್ತಕಗಳನ್ನಿರಿಸಿ ಮಕ್ಕಳ ಮಾನಸಿಕ, ಬೌದ್ಧಿಕ ಬೆಳವಣಿಗೆಗೆ ಪ್ರೋತ್ಸಾಹಿಸಬೇಕು.

ಬಿ.೫ ನ್ಯಾಯಬೆಲೆ ಅಂಗಡಿ

ಪ್ರಸ್ತುತ ಗ್ರಾಮ ಪಂಚಾಯ್ತಿಯಲ್ಲಿ ೨೦೧೪ ಕುಟುಂಬಗಳಿವೆ. ಇದರಲ್ಲಿ ಕೇವಲ ೬೫೦ ಕುಟುಂಬಗಳನ್ನು ಮಾತ್ರ ಬಡತನ ರೇಖೆಯ ಕೆಳಗಿನ ಕುಟುಂಬಗಳೆಂದು ಗುರುತಿಸಲಾಗಿದೆ. ಆದರೆ ಪ್ರಸ್ತುತ ಪಂಚಾಯ್ತಿ ವ್ಯಾಪ್ತಿಯಲ್ಲಿರುವ ಗುಡಾರನಗರ ಗ್ರಾಮದಲ್ಲೇ ೨೦೦ಕ್ಕೂ ಅಧಿಕ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಕಂಡುಬರುತ್ತವೆ. ಇಂತಹ ಕುಟುಂಬಗಳನ್ನು ಸಮರ್ಪಕವಾಗಿ ಗುರುತಿಸಿ ಅವರನ್ನು ಮುಖ್ಯವಾಹಿನಿಗೆ ತಂದು ಅವರ ಮಕ್ಕಳ ಬದುಕನ್ನು ಸುಧಾರಿಸಬೇಕಾಗಿದೆ. ಪ್ರಸ್ತುತ ಪಂಚಾಯ್ತಿಯಲ್ಲಿ ಬಡಕುಟುಂಬಗಳನ್ನು ಗುರುತಿಸುವಲ್ಲಿಯೂ ಲೋಪದೋಷಗಳಾಗಿವೆ. ಇಂತಹ ಅವ್ಯವಸ್ಥೆಯನ್ನು ಗ್ರಾಮ ಪಂಚಾಯಿಯು ಸರಿಪಡಿಸಬೇಕಾಗಿದೆ.

ಸಿ. ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆ ನಡೆಸುವುದು

"ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ೧೯೯೩ ಸೆಕ್ಷನ್ ೨(೧೬)ರಂತೆ "ಗ್ರಾಮ ಸಭಾ ಎಂದರೆ (ಗ್ರಾಮ ಪಂಚಾಯ್ತಿಯ ಮತದಾರರ ಪಟ್ಟಿಯಲ್ಲಿ) ನೊಂದಾಯಿತ ವ್ಯಕ್ತಿಗಳು ಇರುವ ಮಂಡಲಿ"[೧] ಎಂದು ಹೇಳುವ ಮೂಲಕ ಮತದಾರರ ಪಟ್ಟಿಯಲ್ಲಿರುವ ವ್ಯಕ್ತಿಗಳು ಮಾತ್ರ ಗ್ರಾಮ ಸಭೆ ಸೇರಲು ಅರ್ಹರು ಎಂದು ಹೇಳಿದೆ ಇದರಿಂದ ಮಕ್ಕಳು ಸಭೆಗೆ ಭಾಗವಹಿಸಲು ಅವಕಾಶವಿಲ್ಲ. ಇದನ್ನು ಮನಗಂಡ ಮಕ್ಕಳ ಹಕ್ಕುಗಳ ಸಂಸ್ಥೆಯು ಮಕ್ಕಳ ಗ್ರಾಮ ಸಭೆಯ ಅವಶ್ಯಕತೆಯನ್ನು ಮನವರಿಕೆ ಮಾಡಿತು. ಇದರ ಫಲವಾಗಿ

"ಸೆಪ್ಟಂಬರ್ ೩೦ ೨೦೦೬ರಂದು ರಾಜ್ಯ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಕ್ಕಳಿಗಾಗಿ ಒಂದು ಚಾರಿತ್ರಿಕ ನಿರ್ಧಾರ ಕೈಗೊಂಡಿತು (ಸುತ್ತೋಲೆ ಸಂಖ್ಯೆ: ೩೬೭, ೧೮.೦೯.೨೦೦೬) ಅದರಂತೆ ರಾಜ್ಯದ ಗ್ರಾಮ ಪಂಚಾಯ್ತಿಗಳು ನವೆಂಬರ್ ತಿಂಗಳಲ್ಲಿ, ತಮ್ಮ ವ್ಯಾಪ್ತಿಯಲ್ಲಿರುವ ಮಕ್ಕಳ ಬಗ್ಗೆ ಅರಿತು, ಮಕ್ಕಳ ವಿಚಾರಗಳ ಬಗ್ಗೆ ಮಕ್ಕಳೊಂದಿಗೆ, ಮಕ್ಕಳಿಗೆ ಸಂಬಂಧಿಸಿದವರೊಡನೆ ಮುಕ್ತವಾಗಿ ಚರ್ಚಿಸಿ ಸೂಕ್ತ ನಿರ್ಧಾರವನ್ನು ಕೈಗೊಳ್ಳುವ ಯತ್ನವನ್ನು ಮಾಡಿದವು. ಮಕ್ಕಳ ಹಕ್ಕುಗಳನ್ನು ಮಾನ್ಯ ಮಾಡಲು ಇದು ದೇಶಕ್ಕೆ ಮಾದರಿಯಾಯಿತು. ಇದೇ ಕರ್ನಾಟಕದ ಗ್ರಾಮ ಪಂಚಾಯ್ತಿಗಳು ನಡೆಸಿದ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆ."[೨] ಈ ಸುತ್ತೋಲೆಯಲ್ಲಿ ಈ ಕೆಳಕಂಡ ಅಂಶಗಳ ಕುರಿತು ಚರ್ಚಿಸಲಾಗಿದೆ.

೧. "ಮಕ್ಕಳ ಆರೋಗ್ಯಕರ ಬೆಳವಣಿಗೆಗೆ ಪೌಷ್ಠಿಕ ಆಹಾರವನ್ನು ಒದಗಿಸುವುದು.

೨. ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಆಟಪಾಠಗಳ ವ್ಯವಸ್ಥೆಯನ್ನು ವೈಜ್ಞಾನಿಕವಾಗಿ ರೂಪಿಸುವುದು.

೩. ಮೂರು ವರ್ಷದಿಂದ ಆರು ವರ್ಷದ ಎಲ್ಲಾ ಮಕ್ಕಳು ಅಂಗನವಾಡಿ ಹಾಗೂ ಶಾಲೆಗಳಲ್ಲಿ ದಾಖಲಾಗಿ ಶಿಕ್ಷಣವನ್ನು ಪ್ರಾರಂಭಿಸುವುದು.

೪. ಜೀತ ಪದ್ದತಿ ಹಾಗೂ ಕೃಷಿ ಕಾರ್ಮಿಕರ ವೃತ್ತಿಯಲ್ಲಿ ಮಕ್ಕಳನ್ನು ತೊಡಗಿಸುವವರ ವಿರುದ್ಧ ಜಾಗೃತಿ ಮೂಡಿಸುವುದು.

೫. ಹೆಣ್ಣು ಮಕ್ಕಳ ಪೋಷಣೆ ಹಾಗೂ ರಕ್ಷಣೆ"[೩]

ಈ ಮೇಲಿನ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆ ನಡೆಸುವುದು ಗ್ರಾಮ ಪಂಚಾಯ್ತಿಗಳಿಗೆ ಅನಿವಾರ್ಯವಾಗಿದೆ.

೭.೧ ವಾರ್ಡ್ ಸಭೆ ನಡೆಸುವುದು

ಮಕ್ಕಳ ಹಕ್ಕುಗಳ ಗ್ರಾಮ ಸಭೆ ನಡೆಸುವುದಕ್ಕಿಂತ ಮುಂಚೆ ಆಯಾ ವಾರ್ಡಿನ ಪಂಚಾಯಿತಿ ಸದಸ್ಯರು, ಅಲ್ಲಿನ ಸಮುದಾಯ, ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಕಾರ್ಯಕರ್ತೆ ಮತ್ತು ಮಕ್ಕಳನ್ನು ಸೇರಿಸಿಕೊಂಡು ಆಯಾ ವಾರ್ಡುಗಳಲ್ಲಿ ಸಮಸ್ಯೆಗಳನ್ನು ಪಟ್ಟಿಮಾಡಬೇಕು. ವಾರ್ಡ್‌ಮಟ್ಟದಲ್ಲಿ ಮರಣಹೊಂದಿದ ಮಕ್ಕಳ ಪ್ರಮಾಣವೆಷ್ಟು? ತಾಯಂದಿರ ಹೆರಿಗೆಗೆ ಆರೋಗ್ಯ ಕೇಂದ್ರದಲ್ಲಿರುವ ಸಮಸ್ಯೆಗಳೇನು? ರಕ್ತಹೀನತೆಯಿಂದ ಬಳಲುತ್ತಿರುವ ತಾಯಿ ಮಕ್ಕಳ ಸಂಖ್ಯೆ ಎಷ್ಟು? ಪೌಷ್ಟಿಕ ಆಹಾರ ಪಡೆಯುತ್ತಿರುವ ತಾಯಿ ಮಕ್ಕಳ ಸಂಖ್ಯೆ ಎಷ್ಟು? ಶಾಲೆಯಿಂದ ಹೊರಗಿರುವ ಮಕ್ಕಳು ಯಾರು? ಏಕೆ? ಮುಂತಾದ ಅಂಶಗಳ ಕುರಿತು ಚರ್ಚಿಸಿ ನಿರ್ಣಯಕ್ಕೆ ಬರುವುದು. ಆಯಾ ವಾರ್ಡ್ ಮಟ್ಟದಲ್ಲಿ ಈ ರೀತಿಯ ಸಮಸ್ಯೆಗಳನ್ನು ಪಟ್ಟಿ ಮಾಡಿಕೊಂಡು ಗ್ರಾಮ ಸಭೆಗೆ ಬರಬೇಕು.

ಸಿ.೨ ಗ್ರಾಮಸಭೆ

ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆ ನಡೆಸಲು, ಸಾಮಾನ್ಯವಾಗಿ ಗ್ರಾಮಸಭೆಯನ್ನು ನಡೆಸುವಾಗ ಅನುಸರಿಸುವಾಗ ನಿಯಮಾವಳಿಗಳನ್ನೇ ಅನುಸರಿಸಬೇಕು. ಆದರೆ ಈ ಗ್ರಾಮಸಭೆಯಲ್ಲಿ ಚರ್ಚೆಗೆ ಬರಬೇಕಾಗಿರುವ ವಿಷಯಗಳು ಮಾತ್ರ ಮಕ್ಕಳಿಗೆ ಸಂಬಂಧಿಸಿದವುಗಳಾಗಿರಬೇಕು.

ಈ ಗ್ರಾಮಸಭೆಗೆ ಅಂಗನವಾಡಿ ಕಾರ್ಯಕರ್ತೆಯರು, ಶಾಲಾಶಿಕ್ಷಕರು, ಕಿರಿಯ ಆರೋಗ್ಯ ಮಹಿಳಾ ಸಹಾಯಕಿಯರು, ನ್ಯಾಯ ಬೆಲೆ ಅಂಗಡಿಯವರು, ಪೋಲೀಸ್ ಇಲಾಖೆಯವರು, ಮುಂದುವರಿಕೆ ಶಿಕ್ಷಣ ಕೇಂದ್ರದ ಪ್ರೇರಕರು, ಸಮುದಾಯ ಸಂಘಟನೆಗಳು ಮತ್ತು ಮಕ್ಕಳು ಹಾಗೂ ಪೋಷಕರು ಪಾಲ್ಗೊಂಡು ಗ್ರಾಮಸಭೆಯನ್ನು ನಡೆಸಬೇಕು ಹಾಗೆಯೇ ಪಂಚಾಯ್ತಿ ಅಧ್ಯಕ್ಷರು ಸರ್ವಸದಸ್ಯರು ಈ ಗ್ರಾಮಸಭೆಗೆ ಪಾಲ್ಗೊಳ್ಳಲೇಬೇಕು.

ಗ್ರಾಮ ಸಭೆಗೆ ಬರುವುದಕ್ಕಿಂತ ಮುಂಚೆ ಆಯಾ ಗ್ರಾಮದ ವಾರ್ಡಿನ ಅಂಗನವಾಡಿ ಕಾರ್ಯಕರ್ತೆಯರು, ಶಾಲಾಶಿಕ್ಷಕರು, ಕಿರಿಯ ಆರೋಗ್ಯ ಮಹಿಳಾ ಸಹಾಯಕರು ಮುಂತಾದವರು ತಮ್ಮ ವ್ಯಾಪ್ತಿಗೆ ಬರುವ ಮಕ್ಕಳ ಸ್ಥಿತಿಗತಿಗೆ ಸಂಬಂದಿಸಿದ ಅಂಕಿ ಅಂಶಗಳನ್ನು ಸಂಗ್ರಹಿಸಿಕೊಂಡು ಬರಬೇಕು ಗ್ರಾಮಸಭೆ ನಡೆಯುವಾಗ ಆಯಾ ಇಲಾಖೆಯ ಅಧಿಕಾರಿಗಳು, ಪ್ರತಿನಿಧಿಗಳು ಮಕ್ಕಳ ಸ್ಥಿತಿಗತಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ಪ್ರಸ್ತುತ ಪಡಿಸಬೇಕು. ಮಕ್ಕಳಿಗೆ ಸಂಬಂಧಿತ ಸಮಸ್ಯೆಗಳೇನು? ಅವುಗಳಿಗೆ ಪರಿಹಾರಗಳೇನು? ಎಂಬುದನ್ನು ಚರ್ಚೆಗೆ ಒಳಪಡಿಸಬೇಕು.

ಹೀಗೆ ನೇರವಾಗಿ ಚರ್ಚೆಯಲ್ಲಿ ಪಾಲ್ಗೊಂಡಾಗ ಮಕ್ಕಳು ತಮ್ಮ ಬೇಡಿಕೆ ಮತ್ತು ಸಮಸ್ಯೆಗಳೇನಾದರು ಇದ್ದರೆ ಹೇಳಲು ಅವಕಾಶ ಮಾಡಿಕೊಡಬೇಕು. ಅವರ ಅಭಿಪ್ರಾಯಗಳನ್ನು ಮುಕ್ತವಾಗಿ ಸಂಗ್ರಹಿಸಬೇಕು. ಹೀಗೆ ಸಭೆಯಲ್ಲಿ ನಡೆದ ಚರ್ಚೆಗಳು, ಸಮಸ್ಯೆಗಳಿಗೆ ಸಂಬಂಧಿಸಿದಂತೆ ನಿರ್ಣಯಗಳನ್ನು ಗ್ರಾಮಸಭೆಯ ವರದಿ ಪುಸ್ತಕದಲ್ಲಿ ದಾಖಲಿಸಬೇಕು.

ಈ ಮೇಲಿನ ವಿಷಯದಂತೆ ಮಕ್ಕಳಿಗೆ ಸಂಬಂಧಿತ ಸಮಸ್ಯೆಗಳನ್ನು ಪಟ್ಟಿ ಮಾಡಿ, ಅವುಗಳಿಗೆ ಪರಿಹಾರವಾಗಿ ಕ್ರಿಯಾಯೋಜನೆ ರೂಪಿಸಬೇಕು. ಹೀಗೆ ರೂಪಿಸಿದ ಕ್ರಿಯಾಯೋಜನೆಗಳಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಮಕ್ಕಳ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಈ ರೀತಿಯಾಗಿ ಪ್ರತಿವರ್ಷ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆ ನಡೆಸಿ, ಹಿಂದಿನ ವರ್ಷದ ಕ್ರಿಯಾಯೋಜನೆಯಿಂದ ಸಾಧಿಸಿದ ಸಾಧನೆಗಳು, ಬಾಕಿ ಉಳಿದಿರುವ ಸಮಸ್ಯೆಗಳು, ಮುಂದೆ ಹಾಕಿಕೊಳ್ಳಬೇಕಾದ ಕ್ರಿಯಾಯೋಜನೆಗಳ ಕುರಿತು ಪ್ರತಿ ವರ್ಷ ಸಭೆ ನಡೆಸಿ ತೀರ್ಮಾನಿಸಬೇಕು ಈ ರೀತಿಯಾಗಿ ಮಕ್ಕಳ ಹಕ್ಕುಗಳ ವಿಶೇಷ

ಗ್ರಾಮಸಭೆ ನಡೆಸುವುದರ ಮೂಲಕ ಸ್ಥಳೀಯವಾಗಿರುವ ಅಂಗನವಾಡಿ ಕೇಂದ್ರ ಆರೋಗ್ಯ ಉಪಕೇಂದ್ರ, ಶಾಲೆಗಳಲ್ಲಿನ ಭೌತಿಕ ಮತ್ತು ಮಾನವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಹೀಗೆ ಕಾರ್ಯನಿರ್ವಹಿಸುವುದರ ಮೂಲಕ ಸ್ಥಳೀಯ ಸರ್ಕಾರವು ಮಕ್ಕಳ ಹಕ್ಕುಗಳಿಗೆ ಸಂವಿಧಾನಿಕ ಬದ್ಧತೆಯನ್ನು ಒದಗಿಸಬೇಕು.

ಡಿ. ಮೇಲ್ವಿಚಾರಣೆ

ಪ್ರಸ್ತುತ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಅಂಗನವಾಡಿ ಕೇಂದ್ರ, ಅಲ್ಲಿನ ಕಾರ್ಯಕರ್ತೆಯರು, ಆರೋಗ್ಯ ಉಪಕೇಂದ್ರದ ಆರೋಗ್ಯ ಸಹಾಯಕಿಯರು ಹಾಗೂ ಶಾಲೆ ಶಿಕ್ಷಕರು ಇವರ ಜೊತೆಗೆ ಪಂಚಾಯಿತಿಗಳು ನೇರವಾದ ಸಂಬಂಧ ಹೊಂದಿಲ್ಲ. ಈ ಕಾರಣದಿಂದ ಸ್ಥಳೀಯವಾಗಿರುವ ಸೇವಾಸೌಲಭ್ಯಗಳ ಮೇಲೆ ಮೇಲ್ವಿಚಾರಣೆ ನಡೆಸುವುದು ಕಷ್ಟವಾಗಿದೆ. ಇದನ್ನು ಸರಿಪಡಿಸಿ ಗ್ರಾಮಪಂಚಾಯ್ತಿ ಮತ್ತು ಸೇವಾ ಸಂಸ್ಥೆಗಳು ನೇರವಾದ ಸಂಬಂಧ ಹೊಂದುವ ದೃಷ್ಟಿಯಿಂದ "೨೩ ಜನವರಿ ೨೦೦೪ ರಂದು ಧಾರವಾಡ ತಾಲ್ಲೂಕು ಬೇಲೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಪಂಚಾಯತ್ ರಾಜ್ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಸಮಾವೇಶ ನಡೆಯಿತು. ಅಲ್ಲಿ ಆಗಿನ ಮುಖ್ಯ ಮಂತ್ರಿಗಳ ಸಮ್ಮುಖದಲ್ಲಿ ಒಂದು ಜಂಟಿ ಘೋಷಣೆ ಮಾಡಲಾಗಿತ್ತು. ಅದರಲ್ಲಿ ಮಕ್ಕಳಿಗೆ ಸಂಬಂಧಿಸಿದಂತೆ ಎರಡು ಪ್ರಮುಖ ಘೋಷಣೆಗಳು ಈ ಮುಂದಿನಂತಿವೆ.

ಘೋಷಣೆ-೪

ಅಕ್ಷರ ದಾಸೋಹ ಕಾರ್ಯಕ್ರಮವನ್ನು ಗ್ರಾಮ ಪಂಚಾಯ್ತಿಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸುವುದು.

ಘೋಷಣೆ-೫

"ಪ್ರಾಥಮಿಕ ಶಾಲೆಗಳು, ಗ್ರಾಮೀಣ ಗ್ರಂಥಾಲಯಗಳು, ವಯಸ್ಕರ ಶಿಕ್ಷಣ ಕೇಂದ್ರಗಳು, ಅಂಗನವಾಡಿಗಳು, ಎ.ಎನ್.ಎಮ್. "ಉಪಕೇಂದ್ರಗಳು ಮತ್ತು ನ್ಯಾಯಬೆಲೆ ಅಂಗಡಿಗಳನ್ನು ಗ್ರಾಮ ಪಂಚಾಯ್ತಿ ಆಡಳಿತ ವ್ಯಾಪ್ತಿಗೆ ತರುವುದು."[೪] ಈ ಕಾನೂನಿನ ಹಿನ್ನೆಲೆಯಲ್ಲಿ ಗ್ರಾಮಪಂಚಾಯ್ತಿಗಳು ಸ್ಥಳೀಯ ವಾಗಿರುವ ಎಲ್ಲಾ ಸೇವಾ ಸೌಲಭ್ಯಗಳ ಮೇಲೆ. ಮೇಲ್ವಿಚಾರಣೆ ಮಾಡಿ ವ್ಯವಸ್ಥಿತವಾಗಿ ಜಾರಿಯಾಗುವಂತೆ ನೋಡಿಕೊಳ್ಳುವುದು ಸ್ಥಳೀಯ ಸರ್ಕಾರವಾದ ಗ್ರಾಮ ಪಂಚಾಯ್ತಿಗಳ ಕರ್ತವ್ಯವಾಗಿದೆ. ಈ ರೀತಿಯಾಗಿ ಯೋಜನೆ. ಉಸ್ತುವಾರಿ ಮಾಡುವುದರ ಮೂಲಕ ಮಕ್ಕಳ ಹಕ್ಕುಗಳ ಜಾರಿಗಾಗಿ ಗ್ರಾಮ ಪಂಚಾಯ್ತಿಗಳು ಶ್ರಮಿಸಬೇಕು.

ಇ. ತರಬೇತಿಗಳನ್ನು ಆಯೋಜಿಸುವುದು

ಈಗಾಗಲೆ ಕರ್ನಾಟಕ ರಾಜ್ಯ ಮಕ್ಕಳ ಕ್ರಿಯಾಯೋಜನೆಯಲ್ಲಿ ಪ್ರಸ್ತಾಪವಾಗಿರುವಂತೆ ಮಕ್ಕಳ ಹಕ್ಕುಗಳು ಸಮರ್ಥವಾಗಿ ಜಾರಿಯಾಗಬೇಕಾದರೆ ವ್ಯಾಪಕವಾದ ಪ್ರಚಾರ ಮತ್ತು

ತರಬೇತಿಗಳು ನಡೆಯಬೇಕು ಎಂದು ಹೇಳಿದೆ. ಗ್ರಾಮಪಂಚಾಯಿತಿಗಳು ಆಯಾ ಗ್ರಾಮ-ವಾರ್ಡ್‌ಗಳಲ್ಲಿ ಸಮುದಾಯ ಸಂಘ ಸಂಸ್ಥೆಗಳಿಗೆ, ಗ್ರಾಮಪಂಚಾಯಿತಿ ಸದಸ್ಯರಿಗೆ, ಅಧ್ಯಕ್ಷರಿಗೆ ಸಾಕಷ್ಟು ಮಕ್ಕಳ ಹಕ್ಕುಗಳ ತರಬೇತಿಯನ್ನು ನೀಡಿ ಅರಿವು ಮೂಡಿಸಬೇಕು. ಪ್ರಸ್ತುತ ಮಕ್ಕಳ ಹಕ್ಕುಗಳ ಕುರಿತು ಗ್ರಾಮೀಣ ಪ್ರದೇಶದಲ್ಲಿ ಅಲ್ಪಸ್ವಲ್ಪವೂ ಮಾಹಿತಿ ಇಲ್ಲ. ಆದ್ದರಿಂದ ಮೇಲಿಂದ ಮೇಲೆ ಪಂಚಾಯ್ತಿದಾರರಿಗೆ, ಇತರ ಇಲಾಖೆ ಅಧಿಕಾರಿಗಳಿಗೆ, SDMCಗಳಿಗೆ, ಅಂಗನವಾಡಿ ಸಲಹಾ ಸಮಿತಿಗಳಿಗೆ, ಸಮುದಾಯ ಸಂಘಸಂಸ್ಥೆಗಳಿಗೆ, ಮತ್ತು ಸ್ಥಾಯಿಸಮಿತಿಗಳಿಗೆ ಮಕ್ಕಳ ಹಕ್ಕುಗಳ ತರಬೇತಿಯನ್ನು ನೀಡಬೇಕು ಈ ಮೂಲಕ ಮಕ್ಕಳ ಹಕ್ಕುಗಳ ಜಾರಿಗಾಗಿ ಗ್ರಾಮಪಂಚಾಯ್ತಿಗಳು ಪ್ರಯತ್ನಿಸಬೇಕು.

ಎಫ್. ಕ್ರಿಯಾಯೋಜನೆ ರೂಪಿಸುವುದು

ಪ್ರಸ್ತುತ ಗ್ರಾಮ ಪಂಚಾಯ್ತಿಯಲ್ಲಿ ಮಕ್ಕಳಿಗೆ ನೇರವಾಗಿ ಸಂಬಂಧಿಸಿದಂತೆ ಯಾವುದೇ ಕ್ರಿಯಾಯೋಜನೆಗಳಿಲ್ಲ. ಪಂಚಾಯ್ತಿಗೆ ಬರುವ ಅನುದಾನದಲ್ಲಿ ಶೇ ೩೪ ರಷ್ಟು ಅನುದಾನವನ್ನು ಮಕ್ಕಳ ಯೋಜನೆಗಳಲ್ಲಿ ಮೀಸಲಿಡಬೇಕು. ಸ್ಥಳೀಯ ಸಮಸ್ಯೆಗಳಾದ ಬಾಲಕಾರ್ಮಿಕತೆ, ಬಾಲ್ಯ ವಿವಾಹ, ತಾಯಿ ಮತ್ತು ಮಕ್ಕಳ ಮರಣ, ಮಕ್ಕಳ ಅಪೌಷ್ಟಿಕತೆ ಮತ್ತು ಅನಾರೋಗ್ಯ ಮುಂತಾದವುಗಳನ್ನು ತಡೆಯಲು ಬೇಕಾಗುವ ವ್ಯವಸ್ಥೆಯನ್ನು ಈ ಅನುದಾನದಿಂದ ಮಾಡಿಕೊಡಬೇಕು. ಬಡತನ ಕುಟುಂಬದಲ್ಲಿರುವ ಮಕ್ಕಳು, ಅನಾಥ ಮಕ್ಕಳು, ಬೀದಿ ಮಕ್ಕಳು ಮುಂತಾದ ಮಕ್ಕಳಿಗೆ ರಕ್ಷಣೆ ನೀಡಬೇಕು. ಬಡತನದಿಂದ ಶಾಲೆ ಬಿಡುವ ಮಕ್ಕಳಿಗೆ ಉಚಿತ ಪುಸ್ತಕ, ಪೆನ್ನು, ಸಮವಸ್ತ್ರಗಳನ್ನು ಪಂಚಾಯ್ತಿಯು ವಿತರಿಸಬೇಕು. ಅಂಗನವಾಡಿ, ಶಾಲೆ, ಆರೋಗ್ಯ ಕೇಂದ್ರಗಳ ಗುಣಮಟ್ಟ ಹೆಚ್ಚಿಸಲು ಕ್ರಿಯಾಯೋಜನೆ ರೂಪಿಸಿ ಹಣಕಾಸನ್ನು ಬಳಸಿಕೊಳ್ಳಬೇಕು.

೫.೨ ಸ್ಥಾಯಿ ಸಮಿತಿ ಮತ್ತು ಉಪಸಮಿತಿಗಳ ಪಾತ್ರ

ಗ್ರಾಮ ಪಂಚಾಯಿತಿಯ ಎಲ್ಲಾ ಕೆಲಸ ಕಾರ್ಯಗಳನ್ನು ಸಮರ್ಥ ಮೇಲುಸ್ತುವಾರಿ ಮಾಡಲು ಗ್ರಾಮ ಪಂಚಾಯಿತಿ ಅಧ್ಯಕ್ಷರೊಬ್ಬರಿಂದಲೇ ಸಾಧ್ಯವಾಗುವುದಿಲ್ಲ. ಈ ಕಾರಣದಿಂದ ಗ್ರಾಮ ಪಂಚಾಯಿತಿಯ ಕೆಲಸ ಕಾರ್ಯಗಳನ್ನು ಮೇಲುಸ್ತುವಾರಿ ಮಾಡಲು ಸ್ಥಾಯಿಸಮಿತಿಗಳನ್ನು ರಚನೆ ಮಾಡಲಾಗುತ್ತದೆ. “ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವು ೧೯೯೩ ರಲ್ಲಿ ಅಧ್ಯಾಯ” ಗ್ರಾಮ ಪಂಚಾಯಿತಿಗಳ ಹಾಗೂ ಸ್ಥಾಯಿ ಸಮಿತಿಗಳ ರಚನೆ ಸೆಕ್ಷನ್ ೧೧ ರಂತೆ ಗ್ರಾಮ ಪಂಚಾಯಿತಿಯ ಸದಸ್ಯತ್ವವನ್ನು ಪಡೆಯಲು ಅರ್ಹತೆ ಹಾಗೂ ಸೆಕ್ಷನ್ ೧೨ ರಲ್ಲಿ ಸದಸ್ಯರಾಗಲು ಅನರ್ಹತೆಯನ್ನು ವಿವರಿಸುತ್ತದೆ.”[೫] ಇದರ ಪ್ರಕಾರ ಗ್ರಾಮ ಪಂಚಾಯ್ತಿಯಲ್ಲಿ ಒಟ್ಟು ಮೂರು ಬಗೆಯ ಸಮಿತಿಗಳಿರುತ್ತವೆ. ೧. ಉತ್ಪಾದನಾ ಸಮಿತಿ.

೨. ಸಾಮಾಜಿಕ ನ್ಯಾಯ ಸಮಿತಿ. ೩. ಸೌಕರ್ಯಗಳ ಸಮಿತಿ ಎಂದು ವಿಂಗಡಿಸಲಾಗಿದೆ. ಪ್ರತಿಯೊಂದು ಸಮಿತಿಯು ಅದರದೇ ಆದ ಕಾರ್ಯಗಳನ್ನು ನಿರ್ವಹಿಸುತ್ತದೆ ಅವುಗಳ ಬಗ್ಗೆ ಒಂದೊಂದಾಗಿ ವಿವರಿಸಲಾಗಿದೆ.

೧. ಉತ್ಪಾದನಾ ಸಮಿತಿ

"ಕೃಷಿ ಉತ್ಪಾದನೆ, ಪಶುಸಂಗೋಪನೆ ಮತ್ತು ಗ್ರಾಮಾಂತರ ಕೈಗಾರಿಕೆಗಳು ಮತ್ತು ಬಡತನ ನಿವಾರಣಾ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸಲು ಉತ್ಪಾದನಾ ಸಮಿತಿ."[೬]

ಪ್ರಸ್ತುತ ಗ್ರಾಮ ಪಂಚಾಯ್ತಿಯಲ್ಲಿ ಮಕ್ಕಳು ಶಾಲೆ ಬಿಡಲು ಅನಾರೋಗ್ಯಕ್ಕೆ ಒಳಗಾಗಲು ಪ್ರಮುಖವಾದ ಕಾರಣ ಬಡತನ. ಈ ಬಡತನದಿಂದಾಗಿ ಗರ್ಭಿಣಿಯರಿಗೆ ಪೌಷ್ಟಿಕ ಆಹಾರ ದೊರೆಯುವುದಿಲ್ಲ. ಹೀಗಾಗಿ ತಾಯಿ ಮತ್ತು ಮಕ್ಕಳು ಅಪೌಷ್ಟಿಕತೆ ಕಡಿಮೆ ತೂಕ, ಮತ್ತು ರಕ್ತ ಹೀನತೆಯಿಂದ ಬಳಲುತ್ತಾರೆ. ಪ್ರಸ್ತುತ ಗ್ರಾಮ ಪಂಚಾಯಿತಿಗಳಲ್ಲಿ ಶಾಲೆ ಬಿಡಲು ಬಡತನವೂ ಒಂದು ಮುಖ್ಯ ಕಾರಣವಾಗಿದೆ. ಈ ಎಲ್ಲ ಹಿನ್ನೆಲೆಗಳಿಂದ ಈ ಉತ್ಪಾದನಾ ಸಮಿತಿಯು ಬಡತನದಲ್ಲಿರುವ ಕುಟುಂಬಗಳನ್ನು ಗುರುತಿಸಿ ಅವರಿಗೆ ಸೂಕ್ತವಾದ ಉದ್ಯೋಗ ವ್ಯವಸ್ಥೆ ಕಲ್ಪಿಸಿಕೊಡಬೇಕು. ಈ ಉತ್ಪಾದನಾ ಸಮಿತಿಯು ಅರ್ಹ ಬಡವರನ್ನು ಗುರುತಿಸಿ ಅವರ ಆದಾಯ ಹೆಚ್ಚಿಸಲು ಪಶು ಸಂಗೋಪನೆ ಕೃಷಿ ಚಟುವಟಿಕೆಗಳಿಗೆ ನೆರವು ನೀಡಬೇಕು.

ಇಂತಹ ಉತ್ಪಾದನಾ ಸಮಿತಿಗಳು ವಿಶೇಷವಾಗಿ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಇತರ ವರ್ಗದವರಿಗೆ ರಕ್ಷಣೆ ನೀಡಿ ಅವರ ಶೈಕ್ಷಣಿಕ ವ್ಯವಸ್ಥೆಗಳನ್ನು ಮಾಡಿಕೊಡಬೇಕು ಮತ್ತು ಅಂತಹ ಕುಟುಂಬಗಳನ್ನು ಸಾಮಾಜಿಕವಾಗಿ ಮೇಲುಸ್ತರಕ್ಕೆ ತರಬೇಕು. ಅದಕ್ಕಾಗಿ ಪಂಚಾಯಿತಿಗಳಲ್ಲಿರುವ ಉತ್ಪಾದನಾ ಸಮಿತಿಗಳು ಪ್ರಾಮಾಣಿಕವಾಗಿ ಮತ್ತು ಜವಾಬ್ದಾರಿಯಿಂದ ಕೆಲಸವನ್ನು ಮಾಡಬೇಕಾಗಿದೆ.

೨. ಸಾಮಾಜಿಕ ನ್ಯಾಯ ಸಮಿತಿ

"ಮಹಿಳೆ ಮತ್ತು ಮಕ್ಕಳ ಕಲ್ಯಾಣಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸಲು ಸಾಮಾಜಿಕ ನ್ಯಾಯ ಸಮಿತಿ"[೭] ಸಾಮಾಜಿಕ ನ್ಯಾಯ ಸಮಿತಿಗಳು ಪ್ರಸ್ತುತ ಗ್ರಾಮ ಪಂಚಾಯ್ತಿಯಲ್ಲಿ ಆರ್ಥಿಕ ಅಸಮಾನತೆಯಿಂದಾಗಿ ಸಾಮಾಜಿಕ ತುಳಿತಕ್ಕೊಳಗಾಗಿರುವಂತಹ ಕುಟುಂಬಗಳನ್ನು ಗುರುತಿಸಬೇಕು. ಈ ಸಮಿತಿಯು ಅಂಗನವಾಡಿ ಕೇದ್ರ ಮತ್ತು ಆರೋಗ್ಯಕೇಂದ್ರದ ಎಲ್ಲಾ ರೀತಿಯ ಸೌಲಭ್ಯಗಳು ಜನರಿಗೆ ಸಿಗುವಂತೆ ನೋಡಿಕೊಳ್ಳಬೇಕು. ಪ್ರಸ್ತುತ ಗ್ರಾಮ ಪಂಚಾಯ್ತಿಗಳಲ್ಲಿ ಬಾಲ್ಯವಿವಾಹ, ಜೀತಪದ್ಧತಿ, ನಡೆಯದಂತೆ ನೋಡಿಕೊಳ್ಳಬೇಕು.

ಪ್ರಸ್ತುತ ಈ ಸಮಿತಿಯು ಬಡತನದಲ್ಲಿರುವ ಕುಟುಂಬಗಳನ್ನು ಗುರುತಿಸಿ ಅವರಿಗೆ ಪಡಿತರ ಚೀಟಿ ವ್ಯವಸ್ಥೆ, ಮನೆ ನಿರ್ಮಾಣ, ಮತ್ತಿತರ ಸೇವಾ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಗ್ರಾಮದಲ್ಲಿರುವ ಜಾತಿ ಪದ್ಧತಿ, ದೇವದಾಸಿ ಪದ್ಧತಿ ಮುಂತಾದ ಅನಿಷ್ಟ ಪದ್ಧತಿಗಳನ್ನು ತೊಡೆದು ಹಾಕಲು ಪ್ರಯತ್ನಿಸಬೇಕು. ಪಂಚಾಯ್ತಿ ವ್ಯಾಪ್ತಿಯಲ್ಲಿ ವಲಸೆ ಹೋಗುವ ಕುಟುಂಬಗಳನ್ನು ತೊಡೆದು ಅವುಗಳಿಗೆ ರಕ್ಷಣೆ ನೀಡಬೇಕು.

ಈ ಸಾಮಾಜಿಕ ನ್ಯಾಯ ಸಮಿತಿ ಅಂಗನವಾಡಿ, ಆರೋಗ್ಯ ಕೇಂದ್ರ ಮತ್ತು ಶಾಲೆಗಳಲ್ಲಿ ಮಕ್ಕಳಿಗೆ ತಾರತಮ್ಯವಾಗದಂತೆ ಕೆಲಸಗಳು ನಡೆಯುತ್ತವೆಯೇ ಇಲ್ಲವೆ ಎಂಬುದನ್ನು ಗಮನಿಸಬೇಕು.

೩. ಸೌಕರ್ಯ ಸಮಿತಿ

"ಶಿಕ್ಷಣ ಸಾರ್ವಜನಿಕ ಆರೋಗ್ಯ ಲೋಕೋಪಯೋಗಿ ಕಾಮಗಾರಿಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ಮತ್ತು ಗ್ರಾಮ ಪಂಚಾಯಿತಿಯ ಇತರ ಕಾರ್ಯಗಳನ್ನು ನಿರ್ವಹಿಸಲು ಸೌಕರ್ಯ ಸಮಿತಿ"[೮]

ಪ್ರಸ್ತುತ ಗ್ರಾಮ ಪಂಚಾಯ್ತಿಯಲ್ಲಿ ಈ ಸೌಕರ್ಯ ಸಮಿತಿಯು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಕೆಲವು ಪಂಚಾಯ್ತಿ ಸದಸ್ಯರಿಗೆ ಈ ಸೌಕರ್ಯ ಸಮಿತಿಯ ಮಹತ್ವವೇ ತಿಳಿದಿಲ್ಲ. ಈ ಸೌಕರ್ಯ ಸಮಿತಿಯು ಮಕ್ಕಳಿಗೆ ಸಂಬಂಧಿಸಿದ ಅಂಗನವಾಡಿ ಕೇಂದ್ರ, ಶಾಲೆ, ಆರೋಗ್ಯ ಕೇಂದ್ರಗಳನ್ನು ಕಟ್ಟುವಾಗ ಅವುಗಳು ಮಕ್ಕಳ ಹಿತದೃಷ್ಟಿಯಿಂದ ರಚನೆಯಾಗಿವೆಯೇ ಇಲ್ಲವೆ ಎಂಬುದನ್ನು ಗಮನಿಸಬೇಕು.

ಈ ಸೌಕರ್ಯ ಸಮಿತಿಗಳು ಅಂಗನವಾಡಿ ಕೇಂದ್ರದಲ್ಲಿ ಮೂಲಭೂತ ಸೌಲಭ್ಯಗಳಿವೆಯೇ ಇಲ್ಲವೇ ಎಂಬುದನ್ನು ಗಮನಿಸಬೇಕು. ಪ್ರತ್ಯೇಕ ಅಡಿಗೆ ಕೋಣೆ ಶೌಚಾಲಯಗಳನ್ನು ಕಟ್ಟಿಸಿಕೊಡಬೇಕು. ಅಲ್ಲದೆ ಅಂಗನವಾಡಿ ಕೇಂದ್ರದ ಸ್ಥಳವನ್ನು ಅತಿಕ್ರಮಿಸಿರುವ ಕುಟುಂಬಗಳನ್ನು ಈ ಸೌಕರ್ಯ ಸಮಿತಿಯು ತೆರವುಗೊಳಿಸಬೇಕು.

ಆರೋಗ್ಯ ಕೇಂದ್ರಗಳನ್ನು ಕಟ್ಟುವಾಗ ಸಾಕಷ್ಟು ಸ್ಥಳಾವಕಾಶವಿರುವ ಜಾಗದಲ್ಲಿ ಮತ್ತು ಜನರಿಗೆ ಉಪಯೋಗವಾಗುವ ಪ್ರದೇಶದಲ್ಲಿ ಆರೋಗ್ಯ ಉಪಕೇಂದ್ರವನ್ನು ಕಟ್ಟಿಸಬೇಕು. ಪ್ರಸ್ತುತ ಪಂಚಾಯ್ತಿಯಲ್ಲಿರುವ ಆರೋಗ್ಯ ಉಪಕೇಂದ್ರವನ್ನು ದುರಸ್ಥಿಗೊಳಿಸಿ ಹೆರಿಗೆಗೆ ಬೇಕಾಗುವ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡಬೇಕು.

ಈ ಸೌಕರ್ಯ ಸಮಿತಿಗಳು ಶಾಲೆಗಳನ್ನು ಕಟ್ಟಿಸುವಾಗ ಮಕ್ಕಳಿಗೆ ತೊಂದರೆಯಾಗದಂತೆ ಮುಖ್ಯ ರಸ್ತೆಯಿಂದ, ವಾಹನಗಳ ಸದ್ದಿನಿಂದ ದೂರದಲ್ಲಿರುವಂತೆ ನೋಡಿಕೊಳ್ಳಬೇಕು. ಶಾಲೆ

ಮುಂದೆ ಇರುವ ಚರಂಡಿ, ತಿಪ್ಪೆಗುಂಡಿಗಳು, ಜೇಲಿಬೆಳೆದಿರುವುದನ್ನು ತೆಗೆಸಿ ಹಾಕಿ ಸೌಕರ್ಯ ಸಮಿತಿಯು ಮಕ್ಕಳ ಸ್ನೇಹಿ ಸಮಿತಿಯಾಗಬೇಕು.

೫. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ

ಪ್ರಸ್ತುತ ಗ್ರಾಮ ಪಂಚಾಯ್ತಿಯಲ್ಲಿ ಆಡಳಿತ ಮತ್ತು ಮೇಲುಸ್ತುವಾರಿಯನ್ನು ಸಮರ್ಥವಾಗಿ ಮಾಡಲು ಸ್ಥಾಯಿ ಸಮಿತಿಗಳನ್ನು ರಚನೆ ಮಾಡಲಾಗಿದೆ. ಇದರ ಮೂಲಕ ಗ್ರಾಮ ಪಂಚಾಯಿತಿಯ ಜವಾಬ್ದಾರಿಗಳನ್ನು ವಿಕೇಂದ್ರಿಕರಣಗೊಳಿಸಿದೆ. ವಿವಿಧ ಇಲಾಖೆಗಳಲ್ಲಿಯೂ ಈ ರೀತಿಯ ಸಮಿತಿಗಳು ಕಂಡುಬರುತ್ತವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (SDMC) ಅದರಂತೆ ಅಂಗನವಾಡಿ ಕೇಂದ್ರಗಳಲ್ಲಿ ಅಂಗನವಾಡಿ ಸಲಹಾ ಸಮಿತಿಗಳು ರಚನೆಯಾಗಿವೆ.

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮುಖ್ಯ ಉದ್ದೇಶ ಶಾಲೆಗಳು ಸಮುದಾಯದ ಭಾಗವಾಗಬೇಕೆಂಬುದು. ಈ ಹಿನ್ನೆಲೆಯಲ್ಲಿ ಶಾಲೆಯಲ್ಲಿರುವ ಮಕ್ಕಳ ಪೋಷಕರು SDMC ಸಮಿತಿಯ ಸದಸ್ಯರಾಗಿರುತ್ತಾರೆ. ಇವರ ಜೊತೆ ಗ್ರಾಮ ಪಂಚಾಯ್ತಿ ಒಬ್ಬ ಸದಸ್ಯರು SDMC ಯಲ್ಲಿ ಇರುತ್ತಾರೆ.

ಈ ಸಮಿತಿಯು ಪ್ರತಿ ತಿಂಗಳು ಸಭೆ ಸೇರಿ ಶಾಲೆಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಚರ್ಚೆ ಮಾಡುತ್ತದೆ. ಹೀಗೆ ಚರ್ಚೆ ಮಾಡುವಾಗ SDMC ಸಮಿತಿಯಲ್ಲಿ ಮಕ್ಕಳ ಪ್ರತಿನಿಧಿಗಳನ್ನು ಸದಸ್ಯರಾಗಿ ಮಾಡಿಕೊಳ್ಳಬೇಕು ಏಕೆಂದರೆ ದಿನದ ೮ ಗಂಟೆಗಳ ಕಾಲ ಮಕ್ಕಳು ಶಾಲೆಯಲ್ಲಿರುವುದರಿಂದ ಅವರು ತಮ್ಮ ಸಮಸ್ಯೆಗಳನ್ನು ಸಮರ್ಥವಾಗಿ ಹೇಳಲು ಸಾಧ್ಯವಾಗುತ್ತದೆ. ಇದರ ಮುಖಾಂತರ ಮಕ್ಕಳ ಭಾಗವಹಿಸುವಿಕೆಗೆ ಅವಕಾಶ ಮಾಡಿಕೊಡಬೇಕು.

ಈ SDMC ಸಮಿತಿಗಳು ಆಯಾ ಶಾಲೆಗೆ ಬೇಕಾಗುವ ಶೌಚಾಲಯ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಮಕ್ಕಳಿಗೆ ಬೇಕಾಗುವ ಆಟದ ಸಾಮಾನುಗಳನ್ನು ಒದಗಿಸುವ ವ್ಯವಸ್ಥೆ ಮಾಡಬೇಕು.

SDMC ಸಮಿತಿಯು ಸಭೆಗಳನ್ನು ನಡೆಸಿ ಶಾಲೆಗೆ ಬೇಕಾಗುವ ವಿದ್ಯುತ್ ಸೌಕರ್ಯ, ಶಾಲೆಯಲ್ಲಿ ವಿಜ್ಞಾನ ಪಾಠಗಳನ್ನು ಬೋಧನೆ ಮಾಡುವಾಗ ಬೇಕಾಗುವ ಪಾಠೋಪಕರಣಗಳು, ಗ್ರಂಥಾಲಯಗಳ ವ್ಯವಸ್ಥೆ ಮಾಡಬೇಕು. ಅದೇ ರೀತಿಯಾಗಿ ಶಾಲೆ ಬಿಟ್ಟ ಮಕ್ಕಳನ್ನು ಪ್ರಾಮಾಣಿಕವಾಗಿ ಗುರುತಿಸಿ, ಅವರನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನ ಮಾಡಬೇಕು. ಈ ರೀತಿಯಾಗಿ SDMC ಸಮಿತಿಗಳು ಆಯಾ ಗ್ರಾಮದ ಶಾಲೆಗಳಲ್ಲಿ ಅರ್ಥಪೂರ್ಣವಾಗಿ ಕಾರ್ಯನಿರ್ವಹಿಸಬೇಕು.

ಅಂಗನವಾಡಿ ಸಲಹಾ ಸಮಿತಿ

ಪ್ರಸ್ತುತ ಗ್ರಾಮ ಪಂಚಾಯಿತಿಯಲ್ಲಿ ಅಂಗನವಾಡಿ ಸಲಹಾ ಸಮಿತಿಗಳು ಕ್ರಿಯಾತ್ಮಕವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಅಂಗನವಾಡಿ ಸಲಹಾ ಸಮಿತಿಗಳ ಮುಖ್ಯ ಉದ್ದೇಶ ಅಂಗನವಾಡಿ ಕೇಂದ್ರಗಳ ಮಕ್ಕಳ ಆರೈಕೆ ಪೋಷಣೆಯನ್ನು ಸಮರ್ಥವಾಗಿ ನೋಡಿಕೊಳ್ಳುವುದಕ್ಕೆ ಬೇಕಾಗುವ ಸಲಹೆ ಸೂಚನೆಗಳನ್ನು ನೀಡುವುದು.

ಪ್ರಸ್ತುತ ಅಂಗನವಾಡಿ ಸಲಹಾ ಸಮಿತಿಯಲ್ಲಿ ಸ್ತ್ರೀಶಕ್ತಿ ಸಂಘದ ಮೂವರು ಪ್ರತಿನಿಧಿಗಳು, ಆ ವಾರ್ಡಿನ ಗ್ರಾಮ ಪಂಚಾಯ್ತಿಯ ಒಬ್ಬ ಸದಸ್ಯರು, ಮೂವರು ಮಕ್ಕಳ ಪೋಷಕರು, ಆ ಗ್ರಾಮದ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರು ಅಂಗನವಾಡಿ ಸಲಹಾ ಸಮಿತಿಯ ಸದಸ್ಯರಾಗಿರುತ್ತಾರೆ. ಅಂಗನವಾಡಿ ಸಲಹಾ ಸಮಿತಿಗೆ ಅಂಗನವಾಡಿ ಕಾರ್ಯಕರ್ತೆ ಕಾರ್ಯದರ್ಶಿಯಾಗಿರುತ್ತಾರೆ.

ಈ ಅಂಗನವಾಡಿ ಸಲಹಾ ಸಮಿತಿಗಳು ಆಯಾ ಕೇಂದ್ರ ವ್ಯಾಪ್ತಿಯಲ್ಲಿರುವ ಎಲ್ಲ ಮಕ್ಕಳಿಗೆ ಪೌಷ್ಠಿಕ ಆಹಾರ ಸಿಗುವಂತೆ ನೋಡಿಕೊಳ್ಳಬೇಕು. ಅಂಗನವಾಡಿ ಕಾರ್ಯಕರ್ತೆಯರಿಂದ ತಾಯಿ ಮತ್ತು ಮಕ್ಕಳಿಗೆ ರೋಗ ನಿರೋಧಕ ಲಸಿಕೆಗಳು ದೊರೆಯುವಂತೆ ನೋಡಿಕೊಳ್ಳಬೇಕು. ಆಯಾ ಕೇಂದ್ರದ ಸಮಸ್ಯೆಗಳಾದ ಪ್ರತ್ಯೇಕ ಅಡಿಗೆ ಕೋಣೆ ಇಲ್ಲದಿರುವುದು, ಶೌಚಾಲಯ ವ್ಯವಸ್ಥೆಯನ್ನು ಮಾಡದಿರುವುದು ಮತ್ತು ಮಕ್ಕಳಿಗೆ ಆಟವಾಡಲು ಆವರಣ, ಸುತ್ತಲೂ ಉತ್ತಮ ಪರಿಸರವನ್ನು ಒದಗಿಸಿಕೊಡಲು ವ್ಯವಸ್ಥೆಯನ್ನು ಮಾಡಬೇಕು.

ಮುಖ್ಯವಾಗಿ ಅಂಗನವಾಡಿ ಸಲಹಾ ಸಮಿತಿಗಳು ಆಯಾ ವಾರ್ಡಿನಲ್ಲಿಯೇ ಅಂಗನವಾಡಿ ಕಟ್ಟಡಗಳನ್ನು ಕಟ್ಟುವಂತೆ ನೋಡಿಕೊಳ್ಳಬೇಕು. ಇದರಿಂದ ಮಕ್ಕಳು ದೂರದಿಂದ ಕೇಂದ್ರಕ್ಕೆ ಬರುವುದನ್ನು ತಪ್ಪಿಸಬಹುದು. ಈ ಅಂಗನವಾಡಿ ಸಲಹಾ ಸಮಿತಿಗಳು ಪ್ರಸ್ತುತ ಅಂಗನವಾಡಿ ಕೇಂದ್ರದ ಸುತ್ತಮುತ್ತ ಅತಿಕ್ರಮಣ ಮಾಡಿರುವ ಸ್ಥಳವನ್ನು ತೆರವುಗೊಳಿಸಿ ಮಕ್ಕಳಿಗೆ ಉಪಯುಕ್ತವಾಗುವಂತೆ ವ್ಯವಸ್ಥೆ ಮಾಡಬೇಕು.

ಸಮುದಾಯ ಸಂಘಟನೆಗಳು ಮತ್ತು ಸಂಘ ಸಂಸ್ಥೆಗಳ ಪಾತ್ರ

ಪಂಚಾಯಿತಿಯಲ್ಲಿರುವ ಎಲ್ಲ ಮಕ್ಕಳಿಗೆ ಬದುಕು, ರಕ್ಷಣೆ, ವಿಕಾಸ ಮತ್ತು ಭಾಗವಹಿಸುವಿಕೆಗೆ ಅವಕಾಶವಾಗಬೇಕೆಂದರೆ ಆಯಾ ಗ್ರಾಮ ಪಂಚಾಯ್ತಿಯ ಜೊತೆಗೆ ಅಲ್ಲಿನ ಸಮುದಾಯ ಸಂಘ ಸಂಸ್ಥೆಗಳು ಸಕ್ರಿಯವಾಗಿ ಕಾರ್ಯ ನಿರ್ವಹಿಸಬೇಕು. ಹಾಗಿದ್ದಾಗ ಮಾತ್ರ ಮಕ್ಕಳ ಹಕ್ಕುಗಳು ಅನುಷ್ಠಾನಗೊಳ್ಳಲು ಮತ್ತು ಆ ಮಕ್ಕಳಿಗೆ ಹಕ್ಕುಗಳು ದೊರೆಯಲು ಸಾಧ್ಯವಾಗುತ್ತದೆ.

ಎ. ಯುವಕ, ಯುವತಿ ಸಂಘಗಳು

ಪ್ರಸ್ತುತ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಮೂರು ಯುವಕ ಸಂಘ ಮತ್ತು ಒಂದು ಮಹಿಳಾ ಸಂಘವಿದೆ. ಕರ್ನಾಟಕ ಯುವಕ ಸಂಘ, ರಾಜೀವ್ ಗಾಂಧಿ ಯುವಕ ಸಂಘ ಮತ್ತು ಅಂಬೇಡ್ಕರ್ ಸಂಘ, ಮತ್ತು ಶ್ರೀ ಚನ್ನಮ್ಮ ಯುವತಿ ಮಂಡಳಿ ಎಂಬ ಸಂಘಗಳಿವೆ. ಆದರೆ ಈ ಯುವಕ ಸಂಘಗಳಿಗೆ ನಿರ್ದಿಷ್ಟ ಕಾರ್ಯ ಸೂಚಿಗಳಿಲ್ಲ ಹೀಗಾಗಿ ಈ ಸಂಘಗಳು ನಿಷ್ಕ್ರಿಯವಾಗಿವೆ. ಈ ಗ್ರಾಮಪಲ್ಲಿರುವ ಯುವಕ ಸಂಘಗಳು ಮಕ್ಕಳ ಪರವಾದ ಚಿಂತನೆಗಳನ್ನು ಆರಂಭಿಸಿ ಮಕ್ಕಳ ಹಕ್ಕುಗಳ ರಕ್ಷಣೆಗೆ ಪ್ರಯತ್ನಿಸಬೇಕು. ಪ್ರಸ್ತುತ ಗ್ರಾಮದಲ್ಲಿರುವ ಅಂಗನವಾಡಿ ಕೇಂದ್ರ, ಆರೋಗ್ಯಕೇಂದ್ರ, ಪ್ರಾಥಮಿಕ ಶಾಲೆಗಳಲ್ಲಿ ಎಲ್ಲಾ ಸೌಲಭ್ಯಗಳನ್ನು ಮಕ್ಕಳು ಪಡೆಯುವಂತೆ ನೋಡಿಕೊಳ್ಳಬೇಕು. ಆರೋಗ್ಯಕೇಂದ್ರದಲ್ಲಿ ಸೂಕ್ತವಾದ ಚುಚ್ಚು ಮದ್ದು, ಹೆರಿಗೆ ಸೌಲಭ್ಯಗಳು, ವಿದ್ಯುತ್ ವ್ಯವಸ್ಥೆ ಮುಂತಾದ ಸಮಸ್ಯೆಗಳ ಕುರಿತು ಸಂಬಂಧಿಸಿದ ಇಲಾಖೆಗಳೊಡನೆ ಮನವಿ ಪತ್ರ ಸಲ್ಲಿಸಿ ಚರ್ಚಿಸಬೇಕು. ಅಂಗನವಾಡಿ ಕೇಂದ್ರದಲ್ಲಿ ಎಲ್ಲಾ ಮಕ್ಕಳಿಗೆ ಪೌಷ್ಟಿಕ ಆಹಾರ ಮತ್ತು ರೋಗ ನಿರೋಧಕ ಲಸಿಕೆ ಮತ್ತು ತಾಯಂದಿರ ಸಭೆಗಳನ್ನು ನಡೆಸುವಂತೆ ಅಂಗನವಾಡಿ ಕಾರ್ಯಕರ್ತೆಯರಿಗೆ ಸಲಹೆ ನೀಡಬೇಕು. ಶಾಲೆಯಿಂದ ಹೊರಗಿರುವ ಮಕ್ಕಳನ್ನು ಗುರುತಿಸಿ ಅವರನ್ನು ಮುಖ್ಯವಾಹಿನಿಗೆ ತರುವಲ್ಲಿ ಪ್ರಯತ್ನಿಸಬೇಕು. ಪಂಚಾಯ್ತಿಯಲ್ಲಿ ಮಕ್ಕಳ ಕೇಂದ್ರಿತ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಯುವಕ ಯುವತಿ ಸಂಘಗಳು ಗಮನಾರ್ಹವಾದ ಪಾತ್ರವನ್ನು ವಹಿಸಬೇಕು.

ಸ್ತ್ರೀ ಶಕ್ತಿ ಮತ್ತು ಸ್ವ ಶಕ್ತಿ ಸಂಘಗಳು

ಪ್ರಸ್ತುತ ಗ್ರಾಮ ಪಂಚಾಯ್ತಿಯಲ್ಲಿ ಹನ್ನೊಂದು ಅಂಗನವಾಡಿ ಕೇಂದ್ರಗಳಿವೆ. ಪ್ರತಿ ಕೇಂದ್ರಕ್ಕೆ ಒಂದರಂತೆ ಐದು ಸ್ತ್ರೀ ಶಕ್ತಿ ಸಂಘಗಳಿವೆ. ಒಟ್ಟು ಹನ್ನೊಂದು ಕೇಂದ್ರಗಳಲ್ಲಿ ಐವತ್ತೈದು ಸ್ತ್ರೀ ಶಕ್ತಿ ಸಂಘಗಳಿವ. ಮತ್ತು ನಾಲ್ಕು ಸ್ವ ಶಕ್ತಿ ಸಂಘಗಳಿವೆ. ಈ ಸ್ತ್ರೀ ಶಕ್ತಿ ಮತ್ತು ಸ್ವ ಶಕ್ತಿ ಸಂಘಗಳು ಆರ್ಥಿಕ ಸಬಲೀಕರಣಕ್ಕಾಗಿ ಉಳಿತಾಯ ಖಾತೆಯನ್ನು ತೆರೆದು ಹಣಕಾಸಿನ ವ್ಯವಹಾರವನ್ನು ಮಾಡುತ್ತವೆ. ಈ ಕಾರಣದಿಂದ ಪ್ರತಿವಾರ ಸಭೆ ಸೇರುತ್ತವೆ. ಹೀಗೆ ಸಭೆ ಸೇರಿದಾಗ ಸ್ವಲ್ಪ ಸಮಯವನ್ನು ಬಿಡುವು ಮಾಡಿಕೊಂಡು ತಮ್ಮ ಸುತ್ತಮುತ್ತಲಿನ ಮಕ್ಕಳ ಸ್ಥಿತಿಗತಿ ಕುರಿತು ಚರ್ಚೆ ಮಾಡಬೇಕು. ಹೀಗೆ ಚರ್ಚೆ ಮಾಡುವಾಗ ಆಯಾ ಸಂಘದ ವ್ಯಾಪ್ತಿಯಲ್ಲಿ ಮಕ್ಕಳ ಅನಾರೋಗ್ಯ, ಬಡತನ, ಬಾಲ್ಯ ವಿವಾಹ, ಮತ್ತು ಶಾಲೆಯಿಂದ ಹೊರಗಿರುವ ಮಕ್ಕಳನ್ನು ಗುರುತಿಸಿ ಅವರ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಯತ್ನಿಸಬೇಕು. ಇದಕ್ಕೆ ಪೂರಕ ಮಾಹಿತಿಯನ್ನು ಅಂಗನವಾಡಿ ಕಾರ್ಯಕರ್ತೆಯರು ಸ್ತ್ರೀ ಶಕ್ತಿ ಸಂಘಗಳಿಗೆ ನೀಡುತ್ತಿರಬೇಕು. ಈ ರೀತಿಯಾಗಿ ಸಮುದಾಯದವರು ಪಾಲ್ಗೊಂಡು ಮಕ್ಕಳ ಹಕ್ಕುಗಳ ಬಗ್ಗೆ ಚಿಂತನ ನಡೆಸಿದರೆ ಮಕ್ಕಳ ಹಕ್ಕುಗಳು ದೊರೆಯಲು ಸಾಧ್ಯವಾಗುತ್ತದೆ.

ಒಟ್ಟಾರೆಯಾಗಿ ಒಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ವತಃ ಅಲ್ಲಿನ ಸಮುದಾಯ ಸಂಘ ಸಂಸ್ಥೆಗಳು, SDMC ಸಮಿತಿಗಳು, ಅಂಗನವಾಡಿ ಸಲಹಾ ಸಮಿತಿಗಳು ಮತ್ತು ಗ್ರಾಮಪಂಚಾಯಿಯಲ್ಲಿ ರಚನೆಯಾದ ಉತ್ಪಾದನಾ ಸಮಿತಿ, ಸಾಮಾಜಿಕ ನ್ಯಾಯ ಸಮಿತಿ ಮತ್ತು ಸೌಕರ್ಯ ಸಮಿತಿಗಳಿಗೆ ಮಕ್ಕಳ ಹಕ್ಕುಗಳ ಬಗ್ಗೆ ತರಬೇತಿಯನ್ನು ನೀಡಿ ಈ ಮೂಲಕ ಮಕ್ಕಳ ಹಕ್ಕುಗಳ ಜಾರಿಯ ಕುರಿತು ಮನವರಿಕೆ ಮಾಡಿದರೆ, ಮಕ್ಕಳ ಹಕ್ಕುಗಳು ಸ್ಥಳೀಯ ಸರ್ಕಾರದ ಮಟ್ಟದಲ್ಲಿ ಅನುಷ್ಠಾನಗೊಳ್ಳುತ್ತವೆ ಎಂಬುದು ನನ್ನ ಕ್ಷೇತ್ರ ಕಾರ್ಯದ ಅನಿಸಿಕೆಯಾಗಿದೆ.

ಅಡಿ ಟಿಪ್ಪಣಿಗಳು

೧. ವಾಸುದೇವ ಶರ್ಮಾ: ೨೦೦೮; ಮಕ್ಕಳ ಗ್ರಾಮಸಭೆ, ಪು.೨೭

೨. ಅದೇ, ಪು.೧೧

೩. ಅದೇ, ಪು.೮೯

೪. ಅದೇ, ಪು.೩೨

೫. ಅದೇ, ಪು.೩೦

೬. ಬಡ್ಡಿ ಎಂ.ಎಂ: ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, ಪು.೭೭

೭. ಅದೇ, ಪು.೭೮

೮. ಅದೇ, ಪು.೭೮

ಅಧ್ಯಾಯ–೬

ಅಧ್ಯಯನ ಫಲಿತಗಳು

ಅಧ್ಯಾಯ–೬

ಅಧ್ಯಯನ ಫಲಿತಗಳು

ಮಕ್ಕಳ ಹಕ್ಕುಗಳು ಮತ್ತು ಸ್ಥಳೀಯ ಸರ್ಕಾರ ಎಂಬ ಅಂಶವನ್ನಿಟ್ಟುಕೊಂಡು ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಅಧ್ಯಯನಕ್ಕೆ ತೊಡಗಿದಾಗ ಉಂಟಾದ ಅನುಭವಗಳ ಆಧಾರದ ಮೇಲೆ ಈ ಕೆಳಗಿನ ಫಲಿತಗಳನ್ನು ಮಂಡಿಸಲಾಗಿದೆ.

* ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಭಾರತ ಸರ್ಕಾರವು ಸಹಿಹಾಕಿ ಅನುಷ್ಠಾನಗೊಳಿಸಲು ಬದ್ಧತೆಯನ್ನು ವ್ಯಕ್ತಪಡಿಸಿದೆ. ಅದಕ್ಕೆ ರಾಷ್ಟ್ರ, ರಾಜ್ಯ, ಜಿಲ್ಲಾ ಮಟ್ಟದಲ್ಲಿ ಕ್ರಿಯಾಯೋಜನೆಗಳನ್ನು ರಚನೆ ಮಾಡಲಾಗಿದೆ. ಆದರೆ ಶ್ರೀಧರಗಡ್ಡೆ ಗ್ರಾಮ ಪಂಚಾಯಿತಿಯನ್ನು ನೋಡಿದಾಗ ಈ ಯೋಜನೆಗಳು ತಳಹಂತ ತಲುಪುವುದರೊಳಗೆ ಅವುಗಳ ಅರ್ಥವನ್ನೇ ಕಳೆದುಕೊಂಡಿವೆ. ಹೀಗಾಗಿ ಸರ್ಕಾರದ ಇಲಾಖೆಗಳಿಂದಲೇ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ.

* ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ೧೮ ವರ್ಷದೊಳಗಿನವರೆಲ್ಲ ಮಕ್ಕಳು ಎಂದು ಸಾರುತ್ತದೆ. ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಬದ್ಧತೆಯನ್ನು ವ್ಯಕ್ತಪಡಿಸಿದ ಭಾರತ ಸಂವಿಧಾನದಲ್ಲೇ ೧೪ ವರ್ಷದೊಳಗಿನವರೆಲ್ಲ ಮಕ್ಕಳು ಎಂದು ಹೇಳುತ್ತದೆ (ಸಂವಿಧಾನ ೨೧ರ ಎ ವಿಧಿ, ೬ ರಿಂದ ೧೪ ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯುವುದು ಮೂಲಭೂತ ಹಕ್ಕು) ಎಂಬ ಘೋಷಣೆಯೊಂದಿಗೆ ೧೪ವರ್ಷಗೊಳಗಿನವರು ಮಾತ್ರ ಮಕ್ಕಳು ಎಂದು ಸಾರಿದೆ. ಈ ಕಾರಣದಿಂದ ೧೪ ವರ್ಷ ಮೇಲ್ಪಟ್ಟ ಮಕ್ಕಳಿಗೆ ಸಂವಿಧಾನಿಕ ರಕ್ಷಣೆಯಿಲ್ಲವಾಗಿದೆ.

* ಭಾರತದಲ್ಲಿ ಮಕ್ಕಳ ರಕ್ಷಣೆಗೆ ರಚನೆಯಾಗಿರುವ ಕಾಯ್ದೆ ಕಾನೂನುಗಳಲ್ಲಿ ಮಕ್ಕಳೆಂದರೆ ಯಾರು ಎಂಬುದಕ್ಕೆ ಸ್ಪಷ್ಟತೆಯಿಲ್ಲ. ಉದಾ:– ೧೯೪೮ರ ಕಾರ್ಖಾನೆ

ಅಧಿನಿಯಮ, ೧೯೮೬ರ ಬಾಲಕಾರ್ಮಿಕ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯಿದೆ. ಭಾರತೀಯ ದಂಡ ಸಂಹಿತೆ ಕಾಯ್ದೆ ಸೆಕ್ಷನ್ ೩೭೫ ಮುಂತಾದ ಕಾಯ್ದೆಗಳಲ್ಲಿ ವಯೋಮಿತಿ ಕಡಿಮೆ ಇರುವುದರಿಂದ ಬಾಲಕಾರ್ಮಿಕರಿಗೆ ಮತ್ತು ಹೆಣ್ಣು ಮಕ್ಕಳಿಗೆ ರಕ್ಷಣೆ ಸಿಗುತ್ತಿಲ್ಲ.

* ಭಾರತದಂತಹ ಬಹು ಸಂಸ್ಕೃತಿಯ ದೇಶದಲ್ಲಿ ಜಾತಿ, ಧರ್ಮ, ಮೂಢನಂಬಿಕೆ ಬಲವಾಗಿ ಬೇರೂರಿರುವ ಕಾರಣ ಮಕ್ಕಳ ಹಕ್ಕುಗಳು ಉಲ್ಲಂಘನೆಯಾಗುತ್ತವೆ. ಉದಾ:- ದೇವದಾಸಿ ಪದ್ದತಿ, ಬಾಲ್ಯವಿವಾಹ ಪದ್ದತಿ, ಅಸ್ಪೃಶ್ಯತೆ ಮುಂತಾದ ಅನಿಷ್ಟಗಳು ಇನ್ನೂ ಹಳ್ಳಿಗಳಲ್ಲಿ ಮುಂದುವರೆದಿದೆ.

* ಭಾರತ ದೇಶದಲ್ಲಿ ಬಡತನ, ಅಜ್ಞಾನ, ಅನಕ್ಷರತೆ ತಾಂಡವಾಡುತ್ತಿರುವುದರಿಂದ ಅಂತಹ ಕುಟುಂಬಗಳು ದಿನದ ಬದುಕಿಗಾಗಿ ಪರದಾಡುತ್ತವೆ. ಇಂತಹ ಕುಟುಂಬದಲ್ಲಿರುವ ಮಕ್ಕಳಿಗೆ ಪೋಷಕರಿಂದ ರಕ್ಷಣೆ ನೀಡಲು ಸಾಧ್ಯವಿಲ್ಲ. ಸ್ಥಳೀಯ ಸರ್ಕಾರಗಳು ಬಡಕುಟುಂಬಗಳಿಗೆ ಸೌಲಭ್ಯಗಳನ್ನು ನೀಡಿ ರಕ್ಷಣೆ ನೀಡಿಲ್ಲ.

* ಮಕ್ಕಳ ಹಕ್ಕುಗಳ ವ್ಯಾಪಕ ಪ್ರಚಾರ ಜಾರಿ ಕುರಿತು ಕೈಗೊಂಡಿರುವ ಕ್ರಮಗಳು ಗ್ರಾಮೀಣ ಪ್ರದೇಶಗಳವರೆಗೆ ಮುಟ್ಟಿಲ್ಲ. ಇದಕ್ಕೆ ಮುಖ್ಯವಾದ ಕಾರಣ ಅಧಿಕಾರಶಾಹಿತ್ವ, ಬ್ರಷ್ಟಾಚಾರ, ಲಂಚಗುಳಿತನ, ಇಚ್ಛಾಶಕ್ತಿಯ ಕೊರತೆ, ಸ್ವಾರ್ಥ ಮುಂತಾದವುಗಳು ಕಾರಣವಾಗಿದೆ.

* ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರಚನೆಯಾಗಿರುವ ರಾಷ್ಟ್ರ, ರಾಜ್ಯ ಕ್ರಿಯಾಯೋಜನೆಗಳಿಗೂ ಮತ್ತು ಸ್ಥಳೀಯ ಸರ್ಕಾರಕ್ಕೂ ನೇರವಾದ ಸಂಬಂಧವಿಲ್ಲದ ಕಾರಣ ಗ್ರಾಮೀಣ ಪ್ರದೇಶದಲ್ಲಿರುವ ಮಕ್ಕಳಿಗೆ ಹಕ್ಕುಗಳು ಜಾರಿಯಾಗುತ್ತಿಲ್ಲ ತಲುಪುತ್ತಿಲ್ಲ.

* ಎಲ್ಲಾ ಹಂತದ ಅಧಿಕಾರ ವರ್ಗಕ್ಕೆ ಮತ್ತು ಜನಪ್ರತಿನಿಧಿಗಳಿಗೆ, ಸಮುದಾಯ ಸಂಘ ಸಂಸ್ಥೆಗಳಿಗೆ ಮತ್ತು ಕುಟುಂಬದ ಪೋಷಕರಿಗೆ ಮಕ್ಕಳ ಹಕ್ಕುಗಳ ಕುರಿತು ತರಬೇತಿ ಇಲ್ಲದಿರುವುದರಿಂದ ಮಕ್ಕಳ ಹಕ್ಕುಗಳ ಅನುಷ್ಟಾನದ ಬದ್ಧತೆ ಅರ್ಥವಾಗುತ್ತಿಲ್ಲ.

* ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ೧೯೯೩ರ ಸೆಕ್ಷನ್ ೨(೧೬)ರಂತೆ ಗ್ರಾಮ ಸಭಾ ಎಂದರೆ ಮತದಾರರ ಪಟ್ಟಿಯಲ್ಲಿರುವ ನೊಂದಾಯಿತ ವ್ಯಕ್ತಿಗಳು ಎಂದು ಹೇಳುವ ಮೂಲಕ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿರುವ ಮಕ್ಕಳನ್ನು ಗಣನೆಗೆ ತೆಗೆದುಕೊಂಡಿಲ್ಲ. ಹೀಗಾಗಿ ಮಕ್ಕಳ ಸಮಸ್ಯೆಗಳನ್ನು ಗ್ರಾಮಪಂಚಾಯ್ತಿಗಳು ನೇರವಾಗಿ ಚರ್ಚಿಸುವುದಿಲ್ಲ.

* ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದಂತೆ ಅಧಿಕಾರ ವಿಕೇಂದ್ರಿಕರಣವಾದರೂ ಅಂಗನವಾಡಿ, ಶಾಲೆ, ಆರೋಗ್ಯಕೇಂದ್ರದ ಮೇಲೆ ಗ್ರಾಮ

ಪಂಚಾಯಿತಿಗಳಿಗೆ ನೇರ ಸಂಬಂಧವಿಲ್ಲವಾಗಿದೆ. ಈ ಕಾರಣದಿಂದ ಮಕ್ಕಳ ಹಕ್ಕುಗಳು ಗ್ರಾಮಪಂಚಾಯ್ತಿ ಮಟ್ಟದಲ್ಲಿ ಉಲ್ಲಂಘನೆಯಾಗಿವೆ.

* ಗ್ರಾಮಪಂಚಾಯಿತಿಗಳು ಕ್ರಿಯಾಯೋಜನೆ ತಯಾರಿಸುವಾಗ ಮಕ್ಕಳ ರಕ್ಷಣೆಗೆ ನೇರವಾಗಿ ಕ್ರಿಯಾಯೋಜನೆ ರೂಪಿಸಲು ಅವಕಾಶವಿಲ್ಲ. ಇಂತಹ ಮಿತಿಗಳಿಂದಾಗಿ ಸ್ಥಳೀಯವಾಗಿರುವ ಅಧಿಕಾರಿಗಳ ಮೇಲೆ ಗ್ರಾಮ ಪಂಚಾಯಿತಿಗಳು ಉಸ್ತುವಾರಿ ಮಾಡಲು ಮತ್ತು ಕ್ರಮಕೈಗೊಳ್ಳಲು ಸಾಧ್ಯವಾಗಿಲ್ಲ.

* ಗ್ರಾಮಪಂಚಾಯಿತಿಯಲ್ಲಿ ಚುನಾಯಿತರಾದ ಪ್ರತಿನಿಧಿಗಳು ಅನಕ್ಷರಸ್ಥರೂ ಬಡವರೂ ಆಗಿರುವುದರಿಂದ ಅವರಿಗೆ ಕಾನೂನು ಮಾಹಿತಿಯ ಕೊರತೆ ಇದೆ. ಹೀಗಾಗಿ ಆಡಳಿತಾಧಿಕಾರಿಗಳ ಮೇಲೆ ಸಮರ್ಥವಾಗಿ ಮೇಲ್ವಿಚಾರಣೆ ಮಾಡಲು ಆಗುತ್ತಿಲ್ಲ. ಆದ್ದರಿಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಶಾಲೆ, ಅಂಗನವಾಡಿ ಮತ್ತು ಆರೋಗ್ಯ ಕೇಂದ್ರದ ಇಲಾಖಾ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ಆಗುತ್ತಿಲ್ಲ.

* ಪ್ರಸ್ತುತ ಗ್ರಾಮ ಪಂಚಾಯ್ತಿಯಲ್ಲಿ ಸಮುದಾಯದವರಿಗೆ ಮಕ್ಕಳ ಹಕ್ಕುಗಳ ಬಗ್ಗೆ ಕಾಳಜಿ ಕಳಕಳಿ ಇಲ್ಲ. ಈ ಕಾರಣದಿಂದಾಗಿ ಮಕ್ಕಳ ಹಕ್ಕುಗಳನ್ನು ಸಮುದಾಯದವರು ಉಲ್ಲಂಘಿಸುತ್ತಿದ್ದಾರೆ.

* ಮಕ್ಕಳ ಹಕ್ಕುಗಳ ಬಗ್ಗೆ ಗ್ರಾಮ ಪಂಚಾಯಿತಿ, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ, ಅಂಗನವಾಡಿ ಸಲಹಾ ಸಮಿತಿ ಮತ್ತು ಸ್ತ್ರೀ ಶಕ್ತಿ, ಸ್ವಶಕ್ತಿ ಸಂಘಗಳಿಗೆ, ಮಕ್ಕಳ ಹಕ್ಕುಗಳ ಕುರಿತು ತರಬೇತಿಗಳೇ ನಡೆದಿಲ್ಲ ಈ ಕಾರಣದಿಂದ ಮಕ್ಕಳ ಹಕ್ಕು ಜಾರಿಗೆ ಬಂದಿಲ್ಲ.

* ಗ್ರಾಮ ಪಂಚಾಯಿತಿ ಮಟ್ಟದಲ್ಲಿರುವ ಸೇವಾ ಸೌಲಭ್ಯಗಳ ಅನುಷ್ಠಾನ ಸಮರ್ಪಕವಾಗಿಲ್ಲ. ಇರುವಂತಹ ಸೇವಾ ಸೌಲಭ್ಯಗಳನ್ನು ಅಧಿಕಾರಶಾಹಿಗಳು ವೈಯಕ್ತಿಕ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾರೆ. ಇದರಿಂದ ಮಕ್ಕಳಿಗೆ ರಕ್ಷಣೆ ಸಿಗುತ್ತಿಲ್ಲ.

* ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಬಡತನವೂ ಒಂದು ಪ್ರಮುಖ ಕಾರಣವಾಗಿದೆ. ಆದರೆ ಗ್ರಾಮ ಪಂಚಾಯಿತಿಗಳು ಬಡತನ ನಿವಾರಣೆಗೆ ಸಮರ್ಪಕ, ಕಾರ್ಯಕ್ರಮಗಳನ್ನು ಹಮ್ಮಿಕೊಂಡಿಲ್ಲ.

* ಗ್ರಾಮ ಪಂಚಾಯಿತಿಯಲ್ಲಿರುವ ಸ್ವಾರ್ಥ ರಾಜಕಾರಣದಿಂದಾಗಿ ಅರ್ಹ ಬಡವರಿಗೆ ಪಡಿತರಚೀಟಿ, ವಾಸಯೋಗ್ಯ ಮನೆ, ಶುದ್ಧ ಕುಡಿಯುವ ನೀರು ಮುಂತಾದ ಸೌಲಭ್ಯಗಳು ಸಿಕ್ಕಿಲ್ಲ. ಬಡತನ ಮತ್ತಿತರ ಕಾರಣದಿಂದ ಹೊರಬರಲಾಗದ ಕುಟುಂಬಗಳ ಮಕ್ಕಳು ಪೋಷಕರೊಂದಿಗೆ ದುಡಿಯಲು ಹೋಗುತ್ತಾರೆ.

ಇಲಾಖಾ ಅಧಿಕಾರಿಗಳು ಸುಳ್ಳು ಅಂಕಿ ಸಂಖ್ಯೆಗಳನ್ನು ನೀಡುತ್ತಿರುವುದರಿಂದ ಉದಾ:-ಶಾಲೆ ಬಿಟ್ಟ ಮಕ್ಕಳು, ಅಪೌಷ್ಟಿಕತೆ, ಹೊಂದಿದ ಮಕ್ಕಳು, ಇತ್ಯಾದಿಗಳು. ಮುಂತಾದವರರಿಗಾಗಿ ಕ್ರಿಯಾ ಯೋಜನೆಗಳನ್ನು ರೂಪಿಸಿದರೂ ಸಹ ಇಂತಹ ಮಕ್ಕಳು ಕ್ರಿಯಾಯೋಜನೆ ವ್ಯಾಪ್ತಿಯಿಂದ ಹೊರಗುಳಿಯುತ್ತಾರೆ.

ಪ್ರಸ್ತುತ ಗ್ರಾಮ ಪಂಚಾಯಿತಿಯಲ್ಲಿರುವ ಅಂಗನವಾಡಿಕೇಂದ್ರ, ಶಾಲೆ ಮತ್ತು ಆರೋಗ್ಯ ಕೇಂದ್ರ, ನ್ಯಾಯಬೆಲೆ ಅಂಗಡಿಗಳ ಯೋಜನೆಗಳ ಅನುದಾನವನ್ನು ಸ್ಥಳೀಯ ಸರ್ಕಾರಕ್ಕೆ ವಹಿಸಿಲ್ಲ. ಹೀಗಾಗಿ ಅವರುಗಳ ಮೇಲೆ ಸಮರ್ಥ ಮೇಲುಸ್ತುವಾರಿ ಮಾಡಲು ಗ್ರಾಮ ಪಂಚಾಯಿತಿಗಳಿಂದ ಸಾಧ್ಯವಾಗುತ್ತಿಲ್ಲ.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಆರೋಗ್ಯ ಉಪಕೇಂದ್ರದಲ್ಲಿ ಎಲ್ಲಾ ರೀತಿಯ ಸಲಕರಣೆಗಳು ಇಲ್ಲದಿರುವುದರಿಂದ ಮತ್ತು ಆರೋಗ್ಯ ಉಪಕೇಂದ್ರವು ಬಳಕೆಯಿಂದ ವಂಚಿತವಾಗಿರುವುದರಿಂದ ತಾಯಿ ಮತ್ತು ಶಿಶುಮರಣ ಸಂಭವಿಸಲು ಕಾರಣವಾಗಿದೆ.

ಗ್ರಾಮೀಣಭಾಗದಲ್ಲಿ ಅಥವಾ ಪಂಚಾಯಿತಿ ವ್ಯಾಪ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣ ರಕ್ಷಣೆ ಇಲ್ಲದಿರುವುದರಿಂದ ಮತ್ತು ಕುಟುಂಬ ಮತ್ತು ಸಮುದಾಯಗಳು ಮೈನೆರೆತ ಹೆಣ್ಣು ಹುಣ್ಣು ಎಂದು ಭಾವಿಸುವುದರಿಂದ ಬಾಲ್ಯ ವಿವಾಹಗಳು ನಡೆಯುತ್ತಿವೆ.

ಇತ್ತೀಚೆಗೆ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣವೆಂದರೆ ಸರ್ಕಾರಿ ನೌಕರಿ ಪಡೆಯುವುದೇ ಆಗಿದೆ. ಅಲ್ಪಸ್ವಲ್ಪ ವಿದ್ಯೆ ಪಡೆದವರು ಬೀದಿಬೀದಿ ಸುತ್ತುತ್ತಾ ತಿರುಗುವುದು ಮತ್ತು ಇಂದಿನ ಶಿಕ್ಷಣವು ಕ್ರಿಯಾಶೀಲರನ್ನಾಗಿ ಮಾಡುವ ಬದಲು ಗುಮಾಸ್ತರನ್ನಾಗಿ ಸೃಷ್ಟಿಸುತ್ತಿರುವುದರಿಂದ ಜನರಲ್ಲಿ ತಪ್ಪು ತಿಳುವಳಿಕೆಯುಂಟಾಗಿ ತಮ್ಮ ಮಕ್ಕಳನ್ನು ಶಾಲೆ ಬಿಡಿಸುತ್ತಿದ್ದಾರೆ.

ಸಂವಿಧಾನದ ಮೂಲಭೂತ ಹಕ್ಕುಗಳಾದ ಪರಿಚ್ಛೇದ ೧೭ರಲ್ಲಿ ಜಾತಿ ಆಧಾರಿತ ಅಸ್ಪೃಶ್ಯತೆಯ ವ್ಯಾಖ್ಯಾನವಿದೆಯೇ ಹೊರತು ಲಿಂಗಾಧಾರಿತ ಅಸ್ಪೃಶ್ಯತಾ ವ್ಯಾಖ್ಯಾನವಿಲ್ಲ. ಇದಕ್ಕೆ ಸಂವಿಧಾನ ತಿದ್ದು ಪಡಿತಂದು ಗಂಡು ಹೆಣ್ಣಿನ ನಡುವೆ ಸಮಾನತೆ ಕಲ್ಪಿಸಬೇಕು. ಇದರ ಮೂಲಕ ಶಿಕ್ಷಣ, ಆರೋಗ್ಯ, ರಕ್ಷಣೆಯಲ್ಲಿ ತಾರತಮ್ಯ ಎಸಗುವುದನ್ನು ತಪ್ಪಿಸಬಹುದು.

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಂಗವಿಕಲ ಅನಾಥ ಮಕ್ಕಳನ್ನು ಗುರುತಿಸಿ ಅಂತಹ ಮಕ್ಕಳಿಗೆ ರಕ್ಷಣೆ ನೀಡುವಲ್ಲಿ ಸ್ಥಳೀಯ ಸರ್ಕಾರವಾದ ಗ್ರಾಮ ಪಂಚಾಯಿತಿಗಳು ಮಾಹಿತಿಯನ್ನು ಹೊಂದಿಲ್ಲ. ಹೀಗಾಗಿ ಅಂತಹ ಮಕ್ಕಳ ರಕ್ಷಣೆಯಾಗುತ್ತಿಲ್ಲ.

* ಗ್ರಾಮ ಪಂಚಾಯಿತಿಯಲ್ಲಿ ಜನಸಂಖ್ಯೆ ಎಂದರೆ ಕೇವಲ ಮತದಾರರ ಸಂಖ್ಯೆ ಎಂದು ಭಾವಿಸಿದ್ದಾರೆ. ಹಾಗಾಗಿ ಗ್ರಾಮ ಪಂಚಾಯಿತಿಗಳು ಮಕ್ಕಳ ಕುರಿತ ಮಾಹಿತಿಯನ್ನು ಹೊಂದಿಲ್ಲ. ಇದರಿಂದ ಮಕ್ಕಳ ಸ್ಥಿತಿಗತಿ ಕುರಿತು ಲೆಕ್ಕಹಾಕಲು ಆಗುತ್ತಿಲ್ಲ.

* ಗ್ರಾಮ ಪಂಚಾಯಿತಿಯ ಸ್ಥಾಯಿಸಮಿತಿ, ಅಂಗನವಾಡಿ ಸಲಹಾ ಸಮಿತಿ ಮತ್ತು SDMC ಸಮಿತಿಗಳಿಗೆ ಇಲಾಖಾ ಅಧಿಕಾರಿಗಳು ಸಮರ್ಪಕ ಮಾಹಿತಿ ನೀಡುತ್ತಿಲ್ಲ. ಜೊತೆಗೆ ಸಲಹಾ ಸಮಿತಿಯ ಸದಸ್ಯರು ಅನಕ್ಷರಸ್ಥರು ಬಡವರೂ ಆಗಿರುವುದರಿಂದ ಅವರು ತಮ್ಮ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಲು ಆಗುತ್ತಿಲ್ಲ.

ಮಕ್ಕಳ ಹಕ್ಕುಗಳು ಮತ್ತು ಸ್ಥಳೀಯ ಸರ್ಕಾರ ಎಂಬ ಅಂಶವನ್ನಿಟ್ಟುಕೊಂಡು ಅಧ್ಯಯನಕ್ಕೆ ತೊಡಗಿದಾಗ ಮಕ್ಕಳ ಹಕ್ಕುಗಳು ಸರ್ಕಾರ ಮಟ್ಟದಲ್ಲಿ ಹೇಗೆ ಉಲ್ಲಂಘನೆಯಾಗುತ್ತವೆ ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಮನಗಾಣಿಸಲು ಪ್ರಯತ್ನಿಸಲಾಗಿದೆ. ಮಕ್ಕಳ ಸಮಸ್ಯೆಗಳಿಗೆ ಸರ್ಕಾರವೂ ಒಂದು ಮುಖ್ಯ ಕಾರಣ ಅಷ್ಟೇ. ಆದರೆ ಸರ್ಕಾರದಾಚೆಗೂ ಹಲವಾರು ಸಮಸ್ಯೆಗಳಿವೆ. ಇದೊಂದು ವಿಷಚಕ್ರ. ಎಲ್ಲೋ ಒಂದು ಕಡೆ ಸಮಸ್ಯೆಗೆ ಪರಿಹಾರ ಕಂಡು ಕೊಂಡರೆ ಸಂಪೂರ್ಣ ಪರಿಹಾರವಾದಂತಾಗುವುದಿಲ್ಲ. ಈ ಮಕ್ಕಳ ಹಕ್ಕಿನ ಸಮಸ್ಯೆಯನ್ನು ಬೇರೆ ಬೇರೆ ಆಯಾಮಗಳಲ್ಲಿ ನೋಡಬೇಕಾಗಿದೆ.

ಒಂದು ಮಗು ಚಿಂದಿ ಆಯಲು ಹೋಗುತ್ತಾನೆಂದರೆ ಚಿಂದಿ ಆಯಲು ಕಳಿಸಿರುವಂತಹ ಕುಟುಂಬದ ಸ್ಥಿತಿಯನ್ನು ಗಮನಿಸಬೇಕಾಗಿದೆ. ಪೋಷಕರು ದುಡಿಯುವ ಶಕ್ತಿಯನ್ನು ಕಳೆದುಕೊಂಡವರೇ, ಬಡವರೇ, ಕುಡುಕರೇ, ಅಥವಾ ಅನಕ್ಷರತೆ, ಅಜ್ಞಾನಿಗಳೂ ಅಥವಾ ಮಕ್ಕಳನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವರೇ ಇಂತಹ ಸಮಸ್ಯೆಗಳಿಗೆ ಸಮುದಾಯ ಸಮಾಜ ಕಾರಣವಾಗಿವೆಯೇ? ಸರ್ಕಾರಗಳು ಗೌರವಯುತವಾಗಿ ಬಾಳಲು ಅಂತಹ ಕುಟುಂಬಗಳಿಗೆ ಅವಕಾಶ ಕಲ್ಪಿಸಿಕೊಟ್ಟಿದೆಯೇ ಎಂಬಂತ ವಿಷಯಗಳ ವ್ಯಾಪಕ ಚರ್ಚೆಯಾಗಬೇಕಿದೆ.

ಸರ್ಕಾರದ ಮಟ್ಟದ ಇಲಾಖಾ ಅಧಿಕಾರಿಗಳು ತಮ್ಮ ಸೇವೆಯನ್ನು ಸಲ್ಲಿಸುವಾಗ ಅವರಲ್ಲಿರುವ ನೈತಿಕ ಮಟ್ಟವನ್ನು ಗಮನಿಸಬೇಕಾಗಿದೆ. ಸ್ಥಳೀಯ ಸರ್ಕಾರವಾದ ಜನಪ್ರತಿನಿಧಿಗಳ ಆಯ್ಕೆಯ ಮಾನದಂಡಗಳು ಸರಿಯಾಗಿವೆಯೇ? ನಿಜವಾಗಲು ಅವರು ಅರ್ಹತೆ ಹೊಂದಿದವರೇ? ಅವರು ಜವಾಬ್ದಾರಿಗಳನ್ನು ನಿಭಾಯಿಸಬಲ್ಲವರೆ? ಎಂಬಂತಹ ವಿಚಾರಗಳು ಚರ್ಚೆಗೆ ಬರಬೇಕಾಗಿದೆ.

ಭಾರತದಂತಹ ಬಹುಸಂಸ್ಕೃತಿ ದೇಶದೊಳಗೆ ಜಾತಿ ಬೇರುಗಳು, ಸಂಪ್ರದಾಯ ಆಚರಣೆಗಳು, ಮೂಢನಂಬಿಕೆಗಳು ಬಲವಾಗಿ ಬೇರೂರಿವೆ. ಅಂತಹವುಗಳು ಮಕ್ಕಳ ಮೇಲೆ ಪರಿಣಾಮಬೀರುತ್ತವೆ. ಇವುಗಳ ನಿರ್ಮೂಲನೆಗೆ ಎಂತಹ ಪ್ರಯತ್ನಗಳನ್ನು ಮಾಡಲಾಗಿದೆ ಎಂಬಂತಹ ವಿಷಯಗಳು ಚರ್ಚೆಗೆ ಬರಬೇಕಾಗಿದೆ. ಈಗಾಗಲೇ ಅಸ್ತಿತ್ವದಲ್ಲಿರುವ ಕಾಯ್ದೆ ಕಾನೂನುಗಳನ್ನು ಅಮೂಲಾಗ್ರವಾಗಿ ಪರಿಶೀಲಿಸಬೇಕಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಮಕ್ಕಳ ಹಕ್ಕುಗಳು ಜಾರಿಗೆ ಇರುವ ಸಮಸ್ಯೆಗಳು ಮತ್ತು ಅವುಗಳ ಪರಿಹಾರ ಕುರಿತು ಒಂದಷ್ಟು ಅಂಶವನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ. ನಮ್ಮ ಆಡಳಿತ, ಸಮಾಜ ಮತ್ತು ಕುಟುಂಬದ ವ್ಯವಸ್ಥೆಯೊಳಗೆ ಎಂಬ ಅಲಿಖಿತವಾದ ಸಂವಹದ ವ್ಯವಸ್ಥೆಯೊಂದಿದೆ ಹೊಂದಿವೆ. ಅದನ್ನು ಸರಿಪಡಿಸುವುದು ಹೇಗೆ? ಆಡಳಿತದಲ್ಲಿ ಸ್ವಯಂ ಚಾಲಿತವಾದ ನಿರ್ದೇಶನದ ಮೂಲಕ ನಡೆಯುವ ಯಾಂತ್ರಿಕ ವ್ಯವಸ್ಥೆಯೊಳಗೆ ಕಣ್ಣಿಗೆ ಕಾಣದ ವ್ಯವಸ್ಥೆಯೊಂದಿದೆ. ಅದನ್ನು ನಿಯಂತ್ರಣ ಮಾಡುವುದು ಹೇಗೆ? ಇದಕ್ಕೆ ಕಾನೂನುಗಳನ್ನು ನಿಯಂತ್ರಣ ಮಾಡುವ ಶಕ್ತಿಯಿದೆ. ಅಂತಹ ಶಕ್ತಿಯನ್ನು ಭಗ್ನಪಡಿಸಬೇಕಾಗಿದೆ. ಈ ಭಗ್ನ ಪಡಿಸಲು ಬಳಸುವ ಶಕ್ತಿಯ ಅನ್ವಯತೆ ಸೂತ್ರ ಪ್ರಶ್ನಾರ್ಹವಾಗಿದೆ.

ಅನುಬಂಧಗಳು

ಗ್ರಂಥಋಣ

ವಕ್ತೃಗಳ ವಿವರ

ಛಾಯಚಿತ್ರಗಳು

ಗ್ರಂಥಋಣ

೧. ಕ್ರಾಸ್: ೨೦೦೪; ಎಳೆಯರಿಗೊಂದು ಬಾಳ್ವೆ, ಕರ್ನಾಟಕ ರೀಜನಲ್ ಆರ್ಗನೈಜೇಷನ್ ಫಾರ್ ಸೋಶಿಯಲ್ ಸರ್ವಿಸ್, ಬೆಂಗಳೂರು

೨. ಗುರುಮೂರ್ತಿ ಕೆ.ಜಿ: ೧೯೮೧; **ಪ್ರೌಢರ ಜಗತ್ತಿನಲ್ಲಿ ಮಕ್ಕಳು,** ಸಿ.ಎಸ್.ಕಣ, ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩

೩. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ: ಚೈಲ್ಡ್‌ರೈಟ್ಸ್ ಟ್ರಸ್ಟ್: **ಪ್ರಜೆಗಳೆ ಪ್ರಭುಗಳು,** ಕರ್ನಾಟಕ ಸರ್ಕಾರ, ೪೬೦೬, ೬ನೇ ಮಹಡಿ: ಹೈಪಾಯಿಂಟ್ ಫೋರ್ ಅರಮನೆರಸ್ತೆ, ಬೆಂಗಳೂರು

೪. ಜಸ್ವೀರ್ ಸಿಂಗ್: ರಾಹು(ಅನು): ೨೦೦೦; **ನಮ್ಮ ಬಡತನ ಸಂವಿಧಾನಕ್ಕೊಂದು ಕಳಂಕ,** ಲೋಹಿಯಾ ಪ್ರಕಾಶನ, ಕ್ಷಿತಿಜ, ಕಪ್ಪಗಲ್ ರೋಡ್, ಗಾಂಧೀನಗರ, ಬಳ್ಳಾರಿ

೫. ಜಾನ್ ವಿಲ್ಸನ್(ಸಂ): ಹಿಮಕರ ಎ.ಕೆ(ಅನು): ೨೦೦೧; ಏಳಿ **ಎದ್ದೇಳಿ ನಿಮ್ಮ ಹಕ್ಕುಗಳಿಗಾಗಿ ಏಳಿ,** ಪೀಸ್ ಚೈಲ್ಡ್ ಇಂಟರ್ ನ್ಯಾಷನಲ್

೬. ಬಡ್ಡಿ ಎಂ.ಎಂ: ೧೯೯೩; **ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ,** ಎಂ.ಆರ್. ಸತ್ಯನಾರಾಯಣ, ಆಕಳವಾಡಿ ಬುಕ್ ಡಿಪೋ, ವಿಜಯ ರೋಡ್, ಧಾರವಾಡ-೧

೭. ಭಾರತೀ ಜೀವಿ: ೧೯೯೯; **ಮಕ್ಕಳ ಕಲ್ಯಾಣ ಕಾರ್ಯಗಳು,** ಡಾ.ಎಸ್.ಜಿ.ಭಾರತಿ ೧೯ ಶ್ರೀನಗರ, ಧಾರವಾಡ-೦೧

೮. **ಮಹಿಳಾ ಮತ್ತು ಮಕ್ಕಳ** ಅಭಿವೃದ್ಧಿ ಇಲಾಖೆ: ೨೦೦೪; ಕರ್ನಾಟಕ ರಾಜ್ಯ ಮಕ್ಕಳ ಕ್ರಿಯಾಯೋಜನೆ ೨೦೦೩-೨೦೧೦, ಕರ್ನಾಟಕ ಸರ್ಕಾರ, ಸಚಿವಾಲಯ, ಬಹುಮಹಡಿಗಳ ಕಟ್ಟಡ ಎರಡನೇ ಮಹಡಿ, ಗೇಟ್-೧, ಬೆಂಗಳೂರು- ೫೬೦ ೦೦೧,

೯. ಮೊಗಳ್ಳಿ ಗಣೇಶ್: ೨೦೦೫; ಆದಿಮ, ಹೊನ್ನಾರು ಮಾಸ ಪತ್ರಿಕೆ ಮತ್ತು ಸಾರಂಗ ಪ್ರಕಾಶನ, ಜನರಲ್ ಆಸ್ಪತ್ರೆ ಹಿಂಭಾಗ ವಿದ್ಯಾನಗರ ತಿಪಟೂರು

೧೦. ಮೊಗಳ್ಳಿ ಗಣೇಶ್: ೨೦೦೬; **ಮೌಖಿಕ ಕಥನ,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,

೧೧. ಲಕ್ಷ್ಮಿವಾಸುದೇವ ಶರ್ಮಾ(ಅನು): ೨೦೦೨; **ಮಕ್ಕಳ ಸುರಕ್ಷತೆ** ಎವರಿ ಚೈಲ್ಡ್, ಎವರಿಚೈಲ್ಡ್ ಇಂಡಿಯಾ ಲಿಯಿಸನ್ ಆಫಿಸ್ ೯,೭ನೇ ನಂದಿ ದುರ್ಗ, ಎಕ್ಸ್‌ಟೆಂಶನ್, ಬೆಂಗಳೂರು - ೫೬೦೦೪೬,

೧೨. ವಾಸುದೇವ ಶರ್ಮಾ: ೨೦೦೨; ಮಕ್ಕಳ ಹಕ್ಕುಗಳು, ಚರ್ಚೆಗಾಗಿ ಲೇಖನಗಳು, ಸಂವಹನ ನಂ೧೦, ಶ್ರದ್ಧಾ ೮ನೇ ಮುಖ್ಯ ರಸ್ತೆ, ೩ನೇ ಅಡ್ಡರಸ್ತೆ ಶ್ರೀನಿಧಿ ಲೇಔಟ್, ಕೋಣನಕುಂಟೆ, ಬೆಂಗ್ಗಳೂರು

೧೩. ವಾಸುದೇವ ಶರ್ಮಾ: ೨೦೦೮; ಮಕ್ಕಳ ಗ್ರಾಮಸಭೆ, ೪೬೦೬, ೬ನೇ ಮಹಡಿ ಹೈಪಾಯಿಂಟ್ ಫೋರ್, ಅರಮನೆ ರಸ್ತೆ, ಬೆಂಗಳೂರು

೧೪. ವಾಸುದೇವ ಶರ್ಮಾ: ೨೦೦೩; ಮಕ್ಕಳಿಗಾಗಿ ಮಕ್ಕಳ ಹಕ್ಕುಗಳು, ಚೈಲ್ಡ್ ರೈಟ್ಸ್ ಟ್ರಸ್ಟ್ ೪೬೦೬, ೬ನೇ ಮಹಡಿ, ಅರಮನೆ ರಸ್ತೆ, ಬೆಂಗಳೂರು

೧೫. ಶ್ರೀಧರ ಎ: ೨೦೦೨; ವಿಕೇಂದ್ರಿಕರಣ ಮತ್ತು ಗ್ರಾಮ ಪಂಚಾಯತ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩ ೨೭೬,

೧೬. ಸಂಗೊಳ್ಳಿ ಎನ್.ಎಸ್: ೨೦೦೬; ಮಾನವ ಹಕ್ಕುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೭. UNICEF: 2004; **The state of the world Children,** UNICEF, UNICEF, House, 3 un Plaza, New York NY 10017, USA

ವಕ್ತೃಗಳ ವಿವರ

ಹೆಸರು	ವಯಸ್ಸು	ವೃತ್ತಿ	ಊರು
೧. ಶ್ರೀಮತಿ ಬಿ.ಹೆಚ್.ವಿಜಯಲಕ್ಷ್ಮಿ	೩೩	ಅಂಗನವಾಡಿ ಕಾರ್ಯಕರ್ತೆ ಒಂದನೇ ಕೇಂದ್ರ	ಶ್ರೀಧರಗಡ್ಡೆ
೨. ಶ್ರೀಮತಿ ಹೆಚ್.ಎಂ.ಹೇಮಲತಾ	೩೫	ಅಂಗನವಾಡಿ ಕಾರ್ಯಕರ್ತೆ ೩ನೇ ಕೇಂದ್ರ	ಶ್ರೀಧರಗಡ್ಡೆ
೩. ಶ್ರೀಮತಿ ವೈ.ಕಲ್ಯಾಣಮ್ಮ	೨೭	ಅಂಗನವಾಡಿ ಕಾರ್ಯಕರ್ತೆ ೪ನೇ ಕೇಂದ್ರ	ಶ್ರೀಧರಗಡ್ಡೆ
೪. ಶ್ರೀಮತಿ ಹೆಚ್.ಎಂ.ಈಶ್ವರಮ್ಮ	೨೮	ಅಂಗನವಾಡಿ ಕಾರ್ಯಕರ್ತೆ ೫ನೇ ಕೇಂದ್ರ	ಶ್ರೀಧರಗಡ್ಡೆ
೫. ಶ್ರೀಮತಿ ಬಿ.ಸುಶೀಲ	೨೬	ಅಂಗನವಾಡಿ ಕಾರ್ಯಕರ್ತೆ ೬ನೇ ಕೇಂದ್ರ	ಶ್ರೀಧರಗಡ್ಡೆ
೬. ಶ್ರೀಮತಿ ಶೇಷಾದ್ರಮ್ಮ	೨೭	ಅಂಗನವಾಡಿ ಕಾರ್ಯಕರ್ತೆ ಒಂದನೇ ಕೇಂದ್ರ	ಗುಡಾರನಗರ
೭. ಕುಮಾರಿ ಉಮಾವತಿ	೨೨	ಅಂಗನವಾಡಿ ಕಾರ್ಯಕರ್ತೆ ೨ನೇ ಕೇಂದ್ರ	ಗುಡಾರನಗರ
೮. ಶ್ರೀಮತಿ ಎನ್.ಹನುಂತಮ್ಮ	೪೦	ಅಂಗನವಾಡಿ ಕಾರ್ಯಕರ್ತೆ ಒಂದನೇ ಕೇಂದ್ರ	ಜಾಲಿಬೆಂಚಿ
೯. ಶ್ರೀಮತಿ ಬಿ.ಅನುಸೂಯ	೩೦	ಅಂಗನವಾಡಿ ಕಾರ್ಯಕರ್ತೆ ೨ನೇ ಕೇಂದ್ರ	ಜಾಲಿಬೆಂಚಿ
೧೦. ಶ್ರೀಮತಿ ಎಸ್.ರತ್ನಮ್ಮ	೩೫	ಅಂಗನವಾಡಿ ಕಾರ್ಯಕರ್ತೆ ಒಂದನೇ ಕೇಂದ್ರ	ಲಕ್ಷ್ಮಿನಗರ
೧೧. ಶ್ರೀಮತಿ ಧನಲಕ್ಷ್ಮಿ	೪೨	ಸ.ಹಿ.ಪ್ರಾ.ಶಾಲೆ ಮುಖೋಪಾಧ್ಯಾಯರು	ಶ್ರೀಧರಗಡ್ಡೆ
೧೨. ಶ್ರೀ ಎನ್.ತಿಪ್ಪಯ್ಯ	೪೫	ಸ. ಪ್ರಾ.ಶಾಲೆ ಮುಖೋಪಾಧ್ಯಾಯರು	ಶ್ರೀಧರಗಡ್ಡೆ

ಹೆಸರು	ವಯಸ್ಸು	ವೃತ್ತಿ	ಊರು
೧೩. ವೀರೇಶ್ ಪ್ರಾಣದ್	೩೯	ಸ.ಕಿ.ಪ್ರಾ.ಶಾಲೆ ಮುಖ್ಯೋಪಾಧ್ಯಾಯರು	ಶ್ರೀಧರಗಡ್ಡೆ
೧೪. ಎಸ್.ಕೆ.ಪ್ರಭು	೪೨	ಸ.ಹಿ.ಪ್ರಾ.ಶಾಲೆ ಜಾಲಿಬೆಂಚಿ	ಗುಡಾರನಗರ
೧೫. ಶ್ರೀಮತಿ ಪಿ.ದೇವಿಕಾ	೪೬	ಸ.ಕಿ.ಪ್ರಾ.ಶಾಲೆ ಲಕ್ಷ್ಮಿನಗರ ಕ್ಯಾಂಪ್	ಲಕ್ಷ್ಮಿನಗರ
೧೬. ಎ.ಎಸ್.ಪದ್ಮ	೩೬	ಕಿರಿಯ ಆರೋಗ್ಯ ಮಹಿಳಾ ಸಹಾಯಕಿ	ಶ್ರೀಧರಗಡ್ಡೆ
೧೭. ಹೆಚ್.ಎಂ.ಅಮರಯ್ಯ	೪೮	ನ್ಯಾಯಬೆಲೆ ಅಂಗಡಿ ಮಾಲಿಕ	ಶ್ರೀಧರಗಡ್ಡೆ
೧೮. ಎ.ಕೆ.ಹುಲುಗಪ್ಪ	೫೧	ನ್ಯಾಯಬೆಲೆ ಅಂಗಡಿ ಮಾಲಿಕ	ಶ್ರೀಧರಗಡ್ಡೆ
೧೯. ಶ್ರೀ ಶರಣಬಸಪ್ಪ	೪೮	ನ್ಯಾಯಬೆಲೆ ಅಂಗಡಿ ಮಾಲಿಕ	ಜಾಲಿಬೆಂಚಿ
೨೦. ಅಳ್ಳಿದೊಡ್ಡಬಸಪ್ಪ	೩೯	SDMC ಅಧ್ಯಕ್ಷರು ಸ.ಹಿ.ಪ್ರಾ.ಶಾಲೆ	ಶ್ರೀಧರಗಡ್ಡೆ
೨೧. ಸಿ.ಸಿದ್ಧನಗೌಡ	೪೩	SDMC ಅಧ್ಯಕ್ಷರು ಸ.ಹಿ.ಪ್ರಾ.ಶಾಲೆ	ಶ್ರೀಧರಗಡ್ಡೆ
೨೨. ಶ್ರೀಮತಿ ಸೋಮಕ್ಕ	೩೫	SDMC ಅಧ್ಯಕ್ಷರು ಸ.ಹಿ.ಪ್ರಾ.ಶಾಲೆ	ಲಕ್ಷ್ಮಿನಗರ
೨೩. ದಾಸರ ಕೃಷ್ಣಪ್ಪ	೪೭	SDMC ಅಧ್ಯಕ್ಷರು ಸ.ಹಿ.ಪ್ರಾ.ಶಾಲೆ	ಗುಡಾರನಗರ
೨೪. ಯು.ಮೇಘನಾಥರೆಡ್ಡಿ	೪೪	SDMC ಅಧ್ಯಕ್ಷರು ಸ.ಹಿ.ಪ್ರಾ.ಶಾಲೆ	ಜಾಲಿಬೆಂಚಿ
೨೫. ಎಸ್.ವಿ.ವಿರುಪಾಕ್ಷಗೌಡ	೬೦	ನಿವೃತ್ತ ಶಿಕ್ಷಕ ಗ್ರಾಮದ ಹಿರಿಯರು	ಶ್ರೀಧರಗಡ್ಡೆ
೨೬. ಶ್ರೀಮತಿ ಸುಶೀಲಮ್ಮ	೩೮	ಅಧ್ಯಕ್ಷರು ಶ್ರೀಧರಗಡ್ಡೆ ಗ್ರಾಮಪಂಚಾಯತ್	ಶ್ರೀಧರಗಡ್ಡೆ
೨೭. ಶೇಷಗಿರಿರಾವ್	೩೮	ಸದಸ್ಯರು	ಲಕ್ಷ್ಮಿನಗರ
೨೮. ಕಟ್ಟೆಬಸಪ್ಪ	೪೫	ಸದಸ್ಯರು ಗ್ರಾಮಪಂಚಾಯ್ತಿ ಶ್ರೀಧರಗಡ್ಡೆ	ಲಕ್ಷ್ಮಿನಗರ

ಹೆಸರು	ವಯಸ್ಸು	ವೃತ್ತಿ	ಊರು
೨೯. ಶ್ರೀಮತಿ ನೀಲಮ್ಮ	೩೨	ಅಧ್ಯಕ್ಷರು ಅಂಗನವಾಡಿ ಸಲಹಾಸಮಿತಿ	ಶ್ರೀಧರಗಡ್ಡೆ
೩೦. ಶ್ರೀಮತಿ ರುಜಿನಮ್ಮ	೩೦	ಪ್ರತಿನಿಧಿ ಬಂಗಾರಮ್ಮ ಸ್ತ್ರೀ ಶಕ್ತಿ ಸಂಘ	ಜಾಲಿಬೆಂಚಿ
೩೧. ಶ್ರೀಮತಿ ವರದಮ್ಮ	೩೪	ಪ್ರತಿನಿಧಿ –೧ ಕಾಳಿದೇವಿ ಸ್ತ್ರೀ ಶಕ್ತಿ ಸಂಘ	ಶ್ರೀಧರಗಡ್ಡೆ
೩೨. ತಿಮ್ಮಪ್ಪ ತಂದೆ ಯಂಕಪ್ಪ	೪೨	ಗ್ರಾಮಸ್ಥರು	ಶ್ರೀಧರಗಡ್ಡೆ
೩೩. ಲಿಂಗಯ್ಯ	೪೬	ಗ್ರಾಮಸ್ಥರು	ಗುಡಾರನಗರ
೩೪. ರಾಮಣ್ಣ ತಂದೆ ಸುಂಕಪ್ಪ	೩೮	ಗ್ರಾಮಸ್ಥರು	ಲಕ್ಷ್ಮಿನಗರ
೩೫. ಈರಯ್ಯ ತಂದೆ ಸವಾರಪ್ಪ	೪೨	ಗ್ರಾಮಸ್ಥರು	ಜಾಲಿಬೆಂಚಿ
೩೬. ವಿರುಪಾಕ್ಷಿ	೧೪	ಬಾಲಕಾರ್ಮಿಕ	ಶ್ರೀಧರಗಡ್ಡೆ
೩೭. ಯಂಕಮ್ಮ	೩೭	ಗ್ರಾಮಸ್ಥರು	ಶ್ರೀಧರಗಡ್ಡೆ

ಛಾಯಚಿತ್ರಗಳು



ಶ್ರೀಧರಗಣ್ಣೆಯು ವಿಟು ಶಾಸ್ತ್ರಿ ಕೂಡ ಮಾಹಿತಿ ಪಡೆಯುತ್ತಿರುವುದು



ಹಾಲಬಂತೆ ಗ್ರಾಮದ ಚೆನ್ನ ಬಸವ ವಿದ್ಯಾರ್ಥಿನಿ ಮಾಹಿತಿ
ನೀಡುತ್ತಿರುವುದು.

139



ಗಾಂಧಿ ನಗರ ಗ್ರಾಮದಲ್ಲಿ ಕೊಳಚೆ ನೀರಿನಿಂದ ಬಟ್ಟೆ ತೊಳೆಯುತ್ತಿರುವ ದೃಶ್ಯ



ಗಾಂಧಿ ನಗರ ಗ್ರಾಮದಲ್ಲಿ ಕೊಳಚೆ ನೀರಿನಲ್ಲಿ ಆಟವಾಡುತ್ತಿರುವ ಮಕ್ಕಳು

138



ಗಜಾಳ ನಗರ ಗ್ರಾಮದಲ್ಲಿ ಮೂಲ ಸೌಲಭ್ಯಗಳಿಂದ ವಂಚಿತರಾಗಿ ಬೀದಿಯಲ್ಲಿ ಅಲೆಯುವ ಮಕ್ಕಳು



ಗುತಾಳ ನಗರ ಗ್ರಾಮದಲ್ಲಿ ಅಂಗನವಾಡಿ, ಶಾಲೆ, ಸೌಲಭ್ಯ ತಡೆ ಆಟದ ಹಕ್ಕು ವಂಚಿತರಾದ ಮಕ್ಕಳು

140